ಕೃತಂ ಸ್ಮರ ಕೃತುಂ ಸ್ಮರ

ಮಲ್ಲಿಕಾ

ಕೃತಂ ಸ್ಮರ ಕ್ರತುಂ ಸ್ಮರ

ಮಲ್ಲಿಕಾ

ಸತ್ಯಮೇವ ಜಯತೇ ನಾನೃತಂ
ಸತ್ಯೇನ ಪಂಥಾ ವಿತತೋ ದೇವಯಾನಃ
ಯೇನಾಕ್ರಮಾಂತ್ಯೃಶಯೋ ಹ್ಯಾಪ್ತಕಾಮಾ
ಯತ್ರ ತತ್ ಸತ್ಯಸ್ಯ ಪರಮಂ ನಿಧಾನಮ್ ॥

Krutham Smara Krathum Smarain Kannada by 'Mallika' Published by Lakshmi Prakashana, 170, Langford Road, Bangalore-560 025.

ಪ್ರಥಮ ಮುದ್ರಣ : ೧೯೭೭
ದ್ವಿತೀಯ ಮುದ್ರಣ : ೧೯೮೬
ತೃತೀಯ ಮುದ್ರಣ : ೧೯೮೯

ಬೆಲೆ : ಮೂವತ್ತಾರು ರೂಪಾಯಿ

ಮುದ್ರಕರು :
ನ್ಯೂ ಐಡಿಯಾಸ್
30, 15ನೇ ಅಡ್ಡರಸ್ತೆ
ಮೂರನೆಯ ವಿಭಾಗ ಜಯನಗರ
ಬೆಂಗಳೂರು-560 011

'ವೇದಮಾತಾಪಾದಾರ್ಪಣಮಸ್ತು'

ಕೃತಂ ಸ್ಮರ ಕ್ರತುಂ ಸ್ಮರ

ಮಲ್ಲಿಕಾ

ಲಕ್ಷ್ಮೀ ಪ್ರಕಾಶನ
170, ಲ್ಯಾಂಗ್ ಫೋರ್ಡ್ ರೋಡ್
ಬೆಂಗಳೂರು–560 025

ನಿವೇದನೆ

ಪುರಾಣೇತಿಹಾಸಗಳ ಉಪನಿಷತ್ಕಥಾವಳಿಯನ್ನು ಓದಿ ಮನನ ಮಾಡಿದಾಗ ನಾನೂ ಸಹ ಈವೊಂದು ಪ್ರಕಾರದಲ್ಲಿಯೇ ಸಣ್ಣ ಕೃತಿಯನ್ನು ರಚಿಸಬೇಕೆಂಬ ಉತ್ಕಟೇಚ್ಛೆಯು ಮೂಡಿತು ಅದರ ಪ್ರಭಾವಶೀಲತೆಯಿಂದ. ಅನಂತರ, ತತ್ಪರಿಣಾಮವಾಗಿಯೇ 'ಕೃತಂ ಸ್ಮರ ಕೃತುಂ ಸ್ಮರ' ಎಂಬ ಕೃತಿಯ ರಚನೆ. ಇದರ ಕಥಾಶೈಲಿಯು ಸರ್ವತ್ರ ನನ್ನ ಸ್ವಂತಿಕೆಯೇ ಆದರೂ, ಇದಕ್ಕೆ ಸರ್ವಾಧಾರ ವೇದೋಪನಿಷತ್ತಿನ ದೇವಗಂಗವಾಹಿನಿಯಲ್ಲಿ ಒಂದು ಕಣ-ಒಂದೇ ಒಂದು ಕಣ ಎನ್ನುವುದರಲ್ಲಿ ತುಂಬ ಹೆಮ್ಮೆ ಎನಿಸುತ್ತದೆ. ಉಪನಿಷತ್ತುಗಳಿಂದ ಅಲ್ಲಲ್ಲಿ ಆಯ್ದು ಕೆಲವು ಸಂಗತಿಗಳನ್ನು ನನ್ನ ಮನಸೇಚ್ಛೆಯ ಪ್ರಕಾರ ಹೊಂದಿಸಿ ಈ ಸಣ್ಣ ಕೃತಿಯನ್ನು ರಚಿಸಲು ನಾನು ಪ್ರಯತ್ನಿಸಿರುವೆ.

ಇದರ ರಚನೆ ಒಂದು ರೀತಿಯಲ್ಲಿ ಸಾಮಾನ್ಯ ವ್ರತವೇ ಆಯಿತು ಎನ್ನಬಹುದು. ವೇದಾರ್ಥ ವಿಶ್ಲೇಷಣೆ, ವಿಚಾರ ಸಂಪತ್ತಿ, ಪ್ರಯೋಗಾಕಲನೆ, ಪಾರಿಭಾಷಿಕ ಶಬ್ದ ಸಂಯೋಜನೆ ಮತ್ತು ನಿಷ್ಪತ್ತಿ ನಿರ್ಧಾರಣೆ ಇವುಗಳಿಗೆ ಸ್ವಚಿಂತನೆಯೇ ಪರಿಪುಷ್ಟವಾದ ಪರಿಕರ; ನಿಷ್ಠೆ-ಶ್ರದ್ಧೆಗಳೇ ಮಸಿಯೊರತೆ ಎಂದುಬಿಟ್ಟರೆ ಏನೇನೂ ಸಾಲದು. ವಿಶ್ವಪ್ರಪಂಚದಲ್ಲಿ ಸದಾ ಸ್ಪಂದಿಸುತ್ತಿರುವ ಆಧ್ಯಾತ್ಮಿಕ ಸತ್ಯಗಳು ನಿತ್ಯ ಮನ್ನಣೆಗೆ ಸಾಧನ ಎಂಬುದನ್ನು ಎಂದಿಗೂ ಮರೆಯುವಂತಿಲ್ಲ.

ಉತ್ತಮವಾದ ಸಾಹಿತ್ಯಸಾರ ಕವಿಯ ಧ್ಯಾನ-ತಪಸ್ಸು-ಅನನ್ಯ ಅನುಭವ ಇವುಗಳಿಂದ ಆವೇಶಪೂರ್ವಕವಾಗಿ ಹೃನ್ಮನಗಳಾಳದಿಂದ ಗಿಡುಬಳ್ಳಿಗಳಲ್ಲಿ ತಳಿರು ಮಿಡಿಮೊಗ್ಗುಗಳು ಹೊರ ಹೊಮ್ಮುವಂತೆ ಹೊಮ್ಮಿದರೆ ಮಾತ್ರ ಗಂಭೀರ ಸಾಹಿತ್ಯದೃಷ್ಟಿ. ರೂಪ- ಅಲಂಕಾರಗಳು ತುಂಬಿತುಳುಕದಿದ್ದರೆ ಸದ್ಗ್ರಂಥವೇ ಅಲ್ಲ ಎಂದು ಹೇಳುವಷ್ಟು ಅವಶ್ಯಕತೆ ಇದ್ದರೂ ಆತ್ಮಪೋಷದ ಮುಂದೆ ಇವುಗಳೆಲ್ಲಾ ಗೌಣವೆಂದೇ ಹೇಳಬೇಕು. ದೇಹ ಸೌಂದರ್ಯಕ್ಕಿಂತ ಆತ್ಮಸೌಂದರ್ಯವೇ ಪ್ರಾಮುಖ್ಯ.

ಜ್ಯೇಷ್ಠ ಬಹುಳ ಏಕಾದಶಿ
ಗುರುವಾರ

ಮಲ್ಲಿಕಾ
೨೯-೬-೮೯

ಕೃತಂ ಸ್ಮರ ಕ್ರತುಂ ಸ್ಮರ

ಉಚ್ಛ್ವಾಸ ೧

ದಿನಾಂತಕಾಲೀನ ಅಮೋಘವಾದ ದಿವ್ಯಪ್ರಭೆಯಿಂದ ಅನುರಂಜಿತವಾಗಿತ್ತು ವಿಶ್ವಜಗತ್ತು. ಪಡುವಣ ಭಿತ್ತಿಯಲ್ಲಿ ಸ್ವರ್ಣದುಂಡೆಯಂತೆ ಜಗಜಗಿಸುವ ರವಿಮಂಡಲವು ಅವರ್ಣನೀಯವಾದ ಶೋಭಾಶೈಲಿಯಲ್ಲಿ ಕಂಗೊಳಿಸುತ್ತದೆ, ತನುಮನಗಳನ್ನು ಆಕರ್ಷಿಸಿ ಮಂತ್ರಮುಗ್ಧಗೊಳಿಸುವಂತೆ. ಗಂಗಾತಟಿಯ ವಾಲುಕಾಪ್ರಾಂತರ ಉದ್ಧೂಮ ಅಗ್ನಿಕುಂಡದಂತೆ ಧಗಧಗಿಸಿ ಭಯ ಭ್ರಾಂತಗೊಳಿಸುವಂತಿದ್ದರೂ, ರಜತರಾಶಿಯ ವೈಖರಿಯಲ್ಲಿ ಮಿನುಗುವ ರೀತಿ ನಯನ ಮನೋಹರವೂ ಸಹ. ಉಷ್ಣೋಷ್ಣ ಭರಿತ ಧರಿತ್ರಿಯ ಶತಸಹಸ್ರ ಜಿಹ್ವೆಗಳು ಮುಗಿಲ್ಮಂಜಿನ ಅತೀವ ಶೀತಲಶೈತ್ಯಕ್ಕಾಗಿ ಕಾತರಿಸುತ್ತಿವೆಯೋ ಎಂಬಂತೆ ಗಗನ ಚುಂಬೀ ಶರಕಾಂತಾರದ ಪಲ್ಲವಪಾಣಿಗಳು ಬಾಡಿ ಜೋಲುಬಿದ್ದಿವೆ ದೈನ್ಯತೆಯ ದೀನಶೈಲಿಯಲ್ಲಿ. ಆಗೊಮ್ಮೆ ಈಗೊಮ್ಮೆ ಬೀಸಿಬರುವ ವಸಂತಾನಿಲನ ಚಾಮರ ಸೇವೆ ಸರ್ವಕಾಲಿಕವಾದರೂ ಸಾಯಂಸಮಯೋಚಿತವಾದ ಶೀತಲ ಸ್ಪರ್ಶ ಅಂತಃಸ್ಥಲವನ್ನು ಸ್ವಚ್ಛಂದವಾಗಿ ಮುಟ್ಟುತ್ತದೆ. ವನಾಂತರದಿಂದ ಹಿಂದಿರುಗುವ ಮಧುಮತ್ತ ಭ್ರಮಂತೆ

ಭ್ರಮರಗಳ ಈಷತ್ ಝುಂಕಾರದಿಂದ ಮುಖರಿತಗೊಳ್ಳುತ್ತವೆ. ಸದ್ಯಃ ಪರಿಸರದ ಗಿಡ, ಮರ, ಬಳ್ಳಿಗಳು, ಪಕ್ಷಿಗಳು ಕೊರಳ್ತುಂಬಿ ಹಾಡುವ ವಿವಿಧ ರಾಗಗಳ ಸಾಂಧ್ಯಗೀತಲಹರಿಗೆ ಸಣ್ಣಗೆ ಶ್ರುತಿಯೂಡಿಸುವ ವಾತ್ಯಾಲುಲಿತ ಎಲೆಎಲೆಗಳ ಮರ್ಮರ ಸದ್ದು. ತಪೋವನದ ಸುಸಂಸ್ಕಾರದಿಂದ ದುಷ್ಟಮೃಗಗಳು ಶಿಷ್ಟಪಶುವರ್ಗದೊಂದಿಗೆ ನಿರ್ವೈರದಿಂದ ಕೂಡಿ ಅಡ್ಡಾಡಿ ಮೇವುಂಡು ಮಲಗಿರುವ ದೃಶ್ಯ ಬಲು ರಾಮಣೀಯಕ.

ವನ, ಗಿರಿ, ಕಂದರ, ನಗರ ಭೂಪ್ರದೇಶಗಳನ್ನು ಇಬ್ಭಾಗಗೊಳಿಸಿ ಪುಣ್ಯಪ್ರದವಾಗಿ ಪ್ರವಹಿಸುವ ಅಗಾಧವಾದ ಗಂಗಾಜಲರಾಶಿ ಯಲ್ಲಿ ಅಂತಃಸ್ಥಲವನ್ನು ಸ್ಪರ್ಶಿಸುವ ಮನಮೋಹಕವಾದ ಮೃದುಮಂದ ಮಂಜುಳಮಯೀ ಜಲಗಾನ ಜುಳು. ಜುಳು. ಜುಳು. ಜುಳು. ನದೀ ತಟಾಕದಿಂದ ನಸುದೂರದಲ್ಲಿ ಪಚ್ಚ ಪ್ರದೇಶದ ನಯನ ಮನೋಹರ ಸಮ ದಾಣದಲ್ಲಿ ಯಾಜ್ಞವಲ್ಕ್ಯ ಮಹರ್ಷಿಯ ಸಣ್ಣ ಸುರಮ್ಯ ಪರ್ಣಕುಟೀರ. ಅದಕ್ಕೆ ಹೊಂದಿಕೊಂಡಿರುವ ಹರವಾದ ಕೈಸಾಲೆಯಲ್ಲಿ ಗೋಡೆಯ ಬಳಿ ಹಾಸಿದ್ದ ಕೃಷ್ಣಾಜಿನದ ಮೇಲೆ ನಿತ್ಯೋಪಯೋಗದ ವಸ್ತುಗಳಾದ ವೀಣಾ ವಾದ್ಯ, ತಾಳೆಯ ಕಟ್ಟು, ಜಪಮಾಲೆ, ದಂಡ, ಕಮಂಡಲು ಮುಂತಾದವು ಗಳು ಕಂಡು ಬರುತ್ತವೆ. ಪರ್ಣಕುಟಿಯ ಸುತ್ತಲೂ ಸುಂದರವಾದ ಕೈದೋಟದಿಂದ ಕೂಡಿದಪ್ರಾಂಗಣ. ಅದರ ಸುತ್ತು ಮುತ್ತೂ ವಿವಿಧವರ್ಗದ ವೃಕ್ಷರಾಜಿ. ಒಂದೆಡೆ ಶತಮಾನದಿಂದ ವಾತಾವರಣದ ಸೊಂಪನ್ನುಂಡ ಅರಳೀವೃಕ್ಷ. ಅದರ ಬುಡದಲ್ಲಿ ಕೃಷ್ಣಶಿಲೆಯ ಬಂಡೆಗಲ್ಲು. ವಾಮಾಂಗ ದಲ್ಲಿ ಬದರಿ ಅಶೋಕ ವೃಕ್ಷಗಳ ಸಣ್ಣ ತೋಪು. ಅದರ ಮಧ್ಯೆ ತಪಸ್ಸು-ಧ್ಯಾನ-ಚಿಂತನೆ-ಪ್ರವಚನಗಳಿಗೆ ಯುಕ್ತವಾದ ಪೀಠಬದ್ಧ ಕೃಷ್ಣಶಿಲೆಯ ಹಾಸುಗಲ್ಲು. ಪರ್ಣಕುಟಿಯ ಮುಂಭಾಗದ ಗೋಮಯೋಪಲಿಪ್ತ ಅಜಿರ ಭೂಮಿಯಲ್ಲಿ ರಂಗವಲ್ಲಿಯ ಬಗೆಬಗೆಯ ಚಿತ್ರವಿಚಿತ್ರ ಚಿತ್ತಾರ.

ಬಲಭಾಗದ ಬಹಿಃಪ್ರದೇಶದಲ್ಲಿ ಶುಕ, ಸಾರಿಕೆ, ಲಾವ, ತಿತ್ತಿರ, ಮಯೂರ, ಹಂಸೆ, ಪಾರಿವಾಳ, ಗುಬ್ಬಿ ಮುಂತಾದ ಪಕ್ಷಿವೃಂದ ಕಲಕಲರವ ವನ್ನು ಹರಿಯಬಿಟ್ಟು ತಪೋವನದ ಸೌಂದರ್ಯರಾಜಿಗೆ ಇನ್ನಷ್ಟು ಕಳೆಗೂಡಿ

ಸಿವೆ. ಶುಭ್ರಮನೋಹರ ವಾತಾವರಣಕ್ಕೆ ರಮಣೀಯವಾದ ಸೌಂದರ್ಯ ಕಾಯಕಲ್ಪದಿಂದ ಭ್ರಮಣೋನ್ಮಾದರೂಪೀ ಮಾನಸದ್ವಂದ್ವಕ್ಕೆ ಕಡಿವಾಣ ಹಾಕುವಷ್ಟು ಗಂಭೀರ ತಪೋವನಶ್ರೀ! ಇಂಥ ಮನೋರಮ ವಾತಾವರಣಕ್ಕೆ ಮೈಗೊಟ್ಟು, ಹಲವಾರು ವಸಂತಗಳ ಸೊಂಪನ್ನುಂಡ ಯಾಜ್ಞವಲ್ಕ್ಯ ಮಹರ್ಷಿಯು ವಿಚಾರ ಗಂಭೀರನಾಗಿ ಅಲ್ಲಲ್ಲೆ ಶತಪಥ ತಿರುಗುತಿದ್ದಾನೆ. ದಿವ್ಯ ತೇಜಃಪುಂಜವಾದ ಮುಖಶ್ರೀ, ನಡುನೆತ್ತಿಯ ಮೇಲೆ ಎತ್ತಿಕಟ್ಟಿದ ಕೆಂಗೂದಲ ಮುಡಿ, ಕೊರಳಲ್ಲಿ ರುದ್ರಾಕ್ಷಮಾಲೆ, ಮೊಣಕಾಲಮೇಲೆ ಬಿಗಿದು ಉಟ್ಟ ಪೀತಕೌಶೇಯ ವಸ್ತ್ರ, ರೋಮಾವೃತವಾದ ವಸ್ತ್ರರಹಿತ ವಕ್ಷಸ್ಥಲ, ನಕ್ಷತ್ರನಯನದ್ವಯಗಳು ಇವು ವ್ಯಕ್ತಿ ಶೋಭೆಗೆ ಅಮೂಲ್ಯವಾದ ಪೂರಕವಾಗಿವೆ. ಮಹರ್ಷಿಯು ನಿಂತಲ್ಲಿ ನಿಲ್ಲದೆ ಪದಚಾರಣ ಮಾಡುತ್ತ ತನ್ನೊಳಗೆ ತಾನು ಹೀಗೆಂದು ಹೇಳಿಕೊಳ್ಳುವನು–ಮನಸ್ಸೆ ತಿಳಿ! ಯಾರು ಸೂರ್ಯನಲ್ಲಿ ಪರಬ್ರಹ್ಮನಾಗಿದ್ದು ಸಕಲ ಗ್ರಹಗಳನ್ನೂ ಬೆಳಗುವನೋ ಅವನೇ ಪ್ರತಿಯೊಂದು ಹಿಮಮಣಿಯಲ್ಲಿಯೂ ಬೆಳಗುತ್ತಿರುವನು. ಯಾರು ವಿಭುವಿನಲ್ಲಿ ಜೀವಧಾರಣೆ ಮಾಡಿರುವನೋ ಅವನೇ ಪ್ರತಿಯೊಂದು ಅಣುತೃಣಗಳಲ್ಲಿಯೂ ಕ್ರಿಯಾತ್ಮಕನಾಗಿರುವನು. ಯಾರು ಬ್ರಹ್ಮಾಂಡಕ್ಕೆಲ್ಲಾ ಒಡೆಯನೋ ಅವನೇ ಪ್ರತಿಯೊಂದು ಜೀವಿಯ ಹೃದಯಕ್ಕೂ ಒಡೆಯನಿರುವನು. ಅಂತಲೇ ಆ ಪರಬ್ರಹ್ಮನನ್ನು ಕಾಣಬೇಕೆಂದರೆ, ಸರ್ವತ್ರ ಅಂತರ್ಮುಖಿಯಾಗು, ಮನಸ್ಸೇ, ಅಂತರ್ಮುಖಿಯಾಗು.

ಅನಂತರ ತನ್ನೊಳಗೆ ತಾನು ಹೀಗೆ ತರ್ಕಿಸುತ್ತಾನೆ–ಓಂಕಾರವು ಪರಬ್ರಹ್ಮ ಅಪರಬ್ರಹ್ಮ ಎರಡರ ಚಿಹ್ನೆಯೂ ಹೌದು. ನಾವು ಯಾವುದನ್ನು ಚಿಂತಿಸಬೇಕಾದರೂ ಅದಕ್ಕೆ ಸರಿಯಾದ ಆಧಾರ ಬೇಕೇಬೇಕು. ಓಂಕಾರವು ಪರಬ್ರಹ್ಮನಿಗೆ ಚಿಹ್ನೆಯಾಗಿದ್ದರೂ ಬ್ರಹ್ಮನು ನಾಮ ರೂಪ ಗುಣಗಳಿಗೆ ಅತೀತನು. ಆದರೂ ಸಹ, ಅದಕ್ಕೆ ಯಾವುದಾದರೊಂದು ಗುಣವನ್ನು ಆರೋಪಮಾಡದೆ ಚಿಂತನೆಗೆ ದಾರಿ ಮಾಡಿಕೊಳ್ಳಲಾಗುವುದಿಲ್ಲ. ಓಂಕಾರವು ಎಲ್ಲಾ ಆಕಾರಕ್ಕೂ ಉಗಮಸ್ಥಾನ. ಓಂಕಾರವು ಎಲ್ಲಾ ಶಬ್ದಗಳಿಗೂ ಮೂಲ. ಓಂಕಾರವು ವೇದಗಳಿಗೆ ಚಿಹ್ನೆ. ಓಂಕಾರವು ತಪಸ್ಸಿಗೆ ಧ್ಯಾನ

ರೂಪ. ಭಕ್ತಿ ಶ್ರದ್ಧೆಗಳಿಗೆ ಆಧಾರರೂಪ.

ಓಂಕಾರವು ಭಕ್ತಿ ಶ್ರದ್ಧೆಗಳಿಗೆ ಆಧಾರವಾದರೂ ಮಾನಸಿಕ ಶೌಚಕ್ಕೆ-ದೈಹಿಕ ಶೌಚಕ್ಕೆ ಆನಂದೋಲ್ಲಾಸಗಳೇ ಮೂಲಾಧಾರ. ಅಳು-ಗೋಳು-ಕಾಮ-ಕ್ರೋಧಗಳನ್ನು ಹೆಚ್ಚಿಕೊಂಡವರು ಜ್ಞಾನಿಗಳಾಗುವುದು ಸಾಧ್ಯವಿಲ್ಲದ ಮಾತು. ಸುಖದುಃಖಗಳಲ್ಲಿ ನಿರ್ಲಿಪ್ತತೆ ಮೂಡಿ ಮಾನಸಿಕವಾಗಿ ದೈಹಿಕವಾಗಿ ಶೌಚವನ್ನು ಹೊಂದಿದಮೇಲೆ ಓಂಕಾರದ ಚಿಂತನೆ. ಅನಂತರ ತದೇಕ ಧ್ಯಾನ; ತದೇಕ ಚಿಂತನೆ; ತದೇಕ ಉಪಾಸನೆ ಅಥವಾ ತಪಸ್ಸು. ಓಂಕಾರದ ಉಪಾಸನೆಯಿಂದ ಪರಬ್ರಹ್ಮ-ಅಪರಬ್ರಹ್ಮ ಎರಡೂ ಲಭ್ಯ. ಋಗ್ ಯಜುಸ್ಸಾಮ ಅಥರ್ವ ವೇದಗಳಿಂದ ಬರುವ ಲೋಕಗಳು ಅಪರ ಬ್ರಹ್ಮನಿಗೆ ಸೇರಿದ್ದು. ಋಕ್‌ನಿಂದ ಮನುಷ್ಯ ಲೋಕ. ಯಜುಸ್ಸಿನಿಂದ ಚಂದ್ರಲೋಕ. ಜೀವನಿಗೆ ಬಂದುಹೋಗುವ ಲೋಕಗಳೇ ಇವು. ಬ್ರಹ್ಮ ಲೋಕ ಸೇರಿದವರು ಹಿಮ್ಮರಳುವ ಅಗತ್ಯವಿಲ್ಲ ಎಂದರೂ ಅಲ್ಲಿ ತಕ್ಷಣ ಮುಕ್ತಿ ಸಿಗುವ ಸಂಭವವಿಲ್ಲ. ಸಕಲ ಋಣಮುಕ್ತನಾದನಂತರವೇ ಮುಕ್ತಿ. ಇದರ ಕಾರಣಕಾರಿ ಅಪರಬ್ರಹ್ಮ.

ಪರಬ್ರಹ್ಮನಲ್ಲಿ ಎಲ್ಲಾ ಲೋಕಗಳೂ ಇವೆ. ಅವನು ಯಾವ ಲೋಕದಲ್ಲಿಯೂ ಇಲ್ಲ. ಅವನು ಸರ್ವವ್ಯಾಪಿ ; ಸರ್ವಾಧಾರ. ಅವನನ್ನು ಸಾಕ್ಷಾತ್ಕರಿಸಿದವರು ಜೀವನ್ಮುಕ್ತರು; ಅಂದರೆ ಸತ್ತನಂತರ ಮುಕ್ತಿ ಎಂಬ ಚಿಂತನೆ ಇಲ್ಲಿ ಬರಬಾರದು.ಬದುಕಿರುವಾಗಲೇ ಮುಕ್ತಿ, ಬಾಲ್ಯ, ಯೌವ್ವನ, ಜರಾ, ಮರಣ ಎಂಬುದೆಲ್ಲ ದೇಹಧರ್ಮವಾದರೂ ಇವನ್ನು ಬ್ರಹ್ಮನಿಗೆ ಆರೋಪಿಸುಂತಿಲ್ಲ. ಆಕಾರಕ್ಕೆ ನಾಶ. ನಿರಾಕಾರ ನಾಶವಾಗುವುದೆಂತು? ಯಾವುದು ಕಾಲ ದೇಶಗಳಿಗೆ ಒಳಪಟ್ಟಿದೆಯೋ ಅದಕ್ಕೆ ನಾಶ. ಯಾವುದು ಕಾಲ ದೇಶ ನಿಮಿತ್ತಗಳಿಗೆ ಅತೀತವೋ ಅದಕ್ಕೆ ನಾಶವಿಲ್ಲ. ಅಂಥ ಬ್ರಹ್ಮನನ್ನು ಸಾಕ್ಷಾತ್ಕರಿಸಿದರೆ ನಿರ್ಭಯ ಮತ್ತು ನಿಶ್ಚಿಂತೆ.

ಬ್ರಹ್ಮನು ಪ್ರಶಾಂತ ಸ್ವರೂಪನು. ಅವನಲ್ಲಿ ಉದ್ವೇಗವಾಗಲೀ ಆಂದೋಳನವಾಗಲೀ ಇಲ್ಲ. ಅವನು ಗಗನ ಸದೃಶನು. ಅವನು ಸೃಷ್ಟಿಕರ್ತನು. ಅವ

ನಿಂದ ಯುಗಧರ್ಮ. ಅವನಿಂದ ಪಂಚಭೂತಗಳು. ಅವನಿಂದ ಪಂಚೇಂದ್ರಿಯ ಗಳು. ಅವನಿಂದ ಪ್ರಾಣ ಮತ್ತು ಚೈತನ್ಯ. ಅವನೇ ಪುರುಷ ಅವನೇ ಕಾಂತಿ. ಅವನೇ ಸರ್ವಾಂತರ್ಯಾಮಿ. ಅವನೇ ಪರಮಾತ್ಮ. ಅವನೇ ಸರ್ವ ರಿಂದಲೂ ಸ್ತುತಿಸಲ್ಪಡತಕವನು.

ಕರ್ಮದಿಂದ ಲೋಕ-ಕರ್ಮಾನುಸಾರ ಯಜ್ಞಯಾಗಾದಿಗಳನ್ನು ಮಾಡಿದರೆ ಪಿತೃಲೋಕ-ಸ್ವರ್ಗಲೋಕ ಮುಂತಾದುವು ಲಭಿಸುತ್ತವೆ ಎಂಬ ಭಾವ. ಅದನ್ನು ವಿಭಿನ್ನ ದೃಷ್ಟಿಯಿಂದ ನೋಡಿದರೆ ಅದು ಕರ್ಮಕ್ಕೆ ತಕ್ಕಂ ತಹ ಫಲ; ಕರ್ಮೋಚಿತವೂ ಸಮಯೋಚಿತವೂ ಆದುದು. ಆ ಕರ್ಮಕ್ಕೆ ಅಂತಹ ಪುಣ್ಯ ಲಭಿಸಿತು; ಈ ಕರ್ಮಕ್ಕೆ ಇಂತಹ ಫಲ ಲಭಿಸಿತು ಎಂದು ಭಾವಿಸುವುದು ಕರ್ತೃವಿನ ಸ್ವಭಾವ. ಈ ಫಲ ಬ್ರಹ್ಮಲೋಕದಿಂದ ಗಂಧರ್ವಲೋಕದಿಂದ ಪಿತೃಲೋಕದಿಂದ ಸ್ವರ್ಗಲೋಕದಿಂದ ಪಡೆದಿರ ಬಹುದು; ಅಥವಾ ಈ ಲೋಕದಲ್ಲೇ ಪಡೆಯಬಹುದಾದ ಸಂತಾನ ಯಶಸ್ಸು ಗಳಿರಬಹುದು........

ತಪಸ್ಸು-ತಪಸ್ಸಿಗೆ ಹೊಂದಿಕೊಳ್ಳುವಂತಹ ಶಾರೀರಿಕ ಬಲವು ಬೇಕೆಂದರೂ ತಪಸ್ಸಿಗೆ ಪ್ರಾಮುಖ್ಯವಾದುದು ಮನೋಬಲ ಮತ್ತು ಜ್ಞಾನ ಬಲ. ದೀರ್ಘವಾದ ಮತ್ತು ತೀವ್ರವಾದ ಆಲೋಚನೆಗೆ ಸನ್ನಿಹಿತವಾಗುವಂತೆ ಮನಸ್ಸು ದೃಢವಾಗದಿದ್ದರೆ ತಪಸ್ಸೆ ಕೈಗೂಡದು. ಯಾರು ಯಾವ ಕೆಲಸ ಹಿಡಿದರೂ ಅದಕ್ಕೆ ಮೂಲಾಧಾರ ತಪಸ್ಸೆ. ತಪಸ್ಸು ಸದೃಢವಾಗಿದ್ದರೆ ಶಾಶ್ವತವೂ ಸಾರ್ಥಕವೂ ಆದ ಸಾಧನೆ. ಇಲ್ಲದಿದ್ದಲ್ಲಿ ಸಾಧನೆಯೂ ವ್ಯರ್ಥ, ಶ್ರಮವೂ ವ್ಯರ್ಥ.

ಚಿಂತನೆಯ ಅನುಪಮಧಾರೆ ಅವಿರಳವಾಗಿ ಅಖಂಡವಾಗಿ ಸ್ಫುರಿಸುತ್ತಿರು ವಾಗ ಪ್ರತಿಭಾನ್ವಿತ ಮುಖಮಂಡಲದ ಮೇಲೆ ಅಲೆಯಲೆಯಾಗಿ ಸ್ವಚ್ಛಂದ ವಾಗಿ ಹರಿದಾಡುವ ಭಾವಧಾರೆಯಲ್ಲಿ ಒಮ್ಮೆ ಗಭೀರತೆ ಕೆಲವೊಮ್ಮೆ ಸರಳತೆ ಇನ್ನೂ ಕೆಲವೊಮ್ಮೆ ಭಾಷೆ-ತೋಷಗಳ ವಿಜಯಘೋಷಣೆ ಕಂಡುಬರು ವುವು. ನಭೋಮಂಡಲದ ದಿನಾಂತಕಾಲೀನ ಮೇಘಪಟಲದಂತೆ ಬಣ್ಣಗಳು

ಮೆಲ್ಲಮೆಲ್ಲನೆ ಬದಲಿಸುತಿದ್ದ ಆದ್ರಾರ್ದ್ರ ಮುಖಮಂಡಲವು ಅತ್ಯಂತ ದರ್ಶನೀಯ ಅಥವಾ ಮನನೀಯ ಎನ್ನಬಹುದು, ಬಳಿಯುತಿದ್ದ ಭಾವಾತ್ಮಕ ಶ್ರದ್ಧೆಯಿಂದ.

ಅದೇ ವೇಳೆಗೆ ಸತೀ ಕಾತ್ಯಾಯಿನಿ ಪರ್ಣಕುಟಿಯಿಂದ ಹೊರಗಡೆ ತಲೆಹಾಕಿ ಮಹರ್ಷಿಯನ್ನು ಕಂಡು ಹಾಗೆಯೇ ಹೊರಬಂದು–ನೀವಿಂದು ವೀಣಾಭ್ಯಾಸ ಮಾಡಲಿಲ್ಲವಲ್ಲಾ? ಬಹುಶಃ ಮರೆತು ಬಿಟ್ಟಿರಾ ಹೇಗೆ? ಆಗಲೇ ಬಿನ್ನೈಸುವ ಯೋಚನೆಯಿತ್ತು. ಆದರೆ, ನಿಮ್ಮ ಅಂತಃಪ್ರಜ್ಞೆಯ ಗಭೀರತೆಯನ್ನು ಒಡೆಯುವ ಮನಸ್ಸು ಬರಲಿಲ್ಲ.

ಸತಿಯ ನುಡಿಯಲ್ಲಿ ವಿಚಾರ ವಿಶೇಷವೇನೂ ಕಂಡು ಬರದಿದ್ದರೂ ಸ್ವಲ್ಪ ಕಳವಳ-ಆತಂಕಗಳ ಮಿಶ್ರಣವಿದ್ದಂತಿತ್ತು, ತರಲಿತ ಕಂಠಧಾರೆಯಲ್ಲಿ.

ಯಾಜ್ಞವಲ್ಕ್ಯ ಮಹರ್ಷಿ ಒಂದುಘಳಿಗೆ ವಿಚಾರಧಾರೆಯಿಂದ ಮನವನ್ನು ಬಿಡುಗಡೆ ಮಾಡಿ ದಿನಚರಿಯ ಅವಲೋಕನಗೈದು ತಾನು ವೀಣಾಭ್ಯಾಸ ಮಾಡದಿದ್ದುದನ್ನು ನೆನಪಿಸಿಕೊಂಡು ತುಟಿಗಳಲ್ಲಿ ಮಂದಸ್ಮಿತವನ್ನು ಪಸರಿಸಿ ಉತ್ತರಿಸಿದ–ನಿಜ, ನಿಜ. ಇಂದು ವಿಚಾರ ವೀಣೆಯನ್ನು ಮಿಡಿಯುವುದರಲ್ಲೇ ಹೊತ್ತು ಕಳೆಯಿತು. ಯಾವುದು ಮನವನ್ನು ಆಕ್ರಮಿಸುವುದೋ ಅದರಲ್ಲೇ ಶ್ರದ್ಧೆ.

ಕಾತ್ಯಾಯಿನಿ–ತರ್ಕವಿತರ್ಕ ನಿಮ್ಮ ದಿನಚರಿಯನ್ನು ಮಾತ್ರವಲ್ಲ ನಿಮ್ಮನ್ನೂ ಮರೆಸಿಬಿಡುತ್ತದೆ ಬಹುಶಃ.

ಯಾಜ್ಞವಲ್ಕ್ಯ ಮಹರ್ಷಿ–ಅದು ಸರ್ವತ್ರ ಸದಾ ಸಂಭವನೀಯ.

ನಸುದೂರದ ಹಾದಿಯ ತಿರುವಿನಲ್ಲಿ ಹಸುಗಳು ಕಾಣಿಸಿಕೊಂಡುವು. ಪದತಲದಲ್ಲಿ ಕೆಮ್ಮನೆ ಗೋಧೂಳಿಯೇಳುತಿತ್ತು. ಬೆಳಗ್ಗೆಯೇ ಮೇಯಲು ಹೊರ ಹೋಗಿದ್ದ ಅವುಗಳಿಗೆ ಕರುಗಳ ಮೇಲೆ ಅತೀವ ಆಕರ. ಹಾಗೆಯೇ ಹಾದಿಯಂಚಿನಲ್ಲಿ ಮೊಳೆತಿದ್ದ ಗರಿಕೆಯ ಹೊಸ ಚಿಗುರಿನಲ್ಲಿಯೂ ಎಲ್ಲಿಲ್ಲದ ಆಕರ. ಕರುಗಳನ್ನು ನೆನೆದು ಬಾಯಿತುಂಬ ಅಂಬೆಗರೆದರೂ ಹಸುರನು

ಹೆಜ್ಜೆ ಹೆಜ್ಜೆಯಲ್ಲಿಯೂ ಮೇಯುತ್ತ ಮುಂಬರುವಾಗ ಒಮ್ಮೆ ಒಂದು ಹೆಜ್ಜೆ ನಿಧಾನವಾದರೆ ಇನ್ನೊಂದು ಹೆಜ್ಜೆಯಲ್ಲಿ ಹಂಬಲದ ತೀವ್ರತೆ ಕಂಡುಬರುತ್ತದೆ. ತಾಯಂದಿರ ಸುಳಿವು ಸಿಕ್ಕಿದೊಡನೆ ಕರುಗಳು ಹಟ್ಟಿಯಲ್ಲಿ ಚಡಪಡಿಸುತ್ತ ಪ್ರತಿಧ್ವನಿಕೊಡಹತ್ತಿದುವು. ಇನ್ನು ಸತೀ ಕಾತ್ಯಾಯಿನಿಗೆ ಕೈತುಂಬ ಕೆಲಸ; ಅಲ್ಲಿ ಹೆಚ್ಚು ಹೊತ್ತು ಉಳಿಯುವ ವ್ಯವಧಾನವಿರಲಿಲ್ಲ. ಹಸುಗಳು ಹಟ್ಟಿಯ ಬಳಿಗೆ ಬರುವುದನ್ನೇ ಕಾಯುತಿತ್ತು ಮನಸ್ಸು. ಅಲ್ಲಿಂದಿಲ್ಲಿಗೆ ಹರಿದಾಡುತಿತ್ತು ಉತ್ಸುಕ ನೋಟ.

ಯಾಜ್ಞವಲ್ಕ್ಯ ಮಹರ್ಷಿ–ಶುಭೆ, ಒಮ್ಮೆ ವೀಣಾಭ್ಯಾಸದ ಯೋಚನೆ ಬಂದಿತ್ತು ಕೂಡ. ಆದರೆ, ಮರುಕ್ಷಣದಲ್ಲೇ ಮತ್ತೆಲ್ಲೋ ಗಮನ. ಇಂದು ಮನಸ್ಸಿಗೆ ಬಿಡುವೆಂಬುವೇ ದೊರೆಯಲಿಲ್ಲ. ತಾತ್ತ್ವಿಕ ವಿಚಾರವಿಮರ್ಶೆಯಲ್ಲಿ ತೊಡಗಿ ಬೇರೆ ಯಾವುದನ್ನೂ ಅವಧರಿಸದಾದೆ. ಒಂದು ಸಮಸ್ಯೆ ಮನದಲ್ಲಿ ಮೂಡಿತೆಂದರೆ ಅದರ ಜಟಿಲತೆಯನ್ನು ಬಿಡಿಸುವವರೆಗೂ ಬೇರೆ ಯಾವುದನ್ನೂ ಕೈಕೊಳ್ಳಲಾಗುವುದಿಲ್ಲ.

ಕಾತ್ಯಾಯಿನಿ–ಅದು ನಿಮ್ಮ ಸ್ವಭಾವಕ್ಕೆ ಅಂಟಿದ್ದು.

ಯಾಜ್ಞವಲ್ಕ್ಯ ಮಹರ್ಷಿ–ತಾತ್ತ್ವಿಕ ವಿಮರ್ಶೆ ಅಷ್ಟು ಸುಲಭವಲ್ಲ. ನಾವು ಯೋಚಿಸಿದಷ್ಟೂ ಸಾಲದು.

ಕಾತ್ಯಾಯಿನಿ–ಅದು ಸರಿಯೆ ; ಕೆಲವೊಮ್ಮೆ ಅನ್ನಪಾನಾದಿಗಳನ್ನು ಮರೆತು ಬಿಡುತ್ತೀರಿ.

ಯಾಜ್ಞವಲ್ಕ್ಯ ಮಹರ್ಷಿಯು ಮುಖದಲ್ಲಿ ಮಂದಹಾಸವನ್ನು ಪಸರಿಸಿ ಒಂದೆರಡು ಕ್ಷಣ ಹಸುಗಳ ಕಡೆ ಸಂತೃಪ್ತಿಯ ನೋಟವನ್ನು ಬೀರಿ–ಅಷ್ಟಲ್ಲದೆ ಬಗೆ ಹರಿಯುವುದೆಂತು ?

ಕಾತ್ಯಾಯಿನಿ–ವಾಸ್ತವ್ಯ........

ನುಡದಿ ಅಷ್ಟಕ್ಕೆ ಮಾತನ್ನು ಮುಗಿಸಿ ನಸು ಯೋಚನೆಗೀಡಾದಂತೆ ಸುಮ್ಮನಾದಳು. ಮನಸ್ಸು ಶ್ರದ್ಧಾಭಕ್ತಿಗಳಿಂದ ಪ್ರವ್ಯಾಪ್ತವಾಗಿತ್ತು.

ಯಾಜ್ಞವಲ್ಕ್ಯ ಮಹರ್ಷಿ–ಒಮ್ಮೆ ವಿಚಾರ ವಿಮರ್ಶೆ ಮಾಡಿ ಒಂದು ಸಿದ್ಧಾಂತಕ್ಕೆ ಬಂದೆವೆಂದರೆ ಅದು ತೀರಿದಂತೆ ಆಗಲಿಲ್ಲ. ಅದರ ಚಿಂತನೆ ಮತ್ತೆ ಮತ್ತೆ ಆಗಲೇಬೇಕು.

ಕಾತ್ಯಾಯಿನಿ-ನೀವು ಯಜ್ಞವಲ್ಕ್ಯರ ಮಕ್ಕಳು. ನಿಮಗೆ ಆನುವಂಶಿಕವಾಗಿ ಬಂದದ್ದು ಬ್ರಹ್ಮವಿದ್ಯೆ. 'ಆತ್ಮಾವೈ ಪುತ್ರ ನಾಮಾಸಿ' ಎಂಬ ವೇದಾರ್ಥ ನಿಮಗೆ ಅತ್ಯಂತ ಸಮಂಜಸವಾಗಿ ಅನ್ವಯಿಸುತ್ತದೆ.

ಮಹರ್ಷಿ ವಿಚಾರಪರವಶನಾಗಿ ಗಂಭೀರಭಾವ ತಳೆಯುವನು. ಉತ್ತರಿಸುವ ಉತ್ತೇಜನ ಮನದಲ್ಲಿ ಲವಲೇಶವೂ ಮೂಡಲಿಲ್ಲ. ಭಾವಮುಗ್ಧತೆ ಮೈಮನಗಳನ್ನೆಲ್ಲಾ ವ್ಯಾಪಿಸಿ ಹೆಡೆಮುರಿಗಟ್ಟಿತು. ಸತೀ ಕಾತ್ಯಾಯಿನಿಯು ಪತಿಯ ಗಂಭೀರ ಭಾವವನ್ನು ಗಮನಿಸಿದರೂ ಸಹ ಆನಂದೋತ್ಸಾಹದಿಂದ ಉಲ್ಲಸಗೊಂಡ ತನ್ನ ಮನವನ್ನು ಹತ್ತಿಕ್ಕಲಾರದವಳಂತೆ ಮೆಲುದನಿಯಲ್ಲಿ ಬಿತ್ತರಿಸಿದಳು–ಈ ಪರಿಸರದ ಮುನಿಪುಂಗವರೆಲ್ಲ ನಿಮ್ಮನ್ನು 'ಬ್ರಹ್ಮಜ್ಞಾನಿ'ಗಳೆಂದು ಒಪ್ಪಿಕೊಳ್ಳತೊಡಗಿದ್ದಾರೆ. ಆಗಲೇ ಅನೇಕರು ನಿಮ್ಮನ್ನು ಹೃತ್ಪೂರ್ವಕವಾಗಿ ಅಭಿನಂದಿಸಲೂ ಸಹ ಸಿದ್ಧರಿದ್ದಾರೆ. ಬಹುಶಃ ಅದು ಇನ್ನೂ ನಿಮ್ಮ ಗಮನಕ್ಕೆ ಬರಲಿಲ್ಲವೇನೋ.

ಯಾಜ್ಞವಲ್ಕ್ಯ ಮಹರ್ಷಿ–ಇರಲಿ, ಇನ್ನೂ ಕಾಲ ಪರಿಪಕ್ವವಾಗಲಿಲ್ಲ.

ಆ ವಾಕ್ಸರಣಿ ಎದೆಯಾಳದಿಂದ ಹರಿದು ಬಂತು; ಮತ್ತೇನೂ ಹೆಚ್ಚಿಗೆ ಹೇಳುವ ಅವಶ್ಯಕತೆ ತೋರಲಿಲ್ಲವೇನೋ. ಮತ್ತೆ ಯಾವುದೋ ವಿಚಾರದಲ್ಲಿ ಮನವನ್ನು ನೆಟ್ಟು ಸುಮ್ಮನಾದ.

ಕಾತ್ಯಾಯಿನಿ–ಹಾಗಾದರೆ........

ಮಾತನ್ನು ಅಷ್ಟಕ್ಕೆ ಮುಗಿಸಿ ಸ್ವಲ್ಪ ಅನುಮಾನಿಸಿದಂತೆ ನೆಟ್ಟ ನೋಟವನ್ನು ವಿಚಲಿಸದೆ ನಿಟ್ಟಿಸುವಳು. ಕಣ್ಣುಗಳಲ್ಲಿ ಬೆಳಗುತಿದ್ದ ಸಾತ್ವಿಕತೆಯ ಕಳೆಯೊಂದಿಗೆ ಸ್ವಲ್ಪ ಆಶ್ಚರ್ಯಚಕಿತಭಾವವೂ ಮಿನುಗಿ ಮಾಯ್ವವಾಯಿತು.

ಯಾಜ್ಞವಲ್ಕ್ಯ ಮಹರ್ಷಿ–ಮಂಗಳೇ, ಏಕಷ್ಟು ಅನುಮಾನ ?

ಕಾತ್ಯಾಯಿನಿ–ಅನುಮಾನವೇನಿಲ್ಲ; ನಿಮ್ಮ ಉತ್ತರ ಸ್ವಲ್ಪ ಭಾದಿಸಿತು ಅಷ್ಟೆ.

ಯಾಜ್ಞವಲ್ಕ್ಯ ಮಹರ್ಷಿ–ಅಂತಹದ್ದೇನು ?

ಕಾತ್ಯಾಯಿನಿ–ಅಂದರೆ, ಆ ಅಧ್ಯಾಹೃತ ವಿಷಯ ನಿಮ್ಮ ಗಮನಕ್ಕೆ ಲವಲೇಶವೂ ಬರಲಿಲ್ಲವೇ ?

ಮಡದಿಯ ಮುಗ್ಧದುಗ್ಧ ಪ್ರಶ್ನೆ ಕರ್ಣಪಟಲಗಳಿಗೊರೆದಾಗ ಮಹರ್ಷಿ ಸರಳಸ್ಮಿತನಾಗುವನು. ಉಜ್ವಲ ನಯನಗಳ ಹೊಳಪು ಭಾವೋಜ್ವಲತೆಯಿಂದ ತಾನೇತಾನಾಗಿ ಬೆಳಗಿತು. ಕೆಂಧೂಳೀ ಧೂಸರಿತ ಹಾದಿಯಲ್ಲಿ ನೆಟ್ಟ ದೃಷ್ಟಿ ಚಲಿಸಲೇ ಇಲ್ಲ. ತಲೆಯಲ್ಲಿ ಯಥಾಪ್ರಕಾರ ಯೋಚನೆಯಲೆಗಳು ಸುಳಿಸುತ್ತುತ್ತಲೇ ಇವೆ. ಬಾಹ್ಯ ಜಗತ್ತಿನ ಪರಿವೆಯಿಲ್ಲದ ಗಂಭೀರ ಮುಖಭಾವದಲ್ಲಿ ನೆಲೆಸಿದ ಪ್ರಶಾಂತತೆಯೇ ಮಡದಿಯ ಪ್ರಶ್ನೆಗೆ ಉತ್ತರವಾಯಿತು. ಕಾರ್ಯಭಾರದ ಒತ್ತಡದಲ್ಲಿ ಆತುರದಲ್ಲಿದ್ದ ಮಡದಿಯ ಮನಸ್ಸಿನಲ್ಲಿ ಸ್ವಲ್ಪ ಕಸಿವಿಸಿ ಮೂಡಿ ಅಂತರಂಗದಲ್ಲಿ ಕೈಯಾಡಿಸಿತು. ಅವಳು ಸ್ವಲ್ಪ ಬೆರಗಾದಂತೆ ತೋರಿ ಬಂದರೂ ಪ್ರಕಟಗೊಳಿಸಲಿಚ್ಛಿಸದೆ ಯಥೋಚಿತವಾಗಿ ನುಡಿದಳು-ನಿಮ್ಮ ರೀತಿಯನ್ನು ನೋಡಿದರೆ ತುಂಬ ವಿಚಿತ್ರವಾಗಿದೆ. ಒಂದುವೇಳೆ ನೀವು ನಿರ್ಲಕ್ಷಿಸಿದರೂ ಆಂತರಂಗಿಕ ಮಹಾಜ್ವಾಲೆ ಎಲ್ಲಿತಾನೇ ಅಡಗೀತು ? ಅದು ಒಂದಲ್ಲ ಒಂದು ದಿನ ಪ್ರಕಟವಾಗಲೇ ಬೇಕು.

ಯಾಜ್ಞವಲ್ಕ್ಯ ಮಹರ್ಷಿಯು ಆಗ ಒಂದು ಘಳಿಗೆ ವಿವಶತೆಯಿಂದ ಬಿಡುಗಡೆ ಹೊಂದಿದಂತೆ–ಅದು ಸರಿಯೇ, ಆದರೆ........ಎಂದರೂ ಮುಂದೆ ಮಾತು ಹೊರಡದೆ ಚಿತ್ತಕಲ್ಪದ ಮೇಲೆ ದೃಷ್ಟಿಯನ್ನು ಹೊರಳಿಸಿ ಅಂತಃಸ್ಫುರಿತ ಭಾವ ಶಾಂತಿಯಲ್ಲಿ ಮೈಮರೆತಂತೆ ಮತ್ತೆ ಸುಮ್ಮನಾಗುವನು.

ಆಗ ಕಾತ್ಯಾಯಿನಿಯು ಪ್ರತ್ಯುತ್ತರದ ನಿರೀಕ್ಷೆಯಲ್ಲಿ ಕಾತರಳಾದ್ದ

ರಿಂದ ಅಷ್ಟಕ್ಕೇ ಸುಮ್ಮನಾಗಲಿಲ್ಲ; ಸಂದರ್ಭೋಚಿತವಾಗಿ ಪ್ರಶ್ನೆಯಂತೂ ಆಗಲೇ ಹೊರಬಿದ್ದಿದೆ. ಅದನ್ನು ಆ ಕ್ಷಣ ನಿವಾರಿಸಿಕೊಳ್ಳುವ ಅಗತ್ಯವು ತೋರಿ ಬಂತು. ಪುನಃ ಮೆಲುದನಿಯಲ್ಲಿ ಪ್ರಶ್ನೆಯನ್ನು ಮುಂದಿಟ್ಟಳು–ಭಗವನ್ ಅದೇಕೆ ಅಷ್ಟಕ್ಕೆ ಸುಮ್ಮನಾದಿರಿ ?

ಯಾಜ್ಞವಲ್ಕ್ಯ ಮಹರ್ಷಿ--ನಿನ್ನ ಆತುರಕಾತರತೆಯು ಸಲುವಾಗಿ ತಿಳಿಸಿಕೊಡುವುದುಚಿತ. ಪ್ರಜ್ಞಾನ ದೀಪ್ತಿ ಎಂಬುದು ಎಂದಿಗೂ ಮುಚ್ಚಿಡುವಂತಾದ್ದಲ್ಲ, ನಿಜ. ಆದರೆ, ನಾವು ವರ್ಷಾಕಾಲದ ಮಂಡೂಕಗಳಂತೆ ವಟಗುಟ್ಟುವುದು ಅಸಹ್ಯ. ಎಲ್ಲಕ್ಕೂ ಒಂದು ಸ್ಥಿಮಿತವಿದ್ದರೆ ಒಳ್ಳೆಯದು. ಮೇಲಾಗಿ, ಕಾಲ ಪರಿಪಕ್ವತೆಯೂ ಉಂಟಾಗಬೇಕು. ಯಾವ ಕಾರ್ಯಾಚರಣೆಯಲ್ಲಿಯೂ ಆತುರ ಸಲ್ಲದು. ಅದರಲ್ಲೂ ಬ್ರಹ್ಮವಿದ್ಯೆಯಲ್ಲಿ ಆತುರಪಡುವುದಂತೂ ತೀರಾ ಅನುಚಿತ. ಬ್ರಾಹ್ಮಣಃ ಪಾಂಡಿತ್ಯಂ ನಿರ್ವಿದ್ಯ ಬಾಲ್ಯೇನ ತಿಷ್ಠಾಸೇತ್ ಎಂಬುದು ನಿನಗೆ ತಿಳಿದಿದೆಯಷ್ಟೆ ?

ಪತಿಯ ವ್ಯಾಖ್ಯಾನದ ಹುರುಳು ಅಂತರಂಗವನ್ನು ಮುಟ್ಟಿದಾಗ ಅವಳು 'ಹೌದು' ಎಂಬಂತೆ ಮೆಲ್ಲನೆ ತಲೆಯಾಡಿಸಿದಳು.

ಹಾದಿಯಂಚಿನಲ್ಲಿ ಹಸುರು ಹುಲ್ಲನ್ನು ಮೇಯುತಿದ್ದ ಗೋವೃಂದ ಕರುಗಳ ಕಡೆ ಮನಸ್ಸು ಹರಿದಾಗ ಹಟ್ಟಿಯತ್ತ ತ್ವರಿತವಾಗಿ ಹೆಜ್ಜೆ ಹಾಕಿದುವು. ಕಾತ್ಯಾಯಿನಿ ಅಲ್ಲಿಂದ ಹೊರಟಾಗಲೇ ಮಹರ್ಷಿ–ಮಂಗಳೆ ಅದೋ, ಆಗಲೇ ಹಟ್ಟಿಯ ಕಡೆ ಹೋದುವು ಹಸುಗಳು.

ಸತೀ ಕಾತ್ಯಾಯಿನಿ ಆ ಕ್ಷಣವೇ ಅಲ್ಲಿಂದ ಹೊರಟಳು. ಯಾಜ್ಞವಲ್ಕ್ಯ ಮಹರ್ಷಿಯು ಪುನಃ ಅಲ್ಲಿಂದಲ್ಲೇ ಪದಚಾರಣ ಮಾಡುತ್ತ ವಿಚಾರ ಮಥನದಲ್ಲಿ ಮನವಿಡುವನು. ತದೇಕ ಚಿಂತನೆ ಕಾರ್ಯಕಾರಣಗಳ ಅಲುಗಿನ ಮೇಲೆ ಯಥೋಚಿತವಾಗಿ ಹರಿದಾಡತೊಡಗಿತು, ಕರತರ ಅಸಿಧಾರಾ ಪಾತ್ರದಲ್ಲಿ ಸ್ರೋತಸ್ವಿನಿಯಾಗಿ ಮನಸ್ಸೇ ಕರಗಿ ಹರಿಯುವಂತೆ.

........ಅಸತ್ತೇ ಮೂಲವಾಗಿ ಉಳ್ಳ ಸಂಕಲ್ಪ–ದೃಗ್ವಿಷಯದಿಂದಾಚೆಗೆ

ನಿಲುಕದ ದೃಷ್ಟಿ ಯಾವ ಸಾಧನೆಯನ್ನು ಸಾಧಿಸೀತು ? ವಿದ್ಯೆಯು ಬಳಕೆ ನಿತ್ಯವಾದರೂ ಅದರ ಆಳವನ್ನು ಅರಿಯಬೇಕಾದರೆ ಅಕ್ಷರವಾದ ಧೀಸತ್ತ್ವವನ್ನು ಕರಗತಮಾಡಿಕೊಳ್ಳದಿದ್ದಲಿ ಅದು ನಿಃಸತ್ವವೂ ನಿಸ್ಸಾರವೂ ಆಗಿ ದಿವ್ಯ ಜೀವನೀಯ ಜಾಡು ತಪ್ಪುತ್ತದೆ. ಸರ್ವಜ್ಞನೂ ಸರ್ವಶಕ್ತನೂ ಸರ್ವ ವ್ಯಾಪಿಯೂ ಆದ ಪರಬ್ರಹ್ಮನು ಹೊರಗಣ್ಣಿಗೆ ಅಗೋಚರನೂ ಅತೀತನೂ ಆಗಿದ್ದಾನೆ. ಒಳಗಣ್ಣು ತೆರೆಯದ ಹೊರತು ಜಗತ್ ಶಕ್ತಿಯ ತುಲನೆ ಅಸಾಧ್ಯ. ಪರಬ್ರಹ್ಮನು ತನ್ನ ಮಾಯಾಶಕ್ತಿಯಿಂದ ಅಖಿಲ ಬ್ರಹ್ಮಾಂಡ ವನ್ನು ನಿರ್ಮಾಣಗೈದು ಲೋಕಾಲೋಕಗಳನ್ನು ಏಕಸೂತ್ರಗೊಳಿಸಿ ಕಾಲ ಕಾಲಕ್ಕೂ ಸುಸೂತ್ರವಾಗಿ ಕ್ರಮಬದ್ಧವಾಗಿ ನಿಯಂತ್ರಣಗೊಳಿಸಿದರೂ ತಾನದರ ಪ್ರಭಾವದಿಂದ ಮುಕ್ತ. ಯಾರೇ ಇರಲಿ, ಅರಿತು-ನುರಿತು ಕಾಲ ದೇಶಗಳ ಕಾನನದಲ್ಲಿ ಸಂಚರಿಸಿ ಭಾವಗೋಚರವಾದ ವಿಚಾರ ದೀಪ್ತಿಯನ್ನು ಅವಧರಿಸದೇ ಹೋದರೆ ಅದು ಮಾನಸಿಕ ದೌರ್ಬಲ್ಯವೇ ಸರಿ. ಜಗತ್ ಮಾಯಾಶಕ್ತಿಯ ಸಂಯುಕ್ತ ಆಯೋಜನೆ ಸಾಂತವೇ ಆದರೂ ಅದರ ಪ್ರಭಾವವನ್ನು ಅರಿಯಲು ಸಾಮಾನ್ಯರಿಗೆ ಸಾಧ್ಯವಾಗದು. ಎಷ್ಟೆಂದರೂ ಆ ಸತ್ ಸಂಕಲ್ಪದ ಮುಂದೆ ಈ ವಿಕಲ್ಪಚಿತ್ತ ಎತ್ತ? ಹಾಗೆಂದು ಮಾಯಾ ಜಗತ್ತಿನ ಸಂಸ್ರವವನ್ನು ಕಡಿದುಕೊಳ್ಳುವುದು ಬದುಕಿನಲ್ಲಿ ಅಸಾಧ್ಯ. ಅಂತಿಮವಾಗಿ ಮೃತ್ಯುವಿನ ಮೂಲಕ ಸಾಧ್ಯವಾದರೂ ಅದರಿಂದ ಇಡೀ ಜಗತ್ತಿನ ಸಂಸ್ರವ ಮಾತ್ರವಲ್ಲ, ಜೀವಾತ್ಮನ ಸಂಸ್ರವವೂ ಸಹ ತಪ್ಪುತ್ತದೆ. ಅಲ್ಲಿಗೆ ವಿಚಾರದೀಪ್ತಿ-ಯೋಗದೀಪ್ತಿ-ಜೀವನ ದೀಪ್ತಿ ಎಲ್ಲಕ್ಕೂ ಇತಿಶ್ರೀ ಹಾಡಿದಂತೆಯೇ. ಆದ್ದರಿಂದ ಸಾಧಕ ಆತ್ಮಜ್ಯೋತಿಯನ್ನು ಬೆಳಗಿಸುವುದ ರಲ್ಲಿ ಜೀವನೋತ್ಕೃಷ್ಟವಾದ ಆನಂದಭೋಗವನ್ನು ಪಡೆದುಕೊಳ್ಳಬಹುದೇ ಹೊರತು ತಮಃಪ್ರಭಾವದಿಂದಲ್ಲ. ಇದೇ ಬ್ರಹ್ಮವಾದಕ್ಕೂ ಉತ್ತರ ಮೀಮಾಂಸೆ........

ಅದೇ ವೇಳೆಗೆ ಆರುಣಿಯು ಕಾಲು ಹಾದಿಯಲ್ಲಿ ಕಾಣಿಸಿಕೊಂಡು ಒಂದೆರಡು ಘಳಿಗೆಯಲ್ಲಿ ಸಮೀಪಗತನಾಗಿ ಸರಳ ಹಾಸದೊಡನೆ-ನಮಸ್ತೇ ಭಗವನ್.

ಕೈಗಳನ್ನು ಗೌರವಪೂರ್ವಕವಾಗಿ ಜೋಡಿಸುವನು.

ಯಾಜ್ಞವಲ್ಕ್ಯ ಮಹರ್ಷಿ–ನಮಸ್ತೇ ಆರುಣಿ. ಏನಪ್ಪಾ, ಏನು ವಿಶೇಷ? ಸ್ನೇಹ ಸಲಿಗೆಗಳಿಂದ ಪ್ರಶ್ನಿಸುವನು.

ಆರುಣಿ– ವೈಶಂಪಾಯನ ಮಹರ್ಷಿಗಳ ಆಶ್ರಮದಿಂದ ನಾನು ಬರುತಿದ್ದೇನೆ. ಗುರುಗಳು ನಿನ್ನನ್ನು ಕರೆಯುಕಳುಹಿಸಿದ್ದಾರೆ.

ಯಾಜ್ಞವಲ್ಕ್ಯ ಮಹರ್ಷಿ– ಏಕೆ, ಏನು ಸಮಾಚಾರ ? ಬಹಳ ದಿನಗಳಿಂದ ನಾನು ಅತ್ತ ಹೋಗಲೇ ಇಲ್ಲ.

ಆರುಣಿ–ಅಹಃ. ನಿನಗೆ ಗುರುಗಳನ್ನು ಮರೆಯುವಂತಹ ಕಾರ್ಯಭಾರ?

ಯಾಜ್ಞವಲ್ಕ್ಯ ಮಹರ್ಷಿ–ಸ್ವಂತಿಕೆ.

ಆರುಣಿ– ಸ್ವಂತಿಕೆಯಾದರೂ ಕೂಡ ಗುರುಗಳನ್ನು ಅಲಕ್ಷಿಸುವ ಪ್ರಸಂಗವೆಂದರೆ ಅದು ಬಹಳ ಗಂಭೀರವಾಗಿರಲೇ ಬೇಕು.

ಯಾಜ್ಞವಲ್ಕ್ಯ ಮಹರ್ಷಿಯು ಮುಗುಳ್ನಗೆ ಸೂಸಿ–ಗುರುಗಳನ್ನು ಮರೆಯುವುದುಂಟೇ? ಅಥವಾ ಅಲಕ್ಷಿಸುವುದೂ ಉಂಟೆ? ಕೆಲವು ದಿನಗಳಿಂದ ತೀವ್ರಮಾನಸಿಕ ವ್ಯವಹಾರದಲ್ಲಿ ಸಿಕ್ಕಿಬಿದ್ದಿರುವುದರಿಂದ ನನಗೆ ಬಿಡುವು ಮಾಡಿಕೊಳ್ಳಲು ಸಾಧ್ಯವಾಗಲಿಲ್ಲ ಅಷ್ಟೆ.

ಆರುಣಿ–ಭಗವನ್. ಹಾಗೆಂದರೂ ಸಹ ಗುರುಗಳನ್ನು ಅಲಕ್ಷಿಸಿದಂತಾಗಲಿಲ್ಲವೆ ?

ಯಾಜ್ಞವಲ್ಕ್ಯ ಮಹರ್ಷಿ–ಅದೂ ಸರಿ; ನನಗೂ ಅರ್ಥವಾಗಿದೆ. ಆದರೂ, ಈ ಮನಸ್ಸು ಯಾವುದಾದರೊಂದು ವಿಚಾರವನ್ನು ತುಂಬಿಕೊಂಡಿತೆಂದರೆ ತೀರಿತು. ಅದರ ಇತ್ಯರ್ಥವಾಗುವವರೆಗೂ ಬಿಡುವೆಂಬುದು ದೊರೆಯುವುದಿಲ್ಲ. ನಾನು ಮೈಮರೆತು ಅದರಲ್ಲೇ ಸಂಪೂರ್ಣ ತಲ್ಲೀನನಾಗಿ ಬಿಡುವೆ.

ಆರುಣಿ–ಆಯಿತು, ಭಗವನ್. ಆಗಲೇ ನಿನ್ನ ಹೆಸರು ಜನಜನಿತವಾಗು

ತ್ತಿದೆ. ಮುಂದಿನ ವಿದ್ಯಮಾನವನ್ನು ಕಾದು ನೋಡಬೇಕು.

ಯಾಜ್ಞವಲ್ಕ್ಯ ಮಹರ್ಷಿ–ಅದಿರಲಿ, ನಿನ್ನ ಅಭ್ಯಾಸ ಹೇಗೆ ಸಾಗುತ್ತಿದೆ?

ಆರುಣಿ–ಅದನ್ನು ನಿನ್ನ ಮುಂದೆ ಹೇಳಬೇಕೆಂದರೆ 'ಸಾಧಾರಣ' ಎಂಬ ಉತ್ತರವೇ ಲೇಸು.

ಯಾಜ್ಞವಲ್ಕ್ಯ ಮಹರ್ಷಿಯು ಮಂದಹಾಸದೊಡನೆ– ನನಗೊತ್ತು ನಿನ್ನ ಪ್ರಯತ್ನವೇನೂ ಸಾಮಾನ್ಯವಲ್ಲ.

ಆರುಣಿ–ಪ್ರಯತ್ನದ ಮಾತು ಬೇರೆ.

ಯಾಜ್ಞವಲ್ಕ್ಯ ಮಹರ್ಷಿ–ಪ್ರಯತ್ನವಿದ್ದಲ್ಲಿ ಉತ್ತಮ ಫಲಿತಾಂಶವೂ ಇರಲೇ ಬೇಕಲ್ಲ ?

ಆರುಣಿ–ಗಾಳಿಗೋಪುರ.

ಇಬ್ಬರ ಮುಖಮಂಡಲದಲ್ಲೂ ಎಳೆನಗುವಿನ ಮುಗುಳು ಅರಳುವುದು.

ಯಾಜ್ಞವಲ್ಕ್ಯ ಮಹರ್ಷಿ–ನಾಳೆ ಪ್ರಾತಃಕಾಲದಲ್ಲಿ ನಾನು ಗುರುಗಳ ಬಳಿಗೆ ಹೋಗಿ ಬರುವೆ.

ಆರುಣಿ–ನಾನು ಹಾಗೆಂದು ಗುರುಗಳಿಗೆ ವರದಿ ಮಾಡಲೇ ?

ಯಾಜ್ಞವಲ್ಕ್ಯ ಮಹರ್ಷಿ– ಆಗಬಹುದು. ನಾನು ಅವರನ್ನು ಕಾಣುವುದಂತೂ ನಿಶ್ಚಯ.

ಆರುಣಿಯು ಯಾಜ್ಞವಲ್ಕ್ಯ ಮಹರ್ಷಿಯಿಂದ ಬೀಳ್ಕೊಂಡು ಅಲ್ಲಿಂದ ಹೊರಡುವನು.

ಉಚ್ಛ್ವಾಸ ೧

ಪ್ರಾಚೀದಿಕ್ತಟದಲ್ಲಿ ಒಯ್ಯೊಯ್ಯನೆ ಒಸರಿದ ರಾಗಾರುಣತಾನ ಸದ್ಯಃ ಉದಯಮಾನೋತ್ಸವಕ್ಕೆ ಅವಿಸಂವಾದಿಯಾದ ಸಾಕ್ಷಿ. ಗಗನದ್ದೇಶದ ನೀಲ ಪಟಲ ಒಮ್ಮೆ ಹಳದಿಗೆಂಪಾಗಿ ಇನ್ನೊಮ್ಮೆ ನೀಲಿಗೆಂಪಾಗಿ ಕೆಲವೊಮ್ಮೆ ಬೂದಿಗೆಂಪಾಗಿ ಬಾಹ್ಯಾಂತರಗಳನ್ನು ಸ್ವರ್ಗ ಸದೃಶ ಚೈತನ್ಯದಿಂದ ಆಹ್ಲಾದಗೊಳಿಸುವಂತಿದ್ದರೂ ಉದಯೋನ್ಮುಖೀ ಸೂರ್ಯ ಮಂಡಲಕ್ಕೆ ಪ್ರತಿದ್ವಂದ್ವಿಯೋ ಎಂಬಷ್ಟು ರುದ್ರಗೂಢ. ನೆಟ್ಟದಿಟ್ಟಿ ನೀಲಿಗಟ್ಟುವಷ್ಟು ಮೋಹಕವಾದ ಸಮೃದ್ಧ ನೀಲಿಯ ಶೋಭಾಸಂಪತ್ತಿಯ ಮೇಲೆ ನವನೀತದ ಹೇರಾಶಿಯನ್ನೆ ಚೆಲ್ಲಿ ಸೂಸಿದಂತಹ ಬೆಳ್ಮೋಡಗಳಲ್ಲಿ ಸಂದರ್ಶನೀಯವಾದ ಅಮಿತ ಲೀಲಾ ಪ್ರವೃತ್ತಿ. ಗಿಡುಮರಗಳಲ್ಲಿ ಪಕ್ಷಿಸಂಕುಲವು ಉಷಃಕಾಲದ ಹುಮ್ಮಸ್ಸಿನಿಂದ ನಿಶ್ಚಲ ಧ್ಯಾನಭಂಗಿಯಲ್ಲಿ ಕೊರಳು ತುಂಬಿ ಹಾಡುವ ವಿವಿಧರಾಗಮಾಲಿಕೆಯ ಸುಪ್ರಭಾತದ ಆಮೋದಕತೆ ಪ್ರಿಯವಾಗಿ ಸಲ್ಲುವುದು ಕರ್ಣ ಕುಂಡಲಿನಿಗೆ. ಪ್ರಫುಲ್ಲ ಮಾಲತೀ ಪುಷ್ಪಗಳು ತಾರುಣ್ಯದ ಹುಮ್ಮಿನಿಂದ ನಳನಳಿಸಿ ಕಮನೀಯ ಕಂಪನ್ನು ಬೀರುತ್ತವೆ, ವಸಂತ

ವೈಖರಿಯಲ್ಲಿ. ರವಿಯಾಗಮನದ ಶುಭವಾರ್ತೆಯನ್ನು ದಿಶೆದಿಶೆಗೂ ಕ್ಷಣ ಮಾತ್ರದಲ್ಲಿ ಶೀತಲ ಶಾಂತಿಯಿಂದ, ಸಂಭ್ರಮ ಸಡಗರದಿಂದ ಬಿತ್ತರಿಸುವ ಮಂದಮಂದಾನಿಲನ ಜಗತ್ ಸಂಚರಣ. ಪಡು ಸೀಮೆಯಲ್ಲಿ ಆಗಲೇ ರವಿ ಕಿರಣಗಳು ಮೆಲ್ಲಮೆಲ್ಲನೆ ಸ್ವರ್ಣಸಲಾಕೆಗಳಂತೆ ಕಾಣಿಸಿಕೊಳ್ಳತೊಡಗಿದುವು. ಇನ್ನಷ್ಟು ಹೊತ್ತಿನೊಳಗಾಗಿ ಮುಗಿಲ ದಿಣ್ಣೆಯಮೇಲೆ ಅರುಣೋದಯಶ್ರೀ. ಕ್ಷಣೇ ಕ್ಷಣೇ ಮುಂಬರಿಯುವ ರವಿ ಬಿಂಬದ ಸುತ್ತಲೂ ಏನೋ ಒಂದು ರೀತಿಯ ಅವರ್ಣನೀಯವಾದ ಅನುಭವದ ರಾಶಿ ರಾರಾಜಿಸುತ್ತಿದೆ. ಮೂಡುವೆಣ್ಣಿನ ಕೈಯಕೂಸಿನಂತೆ ಅಮೋಘವಾಗಿ ಅಭೂತಪೂರ್ವಕವಾಗಿ ಉಜ್ವಲಿಸುತಿದ್ದ ಸ್ವರ್ಣಮಂಡಲ ಮೆಲ್ಲಮೆಲ್ಲನೆ ಮೇಲೆರುತ್ತ ಮುಗಿಲ ಪೀಠವನ್ನು ಬಿಟ್ಟುಕೊಟ್ಟಿತು, ಪ್ರವರ್ಧಮಾನಕ್ಕೇರಿದ ಕೂಸು ತಾಯಿ ತೊಡೆಯನ್ನು ಬಿಡುವಂತೆ.

ಪ್ರಾತಃಸ್ಫೂರ್ತಿ.

ಎಲ್ಲಿಂದ ಎಲ್ಲಿಯವರೆಗೂ ಜೀವಕೋಶಗಳಲ್ಲಿ ಪ್ರಾತಃಸ್ಫೂರ್ತಿ ಒಂದೇ ರೀತಿಯಲ್ಲಿ ಕಂಡುಬರುತ್ತಿದೆ,ಉತ್ಸಾಹ-ಸಡಗರ-ಸ್ಫೂರ್ತಿಗಳ ಸಂಲಗ್ನವಾಗಿ.

ಯಾಜ್ಞವಲ್ಕ್ಯ ಮಹರ್ಷಿ ಪ್ರಾತಃಸ್ಫೂರ್ತಿಯಿಂದ ಉತ್ತೇಜಿತನಾಗಿಯೆ ಹೊರಟಿದ್ದಾನೆ ತನ್ನಆಶ್ರಮದಿಂದ. ಆ ಪ್ರಸನ್ನ ಮನೋಹರ ಮುಖಮಂಡಲದಲ್ಲಿ ಉದ್ವೇಗ–ಆಯಾಸದ ಚಿಹ್ನೆಗಳು ಕಿಂಚಿತ್ತೂ ಇರಲಿಲ್ಲ. ಸರ್ವತ್ರ ಸದಾ ಸುಜನಗಾಂಭೀರ್ಯ, ಔನ್ನತ್ಯದ ಶ್ರೀಮಂತಿಕೆ ತಾಂಡವವಾಡುತ್ತಿವೆ ದೀಪ್ತ ಲಲಾಟದ ಮೇಲೆ. ಜೀವನಸ್ತರದ ಆಸೆಯಾಗಲೀ ನಾಮ ರೂಪಗಳ ಆಸೆಯಾಗಲೀ ಆತನ ಬಳಿಯೂ ಸುಳಿಯದು. ನಿರ್ಮೇಘ ನಭದಂತೆ ಮನಸ್ಸಿನದು ನಿರ್ಮಲ ಪ್ರವೃತ್ತಿ;ತೀಕ್ಷ್ಣತೆಯಲ್ಲಿ ಖಡ್ಗಕ್ಕಿಂತಲೂ ಹರಿತ. ತಪಃಕಷಾಯಿತ ಲೋಹಿತ ದೃಷ್ಟಿ, ಭಾವಪರಿಪೂರ್ಣವಾದ ಮುಖಮಂಡಲ ನಿತ್ಯ ಧೀಮಂತ ಚಿಂತನೆಯನ್ನು ಸಾರಿಹೇಳುತ್ತವೆ. ರವಿಯ ಉತ್ತುಂಗದೈಸಿರಿಯನ್ನೂ ವಾತಾವರಣದ ತನಿಗಂಪನ್ನೂ ಶುಕಪಿಕಗಳ ಮಂಗಳಗಾನದ ಸವಿಯಿಂಪನ್ನೂ ಮನದುಂಬಿಕೊಳ್ಳುತ್ತ ಸಾನಂದದಿಂದ ವೈಶಂಪಾಯನ ಮಹ

ರ್ಷಿಗಳ ಆಶ್ರಮಕ್ಕೆ ನಡೆತಂದಿದ್ದಾನೆ. ಪರ್ಣಶಾಲೆಯಲ್ಲಿ ಶಿಷ್ಯರೊಡಗೂಡಿ ಕುಳಿತಿದ್ದ ವೈಶಂಪಾಯನ ಮಹರ್ಷಿಗಳು ಅವನನ್ನು ಕಂಡು ಹರ್ಷಚಿತ್ತರಾದರು.

ವೈಶಂಪಾಯನ ಮಹರ್ಷಿ–ನೀನು ಈಚೀಚಿಗೆ ಬಹಳ ಅಪರೂಪವಾಗುತಿದ್ದಿ.

ಯಾಜ್ಞವಲ್ಕ್ಯ ಮಹರ್ಷಿ–ಬಿಡುವು ಮಾಡಿಕೊಳ್ಳಲಾಗಲಿಲ್ಲ ಅಷ್ಟೆ.

ವೈಶಂಪಾಯನ ಮಹರ್ಷಿ–ಸಾಧಕರಿಗೆ ಬಿಡುವಾದರೂ ಎಲ್ಲಿ? ನಿನ್ನನ್ನು ನಾವು ಸದಾ ನಿರೀಕ್ಷಿಸುವುದು ಸಹ ಸರಿಯಲ್ಲ. ನಿನ್ನಿಂದ ಒಂದು ಕೆಲಸವಾಗಬೇಕಾಗಿದ್ದುದರಿಂದ ಕರೆ ಕಳುಹಿಸಿದೆ.

ಯಾಜ್ಞವಲ್ಕ್ಯ ಮಹರ್ಷಿ–ಅಪ್ಪಣೆಯಾಗಲಿ ಗುರುಗಳೇ.

ವೈಶಂಪಾಯನ ಮಹರ್ಷಿ–ನಾನು ಇದುವರೆಗೆ ವರ್ಧಮಾನ ಪುರಿಯ ಮಹಾರಾಜನಿಗಾಗಿ ಅಭಿಮಂತ್ರಿಸಿ ಕಳುಹಿಸಿದ ಗಂಗೋದಕದಿಂದ ಯಾವ ಪ್ರಯೋಜನವೂ ಆಗಲಿಲ್ಲ. ಅವನಿಗೆ ಹೇಗಾದರೂ ಉಪಕರಿಸುವ ಒಂದು ಯೋಚನೆಯಿದೆ, ಮನದಲ್ಲಿ. ಅದಕ್ಕೆ ಅಗತ್ಯವಾಗಿ ನಿನ್ನ ನೆರವು ಬೇಕಾಗಿದೆ.

ಯಾಜವಲ್ಕ್ಯ ಮಹರ್ಷಿ–ಎಲ್ಲಕ್ಕೂ ಕರ್ಮಗತಿಯು ಅನುಗುಣವಾಗಿರಬೇಕಲ್ಲವೆ ?

ವೈಶಂಪಾಯನ ಮಹರ್ಷಿ–ಅದು ಸರಿಯೆಂದರೂ ಗಂಗೋದಕವನ್ನು ಅಭಿಮಂತ್ರಿಸಿದವನು ನಾನಷ್ಟೆ?

ಯಾಜ್ಞವಲ್ಕ್ಯ ಮಹರ್ಷಿ–ನೀವು ಆಶೀರ್ವಾದಮಾಡಿದ್ದು ಅಂತಃಕರಣರೂಪವಾದ ಮೋಹದಿಂದ.

ಆಗ ವೈಶಂಪಾಯನ ಮಹರ್ಷಿಯು ಸ್ವಲ್ಪಹೊತ್ತು ಏನೂ ಹೇಳದೆ ಯೋಚನೆಗೊಳಗಾಗುವನು. ಶಿಷ್ಯರೆಲ್ಲರೂ ಪರಸ್ಪರ ಮುಖ ನೋಡಿಕೊಂಡು ಸುಮ್ಮನಾಗುವರು. ಯಾಜ್ಞವಲ್ಕ್ಯ ಮಹರ್ಷಿಯು ವಿಚಾರ ಪರವಶನಾಗಿ

ಸ್ವಲ್ಪ ಸಮಯ ಸಮ್ಮನಿದ್ದು—ಆ ಬಗ್ಗೆ ಯೋಚಿಸಿದಿರಾ, ನಿಮಗೇನೆನಿಸುತ್ತೆ ಗುರುಗಳೇ ?

ವೈಶಂಪಾಯನ ಮಹರ್ಷಿ—ನಿನ್ನ ತರ್ಕದಲ್ಲಿ ಹುರುಳಿಲ್ಲ ಎನ್ನಲಾರೆ. ಆದರೂ ಸಹ, ಸಂಕಷ್ಟದಲ್ಲಿರುವವನಿಗೆ ಸಹಾಯ ಮಾಡುವುದೇ ನನ್ನ ಉದ್ದೇಶ.

ಯಾಜ್ಞವಲ್ಕ್ಯ ಮಹರ್ಷಿ—ಗುರುಗಳೇ, ಅದು ಸಾಧುವಾದರೂ ಮಹಾ ರಾಜನ ರೋಗ ಕರ್ಮಬದ್ಧವಾದುದು.

ವೈಶಂಪಾಯನ ಮಹರ್ಷಿ—ಹೌದು. ಅದು ನನಗೂ ಗೊತ್ತು. ಆದರೂ ಯಾರ ಪುಣ್ಯವಾದರೂ ಸಲ್ಲಲಿ ಎಂಬ ಆಶಾವಾದ ಅಥವಾ ನೀನೆಂದಂತೆ ಕಾರುಣ್ಯಪೂರ್ಣವಾದ ಮೋಹ.

ಸ್ವಲ್ಪ ಹೊತ್ತು ರುದ್ರಮೌನ ರಾಜ್ಯವಾಳಿತು.

ವೈಶಂಪಾಯನ ಮಹರ್ಷಿ—ಇಂದು ಮುಂಜಾನೆಯೇ ದೇವರಾತ ನೊಂದಿಗೆ ಅಭಿಮಂತ್ರಿತ ಗಂಗೋದಕವನ್ನು ಮಹಾರಾಜನಿಗೆ ಕಳುಹಿಸಿ ಕೊಟ್ಟಿರುವೆ. ನಾಳೆ ಉಷಃಕಾಲದಲ್ಲೇ ಬಂದು ನೀನು ತೆಗೆದುಕೊಂಡು ಹೋಗು. ನಿನ್ನ ಪುಣ್ಯಫಲವಾದರೂ ಫಲಿಸಬಹುದೋ ನೋಡೋಣ.

ಯಾಜ್ಞವಲ್ಕ್ಯ ಮಹರ್ಷಿ—ನಿಮ್ಮ ಅಪ್ಪಣೆಯು ಮೇರೆಗೆ ಆಗಬಹುದು.

ವೈಶಂಪಾಯನ ಮಹರ್ಷಿ—ಅಂದರೆ ನಿನಗೆ ಸಮಯ ಸ್ಫೂರ್ತಿ ಮೂಡ ಲಿಲ್ಲ ಎಂದ ಹಾಗೆಯೆ ?

ಯಾಜ್ಞವಲ್ಕ್ಯ ಮಹರ್ಷಿ—ನನಗಂತೂ ಅನುಮಾನವೇ.

ವೈಶಂಪಾಯನ ಮಹರ್ಷಿ—ನಿನ್ನ ಸರದಿ ಫಲಪ್ರದವಾದೀತೆಂದು ಆಶಿ ಸೋಣ. ಈಗಲೇ ಪರಿಣಾಮದ ಬಗ್ಗೆ ನಿರಾಶೆ ಹೊಂದುವುದು ಸರಿಯಲ್ಲ.

ಇಬ್ಬರ ಮುಖಬಿಂಬದಲ್ಲೂ ಮುಗುಳುನಗೆ ಮೂಡಿ ಮಾಯ ವಾಯಿತು.

ಯಾಜ್ಞವಲ್ಕ್ಯ ಮಹರ್ಷಿ ಗುರುವಿನ ಅಪ್ಪಣೆ ಪಡೆದು ತನ್ನ ಆಶ್ರಮದತ್ತ ತೆರಳುವನು. ವನ ವಲಯದ ಪಚ್ಚ ಪ್ರದೇಶವನ್ನು ದಾಟಿ ಆಶ್ರಮವನ್ನು ಮುಟ್ಟದಾಗ ಸತೀ ಕಾತ್ಯಾಯಿನಿ ಎದುರಾಗುವಳು. ಮುಖಮಂಡಲದಲ್ಲಿ ಎಳೆನಗುವಿನ ತಿಳಿಹಾಸ. ಕೈಯಲ್ಲಿ ಬಿಂದಿಗೆಯ ತುಂಬ ತಣ್ಣನೆಯ ಗಂಗೋದಕ. ಮಡದಿ ಅನುನಯದಿಂದ ಕೇಳಿದಳು—ಮಹರ್ಷಿಗಳು ಸಿಕ್ಕಿದರೇ ?

ಯಾಜ್ಞವಲ್ಕ್ಯ ಮಹರ್ಷಿ—ಹೌದು, ದೇವಿ. ನಾಳೆ ಬೆಳಿಗ್ಗೆ ವರ್ಧಮಾನಪುರಿಯ ಮಹಾರಾಜನಿಗೆ ಗಂಗೋದಕವನ್ನು ಒಯ್ದು ಕೊಟ್ಟು ಬರಲು ನಾನು ಒಪ್ಪಿಕೊಂಡಿರುವೆ. ವೈಶಂಪಾಯನ ಮಹರ್ಷಿಗಳು ನನ್ನನ್ನು ಕರೆಸಿಕೊಂಡದ್ದೇ ಅದಕ್ಕೆ. ಅದು ಅವರ ಅಭೀಪ್ಸೆ.

ಕಾತ್ಯಾಯಿನಿ—ಹಾಗಾದರೆ ಈಗ ನಿಮ್ಮ ಸರದಿ. ಅದರೊಂದಿಗೆ ನಿಮ್ಮ ಸತ್ವಬಲದ ಪರೀಕ್ಷೆಯೂ ಆಗಲಿದೆ. ಅವರು ಈಗಾಗಲೇ ಎಷ್ಟು ಮಂದಿಯೊಂದಿಗೆ ಮಂತ್ರೋದಕವನ್ನು ಕಳುಹಿಸಿಕೊಟ್ಟಿದ್ದಾರೊ........!

ಯಾಜ್ಞವಲ್ಕ್ಯ ಮಹರ್ಷಿ—ಹೌದು, ಹೌದು. ಬಹಳ ದಿನಗಳಿಂದ ಈ ಪ್ರಯತ್ನ ನಡೆಯುತ್ತಿದೆ. ಆದರೆ, ಇದು ವ್ಯರ್ಥ ಸಾಹಸ ಎನಿಸುತ್ತಿದೆ ನನಗೆ. ವೈಶಂಪಾಯನ ಮಹರ್ಷಿಗಳು ಗುರುಕುಲದ ಆಚಾರ್ಯರು. ಆಶ್ರಮದ ವಿಭೂತಿಗಳು. ಅವರ ಆಶಯವನ್ನು ಪ್ರಶ್ನಿಸುವುದು ಸರಿಯಲ್ಲ. ಹಾಗೆಂದು ಅದನ್ನು ಪುಷ್ಟೀಕರಿಸಲು ಮನಸ್ಸು ಒಪ್ಪುವುದಿಲ್ಲ. ಫಲಾಫಲಗಳನ್ನು ಬದಿಗಿಟ್ಟು ಕಾರ್ಯ ನಿರ್ವಹಿಸುತ್ತೇನೆಂದರೂ ಮನಃಬುದ್ಧಿಗಳಿಗೆ ಅಪಚಾರ ವೆಸಗಿದಂತೆ. ಆದರೂ ಒಪ್ಪಿಗೆ ಕೊಡಬೇಕಾಯಿತು, ಕೊಟ್ಟು ಬಂದೆ.

ಮಡದಿಯು ಸುರಿದ ಬಿಂದಿಗೆ ನೀರಿಗೆ ಮಹರ್ಷಿಯು ಬೊಗಸೆಯೊಡ್ಡಿ ಮುಖಮಜ್ಜನ ಮಾಡಿ ಕೈಕಾಲುಗಳನ್ನು ತೊಳೆದು ಪಯಣದ ಆಯಾಸವನ್ನು ಪರಿಹರಿಸಿಕೊಂಡು ಕೈಸಾಲೆಯಲ್ಲಿದ್ದ ಚಾಪೆಯ ಮೇಲೆ ಕುಳಿತುಕೊಳ್ಳುವನು. ಮಡದಿ ಬಿಂದಿಗೆಯನ್ನೊಯ್ದು ಒಳಗಿಟ್ಟು ಚಾಪೆಯ ಬದಿಯಲ್ಲಿ ಕುಳಿತು—ಭಗವನ್, ನಮ್ಮಲ್ಲಿ ಎಲ್ಲರೂ ವ್ಯವಹಾರಿಕವಾಗಿ ಕಷ್ಟ

ನಷ್ಟಗಳಿಗೆ 'ಹಣೆಬರೆಹ' ಅನ್ನುವುದುಂಟು. ಕೆಲವುವೇಳೆ 'ವಿಧಿ–ದೈವ' ಎಂಬ ಮಾತುಗಳೂ ಕೇಳಿ ಬರುತ್ತವೆ. ಒಂದುವೇಳೆ ಎಲ್ಲವೂ ಹಣೆಬರೆಹವೇ ಆಗಿದ್ದಲ್ಲಿ ಸ್ವಪ್ರಯತ್ನದಿಂದ ಏನಾದರೂ ಆಗುವುದುಂಟೇ ? ಮಹತ್ಸಾಧನೆ ಸಾಧ್ಯವೇ ?

ಯಾಜ್ಞವಲ್ಕ್ಯ ಮಹರ್ಷಿ–ಕಾತ್ಯಾಯಿನಿ, ಕೇಳು. ಹಣೆಬರೆಹದ ಮೇಲೆ ಹೆಚ್ಚು ಭರವಸೆಯಿಟ್ಟರೆ ಸ್ವಪ್ರಯತ್ನ ಶಿಥಿಲವಾಗುತ್ತದೆ. ಆದ್ದರಿಂದ ಪುರುಷಾರ್ಥದಮೇಲೆ ಹೆಚ್ಚು ಭರವಸೆಯಿಡುವುದು ಲೇಸು. ಅಂದರೆ ಪುರುಷಾರ್ಥ ಎಂಬುದು ಪುರುಷಜನ್ಯವಾದುದು ಎಂದು ಪರಿಭಾವಿಸ ಬಾರದು. ವ್ಯಕ್ತಿ ಹೆಣ್ಣೇ ಇರಲಿ, ಗಂಡೇ ಇರಲಿ ಸಾರ್ಥಕತೆ ಮುಖ್ಯ ; ಲಿಂಗ ಅರ್ಥಾತ್ ನಿರಪೇಕ್ಷ. ಪ್ರಯತ್ನ ಎಂಬುದು ಹೇಗೆ ವ್ಯಕ್ತಿಗತ ವಾದುದೋ, ಹಾಗೆಯೇ ದೈವಾಯತ್ತವಾದುದು ಸಹ ವ್ಯಕ್ತಿಗತವಾದುದೇ; ಸ್ವಪ್ರಯತ್ನದ ಮೂಲಕವೇ ದೈವಾಯತ್ತವು ಸಾಧಿತವಾಗಬೇಕಾದರೆ.

ಕಾತ್ಯಾಯಿನಿ–ಅಂದರೆ ಪ್ರಯತ್ನವೇ ಎಲ್ಲಕ್ಕೂ ಮೂಲಾಧಾರ.

ಯಾಜ್ಞವಲ್ಕ್ಯ ಮಹರ್ಷಿ–ಹೌದು. ಅದೇ ಅದರ ಅಂತರಾರ್ಥ. ಅಲ್ಲದೆ, ಈಗ ಅದಕ್ಕೂ ಮುಂದೆ ಹೋಗಬಹುದು. ಅದು ಹೇಗೆಂದರೆ ಯಾವ ಫಲಾಪೇಕ್ಷೆಯಿಲ್ಲದೆ ಧರ್ಮಕರ್ಮ ಪ್ರವರ್ತಕನಾಗುವುದು.

ಮಂಗಳಾಂಗಿ, ಕೇಳು. ವೇದವು ಯಾರಿಗೂ ಅಸಾಧ್ಯವಾದುದನ್ನು ಉಪದೇಶಿಸುವುದಿಲ್ಲ; ಅಲ್ಲದೆ ಜಗದ ಹವ್ಯಾಸವನ್ನು ಬಿಟ್ಟುಬಿಡು ಎಂದೇನೂ ಬೋಧಿಸುವುದಿಲ್ಲ. ಯಾವೊಂದು ತತ್ತ್ವವೂ ಪ್ರಯೋಜನಕಾರಿ ಎನಿಸ ಬೇಕೆಂದರೆ ಅದು ಎಲ್ಲರ ಸಹಾಯಕ್ಕೂ ಬರಬೇಕು ನಿತ್ಯಜೀವನದಲ್ಲಿ. ಇಂತಹ ಸಾಧನೆ–ಸಾಧ್ಯತೆಗಳು ಕೈಗೂಡುವುದು ಸ್ವಪ್ರಯತ್ನದಿಂದ. ಮಾನವ ಜೀವನವನ್ನು ಎಂದೂ ನಿಕೃಷ್ಟವಾಗಿ ಕಾಣುವುದಿಲ್ಲ, ಉಪನಿಷತ್ತು ; ಅದಕ್ಕೆ ಬದಲಾಗಿ ಸೃಷ್ಟಿಯ ವಿಕಾಸದ ಉನ್ನತ ಸ್ಥಾನದಲ್ಲಿಟ್ಟು ಪುಷ್ಟೀಕರಿಸಿದೆ. "ಶೃಣ್ವಂತು ಸರ್ವೇ ಅಮೃತಸ್ಯ ಪುತ್ರಾಃ" ಎಂದು ಮಾನವನನ್ನು ಕರೆ ದಿರುವುದು ಬೌದ್ಧಿಕವಾಗಿ, ಕ್ರಿಯಾತ್ಮಕವಾಗಿ ಮತ್ತು ಪ್ರಯತ್ನಶೀಲತೆ

ಯಿಂದಾಗಿ. ಅಮೃತಪುತ್ರ ಎಂಬುದು ಮಾನವತೆಗೆ ಸರಿಯಾಗಿ ಸಲ್ಲುತ್ತದೆ; ಇಲ್ಲಿ ಪ್ರಯತ್ನಕ್ಕೆ ಹೆಣ್ಣು ಗಂಡುಗಳ ಪರಿಭೇದವಿಲ್ಲ. ಯಾರ ಮನದಲ್ಲಿ ಎಷ್ಟು ಉತ್ಸುಕತೆಯೋ, ಎಷ್ಟು ಸತ್ ಶೀಲತೆಯೋ ಅಷ್ಟು ಜಾಗೃತಿ ಅಥವಾ ಕಾರ್ಯಶೀಲತೆ ಅವರ ಆತ್ಮಗತವಾಗುತ್ತದೆ. ಬಲಹೀನನಿಗೆ ಆತ್ಮ ಸಾಕ್ಷಾತ್ಕಾರವಿಲ್ಲ; ಯಾರು ಆಶಿಷ್ಠರೋ ದೃಢಿಷ್ಠರೋ ಬಲಿಷ್ಠರೋ ಅವರಲ್ಲಿ ಪುರುಷಾರ್ಥ ಫಲಿಸುತ್ತದೆ. ಯಾರಿಗೂ ಜೀವನದಲ್ಲಿ ಬರೀ ಕಾಲ ಯಾಪನೆ ಮಾಡುವುದರಿಂದ ಮನುಷ್ಯತ್ವ ಕೈಗೂಡುವುದಿಲ್ಲ; ಧೀರರಾಗಿ ಸಾಸಿಗರಾಗಿ ಕರ್ತವ್ಯಶೀಲರಾಗಿ ಬಾಳಬೇಕು ಮಾನವ ಜನ್ಮ ಎತ್ತಿದ್ದಕ್ಕೆ. ಜೀವನವನ್ನು ಒಂದು ವರದಂತೆ, ಒಂದು ಪ್ರಸಾದದಂತೆ ಪವಿತ್ರಭಾವನೆ ಯಿಂದ ಸ್ವೀಕರಿಸಿದರೆ ಮಾತ್ರ ಜೀವನಮೌಲ್ಯ ತಿಳಿಯುತ್ತದೆ.

ಈ ಜೀವನ ಒಂದು ನರಕ; ಇದರಿಂದ ಏನೂ ಸುಖವಿಲ್ಲ; ಎಂದು ಮುಂತಾಗಿ ಗೋಳಿಟ್ಟು ಅಳುತ್ತ ಕೂಡುವುದಕ್ಕಲ್ಲ ಮಾನವ ಜನ್ಮ. ಹೇಗೆ, ಯಾವ ರೀತಿಯಲ್ಲಿ ಹಿಂದಿನ ತಪ್ಪುಗಳನ್ನೆಲ್ಲಾ ಅಳಿಸಿಹಾಕಿ ಮುಂದಿನ ಬಾಳಿನ ದೀಪ್ತಿಯನ್ನು ಉಜ್ವಲಿಸಬೇಕೋ, ಆ ರೀತಿನೀತಿಗಳನ್ನು ಕೈಗೂಡಿಸಿ ಕೊಳ್ಳುವ ರಹಸ್ಯವೇ ಪ್ರಯತ್ನ. ಪ್ರಾಪಂಚಿಕ ವ್ಯವಹಾರದಲ್ಲೇ ಇದ್ದು ಆಧ್ಯಾತ್ಮಿಕ ಸಾಧನೆ ಮಾಡಬೇಕು. ಈ ವಿಶ್ವ ಜಗತ್ತಿನಲ್ಲಿ ಏನೇನಿರುವುದೋ ಅದರಲ್ಲೆಲ್ಲಾ ಬ್ರಹ್ಮನನ್ನು ಕಾಣುತ್ತ ಎಲ್ಲವೂ ಅವನದೇ ಎಂದು ಆಸ್ವಾದಿ ಸುವುದು ಪ್ರಯತ್ನದಿಂದಲೇ. ಬ್ರಹ್ಮಮಯವಾದ ಚೇತನವನ್ನು ದುಃಖ ದುರಿತಗಳು ಕಾಡುವುದಿಲ್ಲ. ಯಾವಾಗ ಬ್ರಹ್ಮಮಯವನ್ನು ಮರೆಯು ತ್ತೇವೋ ಆವಾಗ ಅಮೃತವು ವಿಷವಾಗುತ್ತದೆ. ಜೀವನದಲ್ಲಿ ಅಮೃತವನ್ನು ಆಸ್ವಾದಿಸುವುದು ಒಂದು ಕಲೆ. ಆ ಕಲೆ ಕರಗತವಾದರೆ ನಾವು ಸತ್ ಶಾಂತಿಯ ರಸಾಸ್ವಾದನೆ ಮಾಡುವುದಲ್ಲದೆ ನಮ್ಮ ನೆರೆಹೊರೆಯವರಿಗೂ ಶಾಂತಿಯನ್ನು ಹಂಚಲು ಸಾಧ್ಯವಾಗುತ್ತದೆ. ಇದಕ್ಕೆ ಪ್ರಪ್ರಥಮವಾಗಿ ಮನಸ್ಸು ಅಣಿಗೊಳ್ಳಬೇಕು. ಬರೀ ಆತುರ–ಕಾತರಗಳಿಂದ ಧಾವಿಸಿದರೆ ಏನೇನೂ ಸುಖವಿಲ್ಲ. ಬಂಡೆಗಲ್ಲಿಗೆ ತಲೆಯನ್ನು ಹಾಯ್ದರೆ ಹೇಗೋ ಹಾಗೆ. ಅದರಿಂದ ನೋವು ನಿರಾಸೆಗಳೇ ಕಟ್ಟಿಟ್ಟ ಬುತ್ತಿ.

ಶುಭೆ, ಇನ್ನೂ ಕೇಳು. ಈ ವಿಶ್ವಪ್ರಪಂಚದಲ್ಲಿ ಶಾಸ್ತ್ರವಿಹಿತವಾದ ಧರ್ಮಕರ್ಮಗಳನ್ನು ಮಾಡುತ್ತಲೇ ನೂರಾರು ವರ್ಷಗಳು ಜೀವಿಸಿ ಪಕ್ವವಾದ ಅನುಭವ ಪಡೆದುಕೊಳ್ಳುವುದರಲ್ಲೇ ಜೀವನ ಸಾರ್ಥಕತೆಯಿದೆ. ತ್ಯಾಗಭಾವ ಬಲಿತು ಅನುಭವ ಪಕ್ವವಾಗಬೇಕು. ಸ್ವಸುಖಕ್ಕಾಗಿ ಸಂಗ್ರಹಿಸುವುದರಲ್ಲಿರುವ ಆನಂದಕ್ಕಿಂತ ಪರರಿಗೆ ನೀಡುವುದರಲ್ಲಿರುವ ಆನಂದವೇ ಮಿಗಿಲಾದುದು. ಬ್ರಹ್ಮ ನಮಗೆ ಏನನ್ನು ಪ್ರಾಸಾದಿಸಿದ್ದಾನೋ ಅದನ್ನು ಅವನ ಇನ್ನಿತರ ಮಕ್ಕಳಿಗೆ ಹಂಚಿ ಉಂಬುವುದರಲ್ಲಿಯೇ ನಿಜವಾದ ಸಂತೃಪ್ತಿ ಮತ್ತು ಔನ್ನತ್ಯವಿದೆ. ನಾವು ಏನನ್ನು ಹಂಚಿರುತ್ತೇವೋ ಅದು ನಮ್ಮ ಆತ್ಮೋದ್ಧಾರಕ್ಕೆ ಒಂದಕ್ಕೆ ಹತ್ತಾಗಿ ನೂರಾಗಿ ಸಾವಿರವಾಗಿ ಕಾದು ನಿಲ್ಲುತ್ತದೆ. ಎಲ್ಲಿ ಸ್ವಾರ್ಥವಿರುತ್ತದೋ ಅಲ್ಲಿ ಆನಂದ ಕ್ಷಯವಾಗುವುದು. ಆದ್ದರಿಂದ ಪೂರ್ಣಾಯುಸ್ಸು ಕಳೆಯುವವರೆಗೂ ಜೀವನವು ಧಾರ್ಮಿಕ ಕರ್ಮಗಳಿಂದ ತುಂಬಿ ತುಳುಕುವಂತೆ ಬಾಳಬೇಕು. ಸ್ವಾರ್ಥಿಯಾಗಿ ಸೋಮಾರಿಯಾಗಿ ಬದುಕಿದರೆ ಜೀವನ ಶೋಭೆ ಅಳಿಯುತ್ತದೆ. ಮಾನವ ಬದುಕಿನಲ್ಲಿ ಬ್ರಹ್ಮನನ್ನು ಮರೆಯಲೂ ಬಾರದು; ಮೃತ್ಯುವಿಗೆ ಬೆದರಲೂ ಬಾರದು; ಪ್ರಾಣವನ್ನು ಬಿಡುವಾಗ ತಾನು ಮಾಡಿದ ಪುಣ್ಯಕರ್ಮ ಸ್ಮರಣೆಯಿಂದಲೇ ಸ್ವರ್ಗದ ಸೋಪಾನವನ್ನು ಏರಬೇಕು. ಪುಣ್ಯದ ಮೂಲಕ ಪರಲೋಕವನ್ನು ಸೇರಬಯಸುವವರು ಎಂದಿಗೂ ಈ ಪ್ರಪಂಚವನ್ನು ನಿಕೃಷ್ಟವಾಗಿ ಕಾಣಬಾರದು. ಎಲ್ಲಕ್ಕೂ ಆನಂದವೇ ಮುಖ್ಯವಾದುದು. ಆನಂದದಿಂದಲೇ ಪ್ರಾಣಿಗಳು ಹುಟ್ಟುತ್ತವೆ; ಆನಂದದಿಂದಲೇ ಜೀವಿಸುತ್ತವೆ ಮತ್ತು ಆನಂದವನ್ನೇ ಪ್ರವೇಶಿಸುತ್ತವೆ. ಬ್ರಹ್ಮಸೃಷ್ಟಿ ಆನಂದಮಯ; ಲೀಲಾಮಯ.

ಕಾತ್ಯಾಯಿನಿಯು ಪತಿಯ ಪ್ರವಚನವನ್ನು ಮಂತ್ರಮುಗ್ಧಳಂತೆ, ಅಭಿಭೂತಳಂತೆ, ವಿನೀತ ಶಿಷ್ಯಳಂತೆ ಕೇಳುತಿದ್ದು ಅನಂತರ- ಭಗವನ್, ನನ್ನ ಮನಸ್ಸು ಅರಳಿತು, ನಿಮ್ಮ ಪ್ರವಚನದಿಂದ.

ಯಾಜ್ಞವಲ್ಕ್ಯ ಮಹರ್ಷಿಯು ಪ್ರಸನ್ನಭಾವದಿಂದ ಮುಗುಳ್ನಗುವನ್ನು ಸೂಸಿ-ನೀನು ಇಷ್ಟುಹೊತ್ತೂ ಅತ್ಯಂತ ಸಹನೆಯಿಂದ ಗಮ

ನವಿಟ್ಟು ಕೇಳಿದೆಯಲ್ಲಾ ಅದು ನಿನ್ನ ಭಾಗದ ಪ್ರಯತ್ನ ಎನ್ನಬಹುದು

ಕಾತ್ಯಾಯಿನಿ–ತಿಳಿಯಿತು.

ಯಾಜ್ಞವಲ್ಕ್ಯ ಮಹರ್ಷಿ–ಪ್ರಪ್ರಥಮವಾಗಿ ಮನಸ್ಸು ಅಣಿಗೊಳ್ಳ ಬೇಕು ಎಂದುದು ಇದನ್ನೇ. ಅದಕ್ಕೂ ಒಂದು ಹೆಜ್ಜೆ ಮುಂದೆ ಹೋಗುವು ದೆಂದರೆ ಕರ್ಮದಲ್ಲಿ ಫಲಾಪೇಕ್ಷೆಯನ್ನು ವರ್ಜಿಸುವುದು ಎಂದುದು ಸಹ ಇದನ್ನೇ.

ಕಾತ್ಯಾಯಿನಿಯು ಮಂದ ಸರಳ ಸ್ಮಿತದೊಡನೆ ಉತ್ತರಿಸಿದಳು–ಸರಿ ಸರಿ ; ಈಗ ತಿಳಿಯಿತು. ಕರ್ತೃವು ಫಲಾಫಲಗಳನ್ನು ಜಗನ್ನಿಯಾಮಕನ ಅಂಘ್ರಿಗಳಿಗೆ ಸಮರ್ಪಿಸಿ ನಿರಾಳವಾಗಿರುವುದು.

ಯಾಜ್ಞವಲ್ಕ್ಯ ಮಹರ್ಷಿ–ಅಹುದು ಶುಭೆ. ವೇದಾಂತವು ಬೋಧಿಸು ವುದು ಅದನ್ನೇ.

ಆ ಮಾತಿನಿಂದ ಸ್ವಲ್ಪ ಉತ್ತೇಜಿತಳಾಗಿ– ಕೆಲವೊಮ್ಮೆ ನಿಮ್ಮ ವ್ಯಾಖ್ಯಾನವನ್ನು ಅರ್ಥೈಸುವುದು ಸುಲಭ. ಇನ್ನೂ ಕೆಲವೊಮ್ಮೆ ಬಹಳ ಗಹನ. ತ್ರಿಲೋಕ ವೃತ್ತಾಂತದ ಅಭಿಜ್ಞತೆಯಲ್ಲಿ ಮೇರು ಪರ್ವತವನ್ನೂ ಮೀರಿ ನಿಲ್ಲುತ್ತೀರಿ.

ಯಾಜ್ಞವಲ್ಕ್ಯ ಮಹರ್ಷಿಯು ಮುಗುಳು ನಗುತ್ತ–ಹಾಗೋ..........?

ಕಾತ್ಯಾಯಿನಿ–ನೀವು ವೇದವಿದ್ಯಾ ಪಾರಂಗತರು. ನಿಮ್ಮ ಕ್ಷೇತ್ರ ದಿನೇದಿನೇ ವಿಶಾಲವಾಗುತ್ತಿದೆ. ಪರೋಕ್ಷವಾದ ವೇದಾರ್ಥದಂತೆ ನೀವೂ ಸಹ ಒಗಟಾಗಿ ತೋರುವುದರಲ್ಲಿ ಆಶ್ಚರ್ಯವೇನೂ ಇಲ್ಲ ಬಿಡಿ.

ಯಾಜ್ಞವಲ್ಕ್ಯ ಮಹರ್ಷಿ– ದೇವಿ, ಸರ್ವತ್ರಸದಾ ನೀನು ನನ್ನನ್ನು ನೆರಳಿನಂತೆ ಅನುಸರಿಸುತ್ತಿದ್ದಿ. ಆದರೂ, ಅರ್ಥವಾಗದೆಂದರೆ ಸ್ವಲ್ಪ ಆಶ್ಚರ್ಯವೇ.

ನೆಟ್ಟದಿಟ್ಟಿಯಲ್ಲಿ ಕೌತುಕತೆ ಮೂಡಿದರೂ ಮರುಘಳಿಗೆಯ ಆವರ್ತನಕ್ಕೆ ಸಿಕ್ಕಿದ ಮಾನಸಿಕಸ್ಫೂರ್ತಿಯು ಪುನಃ ವಿಚಾರಪರವಶವಾಗಿ ವೇದಾಂತ ವಾಹಿನಿಯಲ್ಲಿ ಮುಳುಗಿ ಹೋಯಿತು. ಕ್ಷಣಕ್ಷಣಗಳು ಕ್ಷಯಿಸಿ ಘಳಿಗೆಘಳಿಗೆಗಳು ನಿದಿಧ್ಯಾಸನದಿಂದ ನಿಷ್ಕ್ರಮಿಸಿದುವು. ಮಡದಿಯು ಪತಿಯ ಗಂಭೀರ ಭಾವವನ್ನು ಗಮನಿಸಿ ಸ್ವಲ್ಪಹೊತ್ತು ಸುಮ್ಮನಿದ್ದು ಅನಂತರ ಸಮಯೋಚಿತವಾಗಿ ನುಡಿಯುತ್ತಾಳೆ–ಭಗವನ್, ಎಷ್ಟೆಂದರೂ ವಸ್ತು ವಸ್ತುವೇ. ನೆರಳು ನೆರಳೇ.

ಆ ಮಾತಿಗೆ ಏನೋ ಒಂದು ರೀತಿಯಲ್ಲಿ ಮನಃಪ್ರಾಣಗಳು ಒಮ್ಮೆಗೇ ಮಿಡಿದಂತೆ ಅತ್ಯಂತ ಶಾಂತಸ್ಫುಟ ಸ್ವರದಲ್ಲಿ ಯಾಜ್ಞವಲ್ಕ್ಯ ಮಹರ್ಷಿಯು– ಅದು ಸರಿಯೆ ; ಸಾಗರವನ್ನು ಮುಳುಗಬಲ್ಲವರು ಮಾತ್ರ ಆಳವನ್ನು ಅರಿಯಬಲ್ಲರು. ತೀರದಲ್ಲಿದ್ದವರು ಬರೀ ಆಕಾರವನ್ನು ಕಾಣುತ್ತಾರೆ ಅಷ್ಟೆ.

ಕಾತ್ಯಾಯಿನಿಯ ಕುಂಕುಮಗೌರ ಮುಖಬಿಂಬ ವಿಚಾರ ಗಂಭೀರವಾಯಿತು. ಒಂದೆರಡುಘಳಿಗೆ ಸುಮ್ಮನೆ ಪತಿಯ ಪ್ರಶಾಂತ ಮುಖಮಂಡಲವನ್ನು ಭಕ್ತಿ–ಶ್ರದ್ಧೆ–ಗೌರವಗಳಿಂದ ನಿಟ್ಟಿಸಿ ನೋಡಿದಳು. ಆ ಧೀರಗಂಭೀರ ಶರೀರ ಪ್ರಕೃತಿಗೆ ಉಜ್ವಲ ದೀಪಶಿಖೆಯಂತೆ ಕಣ್ಗೊಳಿಸುವ ಮುಖಮಂಡಲ, ವೇದಾಂತ ಹೃದಯುದಾಹೀ ಭಾವೋತ್ಫುಲ್ಲ ನಯನದ್ವಯಗಳು, ವಿಶಾಲ ಲಲಾಟದಮೇಲೆ ತುಂತುರು ತುಂತುರಾಗಿ ಮೂಡಿ ಮಣಿಮಯವಾದ ಸ್ವೇದ ಬಿಂದುಗಳು, ಉತ್ತಮಾಂಗಶೋಭೀ ಅಲಕರಾಶಿಯ ಸಿರಿಮುಡಿ ಒಂದಕ್ಕೊಂದು ಹೆಸಲೆಣೆಯಾಗಿವೆ, ಅಪೂರ್ವ ಅನುಪಮ ಹೊಂದಾಕೆಯಿಂದ. ಅವಳು ನೆಟ್ಟದಿಟ್ಟಿಯನ್ನು ಕದಲಿಸದೆ ವಿನೀತಭಾವದಿಂದ ಅರ್ಥಪೂರ್ಣವಾಗಿ ನುಡಿದಳು–ನೀವು ಎಲ್ಲರನ್ನೂ ನಿಮ್ಮಂತೆಯೇ ಎಂದುಕೊಂಡಿದ್ದೀರೇನೋ.

ಯಾಜ್ಞವಲ್ಕ್ಯ ಮಹರ್ಷಿ–ಆದರೂ ಸಹ, ನಿನ್ನ ಬಗ್ಗೆ ಹೇಳುವುದಾದರೆ ಭಾವನೆ ಸ್ವಲ್ಪ ವ್ಯತ್ಯಸ್ತವಾದೀತು.

ದನಿ ಶ್ರದ್ಧಾಪೂರ್ವಕವಾಗಿ ಮಾನಸ ಸರೋವರವನ್ನು ಬರಿದು ಮಾಡಿದಂತೆ ಕಂಠಃಪೂರ್ತಿ ಹರಿದಾಗ ಮಡದಿಯ ಮುಖಬಿಂಬದಲ್ಲಿ

ಸಾನಂದದ ತಿಳಿನಗೆ ಹಸನಾಗಿ ಮೂಡಿತು. ಕಣ್ಣುಗಳಲ್ಲಿ ಬೆಳಗಿದ ವಿನೂತನ ಸಾತ್ವಿಕತೆಯ ಕಳೆಯಿಂದ ಆಕೆ ಸುಶಾಂತ ಮನೋಹರಳಾಗಿ ಕಂಡುಬಂದಳು. ಸ್ವಲ್ಪ ಸಮಯ ಮೌನಭಾರದಿಂದ ಉರುಳಿತೇನೋ. ಅನಂತರ ವಿಶ್ವಸ್ತ ಭಾವನೆಯಿಂದ ಅವಳು ಕೇಳಿದಳು– ದೇವ, ಜೀವನದಲ್ಲಿ ಶಾಂತಿಯನ್ನು ಯಾವ ರೀತಿಯಿಂದ ಪಡೆದುಕೊಳ್ಳಬೇಕು ?

ಯಾಜ್ಞವಲ್ಕ್ಯ ಮಹರ್ಷಿ –ಶ್ರದ್ಧೆಯೇ ಎಲ್ಲಕ್ಕೂ ಮೂಲ. ಶ್ರದ್ಧೆಯೆಂಬುದು ಬಹುಮೂಲ್ಯವಾದ ಗುಣ. ಶ್ರದ್ಧೆಯಿಂದಲೇ ಧರ್ಮ–ಕರ್ಮ. ಶ್ರದ್ಧೆಯಿಂದಲೇ ತಪಸ್ಸು–ಮುಕ್ತಿ. ಶ್ರದ್ಧೆಯಿಂದಲೇ ಕಾರ್ಯಕಾರಣ. ಶ್ರದ್ಧೆಯಿಂದಲೇ ಸರ್ವಸ್ವ. ಶ್ರದ್ಧೆಯಿಂದಲೇ ಶಾಂತಿ. ಯಾವುದನ್ನು ಮಾಡಬಯಸಿದರೂ ಅದರಲ್ಲಿ ಶ್ರದ್ಧೆಯಿಡಬೇಕು. ಆಗಲೇ ಶಾಂತಿ.

ಪೂರ್ವಗಗನ ರಂಗದಲ್ಲಿ ಮೆಲ್ಲಮೆಲ್ಲನೆ ಚಂದ್ರಮನ ಅಭ್ಯುದಯವಾಯಿತು. ಆ ಮುಹೂರ್ತದಲ್ಲಿ ಭುವನಮಂಡಲವು ಸಿಂಧೂರರಾಗದಿಂದ ರಂಜಿತವಾದಂತೆ ಕಂಡುಬಂದರೂ ಅನಂತರ ಧವಳ ಚಂದನರಸಧಾರೆಯಲ್ಲಿ ಆಪ್ಲಾವಿತವಾದಂತೆ ಬೆಳುದಿಂಗಳು ಪಸರಿಸಿತು. ಅದೇ ಆಗಲೇ ಗೂಡುಗಳನ್ನು ಸೇರಿದ್ದ ನಾನಾ ಪಕ್ಷಿಸಂಕುಲದ ಮನಃಬುದ್ಧಿಗಳು ಚಂಚಲವಾದಂತೆ, ಆ ಕ್ಷಣ ರೆಕ್ಕೆ ಪುಕ್ಕಗಳನ್ನು ಒದರಿ ಕೊಂಬೆಯಿಂದ ಕೊಂಬೆಗೆ ಹಾರಾಡುತ್ತ 'ಈಗಾಗಲೇ ಮುಳುಗಿದ ಸೂರ್ಯ ಮತ್ತೆ ಮೇಲೇರಿದನೋ' ಎಂಬ ಅನುಮಾನದಿಂದ ಅತ್ತಿತ್ತ ನೋಡಿ ಅಚ್ಚರಿಪಡುತ್ತಿದ್ದುವು ಸಂಧ್ಯಾರಾಗವನ್ನು ಹರಿಯಬಿಟ್ಟು. ವನಾಂತರದ ಗಿಡು, ಮರ, ಬಳ್ಳಿಗಳಲ್ಲಿ ಎಲೆಎಲೆಗಳೂ ಚಂದ್ರಮನ ಅಮೃತ ಜ್ಯೋತ್ಸ್ನೆಯಲ್ಲಿ ಮಿಂದು ಮರ್ಮರಿಸುತಿದ್ದುವು ಶೀತಲಾನಿಲನ ಎಣೆಯಿಲ್ಲದ ಚಾಮರ ಸೇವೆಗೆ ಆಬದ್ಧವಾಗಿ.

ಯಾಜ್ಞವಲ್ಕ್ಯ ಮಹರ್ಷಿ–ಕೇಳು ದೇವಿ, ಇಂದ್ರಿಯಗಳ ಅಂತರ್ಮುಖ ವ್ಯಾಪಾರದಿಂದ ಶಾಂತಿ. ಬಹಿರ್ಮುಖ ವ್ಯಾಪಾರದಿಂದ ಅಶಾಂತಿ. ಜೀವಾತ್ಮನು ಹುಟ್ಟುವುದು ಬ್ರಹ್ಮನಿಂದ. ಸ್ಥಿತಿಗತಿಯೂ ಅವನಿಂದಲೇ. ಕೊನೆಗೆ ಸೇರುವುದೂ ಅವನನ್ನೇ. ಬಹಿರ್ವ್ಯಾಪಾರವಾದ ನಾಮ–ರೂಪ–

ದೇಹ-ಬುದ್ಧಿಗಳ ಉಪಭೋಗದಿಂದ ಅವೆಲ್ಲ ನಾನೇ ಎಂಬ ಭ್ರಮೆ ಮೂಡಿ ನೈಜತೆಯನ್ನು ಕಳೆದುಕೊಳ್ಳುವುದರಿಂದ ತನ್ನನ್ನು ತಾನು ಅರಿತುಕೊಳ್ಳಲಾರ. ಎಲ್ಲಿಯುವರೆಗೆ ತತ್ತ್ವಶಃ ತನ್ನನ್ನು ತಾನು ಅರಿತುಕೊಳ್ಳುವುದಿಲ್ಲವೋ ಅಲ್ಲಿಯುವರೆಗೆ ಕರ್ಮಕಾಂಡ ಕಳೆಯದೆ ಜೀವಾತ್ಮನು ಪುನಃ ಪುನಃ ಜನ್ಮಧಾರಣೆ ಮಾಡುತ್ತಿರುವನು. ತನ್ನನ್ನು ತಾನೇ ಅರಿತು ಸ್ವಯಂ ಪೂರ್ಣತೆಯನ್ನು ಪಡೆದಮೇಲೆ ಪುನರ್ಜನ್ಮ ತಪ್ಪುತ್ತದೆ. ಅಂದರೆ ಅದೇ ಆತ್ಮಶಾಂತಿ.

ಕಾತ್ಯಾಯಿನಿ-ಕೇವಲ ಅರಿಷಡ್ವರ್ಗಗಳಿಂದಲೇ ಮೈವೆತ್ತಂತಿರುವ ಮನುಷ್ಯರಲ್ಲಿ ಅಂತರ್ಮುಖ ವ್ಯಾಪಾರ ನಡೆಸುವುದು ಎಷ್ಟು ಮಂದಿಯಿಂದ ಸಾಧ್ಯ? ಇಂದ್ರಿಯಗಳ ದೃಷ್ಟಿಗೆ ಮೊದಲು ಬೀಳುವುದೇ ಬಹಿರ್ಮುಖ ವ್ಯಾಪಾರವಾಗಿರುವುದರಿಂದ ಭೋಗದೃಷ್ಟಿ ನಾಶವಾಗುವುದು ಕಷ್ಟವಲ್ಲವೇ?

ಯಾಜ್ಞವಲ್ಕ್ಯ ಮಹರ್ಷಿ– ಅದನ್ನು ಅರಿತುಕೊಂಡರೇನೇ ಜೀವನದ ನೈರ್ಮಲ್ಯ ಮತ್ತು ಆತ್ಮಸಾಕ್ಷಾತ್ಕಾರ. ಯಾವುದು ಕ್ಷಣಿಕವೋ ಅದು ಆತ್ಮ ಪ್ರಕಾಶವನ್ನು ಕ್ಷಯಿಸಲೆಂದೇ ಆಕರ್ಷಣೀಯವಾಗಿರುತ್ತದೆ. ಅಂತರ್ಮುಖ ವ್ಯಾಪಾರಕ್ಕೆ ಮುಖ್ಯವಾದ ಪಾತ್ರ ಮನಸ್ಸು. ಮೊದಲು ಮನಸ್ಸು ಅಣಿಯಾದರೆ ಅನಂತರ ಸಾಧನೆ ಸುಲಭ. ಆತ್ಮದ ನೈಜಸ್ಥಿತಿ ಇರುವುದು ದೇಹ-ಇಂದ್ರಿಯ-ಬುದ್ಧಿಗಳ ಆಚೆ. ಆತ್ಮನು ಅದ್ವಿತೀಯನು. ಅವನ ಸಾಕ್ಷಾತ್ಕಾರವಾದಾಗ ಮಾನಸಿಕ ಭ್ರಮೆ ಹರಿದು ವಿವೇಕದ ಕಿರಣಗಳು ಮೂಡುತ್ತವೆ. ಆಗಲೇ ಆತ್ಮನಿಗೆ ಶಾಶ್ವತವಾದ ಶಾಂತಿ ಲಭಿಸಬೇಕಾದರೆ.

ದೇಹ-ಇಂದ್ರಿಯ-ಮನಸ್ಸು ಇವುಗಳೊಂದಿಗೆ ಎಲ್ಲಿಯುವರೆಗೆ ತಾದಾತ್ಮ್ಯ ಭಾವವಿರುವುದೋ ಅಲ್ಲಿಯುವರೆಗೆ ಸುಖದುಃಖಾದಿ ಬಾಧೆಗಳು ನಮ್ಮನ್ನು ಬಿಡುವುದಿಲ್ಲ. ಸುಖದಿಂದ ಹಿಗ್ಗುವುದೂ ದುಃಖದಿಂದ ತಗ್ಗುವುದೂ ನಮಗೆ ಸಮಾನರಿಲ್ಲ ಎಂಬ ಹೆಮ್ಮೆಯಿಂದ ಮೆರೆಯುವುದೂ ಕಾಮಕಾಮನೆಗಳ ತಾದಾತ್ಮ್ಯಭಾವದಿಂದಲೇ. ಸುಖ-ದುಃಖ-ಚಿಂತೆ-ಹೆಮ್ಮೆ ಇವುಗಳೆಲ್ಲ ಅನ್ಯಾಶ್ರಯ. ಆತ್ಮನು ಇವುಗಳಿಗೆ ಅತೀತನಾದರೂ ಇವುಗಳಿಗೆ ಸರ್ವತ್ರ

ಸಾಕ್ಷಿ. ಆದ್ದರಿಂದ ಆತ್ಮನನ್ನು ಸಾಕ್ಷಾತ್ಕರಿಸಿಕೊಂಡವರು ಹರ್ಷ-ಶೋಕಗಳನ್ನು ದೂರೀಕರಿಸಿ ಅಜ್ಞಾನದ ಕಪಿಮುಷ್ಟಿಯಿಂದ ಪಾರಾಗಬಲ್ಲರು. ದೃಗ್‌ದೃಶ್ಯ ವಸ್ತುಗಳ ಧರ್ಮದಿಂದ ಆಕರ್ಷಿತರಾಗರು. ಅವರು ದೇಹಿಗಳಾಗಿದ್ದರೂ ಮುಕ್ತರು – ಜೀವನ್ಮುಕ್ತರು.

ಕಾತ್ಯಾಯಿನಿ, ಇನ್ನೂ ಕೇಳು. ಆತ್ಮನ ವಿಚಾರವನ್ನು ಬರೀ ಕೇಳಿದರೆ ಸಾಲದು. ಸರ್ವತ್ರ ಮನನ ಮಾಡಬೇಕು. ಕಲಿತವರಿಂದ ಕೇಳಿ ತಿಳಿಯಬೇಕು. ಕೇಳುವುದೆಂದರೆ ಬರೀ ಮಾತಾಳಿಗಳ ಮುಖದಿಂದಲ್ಲ. ಯಾರು ಆತ್ಮನನ್ನು ಸಾಕ್ಷಾತ್ಕರಿಸಿ ನಡೆ ನುಡಿಗಳನ್ನು ಅನುಷ್ಠಾನದಲ್ಲಿರಿಸಿಕೊಂಡಿರುವರೋ ಅವರಿಂದ. ಬರೀ ಪ್ರಚಾರದಿಂದಾಗಲೀ ಗ್ರಂಥಜ್ಞಾನದಿಂದಾಗಲೀ ಅಲ್ಪಸ್ವಲ್ಪ ತಿಳಿದುಕೊಂಡರೆ ಸಾಲದು. ಜನ ಕೇಳುತ್ತಾರೆ, ಈ ಕಿವಿಯಲ್ಲಿ ಕೇಳಿದುದನ್ನು ಆ ಕಿವಿಯಲ್ಲಿ ಬಿಡುವಂತೆ. ಅದು ವ್ಯರ್ಥ. ಮನಸ್ಸಿನಲ್ಲಿ ಏಕಾಗ್ರತೆಯೂ ಬುದ್ಧಿಯಲ್ಲಿ ನಿರ್ಮಲತೆಯೂ ಇರಬೇಕು. ಕೇಳುವುದರಿಂದ ವಿಷಯ ಸಂಗ್ರಹಣೆ ಮಾತ್ರ. ಅನಂತರ ಅದನ್ನು ತನ್ನಲ್ಲೇ ಮಂಥನಗೊಳಿಸಬೇಕು. ಮೊಸರನ್ನು ಕಡೆಯುವುದರಿಂದ ಹೇಗೆ ಬೆಣ್ಣೆ ಬರುವುದೋ ಹಾಗೆ,ಅದರ ಸತ್ವ ಬೆಣ್ಣೆಯಂತೆ ಮುದ್ದೆಗಟ್ಟುವವರೆಗೆ. ಅಂದರೆ ಅರ್ಥಾತ್ ಆಲೋಚನೆ. ಆಲೋಚಿಸಿ ತರ್ಕವಿತರ್ಕ ಹೂಡಿ ವಿಚಾರಶಕ್ತಿಯನ್ನು ಕ್ರೋಢೀಕರಿಸಿ ವಿಷಯುವನ್ನು ಒರೆಗೆ ಹಚ್ಚಿದಾಗ ಅರ್ಥ ನಿಚ್ಚಳವಾಗಿ ಹೊಳೆಯುತ್ತದೆ. 'ಆತ್ಮ' ಎಂಬುದರ ಪರಮಾರ್ಥ ಅಪಾರವಾದುದು. ಅದು ದಿನನಿತ್ಯ ಕೇಳಿಬರುವ ಸಾಮಾನ್ಯ ವಿಷಯದಂತಲ್ಲ. ಆತ್ಮನಲ್ಲೇ ತಲ್ಲೀನವಾದರೆ ಮಾತ್ರ ಆತ್ಮದರ್ಶನ.

ಆತ್ಮ–ಅನಾತ್ಮನು ಬೆರೆತುಕೊಂಡಂತಿರುವುದರಿಂದ ಸಾಮಾನ್ಯ ಬುದ್ಧಿಯೊಳಗೆ ಇಳಿಯುವುದೇ ಆಗಲಿ, ಇಳಿಸುವುದೇ ಆಗಲಿ ಕಷ್ಟ. ಸಕ್ಕರೆ ಮತ್ತು ಮರಳು ಬೆರೆತುಕೊಂಡರೆ ಹೇಗೆ ಬೇರ್ಪಡಿಸಹೋಗುವವರಿಗೆ ಸಂಕಷ್ಟದ ಕೆಲಸವೋ ಹಾಗೆ. ನಿತ್ಯವಾದ ಆತ್ಮವಸ್ತು ಅಂತರ್ಗತವಾಗಿದ್ದು ಬಹಿರ್ದೃಷ್ಟಿಗೆ ನಿಲುಕುವುದಿಲ್ಲ. ಅನಿತ್ಯವಾದ ದೇಹ–ಇಂದ್ರಿಯ–ಬುದ್ಧಿ–

ಮನಸ್ಸು ಬಹಿರ್ದೃಷ್ಟಿಗೆ ಸರ್ವತ್ರ ಸದಾ ನಿಲುಕುತ್ತಿರುವುದರಿಂದ ಅವೇ ತಾನೆಂಬ ಭ್ರಮೆ ಬೇರುಬಿಟ್ಟು ಬಲಿತು ಹೆಮ್ಮರವಾಗಿ ನಿಲ್ಲುತ್ತದೆ. ಅಂತಲೇ ಅನಾತ್ಮವು ಸುಲಭವಾಗಿ ಅಧಿಕಾರ ನಡೆಸುತ್ತದೆ. ದೇಹ-ಮನಸ್ಸು-ಬುದ್ಧಿ-ಇಂದ್ರಿಯ-ಮಮಕಾರಗಳ ಕವಾಟದೋಡನ್ನು ಒಡೆದು ಒಳನುಗ್ಗಿ ನೋಡಿದವರಿಗೆ ಮಾತ್ರ ಅಂತರ್ಗತ ವ್ಯಾಪಾರದ ಪರಿಚಿತಿಯುಂಟಾಗುತ್ತದೆ. ಅಂದರೆ ಇವುಗಳ ಮೇಲಿನ ಆಸಕ್ತಿಯಿಂದ ಪಾರಾಗಿ ಬರೀ ಸಾಕ್ಷಿಯಂತೆ ನಿಂತು ನೋಡಿದರೆ ಮಾತ್ರ ಬದುಕಿನ ಸಾರ್ಥಕತೆ ಮತ್ತು ಆತ್ಮದರ್ಶನ.

ಶಕ್ತನಾದವನು ಹರ್ಷಣೀಯವಾದ ಆತ್ಮಾನಂದವನ್ನು ಪಡೆದುಕೊಂಡು ಆನಂದಿಸುವನು. ಈ ಜಗತ್ತಿನಲ್ಲಿ ಪಡೆಯಬಹುದಾದ ನಿತ್ಯಾನಂದವೆಂದರೆ ಆತ್ಮಸಾಕ್ಷಾತ್ಕಾರ. ಅದಕ್ಕಿಂತಲೂ ಆನಂದದಾಯಕವಾದ ವಸ್ತು ಇನ್ನಿಲ್ಲ. ಮನುಷ್ಯನ ನೈಜಸ್ಥಿತಿಯಲ್ಲಿ ನಿಲುಕುವ ದೃಢವಾದ ಅನುಪಮವಾದ ನಿತ್ಯಾನಂದ ಅದೊಂದೇ. ಬಾಹ್ಯವಸ್ತುಗಳ ಸಂಘಾತದಿಂದ ಲಭಿಸುವ ಕ್ಷಣಿಕಾನಂದಗಳು ಬರುವಂತಾದ್ದು, ಹೋಗುವಂತಾದ್ದು. ಅವು ಪ್ರಿಯಾಪ್ರಿಯಗಳೂ ಹೌದು. ಹಿಗ್ಗಿಸಿ ಕುಗ್ಗಿಸುತ್ತವೆ. ಆತ್ಮವಸ್ತು ಹಾಗಲ್ಲ. ಅದು ನಿತ್ಯಸಮೃದ್ಧವಾದುದು. ಒಮ್ಮೆ ನಮ್ಮದಾದರೆ ಅದು ಎಂದೆಂದಿಗೂ ನಮ್ಮದೇ.

ಸತೀ ಕಾತ್ಯಾಯಿನಿಯು ಮಾತಾಡದೆ ತಲೆದೂಗಿ ಆತ್ಮಸಮ್ಮತಿಯನ್ನು ಸೂಸುವಳು.

ಉಚ್ಛ್ವಾಸ ೩

ಬ್ರಾಹ್ಮೀಮುಹೂರ್ತದ ಶೀತಲ ಶಾಂತಿಯಲ್ಲಿ ಪ್ರಾತಾಃಹ್ನಿಕಗಳನ್ನು ನಿರಾತಂಕವಾಗಿ ಮನದಣಿಯೆ ಆಚರಿಸಿದ ಯಾಜ್ಞವಲ್ಕ್ಯ ಮಹರ್ಷಿಯು ನದೀ ತೀರದಿಂದ ತನ್ನ ಪರ್ಣಕುಟಿಯ ಹಾದಿಯನ್ನು ಹಿಡಿದ. ಮೂಡಣ ದಿಗ್ದೇಶದ ಸೀಮಾಕ್ಷೇತ್ರದಲ್ಲಿ ಇನ್ನೂ ಮುಂಬೆಳಕಿನ ಛಾಯೆ ಮೂಡಿಯೇ ಇರಲಿಲ್ಲ. ಎಲ್ಲಿಂದ ಎಲ್ಲಿಯವರೆಗೂ ಎಳ್ಳು ಬೀಳಿಸಿದರೂ ಕೇಳಿಸುವಂತಹ ನಿಶ್ಶಬ್ದ; ನೀರವ; ನಿರಾತಂಕ. ಮಹರ್ಷಿಯ ಕಂಠಸ್ವರದಲ್ಲಿ ವೇದ ಮಂತ್ರಗಳ ಪಠಣ ನಡೆದೇ ಇತ್ತು. ಕೌಮುದೀ ಚಂದ್ರಮನ ಬೆಳುದಿಂಗಳ ಮಂಗಳ ಧಾರೆ ತನ್ನ ಕಾರ್ಯನಿರ್ವಹಣೆಗೆ ದಾರಿದೀಪವಾಗಿ ಹರಿದಿರುವಷ್ಟು ಹಿತ ಮನದಲ್ಲಿ. ನಿತ್ಯಾನಂದ ಭೋಗೀ ಶೀತಲಾನಿಲ ಸ್ವಪ್ನಾವೇಶದ ಉನ್ಮತ್ತತೆಯಿಂದ ಆಪಾದಮಸ್ತಕವೂ ಮುದ್ದಿಸಿದೊಡನೆ ಮಂಜಿನ ಶೀತಕ್ಕಿಂತಲೂ ಶೀತಲವಾದ ಶೈತ್ಯವೊತ್ತಿತು ಮೈಮನಗಳಿಗೆ. ಹೆಜ್ಜೆ ಹೆಜ್ಜೆಗೂ ಪಥ ಸಾಗುತ್ತಿದ್ದಂತೆ ಆತ್ಮ– ಅಧ್ಯಾತ್ಮ – ಲೌಕಿಕ – ಅಲೌಕಿಕ – ಧರ್ಮ – ಕರ್ಮ–ಸಾಧನೆಗಳ ಸರಿತ್ ಸಂಚರಣ ಚಿತ್ತಪ್ರವೃತ್ತಿಯಲ್ಲಿ. ಗ್ರೀಷ್ಮನೊಡ್ಡೋ

ಲಗದ ಅರೆಬಿರಿದ ಸುಮಸಮುಚ್ಚಯಗಳು ಹೃತ್ ಕರಂಡದಿಂದ ಸೌಗಂಧ ವನ್ನು ಸುರಿದು ಮನಃಪ್ರಾಣಗಳಿಗೆ ಮೈತ್ರಿ ಆಹ್ಲಾದ–ಆಮೋದಗಳನ್ನು ಉಂಟುಮಾಡಿದುವು. ರುದ್ರ ಗಂಭೀರ ಮೌನ ಇಡೀ ವನಪ್ರದೇಶವನ್ನು ಮುಸುಗಿದುದರಿಂದಲೋ ಏನೋ, ಮೈಯಲ್ಲಿ ಮೋಹನಕಾರಿ ಜಡಿಮೆ ಆವರಿಸಿದಂತಿತ್ತು, ಅಪ್ರತ್ಯಾಶಿತವಾದುದು ಘಟಿಸುವುದರಲ್ಲಿದೆ ಎಂಬುದನ್ನು ಸಾರಿ ಹೇಳುವಂತೆ.

ಮಹರ್ಷಿ ಪರ್ಣಕುಟಿಯಲ್ಲಿ ಸ್ವಲ್ಪಹೊತ್ತು ಮಾತ್ರ ತಂಗಿದ್ದು, ಅನಂತರ ವೈಶಂಪಾಯನ ಮಹರ್ಷಿಗಳ ಆಶ್ರಮಕ್ಕೆ ಪಯಣವನ್ನು ಕೈಕೊಂಡ. ಘನ ನಿಬಿಡ ತರಲ ಕಾಂತಾರವನ್ನು ಇಬ್ಭಾಗಗೊಳಿಸಿ ದೀರ್ಘ ವಾದ ಅಜಗರದಂತೆ ಹರಿದ ಚರಣರೇಖೆಯ ಅರಣ್ಯವೀಥಿ. ಗಿಡುಮರ ಬಳ್ಳಿಗಳಿಂದ ಉದುರುವ ಪುಷ್ಪರೇಣು–ಪುಷ್ಪದಳಗಳು ಧೂಳಿಯಲ್ಲಿ ಬೆರೆತು ಕೇಸರ ಚೂರ್ಣವು ಹರಡಿದಂತೆ ಪೀತವಾಲುಕಾಮಯವಾದ ವನಭೂಮಿ. ದೂರ ವನಾಂತರದಲ್ಲಿ ಒಮ್ಮೊಮ್ಮೆ ಕೇಳಿಬರುವ ಕೋಳ್ಮಿಗಗಳ ಗರ್ಜನೆ, ಕೆಲವೊಮ್ಮೆ ನರಿಗಳು ಊಳಿಡುವಿಕೆ, ಮತ್ತೆ ಕೆಲವೊಮ್ಮೆ ಕಾಡುಕೋಳಿಗಳ ಕೂಗು ಕರ್ಣಕುಂಡಲಿಯನ್ನು ಮುಟ್ಟುವುದುಂಟು. ಭ್ರಮಂತಭ್ರಮರ ಗಳ ಝೇಂಕಾರ ವನದೇಶವನ್ನೆಲ್ಲಾ ವ್ಯಾಪಿಸಿ ಪುಷ್ಪಮಂಜರಿಗಳು ಜೋಲು ಬೀಳತೊಡಗಿದುವು, ಭ್ರಮರ ಭಾರದಿಂದ.

ಸುದೂರ ಪಯಣ ಎಲ್ಲೂ ನಿಲುಗಡೆಯಿಲ್ಲದೆ ಏಕ ಪ್ರಕಾರವಾಗಿ ಸಾಗಿತು. ಅಭಿಶಪ್ತ ಹೆಜ್ಜೆಗಳ ತಾಳಲಯಬದ್ಧ ವಿಕ್ಷೇಪ, ಆತ್ಮವಿಸ್ಮೃತಾ ವಸ್ಥೆಯಲ್ಲಿ ಧುಮುಧುಮಿಸುವ ಚಿಂತನಧಾರೆ, ಮನಃಬುದ್ಧಿಗಳ ಉತ್ಕ್ರಾಂತಿ ಯಲ್ಲಿ ತುಳುಕುವ ಅಪೂರ್ವ ಸಂಭ್ರಮವೇಗ. ಎಲ್ಲವೂ ಛಂದದಿಂದ ನಿರ್ಮಿತವಾದಂತೆ ಛಂದೋಮಯವಾಗಿದ್ದುವು ಎನ್ನಬಹುದು. ಆಗ ಆ ಅಪೂರ್ವ ಸಂದರ್ಭದಲ್ಲಿ ಮರ್ತ್ಯಲೋಕದ ಆಗಿನ ವಾತುಲ ಕವಿಗಳು ತಮ್ಮ ಲಕ್ಷ್ಯವನ್ನು ಎಲ್ಲಿ, ಯಾವಕಡೆ ಹರಿಸಿದ್ದರೋ ಏನೋ........ಇಲ್ಲದಿದ್ದಲ್ಲಿ ಎಷ್ಟು ಅಪೂರ್ವವಾದ ಕಾವ್ಯ ಮಾಲೆಯು ಸೃಷ್ಟಿಯಾಗುತಿತ್ತು ? ಎಂತಹ

ಲೋಕೋತ್ತರವಾದ ಘಳಿಗೆ ಪ್ರಮಾದವಶಾತ್ ಕಣ್ಮಿಂಚಿ ಕೈಮಿಂಚಿ ಹೋಗಿದೆ !

ಯಾಜ್ಞವಲ್ಕ್ಯ ಮಹರ್ಷಿಯ ಚಿತ್ತಕಲ್ಪದಲ್ಲಿ ವಿಚಾರಶ್ರದ್ಧೆ ಈ ಪ್ರಕಾರವಾಗಿ ಹರಿಯಿತು:—

ಆತ್ಮತೇಜಸ್ಸು – ಜೀವಾತ್ಮನು ಬೆಳಗಿದರೆ ಆತ್ಮತೇಜಸ್ಸು ಮೂಡುತ್ತದೆ. ಜೀವಾತ್ಮನು ಸ್ವಪ್ನ-ಜಾಗೃತ್-ಸುಷುಪ್ತಿಗಳ ಅವಸ್ಥೆಯನ್ನು ಮುಟ್ಟಿ ಮನಸ್ಸಿನ ಮೂಲಕ ಬಾಹ್ಯಾಂತರಗಳನ್ನು ವಿಮರ್ಶಿಸುವುದು ಯುಕ್ತ. ಮಾನಸಿಕ ತುಮುಲದಿಂದ ಪಂಚೇಂದ್ರಿಯಗಳ ವ್ಯಾಪಾರ ಅಂತರ್ಗತವಾದರೆ ಜೀವಾತ್ಮನ ಕಾಂತಿಯು ಬೆಳಗಿ ತೇಜಸ್ಸು ಮೊಳೆಯುತ್ತದೆ. ಯಾವಾಗ ಆತ್ಮನ ಕಾಂತಿಯಿಂದ ಮನಸ್ಸು ಮಮಕಾರ ಮುಕ್ತವಾಗುವುದೋ ಆಗ ಕರ್ತೃ-ಭೋಕ್ತೃ ಭಾವನೆ ಅಳಿದು ನೋವು-ಸಂಕಟಗಳು ಒಣಗಿದ ತರಗೆಲೆಗಳಂತೆ ಉದುರಿ ಹೋಗುತ್ತವೆ. ದೃಶ್ಯ ಪ್ರಪಂಚದಲ್ಲಿ ಬಯಕೆ ಮೂಡುವುದಿಲ್ಲ. ಸಕಲ ದುಃಖಗಳಿಗೂ ಕಾರಣ ಉಪಾಧಿಗಳ ಸಂಗ. ಎಲ್ಲಿಯವರೆಗೆ ಉಪಾಧಿಗಳಿರುತ್ತವೆಯೋ ಅಲ್ಲಿಯವರೆಗೆ ದುಃಖ. ಉಪಾಧಿಗಳ ಕೊಂಡಿ ಕಳಚಿತೆಂದರೆ ತೀರಿತು, ಒಡನೆಯೇ ಆತ್ಮಜ್ಞಾನ ಮೂಡುತ್ತದೆ. ಆತ್ಮಜ್ಞಾನದಿಂದ ಆತ್ಮತೇಜಸ್ಸು.

ನಾವು ಅನಾತ್ಮ ವ್ಯವಹಾರದಿಂದ ಯಾವಾಗ ಬಿಡುಗಡೆ ಹೊಂದುವೆವೋ ಆಗ ಆತ್ಮನ ಮೇಲೆಯೇ ಸ್ಥಿರವಾಗಿ ನೆಲೆ ನಿಲ್ಲುವುದು ಸ್ವಾಭಾವಿಕ. ಅಂದರೆ ಆತ್ಮಜ್ಞಾನ ಮೂಡಿತು ಎಂತಲೇ ಅರ್ಥ. ಮನಸ್ಸು ಯಾವಾಗ ಮಮಕಾರವನ್ನು ಅತಿಕ್ರಮಿಸುವುದೋ ಆಗ ಸರ್ವವ್ಯಾಪಿಯಾದ ಆತ್ಮನಲ್ಲಿ ತಾನಾಗಿಯೇ ವಿಲೀನವಾಗುತ್ತದೆ. ಅಂದರೆ–ಇದೇ ಆತ್ಮಜ್ಞಾನ ಅಥವಾ ಪರಮಾತ್ಮ ಜ್ಞಾನ.

ಬ್ರಹ್ಮ–ಬ್ರಹ್ಮನ ಚಿಂತನೆಯಿಂದ ಮನಸ್ಸು ಬುದ್ಧಿಗಳು ಅರಳಿ ಆಲೋಚನಾ ಶಕ್ತಿಯು ವೃದ್ಧಿಯಾಗುತ್ತದೆ. ಬ್ರಹ್ಮವಿದ್ಯೆ ಸಾಕ್ಷಾತ್ ಪರ

ಬ್ರಹ್ಮನಿಂದಲೇ ಪರಂಪರಾನುಗತಿಯಲ್ಲಿ ಹರಿದು ಬಂದಿದೆಯೇ ವಿನಾ ಇದು ತರ್ಕವೂ ಅಲ್ಲ; ಊಹೆಯೂ ಅಲ್ಲ. ಬ್ರಹ್ಮವಿದ್ಯೆಯನ್ನು ಸ್ವತಃ ಬ್ರಹ್ಮನೇ ಅಥರ್ವನಿಗೆ ಹೇಳಿದ್ದಾನೆ. ಅಥರ್ವನಿಂದ ಅಂಗೀರಸನಿಗೆ. ಹೀಗೆ ಬ್ರಹ್ಮ ವಿದ್ಯೆಯು ಗುರುಕುಲದಿಂದ ಗುರುಕುಲಕ್ಕೆ ಅನೂಚಾನವಾಗಿ ನಡೆದು ಬಂದದ್ದು. ಬ್ರಹ್ಮ ಯಾವತ್ತೂ ಬ್ರಹ್ಮನೇ. ಬ್ರಹ್ಮಸೃಷ್ಟಿ ಬ್ರಹ್ಮ ನಿಂದಲೇ ಆಗಿವೆ. ಪ್ರಕೃತಿ ಸೃಷ್ಟಿಗೆ ಅಗತ್ಯವಾದ ವಸ್ತುವಸ್ತುವೂ ಬ್ರಹ್ಮನ ಅಂಶವೇ. ಎಳೆ ಎಳೆಯನ್ನೂ ತನ್ನ ಅಂಶದಿಂದಲೇ ಸೃಷ್ಟಿಸಿದ್ದಾನೆ ಬ್ರಹ್ಮ. ಅಂತಲೇ ಪ್ರಕೃತಿಯ ಅಂಶಅಂಶವನ್ನೂ ಬ್ರಹ್ಮ ಎಂದು ಭಾವಿಸುವುದು ಸರಿಯಾದದ್ದೆ. ಬ್ರಹ್ಮನು ಅಕ್ಷರ; ಬ್ರಹ್ಮವಿದ್ಯೆಯೂ ಅಕ್ಷರ. ಬ್ರಹ್ಮನನ್ನು ಅರಿತವನು ಬ್ರಹ್ಮಜ್ಞಾನಿ. ಒಮ್ಮೆ ಬ್ರಹ್ಮಜ್ಞಾನವನ್ನು ಪಡೆದುಕೊಂಡ ನೆಂದರೆ ಅದನ್ನು ಯಾವ ಸ್ಥಿತಿಯಲ್ಲೂ ಕಳೆದುಕೊಳ್ಳುವುದಿಲ್ಲ. ಕಲ್ಲು ಬಂಡೆಯಂತೆ ಎಂತಹ ಪ್ರಚಂಡ ಬಿರುಗಾಳಿಯನ್ನಾದರೂ ಎದುರಿಸ ಬಲ್ಲುದು. ಒಮ್ಮೆ ಲೋಹ ಸ್ಪರ್ಶಶಿಲೆಗೆ ತಾಗಿ ಚಿನ್ನವಾಯಿತೆಂದರೆ ಅದು ಎಂದೆಂದಿಗೂ ಚಿನ್ನವೇ. ಅದರಂತೆಯೇ ಬ್ರಹ್ಮಜ್ಞಾನ. ಅದಕ್ಕೆ ಸಾಟಿ ಯಾದುದು ಇನ್ನಿಲ್ಲ. ಅವನಲ್ಲಿ ಭಯ ಭೀತಿಗಳಿಗೆ ಸ್ಥಳವಿಲ್ಲ. ಮೃತ್ಯುವಿಗೆ ಅವನೇ ಮೃತ್ಯು. ಇದೇ ಪರಾಪರ ವಿದ್ಯೆ. ನಂದಾದೀಪದಂತೆ ಹಗ ಲಿರುಳೂ ಬೆಳಗತಕ್ಕದ್ದೆ. ಸೃಷ್ಟ್ಯಂಶವಾಗಿ ಲೋಕಾಂಶವಾಗಿ ಜೀವನಾಂಶ ವಾಗಿ ಬೆಳಗುವುದರಿಂದ ಇದಕ್ಕೆ ಚ್ಯುತಿಯೂ ಇಲ್ಲ; ಅಂತ್ಯವೂ ಇಲ್ಲ. ಒಂದು ವಿಷಯವನ್ನು ತಿಳಿಯಬಯಸಿದರೆ ಅದನ್ನು ಕೂಲಂಕಶವಾಗಿ ತಿಳಿದುಕೊಳ್ಳುವುದೇ ಯುಕ್ತ. ಮೊದಲು ಮೂಲಾರ್ಥ ಕರತಲಾಮಲಕ ವಾದರೆ ಉಳಿದವುಗಳ ಆವಿರ್ಭಾವನೆ ತಾನಾಗಿ ಆಗುತ್ತದೆ. ಎಲ್ಲವನ್ನೂ ಬೇರೆಬೇರೆಯಾಗಿ ಹುಡುಕಿ ತೆಗೆಯುವ ಅಗತ್ಯವಿರುವುದಿಲ್ಲ. ಸತ್ಯದಿಂದ ನಿತ್ಯ. ಇಡೀ ಬ್ರಹ್ಮಾಂಡವೆಲ್ಲ ಒಂದೇ ಒಂದು ವಿಶ್ವಚೈತನ್ಯ. ಆ ವಿಶ್ವ ಚೈತನ್ಯವನ್ನು ಅರಿತುಕೊಳ್ಳುವುದೇ ಬ್ರಹ್ಮವಿದ್ಯೆ.

ಪರಾಪರ ವಿದ್ಯೆ-ಪರಾ ವಿದ್ಯೆ ಎಂಬುದೇ ವಿಶ್ವಚೈತನ್ಯ ಅಥವಾ ಬ್ರಹ್ಮ ವಿದ್ಯೆ. ಅಪರಾ ಎಂಬುದು ದೃಗ್ವಸ್ತುಗಳಿಂದ ಕೂಡಿದ ಈ ಪ್ರಪಂಚ.

ಸಂಸಾರಕ್ಕೆ ಸಾಧನವಾದ ಇದು ಗೌಣ. ಇದರಿಂದ ವಸ್ತುವಸ್ತುಗಳ ಸ್ವರೂಪ, ಕಾರ್ಯಕಾರಣಗಳ ಸಂಬಂಧ, ಕಾಲದೇಶಗಳ ಪ್ರವೃತ್ತಿ ಕಂಡು ಬರುತ್ತದೆ. ದೃಗ್ಗೋಚರವೂ ಆಕರ್ಷಣೀಯವೂ ಆದ ಇವು ಪರಾವಿದ್ಯೆಯ ಕಡೆ ಮನಸ್ಸನ್ನು ಹರಿಯಗೊಡದಂತೆ ಮೌಢ್ಯದ ಪರಮಾವಧಿಯಲ್ಲಿ ಅದುಮಿಡುವುದರಿಂದ ಮನಸ್ಸು ದೀಪಕ್ಕೆರಗುವ ಪತಂಗವಾಗುತ್ತದೆ. ಆದರೆ, ವೇದಗಳನ್ನು ಹೇಳುವುದೇ ಆಗಲೀ, ಉಪನಿಷತ್ತುಗಳನ್ನು ಮನನ ಮಾಡುವುದೇ ಆಗಲೀ ಅಪರವಿದ್ಯೆಯ ಮೂಲಕವೇ. ಅಪರವಿದ್ಯೆ ಗೌಣವೂ ಲೌಕಿಕ ವ್ಯವಹಾರಕ್ಕೆ ಸಾಧನವೂ ಆದುದರಿಂದ, ಎಲ್ಲಾ ವಸ್ತುಗಳ ಸ್ವರೂಪ ಹಾಗೂ ಅವುಗಳ ಹಿನ್ನೆಲೆಯ ಕಾರ್ಯಕಾರಣಗಳ ಅನುಬಂಧ ಮತ್ತು ಅಕ್ಷರಜ್ಞಾನ ಇವೆಲ್ಲಾ ತಿಳಿಯುವುದರಿಂದ, ಇವು ಪರಿದೃಶ್ಯಮಾನ ಪ್ರಪಂಚಕ್ಕೆ ಅಥವಾ ದೃಗ್‌ದೃಶ್ಯಗಳಿಗೆ ಸೇರಿದ್ದು. ಮನಃಬುದ್ಧಿಗಳಲ್ಲಿ ಯಾವತ್ತೂ ಆಕರ್ಷಣೀಯವಾದ ಇವುಗಳನ್ನು ತಿಳಿದುಕೊಳ್ಳುವ ಪ್ರಯತ್ನವೇ ಮೊದಲು ನಡೆಯುತ್ತದೆ; ಅನಂತರ ಆಧ್ಯಾತ್ಮಿಕ ಪ್ರಪಂಚದ ಕಡೆ ಹರಿಯುವುದು ಸ್ವಾಭಾವಿಕ. ಉಪನಿತ್ತುಗಳನ್ನು ಅರಿತುಕೊಂಡರೇನೇ ಬ್ರಹ್ಮಾನುಭವ; ಉಪನಿಷತ್ತೇ ಹೆಬ್ಬಾಗಿಲಿನ ಕೈಮರ-ಬ್ರಹ್ಮಜ್ಞಾನದ ಮಹಾ ಪೀಠಕ್ಕೆ. ಈ ವಿಶ್ವಪ್ರಪಂಚದಲ್ಲಿ ಎಲ್ಲಾ ಚರಾಚರ ವಸ್ತುಗಳನ್ನೂ ಬ್ರಹ್ಮವಸ್ತು ಎನ್ನುತ್ತದೆ ಪರಾವಿದ್ಯೆ, ಅಂದರೆ ಅದರಿಂದ ವೈದ್ಯಶಾಸ್ತ್ರ ನ್ಯಾಯ ಶಾಸ್ತ್ರ ಮುಂತಾದ ಎಲ್ಲಾ ವಿದ್ಯೆಯೂ ತಿಳಿಯುತ್ತದೆ ಎಂದೇನಲ್ಲ. ನಿಜ ವಾಗಿಯೂ ಹೇಳಬೇಕೆಂದರೆ ಬ್ರಹ್ಮಜ್ಞಾನಿಗೆ ಇವುಗಳನ್ನೆಲ್ಲಾ ತಿಳಿದುಕೊಳ್ಳ ಬೇಕೆಂಬ ಆಸಕ್ತಿಯಾಗಲೀ ಅಪೇಕ್ಷೆಯಾಗಲೀ ಇರುವುದಿಲ್ಲ ಕೂಡ. ಆದರೆ, ಅಲೌಕಿಕ ವ್ಯವಹಾರಕ್ಕೂ ಹಲವಾರು ಶಾಸ್ತ್ರಗಳನ್ನು ತಿಳಿಯುವ ಉದ್ದಿ ಶ್ಯಕ್ಕೂ ಅಪರವಿದ್ಯೆಯನ್ನು ಅವಲಂಬಿಸುವುದು ಅನಿವಾರ್ಯ. ಅಪರವಿದ್ಯೆ ಎಂದರೆ ಅಲ್ಪವೇನೂ ಅಲ್ಲ. ಅಪರವಿದ್ಯೆಯಿಂದ ಅಕ್ಷರವಿದ್ಯೆ. ಯಾವುದ ರಿಂದ ಅಕ್ಷರ ವಿದ್ಯೆಯನ್ನು ಪಡೆಯಬಹುದೋ ಅದು ಕ್ಷಯವಿಲ್ಲದ್ದು. ಅಕ್ಷರವೇ ಸಕಲ ಜ್ಞಾನಕ್ಕೂ ಮೂಲ.

ಬುದ್ಧಿಯು ಸಾಮಾನ್ಯವಾಗಿ ಏನನ್ನು ಗ್ರಹಿಸಿದರೂ ಅದು ಕಾಲ

ದೇಶಗಳಿಗೆ ಒಳಪಟ್ಟಿರುತ್ತದೆ. ದೃಗ್ವಿಷಯದಿಂದಾಚೆಗೆ ಬುದ್ಧಿ ನಿಲುಕದೆ ಹೋದರೆ ಅದು ಬೌದ್ಧಿಕ ದೌರ್ಬಲ್ಯವೇ ಹೊರತು ವಸ್ತು ಸೀಮಿತವಲ್ಲ. ನಿರಾಕಾರವೂ ಅನಿರ್ವಚನೀಯವೂ ಆದ ಬ್ರಹ್ಮವಸ್ತುವು ಸಾಮಾನ್ಯ ಬುದ್ಧಿಗೆ ನಿಲುಕುವುದು ಅಷ್ಟು ಸುಲಭವೂ ಅಲ್ಲ. ಸಾಧ್ಯವೂ ಅಲ್ಲ. ಅದನ್ನು ಕೂಲಂಕಶವಾಗಿ ಅರಿಯಬೇಕೆಂದರೆ ಬ್ರಹ್ಮಜ್ಞಾನದ ಮೂಲಕವೇ........

ಕಾಲು ಹಾದಿಯಲ್ಲಿ ಮುಂಪಯಣ ಸಾಗುತ್ತಿದ್ದಂತೆ ವೇದವಿದ್ಯಾ ಲಹರಿಯು ಹೃತ್‌ಶ್ರೀ ಕೇಂದ್ರದಿಂದ ಹರಿದು ನರನಾಡಿಗಳಲ್ಲಿ ಸಂಚರಿಸಿ ಮುಖಬಿಂಬದಲ್ಲಿ ಭಾವಶಾಂತಿಯಾಗಿ ಗಂಭೀರ ಶೈಲಿಯಲ್ಲಿ ತೊಟ್ಟಿಕ್ಕು ವಂತಿತ್ತು. ಹೊತ್ತು ಉರುಳಿದುದರ ಪರಿವೆಯಾಗಲೀ, ಹಾದಿ ಕಳೆದುದೇ ಆಗಲೀ ಗಮನಕ್ಕೆ ಬಾರದಷ್ಟು ಆಲೋಚನಾಪರವಶತೆ ಯಾಜ್ಞವಲ್ಕ್ಯ ಮಹರ್ಷಿಯ ಮನಃಬುದ್ಧಿಗಳಲ್ಲಿ.

ಮೇರು ಪರ್ವತದ ಚರಣಾದ್ರಿಯ ಸಾನುಪ್ರದೇಶದಲ್ಲಿ ವೈಶಂಪಾಯನ ಮಹರ್ಷಿಯ ಪರ್ಣಾಶ್ರಮ. ಅದರ ಸುತ್ತಮುತ್ತ ಇನ್ನೂ ಕೆಲವಾರು ಆಶ್ರಮಗಳು. ಅಲ್ಲಲ್ಲಿ ಋಷಿಪತ್ನಿಯರೂ ವಟುಗಳೂ ದೃಷ್ಟಿಗೆ ಬೀಳು ತ್ತಾರೆ. ಆಶ್ರಮದ ವಾಮಾಂಗದಲ್ಲಿ ದೂರದೂರದವರೆಗೆ ಹಬ್ಬಿದ ಶರಲ ಕಾಂತಾರವು ಕೊನೆಯೇ ಇಲ್ಲದಷ್ಟು ವಿಸ್ತಾರವಾಗಿದ್ದು ಸಮ್ಯಕ್ ದೃಷ್ಟಿಗೆ ಆತ್ಮಾವೇಶದ ಮಾಯೆಯಂತೆ ತೋರುತ್ತದೆ. ದಿಗಂತದಂಚಿನವರೆಗೂ ಹಬ್ಬಿ ಭೀಕರ ಅಜಗರದಂತೆ ಭಯಂಕರವಾಗಿದ್ದ ಅದನ್ನು ಇಣಿಕಿ ನೋಡಲು ಇಂದ್ರನೂ ಹೆದರುವನೇನೋ, ಝಂಝಾವಾತದ ಲಹರಿಗಳು ಮುಟ್ಟಿ ವಿಕ್ಷುಬ್ಧಗೊಳಿಸಲಾರವೋ ಎಂಬಷ್ಟು ಘನ ಗಂಭೀರ. ವೃಕ್ಷ ಸಮೂಹಗಳ ಅತ್ಯಂತ ರಮಣೀಯವಾದ ಕೋಮಲ ಕಿಸಲಯಗಳು ವರ್ಣವರ್ಣಗಳಿಂದ ರಂಜಿತವಾಗಿ ಅವುದೋ ಅಪೂರ್ವ ಸನ್ನಿವೇಶಕ್ಕಾಗಿ ಅಲಂಕರಿಸಿದಂತಿದ್ದುವು, ಮನೋರಮ ವೈಖರಿಯಲ್ಲಿ.

ಪೂರ್ವದಿಕ್ಕಿನಲ್ಲಿ ಮುಂಬೆಳಕಿನ ಆವಿರ್ಭಾವದಿಂದ ಚಂದ್ರಮನ ಬೆಳ ದಿಂಗಳು ಮಹಾ ವನಸ್ಥಳಿಯಲ್ಲಿ ಬಿದ್ದು ಕರಗಿಹೋಯಿತೋ ಎಂಬಂ

ಕಂದಿ ಕುಂದಿ ಅದೃಶ್ಯವಾಗುವುದನ್ನು ನೋಡುತ್ತ ಯಾಜ್ಞವಲ್ಕ್ಯ ಮಹರ್ಷಿಯು ಆಶ್ರಮದ ಕೈಸಾಲೆಯನ್ನು ಹತ್ತಿದ. ಅಲ್ಲಿ ಆಗಲೇ ಇನ್ನೂ ಅನೇಕ ಮಂದಿ ಶಿಷ್ಯರು ನೆರೆದಿದ್ದರು. ವಿಚಾರ ವಿಮರ್ಶೆಯಲ್ಲಿ ತತ್ಪರ ನಾಗಿದ್ದ ವೈಶಂಪಾಯನ ಮಹರ್ಷಿಯು ಯಾಜ್ಞವಲ್ಕ್ಯನನ್ನು ಕಂಡು ಹರ್ಷಚಿತ್ತನಾಗಿ, ಸ್ವಾಗತಿಸುವಂತೆ ಮುಗುಳು ನಗೆ ಬೀರುತ್ತಾನೆ.

ವೈಶಂಪಾಯನ ಮಹರ್ಷಿ– ನಾನು ನಿನ್ನ ನಿರೀಕ್ಷೆಯಲ್ಲಿಯೇ ಇದ್ದೆ. ತಪ್ಪದೆ ಬಂದೆಯಲ್ಲಾ ಅದೇ ಸಂತೋಷ. ಈವೊತ್ತು ಏನೇ ಇರಲಿ, ಮಹಾ ರಾಜನ ಭವಿಷ್ಯತ್ತು ನಿರ್ಣಯವಾಗಲೇಬೇಕು. ನೋಡೋಣ, ನಿನ್ನ ಪುಣ್ಯವಿಶೇಷ ಅವನನ್ನು ಕಾಪಾಡಿದರೂ ಕಾಪಾಡಬಹುದು.

ಯಾಜ್ಞವಲ್ಕ್ಯ ಮಹರ್ಷಿ ಎಳೆನಗೆಯೊಡನೆ ಗುರುಗಳೇ, ನಿಮ್ಮ ಪುಣ್ಯವೇ ಅವನನ್ನು ಕಾಪಾಡದಿರುವಾಗ ನನ್ನ ಪುಣ್ಯವು ಕಾಪಾಡುವು ದಾದರೂ ಉಂಟೆ ?

ವೈಶಂಪಾಯನ ಮಹರ್ಷಿ–ಆ ಪ್ರಶ್ನೆ ಏಳುವುದು ಸಹಜವೇ ಆದರೂ, ಪುಣ್ಯ ಎಂಬುದು ಯಾವ ಘಳಿಗೆಯಲ್ಲಿ ಕೂಡಿ ಬರುವುದೋ ಅದನ್ನು ಪರ ಬ್ರಹ್ಮ ಮಾತ್ರ ಬಲ್ಲ. ಆ ದಿವ್ಯಘಳಿಗೆಯು ಮೂಡುವವರೆಗೆ ನಾವು ಪ್ರಯತ್ನಿಸೋಣ. ನಮ್ಮ ಕರ್ತವ್ಯದಲ್ಲಿ ನಮಗೆ ಕದಾಪಿ ಸಂಕೋಚವಿರ ಬಾರದು.

ಯಾಜ್ಞವಲ್ಕ್ಯ ಮಹರ್ಷಿ ಗಂಭೀರ ಭಾವದಿಂದ-ನಿಮ್ಮ ಅಭೀಷ್ಟ ವನ್ನು ನೆರವೇರಿಸುವ ಸಲುವಾಗಿಯೇ ನಾನು ಬಂದಿರುವೆ.

ವೈಶಂಪಾಯನ ಮಹರ್ಷಿ– ಬಹಳ ಸಂತೋಷ; ಬಹಳ ಸಂತೋಷ.

ಯಾಜ್ಞವಲ್ಕ್ಯ ಮಹರ್ಷಿ– ನೀವು ಮಂತ್ರೋದಕವನ್ನು ಹೀಗೆ ಅಂದಿಂದಿಗೂ ಕಳುಹಿಸುತ್ತಲೇ ಇದ್ದೀರಿ. ಈವರೆಗೆ ಅದರಿಂದ ಯಾವ ಪ್ರಯೋಜನವೂ ಆಗಲಿಲ್ಲ ಅರಸನಿಗೆ. ಇದೂ ಸಹ ಹಿಂದಿನಂತೆಯೇ ವ್ಯರ್ಥ

ವಾದಲ್ಲಿ ಆಶ್ಚರ್ಯವೇನೂ ಇರುವುದಿಲ್ಲ, ಎನಿಸುತ್ತೆ ನನಗೆ.

ವೈಶಂಪಾಯನ ಮಹರ್ಷಿ– ಮುಖ್ಯವಾಗಿ ಕಾಲ ಪರಿಪಕ್ವವಾಗ ಬೇಕು. ಧರ್ಮಸಂಯೋಜನೆಯೂ ಕೂಡಿ ಬರಬೇಕು. ಇದಕ್ಕಿಂತ ಹೆಚ್ಚಾಗಿ ನಾನು ಇನ್ನೇನೂ ಹೇಳಲಾರೆ.

ಕಹೋಳನು ಮನದಲ್ಲಿಯೇ ಅನುಮಾನಿಸುತ್ತ ಕಿಂಚಿತ್ ವಿಚಾರ ಪರವಶನಾಗಿ– ನೀವಂತೂ ಹೀಗೆ ಬಹಳ ದಿನಗಳಿಂದ ಶ್ರದ್ಧೆ ವಹಿಸಿದ್ದೀರಿ. ಏನಾಗುತ್ತೋ ನಾವು ಕಾದು ನೋಡಬೇಕು ಗುರುಗಳೇ.

ಆರುಣಿ– ನನಗೆ ಸ್ವಲ್ಪ ಸಂದೇಹವೇ.

ಆರ್ತಭಾಗ– ಒಮ್ಮೆಲೇ ಹಾಗೆನ್ನುವುದು ಸರಿಯಲ್ಲ. ಅದರಿಂದ ಯಾರಿಗಾದರೂ ಹುರುಪು ಕುಗ್ಗುತ್ತದೆ.

ಆರುಣಿಯು ಕುತೂಹಲಚಕಿತನಾಗಿ ಪ್ರಶ್ನಿಸುತ್ತಾನೆ–ಹಾಗಾದರೆ ಈ ವಿಚಾರದಲ್ಲಿ ನಿನ್ನ ಅಭಿಪ್ರಾಯವೇನು ? ನೀನೂ ಸಹ ಎಷ್ಟೋ ಬಾರಿ ಮಂತ್ರೋದಕವನ್ನು ಒಯ್ದು ಕೊಟ್ಟಿದ್ದೀಯಲ್ಲವೇ ?

ಆ ಮಾತಿಗೆ ಉತ್ತರಿಸಲು ಆರ್ತಭಾಗನಿಗೆ ಸ್ವಲ್ಪ ಸಮಯ ಬೇಕಾಯಿತು. ಆ ಪ್ರಶ್ನೆಯನ್ನು ನಿರೀಕ್ಷಿಸಿರದ ಚಿತ್ತಕಲ್ಪದಲ್ಲಿ ಸಿದ್ಧ ಉತ್ತರವೂ ಇರಲಿಲ್ಲ. ಒಂದೆರಡು ಕ್ಷಣ ಸ್ತಬ್ಧನಾದಂತೆ ತನ್ನಲ್ಲೇ ಯೋಚಿಸಿದನಂತರ ಹೀಗೆಂದು ಉತ್ತರಿಸಿದ–ಎಲೈ ಆರುಣಿ. ನಿನ್ನ ಪ್ರಶ್ನೆಗೆ ಉಚಿತವಾದ ಉತ್ತರವೆಂದರೆ ಹೀಗೆ ಹೇಳಬಹುದು, ರಾಜ ರುಗ್ಣ ಶಯ್ಯೆಯಲ್ಲಿರುವುದರಿಂದ ದೇಶದಲ್ಲಿ ಅರಾಜಕತೆಯುಂಟಾಗಿದೆ. ಅದನ್ನು ತಪ್ಪಿಸುವ ಸಲುವಾಗಿ ಯಾರಾದರೂ ತಮ್ಮ ತಮ್ಮ ಶಕ್ತ್ಯಾನುಸಾರ ಪ್ರಯತ್ನಿಸುವುದು ಸರ್ವೋತ್ತಮ. ಭಿಷಗ್ರತ್ನರು ಔಷಧೋಪಚಾರಗಳ ಮೂಲಕ ಪ್ರಯತ್ನಿಸಿದರೆ ಗುರುಕುಲವು ಮಂತ್ರೋದಕದ ಮೂಲಕ ಪ್ರಯತ್ನಿಸುವುದು ಲೇಸು. ಹೇಗಾದರೂ ಅವನು ಗುಣಹೊಂದಲಿ ಎಂಬುದು ಮಹೋದ್ದೇಶ.

ಆರುಣಿ–ಸರಿ, ಸರಿ.

ವೈಶಂಪಾಯನ ಮಹರ್ಷಿಯು ಸಮಾಧಾನ ಚಿತ್ತನಾಗಿ ಪ್ರಸನ್ನವದನ ದಿಂದ ನುಡಿಯುತ್ತಾನೆ-ಈಗ ಆರ್ತಭಾಗ ಕೊಟ್ಟಉತ್ತರ ಸಮಂಜಸ. ನನಗೂ ಮಹಾರಾಜನ ಒಳಿತಿನಲ್ಲಿ ಸಂಶಯವಿಲ್ಲದಿಲ್ಲ ಎಂದರೂ 'ದಯೆ' ಎಂಬುದು ದೊಡ್ಡದು. ಮುಖ್ಯವಾಗಿ ಅರಾಜಕತೆಯ ನಿವಾರಣೆಗಾಗಿಯೂ ದಯಾದಾನಕ್ಕಾಗಿಯೂ ಸಮ್ಮ ಎಣೆಯಿಲ್ಲದ ಪ್ರಯತ್ನ ನಡೆಯುತ್ತಲೇ ಇದೆ. ನಡೆದಷ್ಟುಕಾಲ ನಡೆಯಲಿ ಎಂಬುದೊಂದು ಆತ್ಮೀಯ ಹಾರೈಕೆ.

ಆರ್ತಭಾಗ-ಪರಮೋಪಕಾರ. ಯಾರಾದರೂ ಇದನ್ನು ಒಪ್ಪು ವಂತಾದ್ದು.

ಯಾಜ್ಞವಲ್ಕ್ಯ ಮಹರ್ಷಿಯು ಅದುವರೆಗೂ ಎಲ್ಲರ ಅಭಿಪ್ರಾಯವನ್ನು ಕೇಳುತಿದ್ದು ಅನಂತರ ತನ್ನ ಅಭಿಪ್ರಾಯವನ್ನು ಒಂದೇ ಮಾತಿನಲ್ಲಿ ಹೊರ ಹಾಕುವನು-ಪುರುಷ ಪ್ರಯತ್ನ.

ವೈಶಂಪಾಯನ ಮಹರ್ಷಿಯು ಮುಗುಳ್ನಗೆಯೊಡನೆ-ಇರಲಿ, ಪುರುಷ ಪ್ರಯತ್ನದೊಂದಿಗೆ ದೈವಾಯತ್ತವಾದುದೂ ಇರಬೇಕಲ್ಲ.

ಆರುಣಿ-ಹೌದು ಮಹರ್ಷಿಗಳೇ.

ಯಾಜ್ಞವಲ್ಕ್ಯ ಮಹರ್ಷಿ-ಸರಿ; ಹಾಗಾದರೆ ನಾನು ಮಂತ್ರೋದಕ ವನ್ನು ತೆಗೆದುಕೊಂಡು ಹೊರಡಲೇ ?

ವೈಶಂಪಾಯನಮಹರ್ಷಿಯು ಅತ್ಯಂತ ಸಂತುಷ್ಟನಾಗಿಯೂ ಸಂಪ್ರೀತನಾಗಿಯೂ ಕಮಂಡಲುವನ್ನು ತೆಗೆದುಕೊಂಡು ಅಭಿಮಂತ್ರಿಸಿ ಯಾಜ್ಞವಲ್ಕ್ಯ ಮಹರ್ಷಿಯ ಕೈಗೆ ನೀಡುತ್ತ-ಒಳ್ಳೆಯದು, ಹೋಗಿ ಬಾ. ನಿನ್ನ ಕೈಗುಣದಿಂದಲಾದರೂ ಮಹಾರಾಜನ ರೋಗ ಹರಿಯಲಿ. ಅಷ್ಟೇ ಅಲ್ಲ ; ನನಗೆ ಅದರಲ್ಲಿ ಪೂರ್ಣ ನಂಬಿಕೆಯೂ ಇದೆ.

ಆ ಮಾತು ಕೇಳಿ ಎಲ್ಲರ ಮುಖದಲ್ಲೂ ಪ್ರಸನ್ನತೆ ಮೂಡುವುದು. ಯಾಜ್ಞವಲ್ಕ್ಯ ಮಹರ್ಷಿಯು ಹರ್ಷಚಿತ್ತನಾಗಿ ಕಮಂಡಲುವನ್ನು ವಿನೀತ

ಭಾವದಿಂದ ಸ್ವೀಕರಿಸುವನು, ಮೈಯೆಲ್ಲಾ ಮನಸ್ಸಾದಷ್ಟು ಹುರುಪು ಮೈ ಗೂಡಿತು. ರಾಜ್ಯದ ಕಲ್ಯಾಣಾರ್ಥವಾಗಿ ದೀಕ್ಷಾಬದ್ಧನಾದ ವಟುವಿನಂತೆ ಆ ಕ್ಷಣವೇ ಹೊರಡುವನು ಅಲ್ಲಿಂದ. ತಲೆಯಲ್ಲಿ ಅದೇ ವಿಚಾರ ವಿಮರ್ಶೆ. ವೃಥಾ ನನ್ನ ಸಮಯವನ್ನು ಹಾಳುಮಾಡುತ್ತಿದ್ದೇನೆಯೇ ಎಂಬ ಪ್ರಶ್ನೆಯೂ ಸಹ ತಲೆಯೆತ್ತುತ್ತದೆ. ಆದರೂ, ಗುರುಗಳ ಇಚ್ಛಾನುಸಾರವಾಗಿ ಕಾರ್ಯವನ್ನು ಕೈಕೊಂಡಾಗಿದೆ; ಮುಂದಿಟ್ಟ ಹೆಜ್ಜೆ ಹಿಂತೆಗೆಯಬಾರದು. ಮಹಾರಾಜನಿಗೆ ಹೇಗಾದರೂ ನನ್ನ ಕಿಂಚಿತ್ ಸೇವೆಯು ಸಲ್ಲಲೇ ಬೇಕಷ್ಟೆ, ಎಂಬ ಧರ್ಮ ಭಾವ ಮನದಲ್ಲಿ. ಅಂತಲೇ ದಿಟ್ಟ ಹೆಜ್ಜೆಗಳು ಹಿಂಜರಿಯಲಿಲ್ಲ; ಪಯಣದ ಹಾದಿಯೂ ಕಡಿಮೆಯದಲ್ಲ. ಕಾಡು ಮೇಡುಗಳನ್ನು ದಾಟಿಯೇ ಹೋಗ ಬೇಕು ವರ್ಧಮಾನಪುರಿಗೆ. ಬಿಸಿಲೇರುವ ಮುನ್ನ ಪಯಣ ಸುಖಕರವಾದ್ದರಿಂದ ಅತೀವ ಆತುರ ಹೆಜ್ಜೆ ಹೆಜ್ಜೆಗಳಲ್ಲಿ. ಮೈಮನಗಳನ್ನು ಪುಷ್ಟೀಕರಿಸುವ ಸುಮ ನೋಹರವಾದ ಪ್ರಾತಃಕಾಲೀನ ವಾತಾವರಣದಲ್ಲಿ ಪಕ್ಷಿಗೊರಳಿನ ಸುರಮ್ಯ ಸುಪ್ರಭಾತ ಕಿವಿಗಳಿಗೊರೆಯುತ್ತಲೇ ಇದೆ. ಗಿಡುಮರ ತೃಣಗಣಗಳಮೇಲೆ ಮುತ್ತುಮುತ್ತಾಗಿಚೆಲ್ಲಿದ ಹಿಮಮಣಿಗಳ ಶೃಂಗಾರದಲ್ಲಿ ರವಿ ಕಿರಣಗಳು ಪ್ರತಿಫಲಿಸಿ ಜಗಜಗಿಸುತ್ತಿವೆ. ಮೂಡಣ ಭಿತ್ತಿಯಲ್ಲಿ ಬಾಲಕೋಮಲ ರವಿಯು ಮೆಲ್ಲಮೆಲ್ಲನೆ ಬಾನೇರುತಿದ್ದು, ಹೊತ್ತು ಉರುಳಿದಂತೆಲ್ಲಾ ಎಳೆ ಗಾವು ಉರಿಗಾವಾಗಿ ಮಾರ್ಪಟ್ಟು ಉರಿಯ ತೊಡಗಿತು ನೆತ್ತಿ. ಮುಂದೆ, ಸ್ವಲ್ಪದೂರ ಕಳೆಯುವುದರೊಳಗಾಗಿ ನೆತ್ತಿಯ ನೇರಕ್ಕೆ ಗಗನದ್ದೇಶದಲ್ಲಿ 'ಸುಯ್' ಎಂಬ ಸದ್ದನ್ನು ಕೇಳಿದ ಮಹರ್ಷಿಯು ಚಕಿತನಾಗಿ ತಲೆಯೆತ್ತಿ ನೋಡಿದರೆ ಅಸಂಖ್ಯ ಕಪೋತಗಳ ಹಿಂಡು ಒತ್ತೊತ್ತಾಗಿ, ಶಿಸ್ತಿನ ಖನಿ ಯಾಗಿ ಹಾರಿಹೋಗುತ್ತಿವೆ, ಬೆಣ್ಣೆಯ ಮುದ್ದೆಗಳೋಪಾದಿಯಲ್ಲಿ. ಗಗನ ದ್ದೇಶಕ್ಕೆ ಅಲಂಕಾರ ಪ್ರಿಯವೆನಿಸುವ ಅವರ್ಣನೀಯವಾದ ಆ ಸುಂದರ ದೃಶ್ಯದಿಂದ ಮನಃಪ್ರಾಣಗಳು ಸಮ್ಮೋಹನಾಸ್ತ್ರಕ್ಕೊಳಗಾದಂತೆ ಆಕ ರ್ಷಿತವಾದುವು. ಆಗ....ಆ ಬಿಸಿಲ ಝಳಕ್ಕೆ ಮಿರುಮಿರುಗುವ ಮೈ. ಹೊಳೆ ಹೊಳೆಯುವ ಕಣ್ಣುಗಳು ಬಿಚ್ಚಿದ ರೆಕ್ಕೆಪುಕ್ಕ. ಹಾರಾಟದ ಮಧ್ಯೆ ಕೊರಳ್ದನಿಯನ್ನು ಹೊರಬಿಡುವ ಮೋಜು ; ಎಲ್ಲವೂ ಆಕರ್ಷಣೀಯವೇ. ಅವು ಕಣ್ಮರೆಯಾಗುವವರೆಗೂ ನೋಡಿತು ಉತ್ಸುಕನೋಟ. ಆಹಾ !

ಇನ್ನಷ್ಟು ಹೊತ್ತು ಅವು ಇಲ್ಲಿಲ್ಲೇ ಹಾರಾಡಿದರೂ ಲೇಸು ಎಂಬಷ್ಟು ಹಿತ ಕಣ್ಮನಗಳಿಗೆ.

ಮಹರ್ಷಿ ಹರ್ಷಚಿತ್ತನಾಗಿ ಪಯಣವನ್ನು ಮುಂದುವರಿಸಿದ. ಮುಖ ಮೈಗಳಲ್ಲಿ ಸ್ವೇದ ಬಿಂದುಗಳು ತುಂತುರು ತುಂತುರಾಗಿ ಮೂಡಿ ಧಾರೆಧಾರೆ ಯಾಗಿ ಹರಿದುವು. ವರ್ಧಮಾನಪುರಿಯ ಗಡಿಯನ್ನು ಸೇರಿದಾಗ ಕೋಗಿಲೆ ಕಾಜಾಣ, ಪಿಕಳಾರ, ಮಿಂಚುಳ್ಳಿ, ಜೇನ್ಕಕ್ಕಿ, ನವಿಲು, ಹಂಸೆ, ಗಿಳಿ ಮುಂತಾದ ಪಕ್ಷಿಗಳೂ ಮತ್ತು ಕಾಡುಪ್ರಾಣಿಗಳೂ ಪುರವನ್ನು ಬಿಟ್ಟು ಪಡು ವಣ ದಿಕ್ಕಿಗಭಿಮುಖವಾಗಿ ಹೊರಹೋಗುತಿದ್ದುದು ಕಂಡುಬಂತು. ಮಹರ್ಷಿ ಆಶ್ಚರ್ಯಚಕಿತನಾಗಿ ಅಲ್ಲಿಯೇ ಸ್ವಲ್ಪಹೊತ್ತು ನಿಂತು ನೋಡಿದ. ಹಾಗೆ ವಲಸೆ ಹೋಗುತ್ತಿರುವ ಪಶುಪಕ್ಷಿಗಳಿಗೆ ಕೊನೆಯೇ ಇಲ್ಲವೇನೋ ಎಂಬಂತೆ ಹಿಂಡುಹಿಂಡಾಗಿ ವಿವಿಧ ಮೃಗಗಳೂ ಪಕ್ಷಿಗಳೂ ಹೊರ ಹೋಗುತ್ತಲೇ ಇವೆ. ಪ್ರಾಯೇಣ, ಗಂಗಾನದಿಯ ತಟಾಕವನ್ನು ಕುರಿತೇ ಹೊರಟಿರಬಹುದು; ವರ್ಧಮಾನಪುರಿಯು ಕ್ಷಾಮಡಾಮರಗಳಿಂದ ಕಂಗೆಟ್ಟಿರುವ ಕಾರಣದಿಂದಲೇ ಈ ತೆರವು ಎಂಬ ಯೋಚನೆ ತಟ್ಟನೆ ಮೂಡಿ ಮಹರ್ಷಿಯ ತುಟಿಗಳಲ್ಲಿ ಊಹೆಗೂ ನಿಲುಕದ ಕಿರುನಗೆಯೊಂದು ಮಿನುಗಿ ಮಾಯವಾಯಿತು. ಏನೋ ಒಂದು ಬಗೆಯ ಭಾವವಿಭಾವಗಳ ತರ್ಕವಿತರ್ಕ ಭಾರದಿಂದಲೇ ನಗರ ದೊಳಗೆ ಪದಾರ್ಪಣೆ ಮಾಡಿದ. ಪುರಜನರು ರಾಜವೀಥಿಯ ಉದ್ದಕ್ಕೂ ಕಂಡು ಬಂದರು. ಆದರೆ, ಯಾರ ಮುಖದಲ್ಲೂ ಗೆಲುವು ಇದ್ದಂತಿರಲಿಲ್ಲ. ಅರಾಜಕತೆ ಯಿಂದ ಎಲ್ಲೆಡೆಯೂ ಅಸಡ್ಡೆ ಕಂಡು ಬರುತಿತ್ತು. ಮೈಯಲ್ಲಿ ಲವಲೇಶವೂ ಲವಲವಿಕೆಯಾಗಲೀ ಕಾರ್ಯಭಾರದ ಹುರುಪಾಗಲೀ ಇಲ್ಲವೇ ಇಲ್ಲ. ಅತುಲ ನೀಯವಾದ ವಿಲಕ್ಷಣ ಪ್ರವೃತ್ತಿ ಎಲ್ಲರಲ್ಲೂ ತಾಂಡವವಾಡುತ್ತಿದೆ. ಜಲ ಕ್ಷಾಮದಿಂದ ಗಿಡಮರಗಳೆಲ್ಲಾ ಒಣಗಿ ಬತ್ತಿಬಾಡಿ ಎಲ್ಲಿಯೂ ಹಸುರಿನ ಹೆಸರೇ ಇಲ್ಲ. ಗೋವೃಂದ ಎಲುಬು ಚಕ್ಕಳವಾಗಿ ಮೇವು ಅರಸುವುದನ್ನು ನೋಡಿದರೆ ಸಂಕಟವಾಗುವಂತಹ ದೃಶ್ಯ. ಮಹರ್ಷಿ ಅಲ್ಲಿನ ಸ್ಥಿತಿಗತಿಯನ್ನು ಗಮನಿಸುತ್ತಲೇ ಮುಂದುವರಿದ. ಊರೆಲ್ಲಾ ದಳ್ಳುರಿಯಲ್ಲಿ ಉರಿದುಹೋ ದಂತೆ ಕಾಣಿಸುತಿತ್ತು. ಹಾಗೇ ಮುಂದುವರಿದು ಅರಮನೆಯ ಹೆಬ್ಬಾಗಿಲನ್ನು

ಮುಟ್ಟಿ ಪ್ರಾಂಗಣಕ್ಕೆ ಕಾಲಿಟ್ಟಾಗ ಅಲ್ಲಿನ ಕೃಷ್ಣಸಾರ ಮುಂತಾದ ಮುದ್ದು ಮುದ್ದಾದ ಮಿಗಕುಲವಾಗಲೀ, ಗಿಳಿ ಕಾಮುಳ್ಳಿಗಳಾಗಲೀ, ಆನಂದೋನ್ಮತ್ತ ನವಿಲುಗಳ ಉಚ್ಛೃಂಖಲ ನೃತ್ಯವಾಗಲೀ ಕಂಡು ಬರಲಿಲ್ಲ.

ಸರ್ವತ್ರ ನಿರ್ಜನವಾದ ಪ್ರಾಂಗಣ. ಹಿಂದೆಲ್ಲಾ ಒಳಹೊರಗೆ ಓಡಾಡುವ ಸೇವಕವರ್ಗ, ಮಂತ್ರಿವರ್ಗ, ಪುರೋಹಿತವರ್ಗ, ಅಧಿಕಾರಿಗಳವರ್ಗ ಅಲ್ಲಿ ಸಂಘಟಿಸುತಿದ್ದು ಸದಾ ಜನಭರಿತವಾಗಿರುತಿತ್ತು. ಗಲಾಟೆ ಗದ್ದಲಗಳು ಕೇಳಿಸುತಿದ್ದುವು. ಈಗ ಯಾವುದೂ ಇಲ್ಲ. ಎಲ್ಲ ವ್ಯವಹಾರವೂ ಸ್ತಬ್ಧ. ಕೈಸಾಲೆಯ ನಗಾರಿಯನ್ನು ಮುಟ್ಟಯೇ ಇಲ್ಲವೇನೋ ಎಂಬಷ್ಟು ಧೂಳೀ ಧೂಸರಿತವಾಗಿದೆ. ಎಲ್ಲಿಂದ ಎಲ್ಲಿಯವರೆಗೂ ಅಖಂಡವಾದ ಶ್ರೀಹೀನತೆ, ಮೃತ್ಯುಮಾಧುರ್ಯದ ಚಿತ್ರವನ್ನು ಹೃದ್ದೇಶದಮೇಲೆ ತಾನೇ ತಾನಾಗಿ ಬರೆಯುವಂತೆ.

ಯಾಜ್ಞವಲ್ಕ್ಯ ಮಹರ್ಷಿ ಪ್ರಾಂಗಣವನ್ನು ದಾಟ ಕೈಸಾಲೆಯ ಮೆಟ್ಟಲು ಹತ್ತುತಿದ್ದಂತೆಯೇ ಎಲ್ಲಿಂದಲೋ ತಿರಸ್ಕಾರಪೂರ್ವಕವಾದ ನಗುವಿನ ಲಹರಿ ಕೇಳಿಬಂತು. ಮಹರ್ಷಿ ಅತ್ಯಾಶ್ಚರ್ಯದಿಂದ ಸದ್ದು ಕೇಳಿಬಂದೆಡೆಗೆ ತಲೆಯೆತ್ತಿ ನೋಡಿದ. ವ್ಯಕ್ತಿ ಎಲ್ಲೂ ಕಣ್ಗೊಳಿಸಲಿಲ್ಲ. ಆಶ್ಚರ್ಯವಿಸ್ತೃತ ನೋಟ ಪುನಃ ಪುನಃ ಸುತ್ತಮುತ್ತ ಹರಿದಾಡಿತು. ಆದರೆ, ಎಲ್ಲಿಯೂ ಯಾರೂ ಇಲ್ಲವೇ ಇಲ್ಲ. ಮರುಘಳಿಗೆಯಲ್ಲಿ ಪುನಃ ಅದೇ ನಗುವಿನ ಲಹರಿ ಎಲ್ಲಿಯೋ ಯಾವುದೋ ನೋಡದ ಅಲೆಯಲ್ಲಿ ತೇಲಿ ಬಂದಂತಾಯಿತು. ಪುನಃ ಯಾವ ಕಡೆ ನೋಡಿದರೂ ವ್ಯಕ್ತಿಯು ಕಣ್ಗೊಳಿಸುತ್ತಲೇ ಇಲ್ಲ. ಏನಿರಬಹುದೆಂಬ ಯೋಚನೆಯಲ್ಲಿ ಭಾವಗಂಭೀರವಾದ ಉದ್ಗಾರ ಹೊರಬಿತ್ತು–ಏನಾಶ್ಚರ್ಯ ? ಎಲ್ಲಿಯ ಧ್ವನಿ ?

ಆಗ ಅಶರೀರ ವಾಣಿಯೊಂದು ಕೇಳಿಬಂತು–ಮಂತ್ರೋದಕದಿಂದ ದೊರೆಯ ರೋಗ ಗುಣವಾಗಬಲ್ಲುದೇ ?

ಯಾಜ್ಞವಲ್ಕ್ಯ ಮಹರ್ಷಿ – ಹಾಗಾದರೆ ಮಂತ್ರೋದಕ ಸತ್ವಹೀನವೇ ?

ಅಶರೀರವಾಣಿ–ದೊರೆ ಭಾಗ್ಯಹೀನನೋ ಮಂತ್ರೋದಕ ಸತ್ವಹೀನವೋ ನೀನೇ ಪರೀಕ್ಷಿಸಿ ನೋಡು.

ಆಗ ಯಾಜ್ಞವಲ್ಕ್ಯ ಮಹರ್ಷಿಯು ಒಂದು ಕ್ಷಣ ಯೋಚಿಸಿ ಕಮಂಡಲುವಿನಿಂದ ಮಂತ್ರೋದಕವನ್ನು ತೆಗೆದು ಭಾವೋದ್ವೇಗದಿಂದ ಕೈಸಾಲೆಯ ಬೃಹದ್ ಸ್ತಂಭಗಳ ಮೇಲೆ ಎರಚಿ ಒಳಹೋಗುತ್ತಾನೆ. ಬಾಗಿಲಲ್ಲಿ ಕಾದಿದ್ದ ದೌವಾರಿಕನು ಮಹರ್ಷಿಯನ್ನು ಭಯಭಕ್ತಿಯಿಂದ ಎದುಗೊಂಡು ಮಹಾರಾಜನ ಶಯನಾಗಾರಕ್ಕೆ ಕರೆದೊಯ್ದು ತೋರಿದ. ಗಂಭೀರ ನಿಃಶ್ಯಬ್ದ ಆ ಕೊಠಡಿಯನ್ನೆಲ್ಲಾ ವ್ಯಾಪಕವಾಗಿ ಆವರಿಸಿ ಬಿಟ್ಟಿದೆ. ಹರವಾದ ಪಲ್ಲಂಕದ ಮೇಲೆ ಜೀವಚ್ಛವದಂತೆ ಬಳಲಿ ಮಲಗಿದ್ದಾನೆ ಮಹಾರಾಜ. ಗುಳಿಬಿದ್ದ ಕಣ್ಣುಗಳಲ್ಲಿ ತುಳುಕುವಂತಿತ್ತು ಅಸಹನೀಯವಾದ ಜೀವಯಾತನೆ. ಎಲುಬಿನ ಹಂದರದಲ್ಲಿ ಅತೀವ ಸಂಕಷ್ಟದಿಂದ ಉಸಿರಾಡುವ ಜೀವವನ್ನು ನೋಡಿದರೆ ಬದುಕುಳಿವ ಲಕ್ಷಣವೇ ತೋರುತ್ತಿಲ್ಲ. ಮಹರಾಜನನ್ನು ಆ ಸ್ಥಿತಿಯಲ್ಲಿ ನೋಡಿ ಕರುಳ ಕರುಣೆಯ ಕಟ್ಟೆ ಒಡೆದು ಹೋಯಿತು ಮಹರ್ಷಿಗೆ. ಕಮಂಡಲುವಿನ ಮಂತ್ರೋದಕವನ್ನು ಆಶೀರ್ವಚನಪೂರ್ವಕವಾಗಿ ನೃಪಮೇಲೆ ಸಂಪ್ರೋಕ್ಷಿಸಿ ಬಾಯಿಗಿಷ್ಟು ಸುರಿದು ಹೊರಬರುವಾಗ 'ಇಂದು ನನ್ನ ಪರೀಕ್ಷೆಯೂ ಆಗಲಿದೆ' ಎಂಬ ಯೋಚನೆ ತಾನಾಗಿ ಉದ್ಭವಿಸಿತು. ಒಂದೇ ಬಾರಿಗೆ ಅಶರೀರವಾಣಿಯ ಪ್ರಶ್ನೆಯೂ ಅರಸನ ಸ್ಥಿತಿಗತಿಯೂ ತಲೆಯನ್ನು ತುಂಬಿಕೊಂಡುವು. ಮಹರ್ಷಿಯು ವಿಚಾರತತ್ಪರನಾಗಿ ಅರಮನೆಯ ಒಳಗೃಹವನ್ನು ದಾಟ ಕೈಸಾಲೆಗೆ ಬಂದಾಗ ನೋಟ ಸಹಜವಾಗಿ ಬೃಹತ್ ಸ್ತಂಭಗಳ ಕಡೆ ಹರಿಯಿತು. ನೋಡಿದರೆ, ಅವು ಹಸುರು ಹಸುರಾಗಿ ಚಿಗುರಿ ನಳನಳಿಸುತ್ತಿವೆ !

ಅಹಾ, ಮಂತ್ರೋದಕದಿಂದ ಎಂತಹ ಮಹತ್ತರವಾದ ಪರಿಣಾಮ ? ಈ ಸ್ತಂಭಗಳು ಎಷ್ಟೆಷ್ಟು ಕಾಲದಿಂದ ಕೈಸಾಲೆಯ ಮಾಡಿಗೆ ಆಧಾರವಾಗಿ ನಿಂತಿವೆಯೋ ಏನೋ. ಹೀಗೆ ಇಷ್ಟು ಒಣಗಿ ಗರಿಗರಿಯಾದ ಮರಗಳೇ ಹಚ್ಚಗೆ ಚಿಗುರಿರುವಾಗ ನತದೃಷ್ಟ ದೊರೆಯ ಮೇಲೆ ಯಾವ ಪರಿಣಾಮವೂ ಆಗಲಿಲ್ಲವೆಂದರೆ ಅದು ಜನ್ಮಯೋಗವೇ ಸರಿ........

ಆ ಯೋಚನೆ ಬಂದಾಗ ಯಾಜ್ಞವಲ್ಕ್ಯ ಮಹರ್ಷಿಯು ಅಲ್ಲಿಂದ ಆಕ್ಷಣವೇ ಹೊರಟುಬಿಡುತ್ತಾನೆ. ಮನದಲ್ಲಿ ತರ್ಕವಿತರ್ಕಗಳು ಹೆಡೆಯೆತ್ತಿದುವು, ಆತ್ಮಶೋಧದ ಹುರುಪು ಮೂಡಿಸುವಂತೆ.

........ಈ ಪ್ರಪಂಚದಲ್ಲಿ ನಮಗೆ ಲಭ್ಯವಾಗುವ ಪ್ರಿಯವಸ್ತುಗಳು ಹುಟ್ಟು ಭಯಾನಕ. ಪ್ರವೃತ್ತಿಮಾರ್ಗವು ಹೀಗೆಯೆ. ಅಧಿಕಾರ ಎಂದು ಕೈಬಿಡುವುದೋ, ಜರೆ ಯಾವಾಗ ಆವರಿಸುವುದೋ, ದೇಹದಾರ್ಢ್ಯತೆ ಯಾವಾಗ ಕಳೆದುಹೋಗುವುದೋ, ರೋಗಬಾಧೆ ಯಾವಾಗ ಅಂಟುವುದೋ ತಿಳಿಯುವುದು ಕಷ್ಟ. ಯೌವನ-ಸೌಂದರ್ಯ ಕೆಲವು ವರ್ಷಗಳಲ್ಲೇ ನಶಿಸಿಹೋಗುವುದು. ಅನಂತರ ದೇಹವೂ ಬಿದ್ದುಹೋಗುವುದು. ಕೀರ್ತಿಯ ಹಿಂದೆ-ಅಪಕೀರ್ತಿ, ಆರೋಗ್ಯದ ಹಿಂದೆ ರೋಗ ಯಾವಾಗಲೂ ಬಾಧಿಸುತ್ತಿರುವುವು. ಆದಕಾರಣವೇ ಜೀವನದಲ್ಲಿ ಭಯ-ಭೀತಿ ಅಂಟಿರುತ್ತದೆ. ವೈರಾಗ್ಯದಲ್ಲಿ ಯಾವ ಭಯದ ಗೋಜೂ ಇಲ್ಲ. ವಿರಾಗಿ ಯಾವುದಕ್ಕೂ ಅಂಟಿಕೊಳ್ಳಲಾರ. ಅವನಿಗೆ ಸುಖ-ದುಃಖಗಳೆಲ್ಲ ಒಂದೇ. ಹಿಗ್ಗು-ಕುಗ್ಗುಗಳನ್ನು ಅರಿಯ. ಮದ-ಮಾತ್ಸರ್ಯಗಳು ಹತ್ತಿರ ಸುಳಿಯವು. ಜರಾ-ಮೃತ್ಯುಗಳು ಬಾಧಿಸಲಾರವು. ಪ್ರಾಪಂಚಿಕವಾದ ಸುಖ-ಸಂಪತ್ತೆಲ್ಲಾ ನೀರಿನ ಗುಳ್ಳೆಯಂತೆ. ಕಣ್ಣಿಗೆ ಆನಂದ, ಕೈಯಿಂದ ಮುಟ್ಟಿದರೆ ಒಡೆದು ಹೋಗುತ್ತದೆ. ಅದರ ನುಣ್ಣನೆಯ ಶೋಭೆಗೆ ಮರುಳಾಗಿ ಬಯಸಿ ಆಶಿಸಿ ಮುಟ್ಟಹೋಗಿ ಕ್ಷಣಿಕಾನಂದದ ಬಳಿಕ ಅಪಾರವಾದ ದುಃಖವನ್ನು ಅನುಭವಿಸುವುದು ಮಾನವ ಗುಣ. ಅದೇ ಜರಾಮೃತ್ಯು. ಅದೇ ಭಯ. ಅದೇ ಮರಣ ಸಂಕಟ. ಅದೇ ಮೋಹಕವಾದ ಮಿಥ್ಯೆ. ಅದಕ್ಕಾಗಿ ಎಷ್ಟಾದರೂ ಕಷ್ಟಪಟ್ಟು, ಏನನ್ನಾದರೂ ತ್ಯಾಗಮಾಡಿ ಅನುಭವಿಸಲು ಸಿದ್ಧರಾಗಿರುತ್ತಾರೆ ಜನ. ಇದನ್ನು ಯಾರು ಕಲಿಸಬಲ್ಲರೋ ಯಾರು ತಿಳಿಸಿಕೊಡಬಲ್ಲರೋ ಅವರೇ ಗುರುಗಳು. ಭೋಗಭಾಗ್ಯವನ್ನು ಪಡೆಯುವ ಬಗೆಯೇ ವಿದ್ಯೆ. ಪರಿಸ್ಥಿತಿ ಹೀಗಿರುವಾಗ ಯಾರುತಾನೇ ಏನು ಮಾಡಬಲ್ಲರು ? ಜನ್ಮಯೋಗದೊಂದಿಗೆ ಕರ್ಮವಿಪಾಕವೂ ಮಹಾರಾಜನಲ್ಲಿ ಮೈಗೂಡಿಕೊಂಡಿದೆ. ಇನ್ನು ಮಂತ್ರೋದಕದಿಂದ ಆಗುವುದೇನೂ

ಉಳಿದಿಲ್ಲ: ಪರಮಾತ್ಮನೆಡೆಗೆ ಕರೆದುಕೊಂಡು ಹೋಗುವುದರಲ್ಲೇ ಶ್ರದ್ಧೆ-ವಿಶ್ವಾಸಗಳು ಬೆಳೆಯಬೇಕು.

ಯಾರೇ ಆಗಲೀ, ಬರೀ ಪಾಪಾತ್ಮರಲ್ಲ, ಅಜ್ಞಾನಿಗಳಲ್ಲ. ಪರಮಾತ್ಮನಿಂದ ಬಂದ ಅಂಶಗಳು ಎಂದೆಂದೂ ಪವಿತ್ರಾಂಶಗಳೇ. ಅಗ್ನಿಯಿಂದ ಸಿಡಿದ ಕಿಡಿಗಳು ಅಗ್ನಿಯು ಹೇಗೋ ಹಾಗೆ. ಆದ್ದರಿಂದ ಪರಮಾತ್ಮನ ಅಂಶವಾದ ಜೀವಾತ್ಮನು ಎಂದೂ ದೇವತ್ವಕ್ಕೆ-ಸತ್ಯಕ್ಕೆ ದೂರನಲ್ಲ. ಮುಖ್ಯವಾಗಿ ಜೀವನ ಮಾರ್ಗ ಯೋಗದಲ್ಲಿ ಪಂಜು ಹಿಡಿಯುವುದರಲ್ಲೇ ಶ್ರದ್ಧೆ ತೋರಬೇಕು.

ಜೀವರಾಶಿಗಳು ಜೀವನ ಬದ್ಧರಾಗಿ ಒಂದೊಂದು ಕಡೆಯಲ್ಲಿ ಒಂದೊಂದು ರೀತಿಯಲ್ಲಿ ಹುಟ್ಟಿ ಬೇರೆಬೇರೆ ದೇಹಗಳಲ್ಲಿ ಲೋಕಾನುಭವ ಹೊಂದಿ ತಮ್ಮತಮ್ಮ ಕೊಳೆಯನ್ನು ತೊಳೆದುಕೊಂಡು ಪುಣ್ಯಾತ್ಮರಾಗಿ ಸೃಷ್ಟಿಶಕ್ತಿಯ ಮಹಾಯಂತ್ರದಿಂದ ಮುಕ್ತರಾಗುವರು. ಇಲ್ಲಿ ಪ್ರತಿಯೊಂದು ಕಣವೂ ಭಗವನ್ ಬ್ರಹ್ಮನ ಅಧೀನ. ಯಾವ ಅಣುತೃಣವೂ ಅವನ ಇಚ್ಛೆಯಿಲ್ಲದೆ ಅಲುಗದು. ಭಗವನ್ ಬ್ರಹ್ಮನೇ ಈ ಬೃಹತ್ ಸೃಷ್ಟಿಯ ಯಂತ್ರ. ಪ್ರತಿಯೊಂದು ವಸ್ತುವಸ್ತುವೂ ಅವನಿಂದ ನಡೆಸಲ್ಪಡುತ್ತದೆ. ಉಷಃಕಾಲದಲ್ಲಿ ಅರಳಿ ಸಾಯಂಕಾಲದಲ್ಲಿ ಬಾಡಿಹೋಗುವ ಹೂಗಳು ಅವನ ಸ್ಮಾರಕ. ಭವ್ಯ ಸೃಷ್ಟಿಯ ಪ್ರತಿಯೊಂದು ಕಣಕಣವೂ ಅವನ ಸ್ಮಾರಕವೇ. ಮೇಲಾಗಿ, ಬುದ್ಧಿಶಕ್ತಿಯಲ್ಲಿ ಸರ್ವಶ್ರೇಷ್ಠವಾದ ಚೈತನ್ಯಮಣಿಯಂತೆ ಮೈವೆತ್ತಿರುವ ಮಾನವ ಸೃಷ್ಟಿಕರ್ತನಿಗೆ ಅದ್ಭುತ ಸ್ಮಾರಕ. ಇವನಿಗೆ ಏನೆಲ್ಲ ಸಾಹಸ ಪ್ರವೃತ್ತಿಯುಂಟು ? ಏನೆಲ್ಲ ಮಾಡಬಲ್ಲ ? ಏನೆಲ್ಲ ಸಾಧಿಸಬಲ್ಲ ? ಏನೆಲ್ಲ ಅರಿಯಬಲ್ಲ ? ಆ ಸೃಷ್ಟಿಕರ್ತನನ್ನು ತಿಳಿಯಬೇಕಾದರೆ ಅಥವಾ ಅವನ ಸಮೀಪಕ್ಕೆ ಸರಿಯಬೇಕಾದರೆ ಇವನೊಬ್ಬನೇ. ಅಂತಲೇ, ಸೃಷ್ಟಿಕರ್ತ ತನ್ನ ಸೃಷ್ಟಿಗೆ ಮನಸೋತಂತೆ ಇವನಲ್ಲಿ ನಲ್ಮೆಯನ್ನು ತೋರುತ್ತಾನೆ; ತನ್ನ ಕೃತಿಗೆ ತಾನೇ ಸೋಲುವ ಕಲೆಗಾರನಂತೆ. ಏಕೆಂದರೆ ಜೀವಸೃಷ್ಟಿಯಲ್ಲಿ ಇವನಿಗಿಂತ ಹೆಚ್ಚಳವಾದ ಪ್ರಾಣಿಯಿಲ್ಲ. ಈ ಮಾನವ ಪ್ರಾಣಿಯೇ ಅವನ ಬುದ್ಧಿಶಕ್ತಿಯ ಪರಾಕಾಷ್ಠೆ.

ಜೀವಿಯು ವಾಸಿಸುವುದು ಭವ್ಯವಾದ ಬ್ರಹ್ಮಪುರದಲ್ಲಿ. ಬ್ರಹ್ಮನು ವಿಹರಿಸುವುದು ಜೀವಿಯ ಹೃದ್ದೇಶದಲ್ಲಿ. ದೇಹ ಎಂಬುದು ದೇವಾಲಯ. ಬ್ರಹ್ಮನೇ ಈ ದೇವಾಲಯುದ ದೇವರು. ಬುದ್ಧಿಶಕ್ತಿಯ ನಿರೂಪಣೆಯಲ್ಲಿ ಕಾರ್ಯಶಕ್ತಿಯ ನಿರೂಪಣೆಯಲ್ಲಿ-ಅವನದೇ ಕೈವಾಡ. ಯಾರು ಜಾಗೃತ ಜೀವಿಗಳೋ, ಯಾರ್ಯಾರು ಧಾರ್ಮಿಕಸ್ವರೂಪರೋ ಅವರು ಅವನನ್ನು ನಿಚ್ಚಳವಾಗಿ ತಮ್ಮ ಅಂತರಾಳದಲ್ಲೇ ನೋಡುತ್ತಾರೆ. ಇದು ಖಂಡಿತ........

ಚಿಂತನೆಯ ಚಕ್ರ ಸುಳಿ ಸುತ್ತುತ್ತಲೇ ಇತ್ತು. ಹಾದಿಯು ಸಾಗಿ ದುದರ ಪರಿವೆಯೂ ಸಹ ಮೂಡಲಿಲ್ಲ. ದೃಷ್ಟಿಯ ನೇರಕ್ಕೆ ದೂರದ ತಿರುವಿನಲ್ಲಿ ಉದಂಕ ಎದುರಾಗಿ ಬಂದಾಗ ಮನಸ್ಸು ಬಾಹ್ಯ ಪ್ರಪಂಚಕ್ಕೆ ಸರಿಯಿತು.

ಉದಂಕ ಎರಡು ಕೈಗಳನ್ನೂ ಜೋಡಿಸಿ-ನಮಸ್ತೇ ಭಗವನ್

ಯಾಜ್ಞವಲ್ಕ್ಯ ಮಹರ್ಷಿ-ನಮಸ್ತೇಸ್ತು.

ಉದಂಕ-ಯಾವ ಕಡೆಯಿಂದ ತಮ್ಮ ಪಯಣವಿತ್ತು?

ಯಾಜ್ಞವಲ್ಕ್ಯ ಮಹರ್ಷಿ-ವರ್ಧಮಾನ ಪುರಿಯಿಂದ.

ಉದಂಕ- ಓಹೋ! ಇಂದು ತಮ್ಮ ಸರದಿಯೋ? ಹಾಗಾದರೆ ಅದರಿಂದ ಏನಾದರೂ ಪ್ರಯೋಜನವಾಯಿತೇ ?

ಯಾಜ್ಞವಲ್ಕ್ಯ ಮಹರ್ಷಿ ನಗುಮುಖದಿಂದ-ಪ್ರಯೋಜನವಾದುದು ಕೈಸಾಲೆಯ ಸ್ತಂಭಗಳಿಗೆ.

ಉದಂಕ ಪ್ರತಿನಗುವನ್ನು ಸೂಸಿ-ಸ್ತಂಭಗಳಿಗೆ ಪ್ರಯೋಜನವುಂಟು ಮಾಡುವಂತಹ ಕಾರಣವೇನೆಂದು ತಿಳಿಯಬಹುದೇ?

ಆಗ ಯಾಜ್ಞವಲ್ಕ್ಯ ಮಹರ್ಷಿಯು ಪ್ರಸಂಗೋಚಿತವಾಗಿ ನಡೆದ ವಿಷಯುವನ್ನೆಲ್ಲಾ ತಿಳಿಸಿದನಂತರ ದೃಢ ಕಂಠದಿಂದ ನೋಡು ಉದಂಕ,

ವಾಸ್ತವಿಕ ಪರಿಸ್ಥಿತಿ ಹೀಗಿರುವಾಗ ನಮ್ಮ ಅರಸನ ಮೇಲೆ ಯಾವ ಪರಿಣಾಮವೂ ಆಗಲಿಲ್ಲವೆಂದರೆ ಅದು ಪ್ರಾರಬ್ಧಕರ್ಮವಲ್ಲದೆ ಬೇರೇನೂ ಅಲ್ಲ. ಅವನು ಇನ್ನೂ ಕೆಲವು ಕಾಲ ಹೀಗೇ ನರಳಲಿದ್ದಾನೆ. ಬೇರೆ ಗತಿಯಿಲ್ಲ. ವೈಶಂಪಾಯನ ಮಹರ್ಷಿಗಳ ಪ್ರಯತ್ನ–ಆಕಾಂಕ್ಷೆ–ಕರುಣೆ ಎಲ್ಲವೂ ಇನ್ನು ವ್ಯರ್ಥವೇ ಸರಿ.

ಉದಂಕ–ವೈಶಂಪಾಯನ ಮಹರ್ಷಿಗಳಿಗೆ ಇದು ವ್ಯರ್ಥ ಸಾಹಸವೆಂಬುದು ಗೊತ್ತು. ಆದರೂ, ಅವರ ಅಭಿಪ್ರಾಯವೇ ಬೇರೆ. ಯಾರ ಮಾತನ್ನೂ ಕೇಳುವವರಲ್ಲ.

ಯಾಜ್ಞವಲ್ಕ್ಯ ಮಹರ್ಷಿ–ಅವರು ಅನೇಕ ಕಷ್ಟಜೀವಿಗಳಿಗೆ ದಯಾದಾನ ಮಾಡಿ ಕೃತಾರ್ಥರಾದವರು. ಅಂತಲೇ........

ಉದಂಕ– ಅವರು ಆತ್ಮಜ್ಞರಾದರೂ ಸಲಸಲಕ್ಕೂ ಸೋಲುತ್ತಿರುವುದೇ ವಿಶೇಷ.

ಯಾಜ್ಞವಲ್ಕ್ಯ ಮಹರ್ಷಿಯು ಆತ್ಮವಿಸ್ಮೃತಾವಸ್ಥೆಯಲ್ಲಿ ಸ್ವಲ್ಪ ಹೊತ್ತು ತನ್ನೊಳಗೇ ಯೋಚಿಸುತ್ತಿದ್ದು ಅನಂತರ–ಅವರ ಸಾಧನೆ ಮತ್ತು ಸಹನೆ ಎರಡೂ ದೊಡ್ಡವು. ಆದ್ದರಿಂದಲೇ ನಾನು ವಿರೋಧಿಸದೆ ಮಂತ್ರೋದಕವನ್ನು ತೆಗೆದುಕೊಂಡು ಹೋದೆ. ನನ್ನ ಪ್ರಯತ್ನವೂ ಸಹ ವ್ಯರ್ಥವೇ.

ಉದಂಕ– ಹೋಗಲಿ ಬಿಡು, ನಡೆದಷ್ಟು ಕಾಲ ನಡೆಯಲಿ. ಅಲ್ಲಿಗೆ ನಿನ್ನ ಕಿಂಚಿತ್ ಸೇವೆಯೂ ಸಂದಂತಾಯಿತು ಕೂಡ.

ಯಾಜ್ಞವಲ್ಕ್ಯ ಮಹರ್ಷಿ – ಅದು ಒಂದು ರೀತಿಯಾದರೂ ಇನ್ನೊಂದು ರೀತಿಯಲ್ಲಿ ಹೇಳುವುದಾದರೆ ಬ್ರಹ್ಮಸಂಕಲ್ಪಾರ್ಥ ಕರ್ಮವನ್ನು ಕೈಕೊಂಡಲ್ಲಿ ಆತ್ಮನು ಕರ್ಮಬಂಧಕ್ಕೆ ಒಳಗಾಗದೆ ಸಮತ್ವ ಪಡೆಯುವನು. ಬುದ್ಧಿಯೋಗವೆಂದರೆ ಕರ್ಮಸನ್ಯಾಸವಲ್ಲ. ಕರ್ಮವಿನ್ಯಾಸ. ಪರಿಚ್ಛಿನ್ನವಾದ ಜೀವನಜ್ಞಾನವನ್ನು ಪಡೆಯುವುದೇ ಗುರಿಯತ್ತ ಸಾಗುವಿಕೆ. ಆದ್ದರಿಂದ

ಮರಳಿಮರಳಿ ಯತ್ನವನ್ನು ಮಾಡುವುದು ಸೂಕ್ತ; ಆದರಲ್ಲಿ ತಪ್ಪೇನೂ ಇಲ್ಲ. ಆದರೂ, ಇದು ವ್ಯರ್ಥವೆಂಬುದು ಬದ್ಧ.

ಉದಂಕ– ಸರಿ, ಸರಿ. ಮಹರ್ಷಿಗಳು ಪೂರ್ವಾರ್ಧ ವಿಚಾರದಿಂದ ಉತ್ತರಾರ್ಧ ವಿಚಾರಕ್ಕೆ ಇನ್ನೂ ಬಂದಿಲ್ಲ.

ಯಾಜ್ಞವಲ್ಕ್ಯ ಮಹರ್ಷಿ– ಇನ್ನೂ ಕೇಳು! ತಿಳಿದಿರಲಿ, ತಿಳಿಯದಿರಲಿ; ಎಲ್ಲರ ನಡೆ ಪೂರ್ಣದೆಡೆಗೆ. ಮನಃಬುದ್ಧಿಗಳು ಕಾಲದೇಶಗಳಿಗೆ ಒಳಪಟ್ಟಿರುವುದರಿಂದ ಭಾವನೆ ಸಾಂತ. ಬುದ್ಧಿ ಎಷ್ಟು ತಿಳಿಯಲು ಸಾಧ್ಯವೋ ಅಷ್ಟನ್ನು ಮಾತ್ರ ಕಾಲಕಲನಾತೀತವಾಗಿ ಹಂಚಬಲ್ಲುದು. ಅಂದರೆ ತಿಳಿವಳಿಕೆ ಸೀಮಿತವಾದರೆ ಪ್ರಾಕೃತಿಕ ವಿಷಯವೇನೂ ಸೀಮಿತವಲ್ಲ. ಅಲ್ಪವನ್ನು ದಾಟಿ ಕಲ್ಪನನ್ನು ಕಡೆದಾಗ ಪೂರ್ಣತ್ವ ಕೈಗೂಡುವುದು ಎಂದರೆ ಯಾರಾದರೂ ಒಪ್ಪಿಕೊಳ್ಳಲೇಬೇಕು. ಅನಂತರ ದ್ವೈವಾಯತ್ತವಾದ ನಿರ್ಣಯ.

ಉದಂಕ–ಹೌದು, ಅಕ್ಷರಶಃ ಸತ್ಯ. ಆತ್ಮನ ಪ್ರೀತ್ಯರ್ಥವಾಗಿ ಒಪ್ಪಿಕೊಳ್ಳುವೆ. ನಿನ್ನ ವಿಚಾರಧಾರೆ ಸರ್ವಶ್ರೇಷ್ಠವಾದುದು. ಗುಣಕ್ಕೆ ಎಂದೂ ಮಾತ್ಸರ್ಯವಿಲ್ಲ. ನೀನು ದಿನೇ ದಿನೇ ಉತ್ತುಂಗಕ್ಕೇರುತಿದ್ದಿ. ಅಂತಲೇ ನಿನ್ನನ್ನು ಗುರುಗಳು ಕರೆಸಿಕೊಂಡು ಮಂತ್ರೋದಕವನ್ನು ನಿನ್ನ ಮೂಲಕ ಕಳುಹಿಸಿಕೊಟ್ಟಿದ್ದಾರೆ. ಇದೇ ಸಾಕು ಉದಾಹರಣೆಗೆ.

ಯಾಜ್ಞವಲ್ಕ್ಯ ಮಹರ್ಷಿ– ಅದನ್ನು ವಿಶೇಷ ಎನ್ನುವುದು ಹೇಗೆ? ಎಲ್ಲರನ್ನೂ ಕರೆದಹಾಗೆಯೇ ನನ್ನನ್ನೂ ಕರೆದಿದ್ದಾರೆ ಎನ್ನಬಹುದಷ್ಟೆ?

ಉದಂಕ–ಅದೇನೇ ಇರಲಿ, ನೀನಂತೂ ವೇದಪುರುಷನಾಗುವುದರಲ್ಲಿ ಏನೇನೂ ಸಂಶಯವಿಲ್ಲ.

ಯಾಜ್ಞವಲ್ಕ್ಯ ಮಹರ್ಷಿ–ಸಾಧನೆ ನನ್ನದು, ಚಿತ್ತ ಪರಬ್ರಹ್ಮನದು.

ಉದಂಕ– ಎಲ್ಲಿ ಮಹತ್ತರ ಸಾಧನೆಯಿದೆಯೋ ಅಲ್ಲಿ ಸಂಪೂರ್ಣ ಸಫಲತೆ ಇರಲೇಬೇಕು.

ಯಾಜ್ಞವಲ್ಕ್ಯ ಮಹರ್ಷಿ – ಈಗಲೇ ಅಷ್ಟೊಂದು ದೂರ ಹೋಗುವು ದೇಕೆ ? ಯಾರಿಗೂ ಆತುರ ಸಲ್ಲ.

ಉದಂಕ–ಸಾಧನಾಪೂರ್ವಕವಾದ ಉತ್ಸಾಹವನ್ನು ಎಲ್ಲಿ ಅಡಗಿಸಿಡ ಲಾದೀತು ?

ಯಾಜ್ಞವಲ್ಕ್ಯ ಮಹರ್ಷಿ–ಇನ್ನೂ ಕಾಲ ಪಕ್ವವಾಗಲಿಲ್ಲ, ಸ್ವಲ್ಪ ತಾಳು.

ಉದಂಕ–ಅಷ್ಟೇಕೆ ಸಂಕೋಚಪ್ರವೃತ್ತಿ ? ನನಗೊತ್ತು, ನಿನ್ನ ಬುದ್ಧಿ ಬಲು ಸೂಕ್ಷ್ಮ. ವಿಚಾರಧಾರೆ ಅತ್ಯಂತ ಎತ್ತರ. ನೀನು ಉಪ ನಿಷತ್ಕಾರಕನಾಗಿ ಆಚಂದ್ರಾರ್ಕವಾದ ಕೀರ್ತಿಯನ್ನು ಪಡೆಯುವುದರಲ್ಲಿ ಯಾವ ಸಂಶಯವೂ ಇಲ್ಲ. ನಿನಗೆ ಈಗಲೇ ಶುಭವನ್ನು ಕೋರುವುದರಲ್ಲಿ ನನಗೆ ಹಾರ್ದಿಕ ವಿಶ್ವಾಸವಿದೆ.

ಯಾಜ್ಞವಲ್ಕ್ಯ ಮಹರ್ಷಿ – ನಿನ್ನ ಹಾರೈಕೆಗೆ ನಿನ್ನ ಉದಾತ್ತ ಮನೋಭಾವನೆಗೆ ನಮಸ್ಕಾರವು.

ಉದಂಕ–ಬ್ರಹ್ಮವಿದನಿಗೆ ನಮಸ್ಕಾರವು.

ಉಚ್ಛ್ವಾಸ ೪

○

ದೂರದೂರ ಗಗನದ ನೀಲಪಟಲದ ಮೇಲೆ ವಜ್ರದ ವೈಖರಿಯಲ್ಲಿ ಜಗಜಗಿಸುವ ಮೃಗಶಿರರಾಶಿ. ಅಲ್ಲಲ್ಲಿ ಕಂಡೂ ಕಾಣದಂತಹ ನಾನಾ ವರ್ಗೀಯ ಲಕ್ಷ ಲಕ್ಷ ಲಕ್ಷ ಲಕ್ಷ ನಕ್ಷತ್ರೇಕ್ಷುಗಳು. ಪಡುದೇಶದ ಸೀಮಾ ಕ್ಷೇತ್ರದಲ್ಲಿ ವಿಂಧ್ಯಪರ್ವತದ ಶಿಖರದ ಮೇಲೆ ಹಿರಣ್ಮಯನಾದ ಅಸ್ತಮಾನ ಸೂರ್ಯನ ಮೋಹನೀಯ ಪ್ರತಿಷ್ಠಾನ! ಹೆಮ್ಮೋಡಗಳಿಗೆ ರಂಗುರಂಗಿನ ಬಣ್ಣವನ್ನು ಬಳಿದು, ಗಗನದಂಚಿನಿಂದ ಭೂಮಿಯುವರೆಗೂ ಹರಿದ ಹೊಂಗಾಂತಿಯಲ್ಲಿ ಹರವಾಗಿ ಮಿಂದು, ಹೊನ್ಮಯವಾದ ವನಭೂಮಿಯಲ್ಲಿ ಸರ್ವಾಂತರತರವೆಲ್ಲವೂ ತುಂಬಿ ಘಮಘಮಿಸುತ್ತಿದೆ, ಕೇತಕೀ ಪುಷ್ಪಗಂಧ. ಇವುಗಳ ಮಧ್ಯೆ ಮಧುರ ಮಾಲತೀದಾಮದಿಂದ ಅಲಂಕೃತವಾದ ಸುಂದರ ಕೈಸಾಲೆ. ಈ ಎಲ್ಲವೂ ಯಾವುದೋ ವಿಶಿಷ್ಟ ಸಂದರ್ಭಕ್ಕಾಗಿ ಅಲಂಕರಿಸಿ ಹೊಂದಿಸಿದಂತಿದ್ದ ಶೋಭಾಶೈಲಿಯಲ್ಲಿ ಅನುಭೂತವಾದ ಸಾಯಂ ಸಮಯ.

ಆಶ್ರಮದ ಪ್ರಾಂಗಣದಂಚಿನಲ್ಲಿದ್ದ ಅರಳೀವೃಕ್ಷದ ತಣ್ಣೆರಳಲ್ಲಿ ಕೃಷ್ಣ

ಶಿಲೆಯ ಮೇಲೆ ವ್ಯಾಘ್ರಚರ್ಮದ ಹಾಸು. ಹೊಂಬಿಸಿಲ್ಗೋಲುಗಳು ನೆರಳಿನ ನೆಲೆಯಲ್ಲಿ ಉಂಗುರುಂಗುರವಾಗಿ ಬೆಳಕಿನ ಮುದ್ರೆಯೊತ್ತಿವೆ. ಅಲ್ಲಲ್ಲಿ ಸುತ್ತಲೂ ಉದುರಿಬಿದ್ದಿದ್ದ ವರ್ತುಲಾಕಾರವಾದ ಅರಳಿಯ ಹಣ್ಣೆಲೆಗಳ ಸರ್ವಾಂಗೀಣ ಚಿತ್ರಾತ್ತರದ ವೈಖರಿ. ನೆಲೆಮನೆಯ ಮಾಡಿನ ಮೇಲೆ ಸುರುಳಿ ಸುರುಳಿಯಾಗಿ ಮೇಲೇರುತ್ತಿದೆ, ಧಾರಾಕಾರವಾದ ಧೂಮ ಮಾಲೆ. ಹೂತೋಟ್ಟು ಕಳೆದರೂ ಕೇಳಿಸುವಂತಹ ಸದ್ದಿಲ್ಲದ ಮಹಾ ಶಾಂತಿಯ ಶ್ರೀಮಂತ ಕಾಂತಿ. ಪ್ರಾಯಶಃ....ಹೀಗೆ, ನಾನಾ ದಿಕ್ಕು ಗಳಿಂದ ತರಂಗಿತವಾಗುವ ನಾನಾ ಸೌಂದರ್ಯ ಭಾವಲಹರಿಗಳು ಮಹರ್ಷಿಯ ಚಿತ್ತವನ್ನು ಕರುಣರಸದಿಂದ ತುಂಬಿ ಆಪ್ಲಾವಿತಗೊಳಿಸಿದುವೋ ಏನೋ, ಕೈಸಾಲೆಯಿಂದ ಹೊರಬಂದು ಅಶ್ವತ್ಥವೃಕ್ಷದ ಬುಡದಲ್ಲಿ ಹೆಗ್ಗಲ್ಲಿನಮೇಲೆ ಮಂಡಿಸಿದ. ಸಮ್ಯಕ್‌ದೃಷ್ಟಿ ಒಂದೆರಡು ಕ್ಷಣಗಳು ಅತ್ತಿತ್ತ ಸುಳಿದಾಡಿ ಸೀಮಾಕ್ಷೇತ್ರದಲ್ಲಿ ನೆಟ್ಟಿತು. ಮನಃಪ್ರಾಣಗಳೂ ಅತ್ತತ್ತಲೇ ಆಕರ್ಷಿತ ವಾದುವು; ಓ, ದಿನನಾಥ ! ಅಖಿಲ ಭುವನಮಂಡಲದ ಭಾವಶಾಂತಿಗೆ ನಿನ್ನ ಅಸ್ತಮಾನವೇ ಅವಿಸಂವಾದಿಯಾದ ಸಾಕ್ಷಿ ! ಲೋಕದಿಂದ ಲೋಕಾಂತ ರಕ್ಕೆ, ಕಾಲದಿಂದ ಕಾಲಾಂತರಕ್ಕೆ, ದಿಗಂತರದಿಂದ ದಿಗಂತರಕ್ಕೆ, ಜನ್ಮಾಂತರ ದಿಂದ ಜನ್ಮಾಂತರಕ್ಕೆ ನನ್ನ ಆಂತರಂಗಿಕ ಜೀವನ ಸಂದೇಶವನ್ನು ಮುಟ್ಟಿಸು. ಅದು ಎಂದೆಂದಿಗೂ ಜನಮನದಲ್ಲಿ ನೆಲೆನಿಂತು ಭಾರತವರ್ಷ ಪುನೀತವಾಗಲಿ ಪಾವನವಾಗಲಿ........

ಇನ್ನು ಇನ್ನೂ ಚಿಂತನೆಯ ಆಳದಲ್ಲಿ ಮುಳುಗುವ ಮುನ್ನವೇ ವನ ವೀಥಿಯ ತಿರುವಿನಲ್ಲಿ ಪಾದಸಪ್ಪಳ ಕೇಳಿಬರತೊಡಗಿತು. ಮಹರ್ಷಿಯ ದೃಷ್ಟಿ ಸಹಜವಾಗಿ ಅತ್ತ ಹರಿದಾಗ ಆತ್ಮೀಯ ಗೆಳೆಯರಾದ ದೇವರಾತ, ಕಾತ್ಯಾಯನ ಮತ್ತು ಉದಂಕ ಕಣ್ಗೋಚರಿಸಿದರು.

ಉದಂಕ–ನಮಸ್ತೇ ಭಗವನ್.

ದೇವರಾತ–ನಮಸ್ತೇಸ್ತು.

ಕಾತ್ಯಾಯನ–ನಮಸ್ತೇ ಬ್ರಹ್ಮವಿದಸಿಗೆ.

ಯಾಜ್ಞವಲ್ಕ್ಯ ಮಹರ್ಷಿ–ಮೂವರಿಗೂ ನಮಸ್ಕಾರವು. ಯಾವ ದಿಕ್ಕಿನಲ್ಲಿ ಹೀಗೆ ಒಟ್ಟುಗೂಡಿದಿರಿ ತ್ರಿಮೂರ್ತಿಗಳು ?

ಕಾತ್ಯಾಯನ–ಮಹರ್ಷಿಗಳ ಆಶ್ರಮದ ಬಳಿಯಲ್ಲೆ.

ಯಾಜ್ಞವಲ್ಕ್ಯ ಮಹರ್ಷಿ–ಬನ್ನಿ ; ಎಲ್ಲರೂ ಇಲ್ಲಿಯೇ ಕುಳಿತು ಕೊಳ್ಳಿ. ದೂರದ ಪಯಣದಿಂದ ಬಳಲಿರಬಹುದು ಅಲ್ಲವೇ ?

ದೇವರಾತ–ಸಾಯಂ ಸಮಯದ ಪಯಣ; ಬಳಲಿಕೆಯೇನೂ ತೋರ ಲಿಲ್ಲ ಎಂದು ಹೇಳಬಹುದು.

ಉದಂಕ–ಸಾಧು, ಸಾಧು.

ಕಾತ್ಯಾಯನ–ನಿನ್ನ ದರ್ಶನವಾಗಿ ಬಹಳ ದಿನಗಳಾಗಿದ್ದುವು. ನಿನ್ನನ್ನು ನೋಡಿ ಹೋಗುವ ಉದ್ದೇಶದಿಂದಲೇ ನಾವು ಆಶ್ರಮದ ಹಾದಿ ಹಿಡಿದೆವು.

ಯಾಜ್ಞವಲ್ಕ್ಯ ಮಹರ್ಷಿ–ಪರಮಸಂತೋಷ ; ಅದರಿಂದ ನಿಮ್ಮ ದರ್ಶನಲಾಭ ನನಗೂ ಉಂಟಾಯಿತು.

ದೇವರಾತ–ನಾವು ನಿನ್ನೆಯೂ ಬಂದಿದ್ದೆವು. ನೀನು ಕೈಸಾಲೆಯಲ್ಲಿ ಕುಳಿತು ವೀಣಾಭ್ಯಾಸದಲ್ಲಿ ತೀವ್ರ ತನ್ಮಯನಾಗಿದ್ದುದರಿಂದ ನಿನ್ನ ಅಮೂಲ್ಯ ಸಮಯವನ್ನು ಹಾಳುಮಾಡಲಿಚ್ಛಿಸದೆ ಹಾಗೆಯೇ ಹಿಂದಿರುಗಿದೆವು.

ಯಾಜ್ಞವಲ್ಕ್ಯ ಮಹರ್ಷಿ–ನಿಜವಾಗಿ ?

ಕಾತ್ಯಾಯನ–ಹೌದು. ನಾವು ಮೂವರೂ ಬಂದಿದ್ದೆವು. ನೀನದನ್ನು ಮನಸ್ಸಿಗೆ ತೆಗೆದುಗೊಳ್ಳುವಂತಹ ಮಹತ್ತೇನೂ ಅಲ್ಲ ಬಿಡು.

ಉದಂಕ–ನಿಶ್ಚಯ

ದೇವರಾತ–ಇಂದೇನು ವೀಣೆಯು ಅಲ್ಲಿ, ನೀನು ಇಲ್ಲಿ ?

ಯಾಜ್ಞವಲ್ಕ್ಯ ಮಹರ್ಷಿ–ಇಂದಿನ ಅಭ್ಯಾಸ ಆಗಲೇ ಮುಗಿಯಿತು.

ಒಮ್ಮೊಮ್ಮೆ ಅಭ್ಯಾಸ ಬಹಳ ದೀರ್ಘವಾದರೆ ಕೆಲವೊಮ್ಮೆ ಮೊಟಕು. ಎಲ್ಲ ರಂತೆಯೇ ನಾನು.

ಕಾತ್ಯಾಯನ ಮಂದ ಸರಳ ಸ್ಮಿತದೊಡನೆ–ವೇದಾಂತಕ್ಕೂ ವೀಣಾ ಭ್ಯಾಸಕ್ಕೂ ತಾತ್ತ್ವಿಕ ಸಂಬಂಧವಿರಬೇಕು ಎಂಬುದು ನನ್ನ ಭಾವನೆ. ಇದ ರಲ್ಲಿ ನಿನ್ನ ಅಭಿಪ್ರಾಯವೇನು ?

ಯಾಜ್ಞವಲ್ಕ್ಯ ಮಹರ್ಷಿ–ವಿದ್ಯೆ ಎಂದಮೇಲೆ ಒಂದಕ್ಕೊಂದು ಸಂಬಂಧ ವಿರಲೇಬೇಕಷ್ಟೆ.

ದೇವರಾತ–ಪರೋಕ್ಷವಾದ ವೇದಾಂತದಂತೆ ನೀನೂ ಸಹ ಕೆಲವೊಮ್ಮೆ ಒಗಟಾಗಿ ಕಾಣಿಸುತ್ತಿ.

ಯಾಜ್ಞವಲ್ಕ್ಯ–ಮಹರ್ಷಿ ಅಂದರೆ ?

ದೇವರಾತ–ನಾನು ಕಂಡಂತೆ ನೀನು ಸದಾ ಅಂತರ್ಮುಖಿಯಾಗಿರುತ್ತಿ. ಪರೋಕ್ಷವಾದ ವೇದಾಂತದಂತೆ ನಿನ್ನ ಗಂಭೀರ ಭಾವನೆಯೂ ಸಹ ಅರ್ಥೈ ಸುವುದು ತುಂಬ ಕಠಿಣ.

ಯಾಜ್ಞವಲ್ಕ್ಯ ಮಹರ್ಷಿ–ನಾನು ಅಂತರ್ಮುಖಿಯೂ ಹೌದು, ಬಹಿ ರ್ಮುಖಿಯೂ ಹೌದು. ಅಂತರ್ಮುಖಿಯಾಗಿ ಅಪರಬ್ರಹ್ಮನನ್ನು ನೋಡಿ ದರೆ ಬಹಿರ್ಮುಖಿಯಾಗಿ ಬ್ರಹ್ಮಾಂಡವನ್ನು ನೋಡುವೆ. ಎರಡರ ತುಲ ನೆಯೂ ತಾತ್ತ್ವಿಕ ಜ್ಞಾನವೃದ್ಧಿಯಾಗಲು ಬಹಳ ಸಹಕಾರಿ.

ಕಾತ್ಯಾಯನ–ಹಲವಾರು ಪಾಪಾಂಶಗಳಿಂದ ಕೂಡಿದ ಈ ಜಗತ್ತನ್ನು ಬ್ರಹ್ಮಸೃಷ್ಟಿಯೆಂದರೆ ಎಲ್ಲಾ ಪಾಪಕ್ಕೂ ಅವನೇ ಮೂಲ ಎಂದ ಹಾಗಾ ಯಿತಲ್ಲವೇ ?

ಯಾಜ್ಞವಲ್ಕ್ಯ ಮಹರ್ಷಿ– ಇಲ್ಲಿ ಕಾರ್ಯಕಾರಣಗಳ ಸಂಬಂಧವಿದೆ. ಕಾರಣವಿಲ್ಲದೆ ಕಾರ್ಯವಿಲ್ಲ. ಒಂದು ಮತ್ತೊಂದಕ್ಕೆ ಕಾರಣವೆಂದರೂ ಕಾರಣ

ದಲ್ಲಿರುವುದೇ ಕಾರ್ಯದಲ್ಲಿಯೂ ಇರಬೇಕು ; ಮಡಿಕೆ ಕುಡಿಕೆಗಳ ತಯಾರಿಕಾ ಕ್ಷೇತ್ರಕ್ಕೆ ಜೇಡಿಮಣ್ಣೆ ಕಾರಣವಾಗುವಂತೆ. ಇಲ್ಲಿ ಇನ್ನೊಂದು ವಿಲಕ್ಷಣ. ಬ್ರಹ್ಮ ಒಂದು ರೀತಿಯಾದರೆ ಅವನ ಸೃಷ್ಟಿ ಇನ್ನೊಂದು ರೀತಿ. ಅವುಗಳ ಮಧ್ಯೆ ಎಂತಹ ಕಾರ್ಯಕಾರಣ ಸಂಬಂಧವಿದೆ ಎಂಬುದನ್ನು ಗುರುತಿಸುವುದರಲ್ಲಿ ಆತ್ಮಜ್ಞಾನವನ್ನು ಬೆಳೆಸಬೇಕು. ಆತ್ಮಜ್ಞಾನದ ಮೂಲಕವಲ್ಲದೆ ಅಪರಬ್ರಹ್ಮನನ್ನು ಕಾಣಲಾರೆವು.

ಉದಂಕ–ಬ್ರಹ್ಮ ಅಮರ–ಅನಂತ. ಅವನು ತನ್ನ ಅಂಶದಿಂದಲೇ ಬ್ರಹ್ಮಾಂಡವನ್ನು ಸೃಷ್ಟಿಸಿದ ಎಂದಮೇಲೆ ಪ್ರತಿಯೊಂದು ಅಂಶವೂ ಅಮರವಾಗಿರಲೇಬೇಕಲ್ಲ. ಬ್ರಹ್ಮನ ಅಂಶವೇ ಆದ ನಮ್ಮನ್ನು ಜರಾಮೃತ್ಯುಗಳೇಕೆ ಕಾಡಿಸುತ್ತವೆ ?

ಯಾಜ್ಞವಲ್ಕ್ಯ ಮಹರ್ಷಿ–ಜರಾಮೃತ್ಯುಗಳಿಲ್ಲದೆ ಜೀವಸೃಷ್ಟಿಯಾದರೆ ಲೋಕಕ್ಷಯವಾಗುವುದೆಂತು? ಅದನ್ನೂ ನೀನು ಯೋಚಿಸಬೇಕಲ್ಲ.

ದೇವರಾತ–ಬ್ರಹ್ಮನ ಅಂಶದಿಂದ ಸೃಷ್ಟಿ ಎಂದರೆ ಜಗತ್ಸೃಷ್ಟಿಗಾಗಿ ಅವನು ಭಾಗಭಾಗವಾಗಿ ತೆಗೆದುಕೊಂಡ ತನ್ನ ಅಂಶಗಳಿಂದ ತಾನೂ ಸಹ ಅಂಶ ಮಾತ್ರವೇ ಆಗುತ್ತಾನೆ ಎಂಬ ಪ್ರಶ್ನೆಯೇಳುವುದಿಲ್ಲವೇ ?

ಯಾಜ್ಞವಲ್ಕ್ಯ ಮಹರ್ಷಿ–ಬ್ರಹ್ಮನನ್ನು ಆ ದೃಷ್ಟಿಯಿಂದ ನೋಡಬಾರದು. ಬ್ರಹ್ಮವಸ್ತು ಸೃಷ್ಟಿಮಾತ್ರದಿಂದ ಅಂಶ ಅಂಶವಾಗಿ ಕರಗಿಹೋಗುವುದಿಲ್ಲ. ಅವನ ಅಂಶ ಅಂಶದಲ್ಲಿಯೂ ಪೂರ್ಣತ್ವವೇ ಸ್ಪಂದಿಸುತ್ತಿರುವಾಗ ಬ್ರಹ್ಮ ಅಂಶ ಮಾತ್ರನಾಗುವುದು ಹೇಗೆ ? ಬ್ರಹ್ಮ ಎಂದೆಂದೂ ಬ್ರಹ್ಮನೇ.

ಕಾತ್ಯಾಯನ–ಬ್ರಹ್ಮ ತನ್ನ ಅಂಶದಿಂದಲೇ ಸೃಷ್ಟಿ ಮಾಡಿದ ಎಂದರೆ ಅವನಿಗೊಂದು ಉದ್ದೇಶವಿದೆ ಎಂದಂತಾಯಿತು.

ಯಾಜ್ಞವಲ್ಕ್ಯ ಮಹರ್ಷಿ–ಹೌದು, ಅವನು ಉದ್ದೇಶಪೂರ್ವಕ

ವಾಗಿಯೇ ಬ್ರಹ್ಮಾಂಡವನ್ನು ಸೃಷ್ಟಿಸಿದ್ದಾನೆ. ಅವನ ಉದ್ದೇಶದಂತೆಯೇ ನಾವು ಮತ್ತು ಕಾರ್ಯವಿಧಾನ. ನಮಗೆ ಜೀವನಕ್ಕಾಗಿ ಹೇಗೆ ಒಂದು ಉದ್ದೇಶವಿದೆಯೋ ಹಾಗೆಯೇ ಅವನಿಗೆ ಸೃಷ್ಟಿಗಾಗಿ ಒಂದು ಉದ್ದೇಶವಿರುತ್ತದೆ. ನಮ್ಮ ಉದ್ದೇಶ ಸಣ್ಣದಾದರೆ ಅವನದು ದೊಡ್ಡದು. ಅವನ ಸೃಷ್ಟಿಯಲ್ಲಿ ವೈವಿಧ್ಯತೆಯಿದೆ. ತಾರತಮ್ಯವಿದೆ; ವಿಧಿವಿಧಾನಗಳಿವೆ; ಸಂಯೋಜನೆಯಿದೆ. ಆದ್ದರಿಂದಲೇ ಅವನು ಬ್ರಹ್ಮ. ಅವನು ಕರ್ತೃ. ಅವನು ಅಮರ. ಅವನು ವಿಶ್ವಚೈತನ್ಯ. ಅವನ ಇಚ್ಛೆಯಂತೆಯೇ ಈ ಬ್ರಹ್ಮಾಂಡ ಮತ್ತು ಜೀವಕೋಟಿ.

ಕಾತ್ಯಾಯನ–ಅವನ ಇಚ್ಛೆಯೆಂದರೆ ನಮ್ಮ ದ್ವೇಷಾಸೂಯೆಗಳು, ನಮ್ಮ ಈಡೇರದ ಬಯಕೆಗಳು, ಅಸಂಬದ್ಧತೆ, ಅಪೂರ್ಣತೆ ಎಲ್ಲಕ್ಕೂ ಅವನೇ ಮೂಲವೇ ?

ಯಾಜ್ಞವಲ್ಕ್ಯ ಮಹರ್ಷಿ ನಗುಮುಖದಿಂದ–ನಮ್ಮ ಕರ್ತವ್ಯ ಜ್ಞಾನವನ್ನು ಮರೆತು ಬ್ರಹ್ಮನಿಗೆ ಆರೋಪಿಸುವುದು ಯಾವ ನ್ಯಾಯ ?

ದೇವರಾತ–ಭೂಮಿಯು ತನ್ನಲ್ಲಿ ಗಿಡಮರಗಳು ಬೆಳೆಯಲಿ ಎಂದಾಗಲೀ ಜೀವಕೋಟಿಗಳು ಹುಟ್ಟಿ ಜೀವಿಸಲಿ ಎಂದಾಗಲೀ, ತಾನು ಕಷ್ಟಪಡುವುದಿಲ್ಲ. ಸೃಷ್ಟಿ ಅದರಲ್ಲಿ ತಾನೇ ತಾನಾಗಿ ಆಗುತ್ತದೆ. ಭೂಮಿ ಜಡ; ಅದರಲ್ಲಿರುವುದು ಸೃಷ್ಟಿಚೇತನ ಆದರೂ, ಇಲ್ಲಿ ಕಾರ್ಯಕಾರಣ ಸಂಬಂಧವನ್ನು ತರುವುದಕ್ಕಾಗುವುದಿಲ್ಲ. ಇದೊಂದು ವಿಲಕ್ಷಣವೇ. ಜಡದಲ್ಲಿ ಚೇತನವು ತಾನೇ ತಾನಾಗಿ ಉದ್ಭವಿಸಿತು ಎಂಬುದನ್ನು ಒಪ್ಪಿಕೊಂಡರೆ ಸೃಷ್ಟಿಶಕ್ತಿಗೆ ಪರಬ್ರಹ್ಮವಾದರೂ ಏಕೆ ಬೇಕು ? ಇದನ್ನು ಊಹೆ ಮಾತ್ರ ಎನ್ನಬಹುದೇ ? ಜಡವೇ ಚೇತನವನ್ನು ಸೃಷ್ಟಿಸುವುದಾದರೆ ಬ್ರಹ್ಮನೂ ಜಡ ಎನ್ನಬಹುದೇ?

ಯಾಜ್ಞವಲ್ಕ್ಯ ಮಹರ್ಷಿ– ಯಾವುದನ್ನು ನಾವು ಜಡ ಎಂದು ಭಾವಿಸುತ್ತೇವೋ ಅದರಲ್ಲಿ ಸುಪ್ತವಾಗಿರುವ ಚೇತನವನ್ನು ಕಾಣುವ ದೃಷ್ಟಿ ಬೆಳೆದರೇನೇ ಚೇತನಾಚೇತನಗಳ ಸ್ವರೂಪವು ಅರ್ಥವಾಗಬೇಕಾದರೆ. ಬೇಸಗೆಯ ಕಾಲದಲ್ಲಿ ನೆಲ ಒಣಗಿ ಬಿರುಸಾಗಿ ಕಾಣುತ್ತದೆ. ಮಳೆಬಿದ್ದ

ಮೇಲೆ ತಾನಾಗಿಯೇ ಸಸ್ಯಗಳು ಮೊಳಕೆಯೊಡೆದು ಮೇಲೇಳುವುದನ್ನು ಕಾಣುತ್ತೇವೆ. ಇವೆಲ್ಲಾ ಎಲ್ಲಿದ್ದುವು ಆ ಮುಂಚೆ? ಎಂದರೆ ನೆಲದಲ್ಲಿ ಬೇರಿನ ರೂಪದಲ್ಲಿ–ಬೀಜರೂಪದಲ್ಲಿ ಮುಂಚೆಯೂ ಇದ್ದುವು. ಬರೀ ಭೂಮಿಯಿಂದ ಮಾತ್ರ ಇವು ಹುಟ್ಟಲಿಲ್ಲ. ನೀರು–ಬೀಜಗಳ ಸಂಯೋಜನೆಯಿಂದ ಭೂಮಿ ಹಸುರುಗಟ್ಟಿತು. ಅದರಂತೆಯೇ ಚೇತನವು ದ್ರವ್ಯದಲ್ಲಿ ಸುಪ್ತವಾಗಿದ್ದು ಯಾವಾಗ ಕಾಲ ಪಕ್ವವಾಗುವುದೋ ಆಗ ಜೀವಕೋಟಿಗಳು ಮೊಳೆಯುತ್ತವೆ. ಇದೇ ಜೀವನವಿಕಾಸ ಮತ್ತು ಸೃಷ್ಟಿಬ್ರಹ್ಮನ ಸೃಷ್ಟಿಸ್ವರೂಪ.

ಉದಂಕ–ಸೃಷ್ಟಿ ಸ್ಥಿತಿಗತಿಗಳಿಗೆ ಬ್ರಹ್ಮನೇ ಸರ್ವಾಧಾರ ಎಂದರೆ ಅವನನ್ನುಳಿದು ಯಾವ ಪ್ರಾಣಿಯೂ ಜೀವಿಸದು ಎಂದಂತಾಯಿತು, ಅಲ್ಲವೇ ?

ಯಾಜ್ಞವಲ್ಕ್ಯ ಮಹರ್ಷಿ–ಹೌದು ಕೇಳು. ಬ್ರಹ್ಮನೇ ಸೃಷ್ಟಿಮೂಲವಾದ್ದರಿಂದ ಅದು ಅಕ್ಷರಶಃ ಸತ್ಯ. ಹೇಗೆ ಗಿಡ ಬೇರಿನಿಂದ ಚಿಗುರುವುದೋ ಹಾಗೆ ಬ್ರಹ್ಮನ ಅಂಶದಿಂದ ಬ್ರಹ್ಮಾಂಡದ ಸೃಷ್ಟಿ ಮತ್ತು ಸ್ಥಿತಿ. ನಾವು ಯಾವಾಗ ದೃಗ್‌ದೃಶ್ಯವಾದ ಸೃಷ್ಟಿಯನ್ನು ನೋಡುತ್ತೇವೋ ಆಗ ಸೃಷ್ಟಿಕರ್ತನೊಬ್ಬನನ್ನು ನಾವಾಗಿಯೇ ಊಹಿಸುತ್ತೇವೆ. ಅವನೇ ಹಿರಣ್ಯಗರ್ಭ; ಅವನೇ ಸಗುಣ ಬ್ರಹ್ಮ ಅಥವಾ ಈಶ್ವರ. ಹೀಗೆ ಯಾವ ಹೆಸರಿನಿಂದಲಾದರೂ ಕರೆಯಬಹುದು. ಅವನು ಜಗತ್ ಸೃಷ್ಟಿಗೆ ಏನು ಮಾಡಬೇಕು ? ಹೇಗೆ ಮಾಡಬೇಕು ? ಎಂಬ ವಿಚಾರದಲ್ಲಿ ಅದ್ಭುತವಾದ ವಿಚಾರವನ್ನು ಮಾಡದೆಯಿಲ್ಲ. ಯಾವ ಗಹನವಾದ ಕಾರ್ಯವನ್ನು ಕೈಗೊಳ್ಳಬೇಕಾದರೂ ಅದಕ್ಕೆ ಗಂಭೀರವಾದ ಆಲೋಚನೆ ಅತ್ಯಾವಶ್ಯಕ. ಅವನ ಭವ್ಯಸೃಷ್ಟಿಯನ್ನು ಯಾವ ಅಳತೆಗೋಲಿನಿಂದ ಅಳೆದರೂ ಅದು ಮಹೋನ್ನತ; ಅದು ಅಮರಕಾವ್ಯ; ಅದ್ಭುತ ತಪಸ್ಸು. ಅಂತೂ, ರೋಮಾಂಚಕಕಾರವಾದ ಕೃತಿರತ್ನ. ಆರೂ ಸೃಷ್ಟಿಮೂಲವನ್ನು ಕಂಡುಹಿಡಿಯಲಾಗದ–ಆರೂ ಪ್ರತಿಸೃಷ್ಟಿಯನ್ನು ರೂಪಿಸಲಾಗದ ಅಮೋಘವಾದ ಸೃಷ್ಟಿವೈಖರಿ. ಬ್ರಹ್ಮ ತಪಸ್ಸಿನಿಂದ ವೃದ್ಧಿಯಾಗಿದ್ದಾನೆ. ಅಂದರೆ, ಪರಿಣಾಮದಲ್ಲಿ ಸಿಕ್ಕುವವನೂ

ಅಲ್ಲ; ದಕ್ಕುವವನೂ ಅಲ್ಲ. ಅಂತಲೇ ಅವನು ಬ್ರಹ್ಮ. ಸೃಷ್ಟಿಗೆ ಮುಂಚೆ ಅವನು ಅವ್ಯಕ್ತ. ಕ್ರಮಕ್ರಮೇಣ ವ್ಯಕ್ತವಾಗುವುದು ಸೃಷ್ಟಿಯ ಸಮಷ್ಟಿಯಲ್ಲಿ. ಅಂದರೆ ಸೃಷ್ಟಿಯಲ್ಲಿ ಸೃಷ್ಟಿಯಾಗಿ. ಆಕಾಶ, ವಾಯು, ಜ್ಯೋತಿ, ನೀರು, ಪೃಥ್ವಿ ಮುಂತಾದ ರೂಪಗಳಲ್ಲಿ. ಅನಂತರ ಅನ್ನ ಅಥವಾ ದ್ರವ್ಯರಾಶಿಯಲ್ಲಿ. ಅನಂತರ ಜೀವಕೋಟಿಗಳಲ್ಲಿ–ಪಂಚಭೂತಗಳಲ್ಲಿ ವೈವಿಧ್ಯಪೂರ್ಣವಾಗಿ ವ್ಯಕ್ತಗೊಳ್ಳುತ್ತಾನೆ ಪ್ರಾಣಕ್ಕೆ ಆಧಾರವಾದ ಅನ್ನ-ದ್ರವ್ಯಗಳಿಂದ ಕೂಡಿದ ಜೀವನೋಪಾಯವಾದ ಒಂದು ರಂಗಭೂಮಿಯು ರೂಪುಗೊಳ್ಳಬೇಕಾದರೆ ಲಕ್ಷಾಂತರ ವರ್ಷಗಳೇ ಹಿಡಿದಿವೆ. ಮೊದಲು ಜಲರಾಶಿಯಲ್ಲಿ ಜಲಚರ ಜೀವಿಗಳು, ಅನಂತರ ಭೂಮಿಯ ಮೇಲೆ ಚಲಿಸುವ ಮೃಗಗಳು, ಖೇಚರಗಳು ಇತ್ಯಾದಿ ಕೋಟ್ಯಾಂತರ ಜೀವಕೋಟಿಗಳ ಉಗಮವಾಯಿತು. ಕಾಲಕ್ರಮೇಣ ಬಹುರೂಪದಲ್ಲಿ ಪ್ರಾಣಿಗಳು ಕಂಡುಬಂದುವು. ಪ್ರಾಣ ಸಂಪೋಷಣೆಗೆ ಆಧಾರವಾದುದು ಅನ್ನ. ಅಂದರೆ ವಿಧವಿಧವಾದ ಪ್ರಾಣಿವರ್ಗವು ತಮ್ಮ ಸುತ್ತಮುತ್ತಲೂ ದೊರೆಯಬಹುದಾದ ಭೋಜ್ಯವಸ್ತುವಿನಿಂದ ದೇಹಸಂಪೋಷಣೆ ಮಾಡಿಕೊಂಡು ಜೀವನಕ್ಷೇತ್ರದಲ್ಲಿ ತನ್ನಂತಹ ಅನೇಕ ಪ್ರಾಣಿಗಳ ಸೃಷ್ಟಿಗೆ ಕಾರಣವಾಗುವುದನ್ನು ಕಾಣುತ್ತೇವೆ. ತನ್ನ ಪರಿಸರದ ವಾತಾವರಣದ ವಿರುದ್ಧ ಹೋರಾಡಿ ತಮ್ಮ ತಮ್ಮ ಅನುಕೂಲಕ್ಕೆ ಪರಿವರ್ತಿಸಲು ಶತಪ್ರಯತ್ನಪಡುವುದನ್ನೂ ಅಥವಾ ಸ್ವತಃ ಪರಿಸ್ಥಿತಿಗೆ ಹೊಂದಿಕೊಳ್ಳಲು ಅಂಗ ಪರಿವರ್ತನೆಗೊಳಿಸುವುದನ್ನೂ ಕಂಡಿದ್ದೇವೆ, ಮತ್ತು ಕಾಣುತ್ತೇವೆ. ಇದೆಲ್ಲಾ ಸೃಷ್ಟಿಯ ರೀತಿ ಮತ್ತು ನೀತಿ.

ಅಷ್ಟೇ ಅಲ್ಲ. ತರುಲತೆಗಳು, ಗಿಡುಮರಗಳು, ಪಶುಪಕ್ಷಿಗಳು ವಾತಾವರಣಕ್ಕನುಗುಣವಾಗಿ ತಮ್ಮ ತಮ್ಮ ದೇಹರಚನೆಯನ್ನೇ ಮಾರ್ಪಡಿಸುವಷ್ಟು ಬುದ್ಧಿವಂತಿಕೆ ತೋರುವುದೂ ಸಹ ಸುವ್ಯಕ್ತ. ಮಳೆ ಹೆಚ್ಚಿರುವ ಕಡೆಯಲ್ಲಿ ಬೆಳೆಯುವ ಸಸ್ಯವರ್ಗವೇ ಬೇರೆ. ಚಳಿ ಹೆಚ್ಚಿರುವ ಕಡೆಯಲ್ಲಿ ಹಾಗೂ ಬಿಸಿಲು ಹೆಚ್ಚಿರುವ ಕಡೆಯಲ್ಲಿ ಬೆಳೆಯುವ ಸಸ್ಯವರ್ಗಗಳೇ ಬೇರೆ. ಆಯಾ ಪ್ರಾಂತ್ಯಕ್ಕೆ ಆಯಾ ಸೃಷ್ಟಿಯನ್ನು ಪ್ರಕೃತಿಯೇ ಕರುಣಿಸಿದ್ದರೂ

ಪರಿಸ್ಥಿತಿಗೆ ಹೊಂದಿಕೊಳ್ಳಲು ಜೀವಕೋಟಿ ಸರ್ವಸಹಸಾ ಪ್ರಯತ್ನಿಸುವು ದನ್ನು ಕಾಣುತ್ತೇವೆ. ಮಾನವತೆ ವೈವೆತ್ತಿದ ಮೇಲೆ, ಅದರಲ್ಲಿಯೂ ಮನೋವಿಕಾಸವಾದ ಮೇಲೆ ಪರಿಸರಸದ ಪ್ರಪಂಚವನ್ನು ಅರಿತುಕೊಳ್ಳು ವುದರಲ್ಲಿ ಮನವನ್ನು ಕೇಂದ್ರೀಕರಿಸಿ, ಪ್ರಕೃತಿಯ ವ್ಯಾಪಾರವನ್ನೂ ಸೃಷ್ಟಿಯ ನಿಯಮವನ್ನೂ ತಿಳಿದುಕೊಂಡು ಅವುಗಳನ್ನು ತನ್ನ ಪ್ರಯೋಗಕ್ಕೆ ಅಳವಡಿಸಿಕೊಳ್ಳುವಷ್ಟು ಚಾಣ್ಮೆಯನ್ನೂ ಪಡೆಯಿತು. ಕ್ರಮಕ್ರಮೇಣ ಬುದ್ಧಿಶಕ್ತಿ ಅರಳಿ ಜ್ಞಾನೋದಯವಾದಾಗ ಸತ್ಯ–ಮಿಥ್ಯಗಳ ಅಂತರವನ್ನು ಅರಿತು, ಮಾನವತೆಯ ನಿಜತತ್ವಕ್ಕೆ ಪುಷ್ಟಿ ನೀಡಿ ಜೀವನಾದರ್ಶದ ಗೀಳನ್ನೂ ಹೆಚ್ಚಿಸಿಕೊಂಡಿತು.

ಈ ಬೃಹತ್ ಪೃಥ್ವಿಯ ಸ್ವರೂಪವೇನು ? ಇದರ ಸೃಷ್ಟಿ ವಿಧಾನ ವೆಂತು ? ಮತ್ತು ಸೃಷ್ಟಿಕರ್ತನಾರು ? ಅವನ ಉದ್ದೇಶವೇನು ? ಮತ್ತು ನಾನು ಹೇಗೆ ಇಲ್ಲಿಗೆ ಬಂದೆ ? ನನ್ನ ಅವತರಣಿಕೆ ಏತಕ್ಕೋಸ್ಕರ ? ಇಲ್ಲಿ ನನ್ನ ಅವಶ್ಯಕತೆಯಿದೆಯೆ ? ಏತಕ್ಕಾಗಿ ಈ ಬದುಕು ? ನಾನು ಏನುಮಾಡಬೇಕು ? ಈ ಭವಸಾಗರವನ್ನು ದಾಟುವುದು ಹೇಗೆ ? ಬದುಕಿನ ಸಾರ್ಥಕತೆ ಯಾವುದು ? ಎಂಬೀ ವಿಚಾರಗಳು ತಲೆದೋರಿದುವು. ಇದೇ ಪ್ರಾರಂಭದಲ್ಲಿ ಮೂಡಿದ ಮನೋವಿಕಾಸ ಅಥವಾ ಅಪರವಿದ್ಯೆ. ಅಲ್ಲಿಗೆ ಬರೀ ಇಂದ್ರಿಯಕ್ಕೇ ಅಂಟಿಕೊಂಡಿದ್ದ ಮನಸ್ಸಿಗೆ ಒಂದು ಕೊಂಡಿ ಕಳಚಿ ದಂತಾಯಿತು. ಬದುಕಿನಲ್ಲಿ ಒದಗುವ ವೇದನೆ ರೋಗರುಜಿನ ಜರಾಮೃತ್ಯು ಗಳಿಂದ ಮತ್ತೊಂದು ಕೊಂಡಿಯನ್ನು ಕಳಚಿಕೊಂಡಾಗ ಪರಾವಿದ್ಯೆಯ ಉಗಮ. ಜೀವನದ ಜಂಜಡದಿಂದ ಮನಸ್ಸಿಗೆ ಶಾಂತಿಯೇ ಆಗಲೀ, ಸಂತೃಪ್ತಿಯೇ ಆಗಲೀ ದೊರೆಯುವುದಿಲ್ಲ. ನಾವು ಯಾವುದನ್ನು ಸ್ವರ್ಗ ಸೌಖ್ಯವೆಂದು ಆರಾಧಿಸುತ್ತೇವೋ ಅದು ನಶ್ವರ, ಬರೀ ಮಿಥ್ಯೆ ಮತ್ತು ದುಃಖಕಾರಕ. ನಾವು ವಿಶ್ವಜ್ಞಾನವನ್ನು ಸಂಪಾದಿಸಬೇಕಾದರೆ ಮೂಲದತ್ತ ದೃಷ್ಟಿ ಹರಿಸಬೇಕು. ಯಾವಾಗ ಮೂಲತಃ ಶೋಧನೆ ಆರಂಭವಾಗುವುದೋ ಆಗಲೇ ಪರಬ್ರಹ್ಮನನ್ನು ನೋಡಬೇಕಾದರೆ. ಆದರೆ ಅವನನ್ನು, ಎಲ್ಲರೂ ಅರಿತರು ಎಂದಲ್ಲ. ಯಾರು ಆತ್ಮವಿಕಾಸ-ಮನೋವಿಕಾಸ ಹೊಂದಿದರೋ

ಅವರಿಗೆ ಮಾತ್ರ ಪರಬ್ರಹ್ಮನನ್ನು ಸಾಕ್ಷಾತ್ಕರಿಸುವುದೇ ಸತ್ಯ ಎಂಬ ಅನು ಭವ. ಉಳಿದವರಿಗೆ ಪರಬ್ರಹ್ಮನೇ ಆಗಲೀ ಸತ್ಯಧರ್ಮಗಳೇ ಆಗಲಿ ಬೇಕಾ ಗಿಲ್ಲ. ಬರೀ ಇಂದ್ರಿಯಗಳ ಸಂತೃಪ್ತಿಗಾಗಿ ಏನನ್ನಾದರೂ ಮಾಡಬಲ್ಲರು. ಕ್ಷಣಿಕ ಸುಖಕ್ಕಾಗಿ ಕ್ಷಣಿಕ ಬದುಕಿಗಾಗಿ ಹಗಲಿರುಳೂ ಪರಿತಪಿಸುತ್ತ ಕಣ್ಣೀ ರಿಟ್ಟು ಪರಮಾತ್ಮನಿರುವನ್ನು ಸಂಪೂರ್ಣ ಮರೆತುಬಿಟ್ಟಿರುವುದನ್ನು ನಾವು ಸದಾ ನೋಡುತ್ತೇವೆ. ಉತ್ತಮಲೋಕಕ್ಕೆ ಹೋಗಬೇಕಾದರೆ ಏನು ಮಾಡ ಬೇಕು ಎಂಬ ಚಿಂತನೆಯೊತ್ತಟ್ಟಿಗಿರಲಿ, ಇದನ್ನೇ–ತನ್ನ ಸಂಸಾರಿಕ ಬಂಧ ವನ್ನೇ ಅತ್ಯುತ್ತಮವಾದ ಲೋಕವೆಂದು ಪರಿಭಾವಿಸುವರು.

ಉದಂಕ–ಸರಿಯಾಗಿ ಹೇಳಿದೆ.

ಕಾತ್ಯಾಯನ–ನಿನ್ನ ವ್ಯಾಖ್ಯಾನವು ಮೆಚ್ಚಿಕೆಯಾಯಿತು; ಇನ್ನೂ ಮುಂದುವರಿಸು.

ದೇವರಾತ– ನಿನ್ನ ವಿಚಾರಧಾರೆಯಿಂದ ಅಜ್ಞರಿಗೂ ಮನೋವಿಕಾಸ ಉಂಟಾಗುತ್ತದೆ.

ಯಾಜ್ಞವಲ್ಕ್ಯ ಮಹರ್ಷಿ–ಮನೋವಿಕಾಸ ಎಂದರೆ ಜಡದಿಂದ ಚೇತನ. ಹಾಗೆಂದರೆ ಯಾರಾದರೂ ಜಡದಿಂದ ಚೇತನವೇ ಎಂದು ಅನು ಮಾನಿಸಬಹುದು. ಆದರೂ, ಚೇತನದ ಬೇರುಗಳು ಸುಪ್ತವಾಗಿ ಇಳಿದಿರು ವುದು ಜಡದಲ್ಲಿ. ಮಾನಸಿಕ ಮಲಿನತೆಯು ಅಳಿಯದೆ ಚೇತನ ವ್ಯಕ್ತ ವಾಗುವುದು ಸಾಧ್ಯವೂ ಇಲ್ಲ. ಅಂದರೆ, ಪರಿಸರದ ವಾತಾವರಣ ಅರಳಿ ಪುಟಗೊಟ್ಟಾಗ ಸುಪ್ತಾವಸ್ಥೆಯ ಚೈತನ್ಯ ಎದ್ದೇಳುತ್ತದೆ. ಮನೋವಿಕಾಸ ಎಂಬುದು ಗಿಡಕ್ಕೆ ನೀರು ಹೊಯ್ದುಹೊಯ್ದು ಚಿಗುರಿಸಿದಂತೆ. ತರ್ಕವಿತರ್ಕ ಗಳನ್ನು ಹೂಡಿ ಚೆನ್ನಾಗಿ ಮನಸ್ಸನ್ನು ಕಡೆದರೇನೇ ವಿಕಾಸ. ಇಲ್ಲದಿದ್ದಲ್ಲಿ ಎಲ್ಲವೂ ಅಪ್ಪ ನೆಟ್ಟ ಆಲದಮರವೇ.

ಉದಂಕ-ಒಪ್ಪಿದೆ ಭಗವನ್ !

ದೇವರಾತ–ಸಾಧು, ಸಾಧು.

ಕಾತ್ಯಾಯನ– ವಾಸ್ತವ್ಯ ಭಗವನ್ ! ಆದರೆ, ಇನ್ನೊಂದು ಪ್ರಶ್ನೆ,

ಯಾಜ್ಞವಲ್ಕ್ಯ ಮಹರ್ಷಿಯು ಅತ್ಯಂತ ಗಂಭೀರ ಭಾವದಿಂದ ನೋಡುತ್ತ–ಏನಿದ್ದರೂ ಕೇಳಬಹುದು.

ಕಾತ್ಯಾಯನ–ಮನುಷ್ಯ ಸತ್ತ ಮೇಲೆ ಏನಾಗುತ್ತಾನೆ ?

ಯಾಜ್ಞವಲ್ಕ್ಯ ಮಹರ್ಷಿ– ಆ ಪ್ರಶ್ನೆಗೆ ಪ್ರತ್ಯಕ್ಷ ಪ್ರಮಾಣವಿಲ್ಲ. ಅದಕ್ಕಾಗಿ ಪ್ರಯತ್ನಿಸಿದರೂ ಸಿಗುವುದಿಲ್ಲ. ಬರೀ ಊಹೆ, ಕಲ್ಪನೆ ಅಥವಾ ಚಿಂತನೆ ಇವುಗಳ ಮೂಲಕ ಪರೋಕ್ಷವಾಗಿಯೇ ತಿಳಿಯಬೇಕು. ಎಲ್ಲಿಯ ವರೆಗೆ ಮನಸ್ಸು ಇವುಗಳ ಆಧಾರದ ಮೇಲೆ ದೃಢವಾಗಿ ನಿಲ್ಲುವುದೋ ಅಲ್ಲಿಯವರೆಗೆ ಸಾಕಷ್ಟು ಪ್ರಮಾಣವೂ ದೊರೆಯುತ್ತದೆ. ವಿಚಾರಮಾಡಿದರೆ ಮನುಷ್ಯ ಎಂದಮೇಲೆ ಬರೀ ದೇಹವೇನೂ ಅಲ್ಲ. ಯಾರು ದೇಹಿಯೋ ಅವನು ಜೀವನು. ದೇಹ ಎಂಬುದು ಒಂದು ಗೂಡು ಮಾತ್ರ. ಜೀವ ಅದರಲ್ಲಿ ಕೆಲವು ಕಾಲವಿದ್ದು, ತನಗೂ ದೇಹಕ್ಕೂ ಇರುವ ಅನುಬಂಧ ಹರಿದಾಗ ಬಿಟ್ಟುಹೋಗುವುದು. ಹಾಗೆ ದೇಹವನ್ನು ಬಿಟ್ಟು ಹೊರ ಹೋದರೆ ಅದು ನಾಶವಾಯಿತು ಎಂದರ್ಥವಲ್ಲ ; ಈ ದೇಹವನ್ನು ತ್ಯಜಿಸಿ ಬೇರೆಯಾಯಿತು ಅಷ್ಟೆ. ಹಾವು ತನ್ನ ಪರೆಯನ್ನು ಬಿಟ್ಟರೆ ಹೇಗೋ ಹಾಗೆ. ಪರೆಯನ್ನು ಬಿಟ್ಟಾಕ್ಷಣ ಹಾವು ಸಾಯುವುದಿಲ್ಲ. ಪರೆ ಮಾತ್ರ ಸಾಯುತ್ತದೆ. ಈ ದೇಹದ ಕತೆಯೂ ಹಾಗೆಯೇ. ಇಂತಹ ದೇಹ ಕೋಶ ಗಳನ್ನು ಎಷ್ಟೋ ಬಾರಿ ಧರಿಸುವುದು ಮತ್ತು ಕಳೆಯುವುದು ಜೀವ. ದೇಹಕ್ಕೆ ಮಾತ್ರ ಅವಸಾನ.

ಈ ವಿಶ್ವಪ್ರಪಂಚದಲ್ಲಿ ಜೀವಬ್ರಹ್ಮನನ್ನು ಯಾರೂ ನಾಶಮಾಡ ಲಾರರು. ಅಥವಾ ನಾಶಪಡಿಸುವುದಕ್ಕೆ ಪ್ರಯತ್ನಿಸಿದರೂ ಆಗುವಂತಿಲ್ಲ. ಏಕೆಂದರೆ ಅದು ಮೂಲವಸ್ತುವಿನ ಅಂಶ. ನಾವು ಇದಕ್ಕೊಂದು ಸುಲಭ ವಾದ ಉದಾಹರಣೆಯನ್ನು ಕೊಡಬಹುದು. ಮೂಲವಸ್ತುವಿನ ಅಂಶ ಗಳಾದ ಕಲ್ಲು, ಮರಳು, ಮಣ್ಣು ಇವುಗಳನ್ನು ನಾಶಮಾಡಲು ಸಾಧ್ಯವೇ ಅದರ ನಾಮರೂಪಗಳನ್ನು ಬಿಟ್ಟು ? ಅದರಂತೆಯೇ ಈ ಚೇತನ. ಆದ್ದ

ರಿಂದ ಚೇತನ ಎಂದೆಂದಿಗೂ ಅವಿನಾಶಿ. ಯಾವ ವಸ್ತುವಿನ ಮೂಲ ಈ ಚೇತನ ಬೆಳಗುತ್ತಿದೆಯೋ ಆ ಮಧ್ಯವರ್ತಿಯನ್ನು ನಾಶಪಡಿಸಲ ಸಾಧ್ಯ; ಅಂದರೆ, ನಾಮರೂಪಗಳನ್ನು ಮಾತ್ರ.

ದೇಹಿಯಾದ ಪ್ರಾಣನು ದೃಶ್ಯಪ್ರಪಂಚದ ಮಧ್ಯೆ ನೆಲೆನಿಂತಾಗ ತನ್ನ ನೈಜರೂಪವನ್ನು ಮರೆತು ದೃಶ್ಯಧರ್ಮವನ್ನೇ ತಾನು ತನ್ನದು ಎಂದು ಭ್ರಮಿ ಸುತ್ತಾನೆ. ತುಳುಕಾಡುತ್ತಿರುವ ನೀರಿನಲ್ಲಿ ಇಣಿಕಿನೋಡುತ್ತ ಕುಲುಕುವ ನೀರಿನ ಧರ್ಮವನ್ನೇ ಆರೋಪಮಾಡಿಕೊಂಡು ತಾನು ಕುಲುಕಾಡಿ ಒಡೆದು ಛಿದ್ರವಾಗುತ್ತಿರುವೆ ಎಂದು ಭ್ರಮಿಸಿದರೆ ಹೇಗೋ ಹಾಗೆ. ಆತ್ಮ–ಅನಾತ್ಮ ವಸ್ತುವಿನೊಂದಿಗೆ ಬೆರೆತು ತನ್ನನ್ನು ತಾನು ಮರೆತು, ದೇಹ–ಇಂದ್ರಿಯ–ಮನಸ್ಸುಗಳೇ ತಾನೆಂಬ ನಂಬುಗೆಯನ್ನೇ ದೃಢಗೊಳಿಸಿದರೆ ಇವೇ ನಾನು ಎಂಬ ತಾದಾತ್ಮ್ಯಭಾವನೆ ಮೂಡುವುದು. ಅಂತಲೇ, ಸಾಮಾನ್ಯರಿಗೆ ಆತ್ಮ–ಅನಾತ್ಮ ವಸ್ತುವನ್ನು ಅರಿಯುವುದಾಗಲೀ, ಆತ್ಮನನ್ನು ಅನಾತ್ಮ ವಸ್ತುವಿನಿಂದ ಬೇರ್ಪಡಿಸುವುದಾಗಲೀ ಆಗುವುದಿಲ್ಲ; ಇದು ಬಹಳ ಕಷ್ಟದ ಮಾತು. ಆದ್ದರಿಂದಲೇ, ಈ ವಿಶ್ವಪ್ರಪಂಚ ಅನಾತ್ಮಭಾವ ದಲ್ಲೇ ಸರ್ವತ್ರ ಮುಳುಗಿಹೋಗಿದೆ.

ದೃಶ್ಯವಸ್ತುವಿನಷ್ಟು ಸುಲಭವಾಗಿ ಆತ್ಮವಸ್ತುವನ್ನು ಗ್ರಹಿಸುವುದು ಸಾಧ್ಯವಿಲ್ಲ ಮತ್ತು ಸ್ಪಷ್ಟವಾಗಿ ವಿಷಯೀಕರಿಸುವುದಾಗಲೀ ವಿಷದೀಕರಿಸು ವುದಾಗಲೀ ಆಗದ ಮಾತು. ಆತ್ಮಧರ್ಮ ಸೂಕ್ಷ್ಮಾತಿಸೂಕ್ಷ್ಮವಾದುದು. ಇದನ್ನು ನಾವು ನೋಡುವುದಾಗಲೀ ಮುಟ್ಟುವುದಾಗಲೀ ಸಾಧ್ಯವಾಗದ ಪ್ರಯುಕ್ತ ತಿಳಿಯುವುದೂ ಕಷ್ಟವೇ. ದೇಹೇಂದ್ರಿಯಗಳ ಮುಖೇನ ಆತ್ಮ ವಸ್ತುವನ್ನು ಗ್ರಹಿಸುವುದೆಂದರೆ ಕುರುಡನೊಬ್ಬ ನೋಡಬಯಸಿದಂತಾಗು ತ್ತದೆ. ಭೋಗದೃಷ್ಟಿಗೆ ಆತ್ಮಾನ್ವೇಷಣೆ ಸಾಧ್ಯವೇ ಇಲ್ಲ. ಐಹಿಕ ಸುಖ ಭೋಗಗಳು ಕ್ಷಣಿಕವಾದರೂ ಸಹ ಭೋಗದೃಷ್ಟಿ ಕೇಂದ್ರೀಕೃತವಾಗುವುದು ಅದರಲ್ಲೇ. ಅಧಿಕಾರ ವೈಭೋಗಗಳು ಕೈಬೆರಳ ಸಂಧಿಯಲ್ಲಿ ನುಸುಳಿ ಹೋಗುತ್ತಿರುವುದನ್ನು ಕಣ್ಣಿಂದ ನೋಡುತ್ತಿದ್ದರೂ ದುರಾಸೆ ಬಿಡುವುದಿಲ್ಲ. ಇನ್ನೂ ಸಂಗ್ರಹಿಸುವ ಕುತೂಹಲ ಬೆಳೆಯುತ್ತಲೇ ಇರುತ್ತದೆ. ಯಾರಿಗೂ

ಬದುಕು ಶಾಶ್ವತವಲ್ಲ. ಈ ಪ್ರಪಂಚಕ್ಕೆ ದೇಹಿಗಳಾಗಿ ಯಾರೇ ಬರಲಿ, ಅವರು ದೇವತೆಗಳಾಗಿರಬಹುದು ಮನುಷ್ಯರಾಗಿರಬಹುದು ಯಾರೂ ಇಲ್ಲಿ ಶಾಶ್ವತವಾಗಿ ಇರುವಂತಿಲ್ಲ. ಕೆಲವು ಕಾಲ ಹೆಚ್ಚು ಕಡಿಮೆಯಾಗಿ ಬದುಕಬಹುದು ಅಷ್ಟೆ. ಕೊನೆಗೆ ಈ ದೇಹ ಮಣ್ಣಿನ ಹುಡಿಯಲ್ಲಿ ಸೇರಿ ಮಣ್ಣೇ ಆಗುತ್ತದೆ. ಎಷ್ಟೇ ಪ್ರಯತ್ನಿಸಿದರೂ ದೇಹವನ್ನು ಅಮೃತ ಗೊಳಿಸಲಾಗುವುದಿಲ್ಲ.

ಭೋಗೇಚ್ಛೆಯಿಂದ ಇಂದ್ರಿಯಗಳನ್ನು ಮಿತಿಮೀರಿ ಅನುಭವಿಸು ವುದಕ್ಕೆ ಆಗುವುದಿಲ್ಲ. ಅವು ಕ್ರಮಕ್ರಮವಾಗಿ ಜೀರ್ಣಹೊಂದಿ ಸಂಬಂಧ ಪಟ್ಟ ರೋಗಗಳು ಅಂಟಿ ಕಾಡತೊಡಗುತ್ತವೆ. ಅವುಗಳ ನಿವಾರಣೆ ಸುಲಭ ಸಾಧ್ಯವಲ್ಲ. ದೇಹ ರೋಗಗಳ ಬಿಗಿಮುಷ್ಟಿಯಲ್ಲಿ ಸಿಕ್ಕುವವರೆಗೆ ಆಯಸ್ಸು ಇಷ್ಟೆ ಎಂಬುದರ ಅರಿವು ಮನಸ್ಸಿಗೆ ಇರುವುದಿಲ್ಲ. ಅನಂತರ ಅಗಾಧವಾದ ಗೋಳು ಸಂಕಟದಿಂದ ನರಳಬೇಕಾಗುತ್ತದೆ. ಭೋಗಗಳೂ ಕ್ಷಣಿಕ. ಜೀವನವೂ ಕ್ಷಣಿಕ. ಆದ್ದರಿಂದ ದೇಹೇಂದ್ರಿಯಗಳನ್ನು ಎಲ್ಲೆಡೆಯೂ ಹರಿ ಬಿಡುವವನಿಗೆ ಎಲ್ಲಿಯ ಶಾಂತಿ ? ಇಂದ್ರಿಯ ನಿಗ್ರಹದಿಂದ ಶಾಂತಿ .ಹಾಗೆ ನಿಗ್ರಹಿಸಿದಾಗ ಅದಕ್ಕೂ ಮೀರಿದ ಮತ್ತಾವುದೋ ಒಂದು ವಸ್ತುವಿದೆ ಯೆಂಬುದು ತಿಳಿದುಬರುತ್ತದೆ. ಆಗಲೇ ಆತ್ಮಸಾಕ್ಷಾತ್ಕಾರದ ಕಡೆ ಮನಸ್ಸು ಹರಿಯಬೇಕಾದರೆ. ಮನಸ್ಸು ನಾನಾ ಪ್ರಲೋಭನೆಗಳಿಗೆ ಬಿದ್ದಾಗ ಹೇಗೆ ಸತ್ಯದ ಅರಿವು ಮೂಡುವುದಿಲ್ಲವೋ ಹಾಗೆಯೇ ಈ ಆತ್ಮನ ವಿಚಾರ. ಇಂದ್ರಿಯಗಳ ವೈಭೋಗದಿಂದ ಆತ್ಮನ ಅರಿವು ಮೂಡುವುದೇ ಇಲ್ಲ. ಇದನ್ನೆಲ್ಲಾ ಅರ್ಥವತ್ತಾಗಿ ತಿಳಿಯಬೇಕಾದರೆ ಒಬ್ಬ ಧೀಮಂತನಾದ ಗುರು ವಿನ ಮೂಲಕವೇ ತಿಳಿಯಬೇಕು. ಗುರುವಿನ ಮೂಲಕವಾದರೆ ಅನು ಮಾನ ಸಂಶಯಗಳು ದೂರವಾಗಿ ವಿಧಿವಿಧಾನಗಳು ತಿಳಿವಳಿಕೆಗೆ ಬರುತ್ತವೆ. ಆತ್ಮವಸ್ತು ಸೂಕ್ಷ್ಮಾತಿಸೂಕ್ಷ್ಮ. ಅಣುಪರಮಾಣುಗಳಿಗಿಂತಲೂ ಸೂಕ್ಷ್ಮ. ಅದನ್ನು ಯಾರೂ ಯಾವ ವಸ್ತುವಿನ ಮೂಲಕವೂ ಕಾಣಲಾಗುವುದಿಲ್ಲ ಮತ್ತು ತಿಳಿಯಲೂ ಆಗುವುದಿಲ್ಲ. ಆತ್ಮಸಾಕ್ಷಾತ್ಕಾರ ಪಡೆದವರು ಮಾತ್ರ ತಿಳಿಯಬಲ್ಲರು ಅಥವಾ ತಿಳಿಸಬಲ್ಲರು. ಹಾಗೆ ಒಬ್ಬ ಧೀಮಂತ ಅನು

ಭಾವಿ ತನ್ನ ಅನುಭವವನ್ನು ಮತ್ತೊಬ್ಬನಿಗೆ ಪರಿಚಯಮಾಡಿಸುವುದರಿ
ಆತ್ಮಜ್ಞಾನದ ಅರಿವು ಬೆಳೆಯಬೇಕು. ಅದು ಶಾಸ್ತ್ರೀಯವಾದುದೇ
ಅಲ್ಲ. ಆಧ್ಯಾತ್ಮಿಕ ಸತ್ಯಗಳು ವ್ಯಕ್ತವಾಗುವದು ಅನನ್ಯ ಅನುಭವದ
ಇಂಥ ಆತ್ಮವಿದ್ಯೆಯನ್ನು ಯೋಗ್ಯರಾದ ಶಿಷ್ಯರಿಗೆ ಹೇಳಿಕೊಡುವದರಲ್ಲಿ
ಗುರುವಿನ ಅನುಭವ ಉಳಿದು ಬೆಳೆಯಬೇಕಾದರೆ. ಅಂತಲೇ, ಈ ಅನುಭ
ಸಾರೋದ್ಧಾರವಾಗಿ ಬೆಳಗಿ ಭಾರತವರ್ಷದಲ್ಲಿ ಆಚಂದ್ರಾರ್ಕವಾಗಿ ನ
ನಿಂತು ಆಧ್ಯಾತ್ಮ ಸತ್ಯವನ್ನು ಬೆಳಗಬೇಕು. ಇದೇ ಆತ್ಮವಿದ್ಯೆ ಮತ
ನಿನ್ನ ಪ್ರಶ್ನೆಗೆ ಉತ್ತರ ಮೀಮಾಂಸೆ ಅಥವಾ ಉಪನಿಷತ್ ವಿಚಾರಧಾ

ಕಾತ್ಯಾಯನ–ಬ್ರಹ್ಮನ್ ! ನಾನು ಸಂತುಷ್ಟನಾದೆ ಮತ್ತು ಬಹ
ಉಪಕೃತನೂ ಆದೆ. ನಿನಗೆ ವಂದನೆ.

ಉದಂಕ–ಭಗವನ್ ! ಹಾಗೆಯೇ ನನ್ನ ಆತ್ಮಪೂರ್ವಕವಾದ ವಂದ
ಯನ್ನೂ ಸ್ವೀಕರಿಸೋಣವಾಗಲಿ.

ದೇವರಾತ–ಭಗವನ್ ! ನಮಸ್ತೇಸ್ತು. ನಮಸ್ತೇಸ್ತು.

ಉಚ್ಛ್ವಾಸ ೫

೦

ಪ್ರಾತಃಕಾಲೀನ ಅಮೋಘವಾದ ಶಾಂತ–ಪ್ರಶಾಂತ ಸಮಯ.

ಭಾರತವರ್ಷದ ಪುಣ್ಯವಾಹಿನಿ ಗಂಗಾನದಿಯ ಅಮೋಘವಾದ ಅನುಪಮ ಜಲಧಾರೆಯ ಮಂಜುಳಗಾನ ಜುಳು. ಜುಳು. ಜುಳು. ಜುಳು.

ಯಾಜ್ಞವಲ್ಕ್ಯ ಮಹರ್ಷಿ ಆ ನಿರ್ಮಲವಾರಿಧಾರೆಯಲ್ಲಿ ಮುಳು ಮುಳುಗಿ ಪ್ರತ್ಯಗ್ನ ಸ್ನಾನಮಾಡಿ ಪ್ರಾತಾಃಹ್ನೀಕ ಧ್ಯಾನಗಳನ್ನು ಮುಗಿಸಿದಾಗ ತಲೆಯ ಸುತ್ತಲೂ ಇಳಿಬಿದ್ದಿದ್ದ ಘನಮೇಚಕ ಕೇಶಪಾಶಗಳಿಂದ ನೀರು ತೊಟ್ಟಕ್ಕಿ ಎಳೆಎಳೆಯಾಗಿ ಹರಿಯುತಿತ್ತು, ಶರೀರಪ್ರಕೃತಿಯಲ್ಲಿ. ಪಶ್ಚಿಮಾಕಾಶದ ಕರ್ಮುಗಿಲ ರಾಶಿಯ ಮೇಲೆ ಮಿನುಮಿನುಗುವ ವೃಶ್ಚಿಕ ರಾಶಿ, ದೂರದೂರ ದಿಗ್ದೇಶದಲ್ಲಿ ಲೋಹಿತ ಕಾಂತಿಯ ಮಂಗಳಗ್ರಹ, ನೆತ್ತಿಯ ನೇರಕ್ಕೆ ಉಜ್ವಲಿಸುವ ಧ್ರುವನಕ್ಷತ್ರ. ಒಂದೇ ಎರಡೇ ? ನಾನಾ ಗ್ರಹಮಂಡಲಿಯ ಚಿತ್ರವಿಚಿತ್ರ ಸಮಾವೇಶ. ಮಹರ್ಷಿ ಎಷ್ಟೋ ಬಾರಿ ತಲೆ ಎತ್ತಿ ನಕ್ಷತ್ರಲೋಕವನ್ನು ಆಸ್ತೆಯಿಂದ ನಿಟ್ಟಿಸಿ ನೋಡಿದ. ರೋಮರೋಮವೂ ಉಚ್ಛ್ವಸಿತವಾಯಿತು. ಹೃನ್ಮನಗಳು ರಸಾವಿಷ್ಟತೆಯಿಂದ

ತುಂಬಿತುಳುಕಿದುವು. ಆನಂದಪುಳಕಿತ ಪ್ರಜ್ಞಪ್ತಿ ಪ್ರಜ್ಞೆ ಮ
ಪ್ರಬುದ್ಧಬುದ್ಧಿ ಇವುಗಳ ಗಾಢವಾದ ಸಂಯೋಜನೆಯಲ್ಲಿ ಕಾಲ-ನಿಯ
ವಿದ್ಯೆ-ಬುದ್ಧಿ ಸಮಾಹಿತವಾಗಿ ಪ್ರಾಣಕುಂಡಲಿನಿಯಲ್ಲಿ ಧುಮುಧುವಿ
ಹತ್ತಿತು ವೇದಾಂತ ಜ್ಞಾನಧಾರೆ. ಮಹರ್ಷಿ ಹಾಗೇ ತನಗೆ ಬೇಕಾಗಿ
ದರ್ಭೆಯ ಕಂತೆ, ಸಮಿತ್ತುಗಳ ಕಟ್ಟನ್ನು ಕೈಗೊಂಡು ಆಶ್ರಮಾಭಿಮು
ವಾಗಿ ನಡೆದ. ಆ ಹಾದಿ ಕೆಲವೇ ಕೆಲವು ಘಳಿಗೆಯಲ್ಲಿ ಕಳೆಯಿತ
ಕೈಸಾಲೆಯಲ್ಲಿ ಕಂತೆಯನ್ನಿಳುಹಿ ಬೆನ್ನಿನ ಮೇಲೆ ಇಳಿಬಿದ್ದಿದ್ದ ಕೇಶಪಾ
ಗಳನ್ನು ಎತ್ತಿ ನಡುನೆತ್ತಿಯ ಮೇಲೆ ಮುಡಿಗಟ್ಟಿದ. ಅಡಿಯಿಂದ ಮುಡಿಯ
ವರೆಗೂ ಸ್ವರ್ಣ ಸಲಾಕೆಯಂತೆ ಸುವರ್ಣಮಯವಾದ ಅಂಗಯಷ್ಟಿಯ
ಪುಷ್ಟಿ ಉಜ್ವಲಿಸಿತು ಅಗ್ನಿಕುಂಡದ ಹೊಂಬೆಳಕಿನಲ್ಲಿ. ಮಹರ್ಷಿ ದರ್ಭೆಯ
ಕಂತೆ ಸಮಿತ್ತುಗಳ ಕಟ್ಟನ್ನು ಅಗ್ನಿಕುಂಡದ ಬಳಿ ಇಟ್ಟು ಅಗತ್ಯ ವಸ್ತುಗಳ
ಮೇಲೆ ಕಣ್ಣಾಡಿಸಿದ. ಅಲ್ಲಿ ಪೂಜಾದ್ರವ್ಯಗಳ ಹರಿವಾಣ, ಹೂಬುಟ್ಟಿ,
ಹಾಲು-ಹಣ್ಣುಗಳು, ಎಣ್ಣೆ-ತುಪ್ಪಗಳು, ತಟ್ಟೆಯಲ್ಲಿ ಆವುದೋ ಉಪಾ
ಯನ, ನಾರೀಕೇಳ, ಶ್ರೀಗಂಧ ಹೀಗೆ ನಾನಾ ವಸ್ತುಗಳು ಆಗಲೇ ಸಂಗ್ರ
ಹೀತವಾಗಿದ್ದುವು. ಸಂತೃಪ್ತಿಯಿಂದ ಪದ್ಮಾಸನಸ್ಥನಾಗಿ ಭಾವಸಿಕ್ತ
ಯಿಂದ ಅಗ್ನಿಯಲ್ಲಿ ಹವನ ಮಾಡತೊಡಗಿದ. ಸ್ಥಿರ ಗಂಭೀರವಾದ ಶರೀರ
ಪ್ರಕೃತಿಯಲ್ಲಿ ಮನೋಗಾಮಿಗಳಾದ ಪಂಚನಾಡಿಗಳ ಸ್ವಸ್ಥತೆಯಿಂದ
ಹೃದಯಸ್ಥಿತನಾದ ಬ್ರಹ್ಮನಲ್ಲಿ ಏಕಾಗ್ರಚಿತ್ತ ನೆಲೆನಿಂತಾಗ ಉಚ್ಛ್ವಾಸ-
ನಿಶ್ವಾಸಗಳ ಗಂಭೀರಗತಿ ಕಂಡೂ ಕಾಣದಷ್ಟು ಹಿತಮಿತ. ನಿರ್ನಿಮೇಶ
ನಯನಗಳಲ್ಲಿ ಭಾವಜ್ವಾಲೆ ಉಕ್ಕುತ್ತಿದೆಯೋ ಎಂಬಷ್ಟು ಹೊಳಪು.
ಪ್ರಸ್ತರ ಪ್ರತಿಮೆಯಂತೆ ನಿಶ್ಚಲಭಂಗಿಯಲ್ಲೆ ಧ್ಯಾನಾಸಕ್ತನಾಗಿದ್ದು ಅನಂತರ
ಮಂತ್ರೋಚ್ಚಾರಣೆ ಮಾಡತೊಡಗಿದ. ನಿಶ್ಶಬ್ದ ಪ್ರಕೃತಿಯಲ್ಲಿ ಭಾವನೋ
ಜ್ವಲತೆಯಿಂದ ಪ್ರವಹಿಸಿತು ಶ್ರೀಕಂಠಧಾರೆ.

ಅಗ್ನೇ ನಯ ಸುಪಥಾ ರಾಯೇ ಅಸ್ಮಾನ್
ವಿಶ್ವಾನಿ ದೇವ ವಯುನಾಗಿ ವಿದ್ವಾನ್ ।
ಯುಯೋಽಧ್ಯಸ್ಮಜ್ಜುಹುರಾಣಮೇನೋ
ಭೂಯಿಷ್ಠಾಂ ತೇ ನಮ ಉಕ್ತಿಂ ವಿಧೇಮ ॥

ಒಂದರನೋಲೊಂದರಂತೆ ಹರಿದ ಅಖಂಡ ಮಂತ್ರಧಾರೆ ಶಾಂತಿ ಸಮುದಾಯದಲ್ಲಿ ಪ್ರತಿಧ್ವನಿಸುತಿತ್ತು ಕಂಚುಮಿಡಿದಂತೆ. ನಾಸಿಕಾಗ್ರ ದೆಡೆಗೆ ಕೇಂದ್ರೀಕೃತವಾದ ದೃಷ್ಟಿ ಮತ್ತು ದೃಢಮನಸ್ಸುಗಳು ಸಾಕ್ಷೀಭೂತ ವಾಗಿದ್ದುವು ದೀಕ್ಷೆಯ ಸರ್ವಾಂಗ ವಿಸ್ತಾರಕ್ಕೆ. ಧ್ಯಾನಗಂಭೀರನಾದ ಮಹರ್ಷಿ ಯಜ್ಞಕರ್ಮದಲ್ಲಿ ತೀವ್ರ ತನ್ಮಯನಾಗಿದ್ದ. ಹೋಮಧೂಮ ಉಂಗುರುಂಗುರವಾಗಿ ಗಗನಕೇರುತಿದ್ದಂತೆ ಶ್ರೀಗಂಧದ ಕಮನೀಯ ಕಂಪು ಪರಿಸರವನ್ನೆಲ್ಲ ತಾನೇತಾನಾಗಿ ವ್ಯಾಪಿಸುತಿತ್ತು. ಆಗಣ ದೃಶ್ಯಮಾನ ಸೌಂದರ್ಯವೂ ಹೃದಯಂಗಮ; ಶ್ರೀಗಂಧ ಸೌಂದರ್ಯವೂ ಹೃದ ಯಂಗಮ.

ಕಾಲೀ ಕರಾಲೀ ಚ ಮನೋಜವಾ ಚ
ಸುಲೋಹಿತಾ ಯಾ ಚ ಸುಧೂಮ್ರ ವರ್ಣಾ |
ಸ್ಫುಲಿಂಗಿನೀ ವಿಶ್ವರುಚೀ ಚ ದೇವೀ
ಲೇಲಾಯಮಾನಾ ಇತಿ ಸಪ್ತ ಜಿಹ್ವಾಃ ||

ಆ ವಾಕ್ ಸ್ರೋತಸ್ವಿನಿಯಲ್ಲಿ ಒಂದು ಅಪೂರ್ವವಾದ ಅನತಿಕ್ರಮ್ಯ ವಾದ ಆಕರ್ಷಣೆಯಿತ್ತು.

ವಾಯುರನಿಲಮಮೃತಮಥೇದಂ ಭಸ್ಮಾಂತಂ ಶರೀರಮ್ |
ಓಂ ಕ್ರತೋ ಸ್ಮರ ಕೃತಂ ಸ್ಮರ ಕ್ರತೋ ಸ್ಮರ ಕೃತಂ ಸ್ಮರ ||

ಕವಿವರ್ಯರು ಯಾವುದನ್ನು 'ಭಾವಾರುಣತೇಜ' ಎಂದು ಬಹು ಮೂಲ್ಯವಾಗಿ ಬಣ್ಣಿಸುವರೋ ಅಂತಹ ದಿವ್ಯತೇಜಸ್ಸು ಅನುಭೂತ ವಾಗಿತ್ತು ಶ್ರೀಸಮುಜ್ವಲವಾದ ಮುಖಬಿಂಬದಲ್ಲಿ. ಪ್ರತಿಯೊಂದು ಅಂಗ ಭಂಗಿಗಳಿಂದಲೂ ಹೊಮ್ಮುವ ಭಕ್ತಿಯ ಲಹರಿಗಳು ಸುವರ್ಣಪ್ರಭೆಯಂತೆ ಸುತ್ತಮುತ್ತ ತರಂಗಿತವಾಗುತಿದ್ದುವು ; ಭಕ್ತಿ-ಜ್ಞಾನ, ಸೌಮನಸ್ಯ-ಸೌಜನ್ಯ, ಧರ್ಮ-ಕರ್ಮ, ಆತ್ಮ-ಅಧ್ಯಾತ್ಮಗಳ ಅಭೂತಪೂರ್ವತಮ ಸಂಯೋಗದಿಂದ. ಅವು ಆಂತರಂಗಿಕ ಆವಿರ್ಭಾವವೋ ಪ್ರಾಕೃತಿಕ ಆಶೀ

ರ್ಮಾದವೋ ಊಹಿಸಿ ಹೇಳುವುದು ಕಷ್ಟ. ಪ್ರತಿಯೊಂದು ಕರ್ಮವಿಶೇ ದಲ್ಲಿಯೂ ಪರಿಪಾಟೀವಿಹಿತ ಶಿಷ್ಟಾಚಾರ ಕಂಡುಬರುತ್ತದೆ. ಒಂದೆಡೆ ಪಂ ಕಳಶಗಳು ಸ್ಥಾಪಿತವಾಗಿದ್ದುವು. ದೀಪವರ್ತಿಕೆ ಉರಿಯುತಿತ್ತು. ಉದ್ದ ಅಕ್ಕಿಗಳಿಂದ ರಚಿತವಾದ ಒಂದು ತ್ರಿಕೋಣ. ಇನ್ನೊಂದು ಶಕ್ತಿ ತಾಂತ್ರಿಕರ ಶ್ರೀಚಕ್ರದಂತೆ ಅಂಕಿತವಾದ ಅಧೋಮುಖ ತ್ರಿಕೋಣ.ಚಕ್ರ ಮಧ್ಯದಲ್ಲಿ ಪ್ರಫುಲ್ಲ ಶತದಳಪದ್ಮ. ಪದ್ಮದ ಸುತ್ತಲೂ ಸಿಂಧೂರದಿಂ ರಚಿತವಾದ ಗೋಳಚಕ್ರ, ಧಾರ್ಮಿಕ ಅನುಷ್ಠಾನದಲ್ಲಿ ಹೊಸ ಅಧ್ಯಾಯ ವನ್ನೇ ತೆರೆದಂತೆ ಯಾವುಯಾವುದೋ ವಿಚಿತ್ರ ಉಪಾದಾನ. ಮಹರ್ಷಿ ಕರ್ಮನಿಷ್ಠೆಯಲ್ಲಿ ಸಂಪೂರ್ಣ ನಿಮಗ್ನನಾಗಿದ್ದಾನೆ. ಒಮ್ಮೆ ಆನಂದಗದ್ಗದ ಭಾವ ಮುಖದಲ್ಲಿ ಪ್ರಕಟವಾದರೆ ಇನ್ನೊಮ್ಮೆ ರಸಾವಿಷ್ಟತೆ ನೆಲೆನಿಲ್ಲು ತ್ತದೆ.

ಶಿವನ ಸ್ಮಿತರೇಖೆಯಂತಹ ಮುಂಬೆಳಕು ಮೂಡಣದಲ್ಲಿ ಮೂಡಿ ದಾಗ ಕದ್ದಿಂಗಳು ಕ್ಷಯಹೊಂದಿತು ಕಾಲಧರ್ಮಕ್ಕೆ ತಲೆಬಾಗಿ. ಕ್ರಮ ಕ್ರಮೇಣ ಅರುಣರಾಗದಿಂದ ಆಪ್ಲಾವಿತವಾಯಿತು ಜಗತ್ತು. ಇನ್ನಷ್ಟು ಹೊತ್ತಿನೊಳಗಾಗಿ ಅಂದರೆ ಯಜ್ಞಕರ್ಮದ ವಿಶೇಷಾಂಕ ಮುಗಿಯು ತ್ತಿರುವ ಸಮಯದಲ್ಲೇ ಮೆಟ್ಟಲಿನ ಬಳಿಯಲ್ಲಿ ಯೋಗಿನಿ ಮೈತ್ರೇಯೀ ದೃಗ್ಗೋಚರಿಸಿದಳು. ಮಹರ್ಷಿ ಒಂದುಕ್ಷಣ ದೃಷ್ಟಿಯನ್ನು ಅತ್ತ ಹೊರ ಳಿಸಿ ಮತ್ತೆ ತನ್ನ ಕರ್ತವ್ಯದಲ್ಲಿ ನಿಮಗ್ನನಾದ. ಆತ್ಮಚೇತನವು ಆ ಕ್ಷಣ ಅದರಲ್ಲಿ ಸಂಪೂರ್ಣ ಮುಳುಗಿಹೋಯಿತು.

ಮೈತ್ರೇಯಿಯು ಫಲಪುಷ್ಪಗಳ ಹರಿವಾಣವನ್ನು ಕೈಲಿಹಿಡಿದಿದ್ದಾಳೆ. ಕೊರಳಲ್ಲಿ ಜಪಮಾಲೆ, ತಲೆಯಮೇಲೆ ನಾರುಮಡಿ ಉತ್ತರೀಯ, ಅಪರ ದ್ದೇಶದಲ್ಲಿ ಸ್ವತಂತ್ರವಾಗಿ ಹರಿದಾಡುವ ಅಲಕರಾಶಿ, ಭಕ್ತಿ, ಜ್ಞಾನ, ವೈರಾಗ್ಯಗಳಿಂದ ಪರಿಪುಷ್ಟವಾದ ಮುಖಬಿಂಬದಲ್ಲಿ ಹರಿದ್ರಾಕುಂಕುಮ ಶೋಭಿತಸುಂದರಶ್ರೀ. ಅಹಃ, ಯಜ್ಞಕರ್ಮದ ಮಂಗಳಮುಹೂರ್ತ ಕ್ಕಾಗಿ ವನದೇವಿಯೇ ಮೂರ್ತೀಭವಿಸಿ ಪ್ರತ್ಯಕ್ಷಳಾದಳೋ ಎಂದು ಮನಃ ಬುದ್ಧಿಗಳು ಭ್ರಮಿಸುವಂತಹ ಸನ್ನಿವೇಶ. ಅವಳು ಸ್ವಲ್ಪಹೊತ್ತು ಹೆಜ್ಜೆ

ತೆಗೆಯದೆ ಅಲ್ಲೇ ನಿಂತಿದ್ದು ಅನಂತರ ನಾಲ್ಕು ಹೆಜ್ಜೆ ಮುಂದೆ ಬಂದು, ಅತ್ಯಂತ ನಿಶ್ಶಬ್ದಗತಿಯಲ್ಲಿ ಹರಿವಾಣವನ್ನು ಮಹರ್ಷಿಯ ಬಳಿಯಲ್ಲಿಟ್ಟು ಗೌರವಭಾವನೆಯಿಂದ ನಮಸ್ಕರಿಸಿ ಸ್ವಲ್ಪದೂರದಲ್ಲಿ ಗಂಭೀರವದನೆಯಾಗಿ ನಿಂತುಕೊಂಡಳು. ಹೃದಯಬನದಲ್ಲಿ ಎಂದೂ ಇಲ್ಲದ, ಅಕಲ್ಪಿತವಾದ ಅವ್ಯಕ್ತ ಭಯ-ಲಜ್ಜೆಗಳು ಮೂಡಿ ಬೃಹದಾಕಾರವಾಗಿ ಬೆಳೆದು ಮನಸ್ಸಾ ಗರಗಳನ್ನು ಅಲ್ಲೋಲಕಲ್ಲೋಲಗೊಳಿಸತೊಡಗಿದುವು. ಎಷ್ಟೇ ಪ್ರಯತ್ನಿ ಸಿದರೂ ತನ್ನ ಹತೋಟಿಯನ್ನು ಮೀರುತ್ತಿರುವುದನ್ನು ಗಮನಿಸಿದರೆ ಒಮ್ಮೆ ಅಲ್ಲಿಂದ ಹಿಂದಿರುಗಿ ಹೋಗಿಬಿಡಲೇ ಎಂಬ ಯೋಚನೆಯೂ ಸಹ. ಆದರೆ, ಸ್ಥಿರಚಿತ್ತದಲ್ಲಿ ಸಂಭವಿಸಿದ ಕ್ಷಣಿಕವಾದ ವ್ಯತಿರಿಕ್ತಭಾವನೆಗೆ ಈಡಾಗಬಾರ ದೆಂಬ ಪರಿಜ್ಞಾನಕ್ಕೆ ಶರಣಾಗಿ ಅಲ್ಲೇ ನಿಂತುಕೊಂಡಳು. ಸ್ಥಿರಚಿತ್ತದಲ್ಲಿ ಅಂತರ್ನಿಹಿತ ಸ್ಥಿರಭಾವವನ್ನು ಮತ್ತೆ ದೃಢೀಕರಿಸಿದಾಗ ಹೃದಯ ಮೃದಂಗ ವ್ಯಾಪ್ತಿಗೆ ಮೀರಿ ಮಿಡಿಯಿತು. ದೇಹದಾದ್ಯಂತ ಬಿಸಿರಕ್ತದ ಝರಿ ತೀವ್ರ ಗತಿಯಲ್ಲಿ ಹರಿದಾಡಿತು. ಆದರೂ, ಅವಳು ಆತ್ಮವಿಶ್ವಾಸವನ್ನು ಕಳೆದು ಕೊಳ್ಳಲಿಲ್ಲ. ಭಾವೋದ್ವೇಗದಿಂದ ಮುಖಬಿಂಬ ಕೆಂಪಡರಿತು. ದೂರ ಭವಿಷ್ಯದ ವಿಚಾರಗತ್ತರಿಯ ಮೇಲೆ ಸೂಕ್ಷ್ಮಾತಿಸೂಕ್ಷ್ಮವಾಗಿ ಹರಿದಾಡು ತಿತ್ತು ಮನಸ್ಸು. ಅವಳು ಪುನಃ ವಿಚಲಿತಳಾಗಲಿಲ್ಲ. ಮಹರ್ಷಿಯು ತನ್ನ ದೀಕ್ಷೆಯನ್ನು ಮುಗಿಸುವುದನ್ನು ಎದುರು ನೋಡುತ್ತ ಅಲ್ಲಿಯೇ ನಿಂತುಕೊಂಡಳು.

ಯಾಜ್ಞವಲ್ಕ್ಯ ಮಹರ್ಷಿಯು ಹವನವನ್ನು ಮುಗಿಸಿದ ನಂತರ ಅತ್ಯಂತ ಆತ್ಮೀಯತೆಯಿಂದ-ಯೋಗಿನೀ, ಮೈತ್ರೇಯೀ! ಹೀಗೆ ಬಾ, ಕುಳಿತುಕೊ, ಎನ್ನುತ್ತ ಒಂದು ತೃಣಾಸ್ತರವನ್ನು ಅವಳಿಗೋಸುಗ ತೆಗೆದು ಕೊಡುವನು.

ಆ ಮಾತಿನ ಸೌಜನ್ಯತೆಯನ್ನು ಗಮನಿಸಿದ ಮೈತ್ರೇಯಿಯು ಭಯ, ಲಜ್ಜೆಗಳನ್ನು ಬದಿಗೊತ್ತಿ ಭಕ್ತಿಭಾವದಿಂದ ಕೈಮುಗಿದು ನಸುದೂರದಲ್ಲಿ ಕುಳಿತುಕೊಳ್ಳುತ್ತಾಳೆ. ಮುಖಮುದ್ರೆ ಪ್ರಶಾಂತ ಗಂಭೀರವಾಗಿತ್ತು.

ಯಾಜ್ಞವಲ್ಕ್ಯ ಮಹರ್ಷಿ ದೇವಿ, ಈ ಹೊತ್ತಿನಲ್ಲಿ ಇಲ್ಲಿಯವರೆಗೆ

ದಯಮಾಡಿಸಿದ ಕಾರಣವೇನು ಎಂದು ತಿಳಿಯಬಹುದೇ ?

ಮೈತ್ರೇಯಿ– ಮಹರ್ಷಿಗಳು ಪ್ರಶಾಂತವಾಗಿರುವುದು ಈ ಹೊತ್ತಿನಲ್ಲಿ ಎಂಬುದು ಗೊತ್ತು.

ಯಾಜ್ಞ್ಯವಲ್ಕ್ಯ ಮಹರ್ಷಿಯು ಮುಖಮಂಡಲದಲ್ಲಿ ಮಂದಹಾಸವನ್ನು ಸೂಸಿ ತಲೆಯನ್ನು ನಿಧಾನಗತಿಯಲ್ಲಿ ತೂಗುತ್ತ–ಮಂಗಳೇ, ನಮ್ಮ ಕಾರ್ಯಭಾರ ಎಷ್ಟೇ ಇದ್ದರೂ ನಾವು ಪ್ರಶಾಂತತೆಯನ್ನು ಬಿಟ್ಟುಕೊಡಲಾರೆವು. ಅದರಲ್ಲೂ, ಅಗ್ನಿಹೋತ್ರವು ಮುಗಿದು ಮನಸ್ಸು ಕರ್ಮಲೀನವಾಗಿರುವಾಗಿನ ರೀತಿಯೇ ಬೇರೆ. ನೀನು ಒಳ್ಳೆಯ ಸಂದರ್ಭವನ್ನೇ ಆರಿಸಿಕೊಂಡಿದ್ದಿ. ಇರಲಿ, ಇಲ್ಲಿಯವರೆಗೆ ನೀನು ದಯಮಾಡಿಸಿದ ಉದ್ದೇಶವನ್ನು ತಿಳಿಯಬಹುದೇ ? ಆ ಬಗ್ಗೆ ನಾನು ಕುತೂಹಲಿಯಾಗಿರುವೆ.

ಮೈತ್ರೇಯಿಯು ಸ್ವಲ್ಪ ಸಂಕೋಚಭಾವನೆಯಿಂದ ಮುದುಡಿ ಸಂಕುಚಿತವಾದ ಮೆಲುದನಿಯಲ್ಲಿ–ಬಹಳ ದಿನಗಳಿಂದಲೂ ನನ್ನ ಮನದಲ್ಲಿ ಹುದುಗಿದ್ದ ಒಂದು ಉದ್ದೇಶಕ್ಕೆ ಕಟ್ಟುಬಿದ್ದು ನಾನು ನಿಮ್ಮ ಬಳಿಗೆ ಬಂದಿರುವೆ. ಆದರೆ....

ಯಾಜ್ಞವಲ್ಕ್ಯ ಮಹರ್ಷಿ–ಆದರೆ ಎಂದು ಅರ್ಥವಾತೇಕೆ? ಏನಿದ್ದರೂ ಸಂಕೋಚವನ್ನು ಬಿಟ್ಟು ಮಾತನಾಡಬಹುದು. ಯೋಗಿನಿಯಲ್ಲಿ ಸಂಕೋಚ ಪ್ರವೃತ್ತಿಯಾದರೂ ಏಕೆ ?

ಮೈತ್ರೇಯಿ– ನಾವು ಎಷ್ಟೆಂದರೂ ಸ್ತ್ರೀಯರು. ಮನಸ್ಸಿನಲ್ಲಿ ಸಣ್ಣ ಅಳುಕು–ಸಂಕೋಚ ಇದ್ದೇ ಇರುತ್ತೆ. ಅದರಲ್ಲೂ ಹಿರಿಯರ ಬಳಿ....

ಯಾಜ್ಞವಲ್ಕ್ಯ ಮಹರ್ಷಿಯು ಮತಾಡಗೊಡದೆ ನಡುವೆ ಬಾಯಿಹಾಕಿ-ಹಾ, ಅದು ಕೂಡದು. ಯೋಗಿನಿಯಾದವಳಿಗೆ ಎಲ್ಲಿಯ ಸಂಕೋಚ? ಇದೇತರ ಮಾತು?

ಮೈತ್ರೇಯಿ–ಭಗವನ್ ! ಹಾಗಾದರೆ, ತಾವು ಏನೂ ತಪ್ಪಾಗಿ ಭಾವಿಸುವುದಿಲ್ಲವಷ್ಟೆ ?

ಯಾಜ್ಞವಲ್ಕ್ಯ ಮಹರ್ಷಿಯು ಸಮಾಧಾನದಿಂದ ತಲೆಯಾಡಿಸುತ್ತ–ಇಲ್ಲವೇ ಇಲ್ಲ.

ಮೈತ್ರೇಯೀ–ಭಗವನ್ ! ತಮ್ಮ ಅಪ್ಪಣೆ ದೊರೆಯಿತೆಂದು ಭಾವಿಸಿ ನನ್ನ ಇಚ್ಛೆಯನ್ನು ಶ್ರುತಪಡಿಸಲೇ ?

ಯಾಜ್ಞವಲ್ಕ್ಯ ಮಹರ್ಷಿ–ಹಾಗೇ ಆಗಲಿ. ಏನಿದ್ದರೂ ನೀನು ನಿಸ್ಸಂಕೋಚವಾಗಿ ನನ್ನಲ್ಲಿ ಹೇಳಬಹುದು. ಕೇಳಿ ನಾವೂ ಸಹ ವಿಚಾರಮಾಡೋಣ.

ಮೈತ್ರೇಯೀ–ಹಿಂದೆ ತಾವೊಮ್ಮೆ ಆತ್ಮನು ಹೆಣ್ಣೂ ಅಲ್ಲ ; ಗಂಡೂ ಅಲ್ಲ ; ಎಂದು ವ್ಯಾಖ್ಯಾನ ಮಾಡಿದ್ದುಂಟು. ಆ ಸೂತ್ರದ ಪ್ರಕಾರ ನಾನು ತಮ್ಮ ಬಳಿ ಲಜ್ಜೆಯನ್ನು ಬದಿಗಿಟ್ಟು ಮಾತಾಡಬಹುದೇ ?

ಯಾಜ್ಞವಲ್ಕ್ಯ ಮಹರ್ಷಿ–ಆಗಬಹುದು. ನಮ್ಮ ಯಾವ ಅಭ್ಯಂತರವೂ ಇಲ್ಲ.

ಮೈತ್ರೇಯೀ–ಅಂದಮೇಲೆ, ನನ್ನ ಲಜ್ಜಾಹೀನತೆಯನ್ನು ದಯವಿಟ್ಟು ಮನ್ನಿಸಬೇಕು.

ಯಾಜ್ಞವಲ್ಕ್ಯ ಮಹರ್ಷಿ–ನಿನ್ನ ಪೀಠಿಕೆ ನನ್ನ ಕುತೂಹಲವನ್ನು ಕ್ಷಣ ಕ್ಷಣಕ್ಕೂ ಕೆರಳಿಸುತ್ತಿದೆ. ಏನಿದ್ದರೂ ನಿರಾಕುಲತೆಯಿಂದ ತಿಳಿಸಬಹುದು. ಅಕ್ಷರಶಃ ಅದನ್ನು ನಾವು ಕೇಳೋಣ.

ಮೈತ್ರೇಯೀ–ನನ್ನ ಅಧ್ಯಾತ್ಮಿಕ ಪಿಪಾಸೆ ದಿನದಿನಕ್ಕೂ ವೃದ್ಧಿಯಾಗುತ್ತಿದೆ. ಅದರ ಸರ್ವೋಚ್ಚ ಶ್ರೇಯಸ್ಸಿಗಾಗಿಯೂ ಮತ್ತು ಆತ್ಮೋದ್ಧಾರಕ್ಕಾಗಿಯೂ ನನಗೊಬ್ಬ ಧೀಮಂತ ಗುರುವು ಬೇಕೇಬೇಕು. ನನ್ನದು ಸ್ತ್ರೀಜನ್ಮವಾದುದರಿಂದ ಭರ್ತನೂ ಸಹ ಇರಬೇಕು. ಈ ಎರಡೂ ರಕ್ಷೆಗಳನ್ನು ಬಯಸಿ ನಿಮ್ಮಲ್ಲಿಗೆ ಭಿಕ್ಷಾರ್ಥಿಯಾಗಿ ನಾನು ಬಂದಿರುವೆ, ದಯವಿಟ್ಟು ನನ್ನ ಸ್ವಾರ್ಥ ಸ್ವಾಭಿಮಾನಗಳನ್ನು ಮನ್ನಿಸಿರಿ.

ಯಾಜ್ಞವಲ್ಕ್ಯ ಮಹರ್ಷಿ– ನಿನ್ನ ಕೋರಿಕೆ ಅರ್ಥವಾಯಿತು ದೇವೀ.

ಆದರೆ, ಇದರಲ್ಲಿ ಒಂದು ವಿಚಾರ ಪ್ರಾಕೃತ ದೋಷದಿಂದ ಕೂಡಿದೆಯಲ್ಲಾ? ಅದಕ್ಕೇನು ಹೇಳುತ್ತಿ ?

ಮೈತ್ರೇಯೀ–ನನ್ನ ಬೇಡಿಕೆಯ ಅಂತರಾರ್ಥವನ್ನು ತಾವು ಅರಿಯದೆ ಇಲ್ಲ. ಆದರೂ, ನಿಮ್ಮ ಪ್ರಶ್ನೆಗೆ ಉತ್ತರಿಸುವುದು ನನ್ನ ಕರ್ತವ್ಯ ಎಂದು ವಿಚಾರವನ್ನು ಮುಂದಿಡುವೆ.

ಯಾಜ್ಞವಲ್ಕ್ಯ ಮಹರ್ಷಿ–ಆಗಲಿ....ಸಂತೋಷ.

ಮೈತ್ರೇಯೀ– ಆ ವಿಚಾರವನ್ನು ಖಂಡಿತ ಮರೆಯಲಿಲ್ಲ, ದೇವ.

ಯಾಜ್ಞವಲ್ಕ್ಯ ಮಹರ್ಷಿ ಮಂದಹಾಸದೊಡನೆ– ಹಾಗಾದರೆ ನಾನು ವಿವಾಹಿತ ಎಂಬುದನ್ನು ಮರೆತಂತಿಲ್ಲ ?

ಮೈತ್ರೇಯೀ– ಇಲ್ಲ, ಭಗವನ್! ನಾನೆಂದೂ ಕಾತ್ಯಾಯಿನಿಗೆ ಸಾಪತ್ನ ವನ್ನುಂಟುಮಾಡುವುದಿಲ್ಲ. ಅದು ನನ್ನ ಉದ್ದೇಶವೂ ಅಲ್ಲ. ನಾನು.... ಯೋಗಿನಿ.

ಯಾಜ್ಞವಲ್ಕ್ಯ ಮಹರ್ಷಿಯು ಪ್ರೀತ್ಯಾದರದಿಂದ ಕೂಡಿದ ಗೌರವ ಭಾವನೆಯಲ್ಲಿ ನೋಡುತ್ತ–ಬಹಳ ಒಳ್ಳೆಯದು.

ಮೈತ್ರೇಯೀ–ನಾನು ನಿಮ್ಮ ಮೋಕ್ಷಪತ್ನಿಯಾಗಿರಲು ಬಯಸುವೆ.

ಯಾಜ್ಞವಲ್ಕ್ಯ ಮಹರ್ಷಿ– ಒಂದು ವೇಳೆ ಕಾತ್ಯಾಯಿನಿಯು ಒಪ್ಪದೆ ಹೋದರೆ ?

ಮೈತ್ರೇಯೀ–ಆ ಭಾರ ನನ್ನಮೇಲಿರಲಿ. ನೀವು ಆಕೆಯೊಡನೆ ವಿಚಾರ ವಿನಿಮಯ ಮಾಡಿಕೊಂಡ ನಂತರವೇ ಮುಂದಿನ ವ್ಯವಹಾರ.

ಯಾಜ್ಞವಲ್ಕ್ಯ ಮಹರ್ಷಿ–ಒಳ್ಳೆಯದು.

ಮೈತ್ರೇಯೀ–ನಾನು ನಿಮಗೆ ಯಾವ ರೀತಿಯಿಂದಲೂ ಅಡಚಣೆಯ ನ್ನುಂಟುಮಾಡಲಾರೆ. ನಾನೂ ಸಹ ಕಾತ್ಯಾಯಿನಿಯ ಅಪ್ಪಣೆಯನ್ನು ಪಡೆದುಕೊಂಡ ಮೇಲೆಯೇ ತಾವು ನನ್ನನ್ನು ಅನುಗ್ರಹಿಸಬಹುದು.

ಯಾಜ್ಞವಲ್ಕ್ಯ ಮಹರ್ಷಿ ಗಂಭೀರವಾಗಿ–ಶಿಷ್ಯವೃತ್ತಿಯೊಂದೇ ಸಾಲ ದೇ ದೇವಿ ?

ಮೈತ್ರೇಯಿ–ಅದು ನನಗೆ ಗಾರವರಕ್ಷೆ ನೀಡಲಾರದು, ಅದು ತಮಗೂ ತಿಳಿಯದ ವಿಷಯವಲ್ಲ.

ಯಾಜ್ಞವಲ್ಕ್ಯ ಮಹರ್ಷಿ– ಹಾಗೆಂದು....

ಮೈತ್ರೇಯೀ–ತಾವು ಮನದಲ್ಲಿ ಏನೋ ಅನುಮಾನವನ್ನು ಹೊಂದಿದಂ ತಿದೆ. ಬ್ರಹ್ಮರ್ಷಿಗಳಿಗೆ ಆ ಚಿಂತೆ ಮೂಡುವುದಾದರೆ ಸಾಮಾನ್ಯರ ಪಾಡೇನು?

ಯಾಜ್ಞವಲ್ಕ್ಯ ಮಹರ್ಷಿ– ಹಾಸ್ಯಪ್ರಧಾನವಾಗಿ–ಇದರಿಂದ ನಾನೇ ಬಲಿಯಾಗುವುದಾದರೆ.... ?

ಮೈತ್ರೇಯೀ– ಒಂದು ವೇಳೆ ಇದರಿಂದ ಅಂತಹ ಪ್ರಸಂಗ ಬಂದಲ್ಲಿ ಅದು ನನ್ನ ಪಾಲಿಗೇ ಇರಲಿ ಭಗವನ್. ನಿಮ್ಮನ್ನು ಯಾವ ಕಳಂಕವೂ ತಟ್ಟಬಾರದು.

ಆ ಅನಿರೀಕ್ಷಿತವಾದ ವಿಚಾರಸರಣಿಯಿಂದ ಮಹರ್ಷಿ ವಿಚಲಿತ ನಾಗಲಿಲ್ಲ ; ಯಾವ ಸುಖದುಃಖಗಳಿಗೂ ಒಳಗಾಗಲಿಲ್ಲ. ಆತ್ಯಂತಿಕವಾದ ಸಹಜಭಾವದಿಂದ ಬಿತ್ತರಿಸಿದ– ನಿನ್ನ ಅಭಿಪ್ರಾಯ ಅರ್ಥವಾಯಿತು. ನೀನು ಬಯಸುವುದು ಶ್ರೇಯಸ್ಸು–ಪ್ರೇಯಸ್ಸಲ್ಲ ಅಲ್ಲವೇ ?

ಮೈತ್ರೇಯಿಯು ನಯವಿನಯಗಳ ವಶೀಭೂತಳಾಗಿ ನಿಶ್ಚಲ ಭಾವದಿಂದ–ಹೌದು ಭಗವನ್ ! ನನಗೆ ಅದೇ ಗೌರವಭೂತವಾದುದು.. ನಿಮಗೂ ಸಹ.

ಯಾಜ್ಞವಲ್ಕ್ಯ ಮಹರ್ಷಿ–ಕಾತ್ಯಾಯಿನಿಯು ಧರ್ಮ ಪತ್ನಿಯಾಗಿರು ವಂತೆ ನೀನು ಮೋಕ್ಷ ಪತ್ನಿಯಾಗಿರಬಹುದು. ಅದರಲ್ಲಿ ಯಾವ ಅಭ್ಯಂತರವೂ ಇಲ್ಲ.

ಮೈತ್ರೇಯೀ– ಇದರಿಂದ ಕಾತ್ಯಾಯಿನಿಗೂ ಅಪಚಾರವೆಸಗಿದಂತಾಗ ದೆಂಬ ಭರವಸೆ ನನಗುಂಟು. ಆದ್ದರಿಂದಲೇ ನಾನು ಧೈರ್ಯ ಮಾಡಲು ಕಾರಣ.

ಯಾಜ್ಞವಲ್ಕ್ಯ ಮಹರ್ಷಿಯು ಪ್ರಸನ್ನಮುಖಿಯಾಗಿ–ದೇವೀ, ಕಾತ್ಯಾಯಿನಿಯು ವಿರೋಧಿಸದಿದ್ದರೆ ಆಗಬಹುದು.

ಮೈತ್ರೇಯಿಯು ಲಜ್ಜೆ–ಆನಂದಗಳ ಗಣಿಯಾದರೂ ಹೆಚ್ಚಿನ ಉತ್ಸುಕತೆಯನ್ನೇನೂ ತೋರದೆ ಅನುನಯದಿಂದ ನುಡಿದಳು–ಭಗವನ್, ನಾನು ತುಂಬ ಉಪಕೃತಳಾದೆ.

ಯಾಜ್ಞವಲ್ಕ್ಯ ಮಹರ್ಷಿ– ಶುಭೆ, ನೀನು ನನ್ನೊಡನೆ ಬ್ರಹ್ಮದಲ್ಲಿ ಸಹಭಾಗಿಯಾಗುವೆಯಾ ? ಅದು ನಿನ್ನಿಂದ ಸಾಧ್ಯವೇ?

ಮೈತ್ರೇಯಿಯು ದೃಢಕಂಠದಿಂದ–ಅದೇ ನನ್ನ ಮಹೋದ್ದೇಶ ಭಗವನ್. ನಿಮ್ಮ ಆಶೀರ್ವಾದಬಲವಿದ್ದರೆ ನಾನು ಕೃತಕೃತ್ಯಳಾಗುವ ಭರವಸೆ ನನಗೆ ಖಂಡಿತ ಉಂಟು.

ಯಾಜ್ಞವಲ್ಕ್ಯ ಮಹರ್ಷಿ– ಆಯಿತು. ಅದು ಒಳ್ಳೆಯದೆ ಯೋಗಿನಿ.

ಮೈತ್ರೇಯಿಯು ಪೂಜ್ಯಭಾವದಿಂದ ನಮಸ್ಕರಿಸಿ–ನನ್ನನ್ನು ದಯವಿಟ್ಟು ಆಶೀರ್ವದಿಸಿರಿ ಭಗವನ್.

ಯಾಜ್ಞವಲ್ಕ್ಯ ಮಹರ್ಷಿಯು ಸಮಾಧಾನ ಸಂತೃಪ್ತಿಗಳಿಂದ– ಶುಭಮಸ್ತು.

ಮೈತ್ರೇಯಿಯು ಎದ್ದು ಕುಳಿತುಕೊಳ್ಳುತ್ತಲೂ ಮಹರ್ಷಿಯು–ಕೇಳು, ಶುಭೆ ! ಈಗ ನಿನಗೆ ಅಮೃತಸಾಧನವಾದ ವಾಖ್ಯಾನ ಮಾಡುವೆ. ಏಕಾಗ್ರಚಿತ್ತದಿಂದ ಅರ್ಥವನ್ನು ಧ್ಯಾನಿಸು. ಜಗತ್ತಿನಲ್ಲಿ ಪ್ರತಿಯೊಂದು ವಸ್ತುವೂ ಅಂತರಾತ್ಮನ ಪ್ರೀತ್ಯರ್ಥವಾಗಿ ಪ್ರಿಯವಾಗಿರುತ್ತದೆ. ಆದ್ದರಿಂದ ಆತ್ಮಪ್ರೀತಿಯು ಮುಖ್ಯವೆಂದೂ ಆತ್ಮ ಪ್ರೀತಿಗೆ ಸಾಧನವಾಗಿರುವ ಇತರ ವಸ್ತುಗಳಲ್ಲಿರುವ ಪ್ರೀತಿಯು ಗೌಣವೆಂದೂ ತಿಳಿಯತಕ್ಕದ್ದು. ಸಮುದ್ರವು ಹೇಗೆ ಎಲ್ಲಾ ನೀರಿಗೂ ಏಕಮಾತ್ರ ಗತಿಯೋ. ಅದೇ ರೀತಿ ಬುದ್ಧಿಯು ಎಲ್ಲಾ ವಿದ್ಯೆಗಳಿಗೂ ಏಕಮಾತ್ರ ಗತಿಯು. ಬ್ರಹ್ಮಜ್ಞಾನದ ಪ್ರಳಯ ಮಹತ್ಪ್ರಳಯ ಎನಿಸುವುದು. ಶರೀರೇಂದ್ರಿಯಗಳಲ್ಲಿ ಆತ್ಮನ ವಿಭಿನ್ನತೆಯು ಆಹಾರ ಧಾನ್ಯಗಳಲ್ಲಿ ಎದ್ದು ಕಾಣಿಸುವ ಉಪ್ಪಿನ ಹರಳಿನಂತೆ ಎನ್ನ

ಬಹುದು. ಬ್ರಹ್ಮವಿದ್ಯೆಯಿಂದ ಈ ಶರೀರೇಂದ್ರಿಯಗಳು ವಿನಾಶ ಹೊಂದಿದರೆ ಅವುಗಳ ಹಿಂದೆಯೇ ಆತ್ಮನ ಭಿನ್ನತೆಯೂ ಕೊನೆಗಾಣುವುದು. ಅನಂತರ ಆತ್ಮನಿಗೆ ವಿಶೇಷ ಜ್ಞಾನವಿರುವುದಿಲ್ಲ.

ಮೈತ್ರೇಯೀ ವಿಚಾರ ಕುತೂಹಲಿಯಾಗಿ-ಭಗವನ್,ದೇಹೇಂದ್ರಿಯಗಳಿಂದ ಮುಕ್ತಿ ಹೊಂದಿದನಂತರ ವಿಶೇಷ ಜ್ಞಾನವಿರುವುದಿಲ್ಲ ಎಂಬ ಮಾತಿನಿಂದ ನನಗೆ ಭ್ರಾಂತಿಯುಂಟಾಗಿದೆ. ವಿಜ್ಞಾನ ಘನಕ್ಕೆ ಏಕತ್ವವನ್ನು ಪಡೆದುಕೊಂಡ ಮೇಲೆ ವಿಶೇಷ ಜ್ಞಾನವಿಲ್ಲದಿರುವುದು ಹೇಗೆ ?

ಯಾಜ್ಞವಲ್ಕ್ಯ ಮಹರ್ಷಿ–ಮೈತ್ರೇಯೀ, ಕೇಳು. ನಾನು–ನನ್ನದು; ನಾನು ಇಂತಹವರ ಮಗನು ; ಇದು ನನ್ನ ಆಸ್ತಿ ; ನಾನು ಸುಖಿ ಅಥವಾ ದುಃಖಿ ; ಈ ಮೊದಲಾದುವು ಅವಿದ್ಯೆಯಿಂದ–ಅಜ್ಞಾನದಿಂದ ಉಂಟಾಗುವ ವಿಶೇಷ ಜ್ಞಾನ. ಬ್ರಹ್ಮವಿದ್ಯೆಯಿಂದ ವಿಶೇಷ ಜ್ಞಾನವು ನಾಶವಾದರೆ ಚೈತನ್ಯ ಸ್ವಭಾವದಲ್ಲಿ ಅವಸ್ಥಿತನಾದ ಆತ್ಮಬ್ರಹ್ಮನಿಗೆ ಯಾವ ವಿಶೇಷ ಜ್ಞಾನವೂ ಇರುವುದಿಲ್ಲ.

ಮೈತ್ರೇಯೀ–ನಾನಿಂದು ಧನ್ಯಳಾದೆ ದೇವ !

ಯಾಜ್ಞವಲ್ಕ್ಯ ಮಹರ್ಷಿ–ಯೋಗಿನಿ, ನಿನಗೆ ಮಂಗಳವಾಗಲಿ.

ಅವಳು ಅಮಿತಾನಂದದಿಂದ ಮಹರ್ಷಿಯ ಅಡಿದಾವರೆಗಳಿಗೆ ಮತ್ತೊಮ್ಮೆ ಎರಗಿ ಅಲ್ಲಿಂದ ಹೊರಡುವಳು. ಹೃದಯ ಕಲಶದಲ್ಲಿ ಹಿಡಿಸಲಾರದಷ್ಟು ರಸಾಸ್ವಾದನೆಯಿಂದ ಮೈಮನಗಳು ಉಲ್ಲಸಗೊಂಡಿದ್ದುವು. ದೇಹ ಚಾಲನೆ ವನವರ್ತ್ಮದಲ್ಲಿ ಆದೇಶವಿಲ್ಲದೆ ತಾನೇ ತಾನಾಗಿ ನಡೆದಿತ್ತು. ಮಂದ ಸಮೀರಣನ ತಣ್ಣನೆಯ ಮುದ್ದಿನಿಂದ ಮನಸ್ಸು ಒಮ್ಮೊಮ್ಮೆ ದಿಕ್ಕುದೆಸೆಗಳತ್ತ ಹರಿಯುವುದುಂಟು. ಆದರೆ, ಏಕಾಂತ ಚಿಂತನೆ ಏಕಾಂತ ನಿಷ್ಠೆ, ಏಕಾಂತ ಪ್ರವೃತ್ತಿಗಳ ಸಂಪುಟಕ್ಕೆ ಕುವಿಚಾರಗಳು ನುಗ್ಗುವುದು ಕಷ್ಟವೇ. ಅವಳು ಭಾವನಾಲೋಕದಲ್ಲಿ ನಿಶ್ಚಿಂತೆಯಿಂದ ಮುಳುಗುತ್ತಾಳೆ.

ಯಾಜ್ಞವಲ್ಕ್ಯ ಮಹರ್ಷಿಯು ತನ್ನಲ್ಲಿ ಯೋಚಿಸಿಕೊಳ್ಳುತ್ತ ನನಗೊಬ್ಬ

ಮೋಕ್ಷ ಪತ್ನಿಯು ಅವಶ್ಯಕತೆಯಿತ್ತು. ಅದು ಅವಳ ಬ್ರಹ್ಮವಾದಕೂ
ಸರಿಯಾದ ಉತ್ತರ.

ಅದೇ ವೇಳೆಗೆ ಕಾತ್ಯಾಯನ ಆಗಮಿಸುವನು.

ಯಾಜ್ಞವಲ್ಕ್ಯ ಮಹರ್ಷಿಯು ಮುಗುಳ್ನಗೆಯ ಸ್ವಾಗತ ನೀಡಿ ಕೈ
ಜೋಡಿಸುವನು– ನಮಸ್ತೇ.

ಕಾತ್ಯಾಯನ–ನೀನು ಕೈಜೋಡಿಸುವ ಕಾರಣವಿಲ್ಲ. ನೀನೇ ಕೈ
ಮುಗಿಸಿ ಕೊಳ್ಳಬೇಕಾದ ವ್ಯಕ್ತಿ.

ಯಾಜ್ಞವಲ್ಕ್ಯ ಮಹರ್ಷಿ–ಈಗಾಗಲೇ ಅಂತಹ ಅವಸರವಿಲ್ಲ. ಇನ್ನೂ
ಸಾಕಷ್ಟು ಕಾಲಾವಕಾಶವಿದೆ. ನಾವು ಅರೆದುಂಬಿದ ಬಿಂದಿಗೆಯಾಗಬಾರದು.

ಕಾತ್ಯಾಯನ–ಭಲೆ. ನಿನ್ನ ಇಂಥ ಹಠವೇ ಜ್ಞಾನಾಗಾರಕ್ಕೆ ದಾರಿ.
ಮೇಲಾಗಿ, ವಂಶಪಾರಂಪರ್ಯವಾದ ಜ್ಞಾನಕರಂಡ ನಿನ್ನ ಕೈಗೆ ಬಂದಿರು
ವುದು ಒಂದು ಸುಯೋಗವೇ ಸರಿ. ನೀನು ಪುಣ್ಯವಂತ.

ಯಾಜ್ಞವಲ್ಕ್ಯ ಮಹರ್ಷಿ– ಬಿಡು, ನಿನ್ನ ಭಾಗಕ್ಕೂ ಇದು ಲಭ್ಯ.
ನೀನೇನೂ ಇದರಿಂದ ಹೊರತಲ್ಲ.

ಕಾತ್ಯಾಯನ–ಲಭ್ಯವಾದರೂ ಪುಣ್ಯಬಲವಿಲ್ಲ.

ಯಾಜ್ಞವಲ್ಕ್ಯ ಮಹರ್ಷಿ–ಸ್ವಲ್ಪಹೊತ್ತು ಸುಮ್ಮನಿದ್ದು ವಿಚಾರ
ಪರವಶನಾಗಿ–ಕಾತ್ಯಾಯನ, ಇಲ್ಲಿ ಕೇಳು, ನೀನು ಸಾಧಕ. ವೇದಾಂತಕ್ಷೇತ್ರ
ದಲ್ಲಿ ಉಪಾಸನೆ ನಿನಗೆ ಹೊಸದೇನಲ್ಲ. ನಿನ್ನ ಹೆಜ್ಜೆಹೆಜ್ಜೆಯೂ ಪೂರ್ಣದೆಡೆಗೆ.
ಪೃಥ್ವಿ ನಮಗೆ ಪರಿಚಿತವಾದ ವಸ್ತು. ದ್ಯುಲೋಕ ನಮಗೆ ತಿಳಿಯದ
ವಸ್ತು. ನಮ್ಮ ಪಯಣ ಯಾವಾಗಲೂ ತಿಳಿದ ನೆಲೆಯಿಂದ ತಿಳಿಯದಿರುವ
ಕಡೆಗೆ. ಇದು ಮಾನವಸಹಜವಾದ ವಿಚಾರಪೂರ್ಣ ಹಾದಿ. ಅಂದಮೇಲೆ
ನಿನ್ನನ್ನು ನಿನಗೆ ತಿಳಿಯದಂತೆಯೇ ಆತ್ಮಬ್ರಹ್ಮನು ಬ್ರಹ್ಮಸಾಕ್ಷಾರದತ್ತ ನಡೆ
ಸುತ್ತಾನೆ. ನಿನಗೆ ಆಧ್ಯಾತ್ಮಿಕ ಅಭ್ಯಾಸವಿದೆ. ವೇದಾಂತದ ತಿಳಿವಳಿಕೆಯಿದೆ.

ಯಾವಾಗ ಬ್ರಹ್ಮಜ್ಞಾನವುಂಟಾಗುತ್ತದೋ ಆವಾಗ ನಿನ್ನಲ್ಲಿ ಸಂಪೂರ್ಣ ಪರಿವರ್ತನೆ ಉಂಟಾಗುತ್ತದೆ. ಅಂದರೆ, ನೀನು ಯಾವ ಬ್ರಹ್ಮೋಪಾಸಕನಿಗೂ ಕಡಿಮೆಯಾಗಲಾರೆ.

ಕಾತ್ಯಾಯನ ಸಂತುಷ್ಟನಾಗಿ–ನಿನ್ನ ಹಾರೈಕೆಯಿಂದ ಹಾಗೇ ಆಗಲಿ.

ಯಾಜ್ಞವಲ್ಕ್ಯ ಮಹರ್ಷಿ–ನಿನ್ನನ್ನು ನೀನು ಗುರುತಿಸುವುದೇ ಆತ್ಮಜ್ಞತೆ. ದೇಹ ದೃಗ್ವಸ್ತುವಾದುದರಿಂದ ಎಲ್ಲರೂ ಅದರಲ್ಲೇ ವಿಶ್ವಾಸವಿಟ್ಟು ಆತ್ಮವನ್ನು ಮರೆಯುತ್ತಾರೆ. ದೇಹವು ನಶ್ವರವೆಂಬ ಸಂಪೂರ್ಣ ಅರಿವು ಮೂಡಿದ ಮೇಲೆಯೇ ಆತ್ಮಬ್ರಹ್ಮನನ್ನು ಗುರುತಿಸಬೇಕಾದರೆ. ವ್ಯಕ್ತಿ ಯಾವಾಗ ಆತ್ಮಜಾನವನ್ನು ಪಡೆದುಕೊಳ್ಳುವನೋ ಆಗಲೇ ಸರ್ವತ್ರ ಇಂದ್ರಿಯ–ಮನಸ್–ಬುದ್ಧಿ ಇವುಗಳು ಪವಿತ್ರಸ್ನಾನ ಹೊಂದುತ್ತವೆ. ಹೇಗೆ ದೀಪದ ಕುಡಿಯನ್ನು ಕೆಡವಿದರೆ ಕಾಂತಿಯು ಉಜ್ವಲಿಸುವುದೋ ಹಾಗೆಯೇ ಪವಿತ್ರತೆಯ ಮೂಲಕ ಮೂಡುವ ಭಾವನೆಯಲ್ಲಿ ಒಂದು ಅತೀವ ಆಕರ್ಷಣೆ ಇರುವುದು. ಬ್ರಹ್ಮಜ್ಞಾನ ಪಡೆದಾಗ ಸುತ್ತಲೂ ದಿವ್ಯ ಪ್ರಭಾಳೆಯಂತೆ ಅದು ಸ್ಪಂದಿಸುತ್ತಿದ್ದು ಅವನ ಬಳಿಗೆ ಬರುವವರ ಮೇಲೆ ಪ್ರಭಾವ ಬೀರುತ್ತದೆ. ಅರಳಿದ ಜಾಜಿ ಹೇಗೆ ಪರಿಸರದಲ್ಲೆಲ್ಲಾ ಸುವಾಸನೆ ಬೀರುವುದೋ ಹಾಗೆ, ಅಗ್ನಿಯ ಸಮೀಪದಲ್ಲಿದ್ದರೆ ಹೇಗೆ ಕಾವು ಅಟ್ಟುವುದೋ ಹಾಗೇ ಬ್ರಹ್ಮವರ್ಚಸ್ಸು ಅವನ ಮೂಲಕ ತಾನೇ ತಾನಾಗಿ ಹೊಮ್ಮುವುದು. ಅಂದರೆ, ಆದು ಭೌತಿಕವಾದ ಆಕರ್ಷಣೆಯಲ್ಲ; ಮಾನಸಿಕವಾದ ತೇಜಸ್.

ಕಾತ್ಯಾಯನ-ನೀನು ನನಗೆ ಗೆಳೆಯನಾಗಿದ್ದರೂ ಆಚಾರ್ಯನಸಮನಾಗಿದ್ದಿ. ನಿನ್ನ ಆಧ್ಯಾತ್ಮಿಕಜ್ಞಾನ ಮತ್ತು ಸಾಧನೆ ಎರಡೂ ಅಗಾಧವಾದುದು. ದೇವರು ನಿನಗೆ ಮಂಗಳವನ್ನುಂಟುಮಾಡಲಿ.

ಯಾಜ್ಞವಲ್ಕ್ಯ ಮಹರ್ಷಿ–ನಿನ್ನ ಹಾರೈಕೆಗೆ ವಂದನೆಗಳು.

ಕಾತ್ಯಾಯನ– ನೀನು ಇಷ್ಟು ಸುಲಭನಾಗಿರುವುದು ನನ್ನ ಪುಣ್ಯ.

ಯಾಜ್ಞವಲ್ಕ್ಯ ಮಹರ್ಷಿಯು ಮರುಮಾತಾಡದೆ ಸಣ್ಣ ತಿಳಿನಗೆ ಯನ್ನು ತೇಲಿಸಿ ಕಮಂಡಲುವಿನಿಂದ ನೀರನ್ನು ಸಂಪ್ರೋಕ್ಷಿಸುತ್ತ ಮಂತ್ರ ವನ್ನು ಉಚ್ಚರಿಸುವನು.

"ಇಮಂ ಮೇ ಗಂಗೇ ಯಮುನೇ ಸರಸ್ವತೀ
ಶತದ್ರಿಸ್ತೋಮಗಂ ಸಚತಾಪರುಷ್ಣಿಯಾ ಅಸಕ್ನಿಯಾ
ಮರುದ್ವೃಧೇ ವಿತಸ್ತಯಾರ್ಜಿಕೀಯೆ ಶೃಣುಹ್ಯಾ
ಸುಶೋಮಯಾ ಗಂಗಾದಿ ಸರ್ವ ತೀರ್ಥಾನಾಂ ಆವಾಹ್ಯ"

ಉಚ್ಛ್ವಾಸ ೭

೦

ಮಿಥಿಲಾಪುರಿಯ ರಾಜಸಭೆ. ಜನಕಮಹಾರಾಜನು ಸಿಂಹಾಸನದಲ್ಲಿ ಮಂಡಿಸಿದ್ದಾನೆ. ಪುರಪ್ರಮುಖರು, ಮಂತ್ರಿಗಳು, ದಳವಾಯಿಗಳು ಮತ್ತು ರಾಜಪುರೋಹಿತರು ಕೂಡಿ ದೇಶೀಯ ವಿದ್ಯಮಾನಗಳನ್ನು ಕುರಿತು ಮಂತ್ರಾಲೋಚನೆಯಲ್ಲಿ ತೊಡಗಿರುವಾಗ ಅನಿರೀಕ್ಷಿತವಾಗಿ ದೌವಾರಿಕನು ಪ್ರವೇಶಿಸುವನು.

ದೌವಾರಿಕನು ವಿನಮ್ರತೆಯಿಂದ ನಮಸ್ಕರಿಸಿ-ಮಹಾ ಪ್ರಭೋ! ಯಾಜ್ಞವಲ್ಕ್ಯ ಮಹರ್ಷಿಗಳು ಅರಮನೆ ಹೆಬ್ಬಾಗಿಲಿಗೆ ಆಗಮಿಸಿದ್ದಾರೆ.

ಜನಕ ಮಹಾರಾಜ–ಓಹೋ, ಅವರು ಇಲ್ಲಿಯ ತನಕ ಬಂದಿರುವುದು ತುಂಬ ಸಂತೋಷದ ವಿಷಯ. ಈಗಲೇ ಹೋಗಿ ಅತ್ಯಂತ ಗೌರವಪೂರ್ವಕವಾಗಿ ಕರೆದುಕೊಂಡು ಬರತಕ್ಕದ್ದು.

ದೌವಾರಿಕನು ಮಹಾರಾಜನ ಅಪ್ಪಣೆಯನ್ನು ಶಿರಸಾವಹಿಸಿ ಆ ಕ್ಷಣವೇ ಅಲ್ಲಿಂದ ನಿಷ್ಕ್ರಮಿಸುವನು.

ಜನಕ ಮಹಾರಾಜನು ತನ್ನೊಳಗೇ ಯೋಚಿಸುತ್ತ– ನಾನು ಯಾಜ್ಞ

ವಲ್ಕ್ಯರನ್ನು ನೋಡಿ ಬಹಳ ವರ್ಷಗಳಾದುವು. ನಾನು ಹಿಂದೊಮ್ಮೆ ಅವ ರನ್ನು ವೈಶಂಪಾಯನರ ಆಶ್ರಮದಲ್ಲಿ ಭೇಟಿಯಾಗಿದ್ದುಂಟು. ಆಗ ಅವರು 'ಇನ್ನು ನಮ್ಮ ಪರಸ್ಪರ ಭೇಟಿ ತಾನು ಬ್ರಹ್ಮರ್ಷಿಯಾದ ಮೇಲೆಯೇ' ಎಂದು ಹೇಳಿದ್ದುದು ನೆನಪು. ಇಷ್ಟರೊಳಗಾಗಿ ಅವರು ಬ್ರಹ್ಮರ್ಷಿಯಾಗಿದ್ದರೆ ವಿಶೇ ಷವೇ ಎಂಬ ಚಿಂತನೆಯಲ್ಲಿ ಮನವನ್ನು ನೆಟ್ಟು ಕುತೂಹಲದಿಂದ ರಾಜ ಪುರೋಹಿತರನ್ನು ಕುರಿತು–ಪುರೋಹಿತರೇ, ನೀವು ಯಾಜ್ಞವಲ್ಕ್ಯರ ಆಗಮ ನದವಿಚಾರ ಕೇಳಿದಿರಷ್ಟೆ? ಅವರೊಮ್ಮೆ ನನ್ನೊಂದಿಗೆ ತಾನು ಬ್ರಹ್ಮರ್ಷಿ ಯಾದ ಬಳಿಕ ನಮ್ಮ ಭೇಟಿ ಮಾಡುವುದಾಗಿ ಹೇಳಿದ್ದರು. ಹಾಗಾದರೆ ಅವ ರೀಗ ಬ್ರಹ್ಮರ್ಷಿಗಳಾಗಿದ್ದಾರೆಯೆ ?

ಪುರೋಹಿತ–ಮಹಾರಾಜ, ನಾವು ಹಾಗೆಂದು ಕೇಳಬಲ್ಲೆವು.

ಜನಕ ಮಹಾರಾಜ–ಹಾಗಿದ್ದರೆ ಒಳ್ಳೆಯದೇ ಆಯಿತು. ನಾವು ನಮ್ಮ ಸಂದೇಹಗಳನ್ನು ನಿವಾರಿಸಿಕೊಳ್ಳಬಹುದು.

ಆ ಮಾತು ಕೇಳಿ ಮಂತ್ರಿಯು ಎದ್ದು ನಿಂತು–ಮಹಾಪ್ರಭೋ! ಅವರ ವಿಚಾರವಾಗಿ ನಾವು ಬಹಳಷ್ಟು ಕೇಳಿ ಬಲ್ಲೆವು. ಅವರು ಬ್ರಹ್ಮರ್ಷಿ ಗಳಾಗಿರುವ ವದಂತಿ ಉಂಟು. ಅದು ಎಲ್ಲೆಡೆಯೂ ಹಬ್ಬಿದೆ.

ಜನಕ ಮಹಾರಾಜ–ಹಾಗಿದ್ದರೆ ತುಂಬಾ ಸಂತೋಷ.

ಆ ವೇಳೆಗೆ ಯಾಜ್ಞವಲ್ಕ್ಯ ಮಹರ್ಷಿಯು ಅಲ್ಲಿಗೆ ಆಗಮಿಸುವನು. ಇಡೀ ಸಭೆಯು ಎದ್ದು ನಿಂತು ಗೌರವ ಪೂರ್ವಕವಾದ ಸ್ವಾಗತ ನೀಡುವುದು. ಮಹಾರಾಜನೇ ಸ್ವತಃ ಮುಂದುವರಿದು ಶ್ರದ್ಧೆ–ಗೌರವ–ನಮ್ರತೆಗಳಿಂದ ನೈ ಬಾಗಿ ನಮಸ್ಕರಿಸಿ, ಮಹರ್ಷಿಗಳು ಹೀಗೆ ದಯಮಾಡಿಸಬೇಕು.

ಯಾಜ್ಞವಲ್ಕ್ಯ ಮಹರ್ಷಿಯು ಕೈಯೆತ್ತಿ ಆಶೀರ್ವದಿಸುತ್ತ–ಶುಭ ವಾಗಲಿ, ಮಹಾರಾಜ.

ಜನಕ ಮಹಾರಾಜ–ತಾವು ಇಲ್ಲಿಯ ತನಕ ಪಯಣ ಬೆಳೆಸಿದು

ನಮ್ಮ ಸೌಭಾಗ್ಯ. ಮೊದಲೇ ಅಪ್ಪಣೆಯಾಗಿದ್ದರೆ ನಾವೇ ಬಂದು ತಮ್ಮ ಭೇಟಿ ಮಾಡುವುದರಲ್ಲಿ ನಮಗೆ ಸಂತೋಷವಿರುತಿತ್ತು ಭಗವನ್.

ಅನಂತರ ಮಹರ್ಷಿಯನ್ನು ಉಚಿತಾಸನದಲ್ಲಿ ಕುಳ್ಳಿರಿಸಿ ಅರ್ಘ್ಯ ಪಾದ್ಯಗಳನ್ನಿತ್ತು ಭಕ್ತಿ ಗೌರವಯುತವಾಗಿ ಜನಕ ಮಹಾರಾಜನು ಸತ್ಕರಿಸುತ್ತಾನೆ. ಕಿಕ್ಕಿರಿ ತುಂಬಿದ ಸಭೆಯಲ್ಲಿ ಶ್ರದ್ಧಾಭಕ್ತಿಗಳು ಘನವೆತ್ತು ಎಳ್ಳು ಬೀರಿದರೂ ಕೇಳಿಸುವಂತಹ ನಿಶ್ಶಬ್ದ. ಎಲ್ಲರ ಮನಃಪ್ರಾಣಗಳೂ ಕಣ್ಕಿವಿಗಳೂ ಮಹರ್ಷಿಯತ್ತಲೇ ಕೇಂದ್ರೀಕೃತವಾದುವು.

ಜನಕ ಮಹಾರಾಜ–ಭಗವಾನರಿಗೆ ಆಯಾಸವಿಲ್ಲವಾದರೆ ತಮ್ಮ ಹೃತ್ ಕಲಶದಲ್ಲಿ ಸಂಗ್ರಹಿಸಿರುವ ಅನುಭವ ತೀರ್ಥವನ್ನು ನಮಗೂ ನೀಡಿ ನಮ್ಮನ್ನು ಕೃತಾರ್ಥರನ್ನಾಗಿ ಮಾಡಬೇಕಾಗಿ ಕೋರುವೆ.

ಯಾಜ್ಞವಲ್ಕ್ಯ ಮಹರ್ಷಿಯು ಮಂದಸ್ಮಿತನಾಗಿ–ತಾವು ಅನೇಕ ವಿದ್ವಾಂಸರನ್ನು ಸೇವಿಸಿ ಅಮೃತವನ್ನು ಪಡೆದವರು. ಸ್ವಾನುಭವಕ್ಕೂ ಕೊರತೆಯಿಲ್ಲ. ಅಂದಮೇಲೆ ನಮಗಿದು ಪರೀಕ್ಷಾಸ್ಥಾನ ಎಂದರೆ ತಪ್ಪಾಗಲಾರದು.

ಜನಕ ಮಹಾರಾಜ–ನಾವು ಎಷ್ಟೇ ಅನುಭವ ಪಡೆದುಕೊಂಡಿದ್ದರೂ ಎಂದೆಂದಿಗೂ ತಮ್ಮ ಶಿಷ್ಯರೇ ಎಂಬುದನ್ನು ನೀವು ಬಲ್ಲಿರಿ; ನಾವದನ್ನು ಸ್ವತಃ ವಿಶದಪಡಿಸಬೇಕಾಗಿಲ್ಲ.

ಯಾಜ್ಞವಲ್ಕ್ಯ ಮಹರ್ಷಿಯು ಹರ್ಷಭಾವದಿಂದ–ಸಾಮ್ರಾಟ್, ಯಾರಾದರೂ ನಿಮಗೆ ಉಪದೇಶ ಕೊಟ್ಟಿದ್ದರೆ ನಾವದನ್ನು ಕೇಳೋಣ.

ಜನಕ ಮಹಾರಾಜ–ಶ್ರೋತ್ರವೆಂದು ಕರೆಯಲ್ಪಡುವ ದಿಗ್ದೇವತೆಯೇ ಬ್ರಹ್ಮವೆಂದು ಭಾರದ್ವಾಜರು ನಮಗೆ ಹೇಳಿದ್ದಾರೆ.

ಯಾಜ್ಞವಲ್ಕ್ಯ ಮಹರ್ಷಿ–ಶ್ರೋತ್ರವೇ ಬ್ರಹ್ಮನ ಶರೀರವು. ಅವ್ಯಾ

ಕೃತವು ಅದರ ಪ್ರತಿಷ್ಠೆ. ಆದ್ದರಿಂದ ಅದನ್ನು ಅನಂತವೆಂದು ಉಪಾಸಿಸಬೇಕು.

ಜನಕ ಮಹಾರಾಜ–ಅನಂತತೆಯ ಸ್ವರೂಪವೇನು ಭಗವನ್ ?

ಯಾಜ್ಞವಲ್ಕ್ಯ ಮಹರ್ಷಿ–ಸಾಮ್ರಾಟ್, ಶ್ರೋತ್ರವೇ ಅದರ ಸ್ವರೂಪ ನಾವು ಯಾವುದೇ ದಿಕ್ಕನ್ನು ಹಿಡಿದುಹೋದರೂ ಆಯಾದಿಕ್ಕಿನ ಅಂತರವನ್ನು ಮುಟ್ಟುವುದು ಸಾಧ್ಯವೇ ಇಲ್ಲ. ಆದುದರಿಂದ ದಿಕ್ಕುಗಳು ಅನಂತವೆನಿಸಲ್ಪಡುತ್ತವೆ. ಶ್ರೋತ್ರವೇ ಪರಬ್ರಹ್ಮವು. ಈ ರೀತಿಯಲ್ಲಿ ಅರಿತು ಬ್ರಹ್ಮೋಪಾಸನೆ ಮಾಡುವವರನ್ನು ಶ್ರೋತ್ರವು ತ್ಯಜಿಸಲಾರದು. ಇವನನ್ನು ಎಲ್ಲ ಪ್ರಾಣಿಗಳು ಅನ್ವೇಷಿಸುವುದರಿಂದ ದೇವನಾಗಿ ದೇವತೆಗಳ ಓಳಗೂಡುವನು.

ಜನಕ ಮಹಾರಾಜ–ಮನಸ್ಸೇ ಬ್ರಹ್ಮವೆಂದು ನಮಗೆ ಸತ್ಯಕಾಮ ಜಾಬಾಲನು ಹೇಳಿದ್ದಾನೆ. ಇದರ ಬಗ್ಗೆ ನೀವು ಹೇಳುವುದೇನು ?

ಯಾಜ್ಞವಲ್ಕ್ಯ ಮಹರ್ಷಿ–ನಿಮಗೆ ಸತ್ಯಕಾಮ ಜಾಬಾಲನು ಮನಸ್ಸೇ ಬ್ರಹ್ಮವೆಂದು ಹೇಳಿರುವನಷ್ಟೆ ? ಏಕೆಂದರೆ ಮನಸ್ಸು ಇಲ್ಲದಿದ್ದರೆ ಏನಾಗುವುದು ? ಅವನು ನಿಮಗೆ ಅದರ ಶರೀರವನ್ನೂ ಪ್ರತಿಷ್ಠೆಯನ್ನೂ ಕುರಿತು ಹೇಳಿರುವನೆ ?

ಜನಕ ಮಹಾರಾಜ–ಅವನು ನನಗೆ ಏನೂ ಹೇಳಲಿಲ್ಲ. ನೀವೇ ಅದನ್ನು ತಿಳಿಯಹೇಳಿರಿ, ಭಗವನ್.

ಯಾಜ್ಞವಲ್ಕ್ಯ ಮಹರ್ಷಿ–ಇದಕ್ಕೆ ಮನಸ್ಸೇ ಶರೀರವು. ಇದರ ಪ್ರತಿಷ್ಠೆ ಅವ್ಯಾಕೃತವು. ಇದನ್ನು ಆನಂದವೆಂದು ತಿಳಿದು ಉಪಾಸಿಸಬೇಕು.

ಜನಕ ಮಹಾರಾಜ–ಈ ಆನಂದತೆಯ ಸ್ವರೂಪವೇನು ?

ಯಾಜ್ಞವಲ್ಕ್ಯ ಮಹರ್ಷಿ-ಮನಸ್ಸೇ ಸಾಮ್ರಾಟ್ ! ಮನಸ್ಸಿ

ನಿಂದಲೇ ಆನಂದ. ಮನಸ್ಸಿನಿಂದಲೇ ಬಯಕೆ. ಆದ್ದರಿಂದ ಮನಸ್ಸೇ ಪರಬ್ರಹ್ಮ. ಹೀಗೆ ಅರಿತುಕೊಂಡು ಬ್ರಹ್ಮೋಪಾಸನೆ ಮಾಡಬೇಕು.

ಜನಕ ಮಹಾರಾಜ–ತಿಳಿಯಿತು, ಭಗವನ್.

ಯಾಜ್ಞವಲ್ಕ್ಯ ಮಹರ್ಷಿ–ಇನ್ನೂ ಯಾರಾದರೂ ನಿಮಗೆ ಬೇರೆ ಉಪದೇಶ ಕೊಟ್ಟಿದ್ದರೆ ಅದನ್ನು ಕೇಳೋಣ ಸಾಮ್ರಾಟ್.

ಜನಕ ಮಹಾರಾಜ–ಹೃದಯವೇ ಬ್ರಹ್ಮವೆಂದು ನಮಗೆ ವಿದಗ್ಧ ಶಾಕಲ್ಯನು ಹೇಳಿದ್ದಾನೆ.

ಯಾಜ್ಞವಲ್ಕ್ಯ ಮಹರ್ಷಿ–ಸಾಮ್ರಾಟ್, ನಿಮಗೆ ಹೃದಯವೇ ಬ್ರಹ್ಮವೆಂದು ಶಾಕಲ್ಯನು ಹೇಳಿದ್ದಾನೆ. ಏಕೆಂದರೆ ಹೃದಯವೇ ಇಲ್ಲದಿದ್ದರೆ ಏನಾಗುವುದು ? ಆದರೆ ಅವನು ಹೃದಯಬ್ರಹ್ಮದ ಶರೀರವನ್ನೂ ಪ್ರತಿಷ್ಠೆಯನ್ನೂ ನಿಮಗೆ ಹೇಳಿದನೇ ?

ಜನಕ ಮಹಾರಾಜ–ಅದನ್ನು ಅವನು ಹೇಳಲಿಲ್ಲ. ನೀವೇ ಅದನ್ನು ವಿವರಿಸೋಣವಾಗಲಿ ಮಹರ್ಷಿಗಳೇ !

ಯಾಜ್ಞವಲ್ಕ್ಯ ಮಹರ್ಷಿ–ಹೃದಯವೇ ಇದಕ್ಕೆ ಶರೀರವು. ಅವ್ಯಾಕೃತವು ಇದರ ಪ್ರತಿಷ್ಠೆ ಮತ್ತು ಸ್ಥಿತಿ. ಇದನ್ನರಿತು ಹೃದಯಬ್ರಹ್ಮನನ್ನು ಉಪಾಸಿಸಬೇಕು.

ಜನಕ ಮಹಾರಾಜ–ಇದರ ಸ್ಥಿರತೆಯ ಸ್ವರೂಪವೇನು ?

ಯಾಜ್ಞವಲ್ಕ್ಯ ಮಹರ್ಷಿ–ಹೃದಯವೇ ಸಾಮ್ರಾಟ್. ಎಲ್ಲಾ ಪ್ರಾಣಗಳ ನಿವಾಸಸ್ಥಲವು ಹೃದಯದಲ್ಲಿ. ಏಕೆಂದರೆ ಹೃದಯದಲ್ಲಿ ಎಲ್ಲಾ ಪ್ರಾಣಗಳೂ ಪ್ರತಿಷ್ಠಿತವಾಗಿರುತ್ತವೆ. ಇದನ್ನು ಅರಿತು ಬ್ರಹ್ಮೋಪಾಸನೆಯನ್ನು ಮಾಡುವವನನ್ನು ಹೃದಯವು ತ್ಯಜಿಸುವುದಿಲ್ಲ.

ಜನಕ ಮಹಾರಾಜ–ಅಂತರಾತ್ಮನ ವಿಚಾರದಲ್ಲಿ ನೀವೇನು ತಿಳಿದುಕೊಂಡಿರುವಿರೋ ಅದನ್ನು ತಿಳಿಯಹೇಳಬೇಕು. ದೇಹೇಂದ್ರಿಯ ಪ್ರಾಣ

ಮನಸ್ಸು ಇವುಗಳಲ್ಲಿ ಆತ್ಮನು ಯಾವುದು ? ಎಂಬುದನ್ನು ತಿಳಿಯಬಯಸುವೆ ಮಹರ್ಷಿಗಳೇ.

ಯಾಜ್ಞವಲ್ಕ್ಯ ಮಹರ್ಷಿ- ಇದು ತಮಗೆ ಅನುಗುಣವಾದ ಪ್ರಶ್ನೆ. ಸಾಮ್ರಾಟ್ ! ಕೇಳಿ, ಆತ್ಮನು ವಿಜ್ಞಾನಮಯನೂ ಇಂದ್ರಿಯಗಳ ಮಧ್ಯಸ್ಥಿತನೂ, ಬುದ್ಧಿಯಿಂದ ಸ್ವಯಂ ಪ್ರಕಾಶನೂ ಆದ ಈ ಪುರುಷನು ತನ್ನ ಸ್ಥಿತಿಗೆ ಸರಿಯಾದ ಸಂಯೋಜನೆಯಿಂದ ಇಹಪರಗಳ ಮಧ್ಯೆ ಸಂಚರಿಸುತ್ತಿರುವನು. ಕೆಲವೊಮ್ಮೆ ಧ್ಯಾನಿಸುವಂತೆ ಕಂಡುಬರುವನು. ಏಕೆಂದರೆ ಅವನು ಸ್ವಪ್ನಾವಸ್ಥೆಯಲ್ಲಿರುವಾಗ ಈ ಲೋಕವನ್ನೂ, ಮೃತ್ಯುವಿನ ರೂಪಗಳನ್ನೂ ಅತಿಕ್ರಮಿಸುತ್ತಾನೆ. ಗಗನದಂತೆ ಅವನು ಸರ್ವಗತನಾಗಿ ಪರಿಪೂರ್ಣತೆಯನ್ನು ಪಡೆದಿರುವುದರಿಂದ ಪುರುಷ ಎನಿಸುತ್ತಾನೆ. ಆತ್ಮನು ಬುದ್ಧಿಯ ಸಂಸರ್ಗ ಹೊಂದಿ, ಶುಭ್ರತೆಯಿಂದ ರಂಜಿಸುವನು, ಸ್ಫಟಿಕವು ಜಪಾಕುಸುಮದ ಸಾಮಿಪ್ಯದಿಂದ ಶೋಣಿತವಾದಂತೆ. ಆತ್ಮ ಪುರುಷನು ಹುಟ್ಟುವಾಗ ಎಂದರೆ ಶರೀರವನ್ನು ಹೊಂದಿದಾಗ ಪಾಪಗಳಿಂದ ಆವರಿಸಲ್ಪಟ್ಟದ್ದು ಶರೀರವನ್ನು ಬಿಡುವಾಗ ಪಾಪಗಳನ್ನು ಬಿಟ್ಟುಬಿಡುತ್ತಾನೆ. ಶರೀರೇಂದ್ರಿಯಗಳ ಸಂಯೋಗದಿಂದ ಆತ್ಮನು ಅಸಾದೃಶ್ಯವಾದ ಅವಸ್ಥಾತ್ರಯಗಳನ್ನು ಹೊಂದುವನು. ಅವು ಯಾವುವೆಂದರೆ ಸ್ವಪ್ನ–ಸುಷುಪ್ತಿ–ಜಾಗೃತ್. ಆತ್ಮನು ಸುಷುಪ್ತಿಯಲ್ಲಿ ಅಂತರ್ಮುಖಿ; ಜಾಗ್ರತಿಯಲ್ಲಿ ಬಹಿರ್ಮುಖಿ; ಸ್ವಪ್ನವು ಹಾಗೂ ಹೀಗೂ ಇದ್ದರೂ ಜಾಗೃತಿಯ ಸಮತೋಲನವಾಗಿಯೇ ನಿಲ್ಲುವುದು. ಇದು ಮನೋವಿಜ್ಞಾನಕ್ಕೆ ಸರ್ವತ್ರ ಸ್ಪಷ್ಟ. ಆದರೂ, ಅದನ್ನು ವಿಮರ್ಶಿಸುವ ಗೋಜಿಗೆ ಹೋಗುವವರು ವಿರಳ. ಆತ್ಮಜ್ಞಾನಪಿಪಾಸಿಯು ಈ ಅವಸ್ಥಾತ್ರಯಗಳನ್ನು ಕೂಲಂಕಶವಾಗಿ ಪರಿಶೀಲಿಸಿದರೆ ಅದರಲ್ಲಿ ಗುಣವಿಶೇಷಗಳು ಕಂಡುಬರುತ್ತವೆ. ಪರಸ್ಪರ ವ್ಯತಿರಿಕ್ತವಾದ–ಅತ್ಯಂತ ವಿಲಕ್ಷಣವಾದ ಅವಸ್ಥಾತ್ರಯಗಳನ್ನು ಏಕಾತ್ಮನು ಏಕಭಾವದಿಂದ ಅನುಭವಿಸುತ್ತಾನೆಂಬುದು ಮನೋವೇದ್ಯವಾಗುತ್ತದೆ. ಜಾಗೃತ್–ಸುಷುಪ್ತಿಗಳೆಂಬ ಅವಸ್ಥೆಗಳ ಮಧ್ಯೆ ಆತ್ಮನು ಚರಿಸುತ್ತಿರುವುದು ಸ್ಪಷ್ಟ. ಸ್ವಪ್ನಾವಸ್ಥೆಯಲ್ಲಿ ಅಪೂರ್ಣತೆಯಿಂದ ಅಶಾಂತಿ-ದುಃಖ. ಅದು

ತಾನಾಗುವುದೇ ಜಾಗೃತ್. ಅದು ಇಲ್ಲವಾದಂತೆ ಕಾಣುವುದು ಸುಷುಪ್ತಿ; ಅವು ಇಲ್ಲನೇ ಇಲ್ಲವಾಗುವುದು ತುರೀಯ. ಸುಷುಪ್ತಿಯ ಸುಖಾನುಭವ ಪ್ರತ್ಯಕ್ಷವೂ ಅಲ್ಲ; ಪರೋಕ್ಷವೂ ಅಲ್ಲ. ಅದೊಂದು ಅನಿರ್ವಚನೀಯವಾದ ಅಪರೋಕ್ಷಾನುಭವ. ಅದ್ಭುತ ಪ್ರತಿಬೋಧವಿದಿತ; ಅನುಭವೈಕವೇದ್ಯ. ಈ ಎಲ್ಲವನ್ನೂ ಕೂಲಂಕಶವಾಗಿ ಪರಿಶೀಲಿಸಿದರೆ ಕಂಡುಬರುವ ಅರ್ಥದ ಮೂಲ 'ಅಂತರಾತ್ಮ'. ಅಂತರಾತ್ಮನು ನಿರ್ವಿಕಾರನು. ನಿರಾಕಾರನು ಏಕತ್ರನು ಎಂಬುದಕ್ಕೆ ಇನ್ನಾವ ಸಾಕ್ಷಿಯು ಬೇಕು ? ಪರಮಾತ್ಮನ ಅಂಶವಾದ ಆತ್ಮನು ಬೇರೆ ಬೇರೆ ದೇಹಗಳಲ್ಲಿ ಉಪಸ್ಥಿತನಾದರೂ ಸರ್ವತ್ರ ಸದಾ ಏಕತ್ರನೇ ಆಗಿರುವನು.

ಜನಕ ಮಹಾರಾಜ–ತಮ್ಮ ಅಪ್ಪಣೆಯ ಪ್ರಕಾರ ಆತ್ಮನು ಸರ್ವತ್ರ ಸದಾ ಏಕತ್ರನೇ ಆದರೆ, ವಿಶ್ವಪ್ರಪಂಚದಲ್ಲಿ ನಾನಾ ಆಗಿರುವುದು ಹೇಗೆ ಭಗವನ್ ?

ಯಾಜ್ಞವಲ್ಕ್ಯ ಮಹರ್ಷಿ–ಕೇಳಿ ಸಾಮ್ರಾಟ್, ಈ ಸಮಸ್ಯೆಯು ಆತ್ಮಾನುಭವವಾದರೆ ಪರಿಹಾರವಾಗುತ್ತದೆ. ಅಂದರೆ, ಪ್ರಾಣಕಣಗಳನ್ನು ಏಕತ್ರ ಭಾವಿಸಿದರೆ ವಿಶ್ವಭಾವ. ಉದಾಹರಣೆಗೆ ಪೃಥ್ವಿಯನ್ನು ತೆಗೆದು ಕೊಳ್ಳಿ. ಗಿರಿ–ವನ–ನದಿ–ಸಾಗರಗಳಿಂದ ಕೂಡಿಯೇ ಪೃಥ್ವಿಯ ಅವತಾರ ವಾಗಿದೆ. ಪೃಥ್ವಿ ಎಂದಾಗ ಅದರ ಅವಯವಗಳು ಗಣನೆಗೆ ಬರುವುದೇ ಇಲ್ಲ. ಅಂತೆಯೇ ಪ್ರಾಣಕಣಗಳ ಏಕೀಕರಣವಾದರೆ ವಿಶ್ವವೇ ಏಕಾತ್ಮ ವೆಂಬ ಭಾವನೆ ಬಲಿಯುವುದು. ಬಿಡಿಬಿಡಿಯಾಗಿ ಭಾವಿಸಿದರೆ ಎಲ್ಲವೂ ಬಿಡಿಬಿಡಿಯೆ. ಎಲ್ಲಕ್ಕೂ ಕಾರಣಕರ್ತನನ್ನು ಭಾವಿಸಿ ನೋಡಿದರೆ 'ಏಕ ಮೇವಾದ್ವಿತೀಯಂ' ಎಂಬುದರ ಅಂತರಾರ್ಥ ಕರತಲಾಮಲಕವಾಗುವುದು. ಈ ಸರ್ವಾಂತರ್ಯಾಮಿಯು ದೇಹದೇಹಗಳಲ್ಲಿ ಇದ್ದುಕೊಂಡು ಪ್ರತ್ಯೇಕ ಭಾವನೆಯನ್ನು ಮೂಡಿಸುವುದನ್ನೂ, ಮೋಹಾಂತಃಕರಣಗಳ ಜಾಲವನ್ನು ಹರಡುವುದನ್ನೂ ಗಮನಿಸಿದರೆ ಸತ್ಯಾರ್ಥ ಪ್ರಕಾಶವಾಗುತ್ತದೆ. ಒಂದೇ ತಂತಿಯು ಸ್ಥಾನಭೇದಗಳಿಲ್ಲದಿದ್ದರೂ ನಾನಾ ಸ್ವರಗಳನ್ನು ಬಿತ್ತರಿಸುವ ಸೊಗಸನ್ನು ಕಾಣಿರಾ ? ಇದೂ ಸಹ ಅದೇ ರೀತಿಯ ಸಂವಿಧಾನ.

ಸರ್ವಾಂತರ್ಯಾಮಿಯಾದ ಆತ್ಮನು ನಾನಾತ್ವಗಳಿಂದ ಕೂಡಿರು ವುದು ಸಹಜ. ಆದರೂ ಅನ್ಯುತನಾದ ಅವನು ಏಕತ್ರನೆಂಬುದನ್ನು ಬಲ್ಲವರೇ ಬಲ್ಲರು. ಈ ನಾನಾತ್ವಗಳ ಸಾಮಾನ್ಯ ಅನುಭವ ಸರ್ವತ್ರ ಕಾಲ-ದೇಶಗಳ ವ್ಯಾಪ್ತಿಗೆ ಒಳಪಟ್ಟದ್ದು. ಕಾಲವು ಭೂತ-ವರ್ತಮಾನ-ಭವಿಷ್ಯವಾದರೆ ದೇಶವು ಅಲ್ಲಿ ಇಲ್ಲಿ. ಅವು ಒಂದನ್ನುಳಿದು ಒಂದಿಲ್ಲವಾದುದ ರಿಂದ ಲೋಕಪದ್ಧತಿಗೆ ಚ್ಯುತಿಯೂ ಇಲ್ಲ; ಮಿತಿಯೂ ಇಲ್ಲ. ಕಾಲಸಾದೃಶ್ಯ ದಿಂದ ದೇಶ ಮತ್ತು ಪ್ರಗತಿ. ಭೂತಕಾಲದ ಅನುಭವ ಘನವಾದರೂ ಭವಿಷ್ಯದ ವಿಚಾರ ಅಗಮ್ಯ. ಇಲ್ಲದ ಭವಿಷ್ಯವನ್ನು ಸ್ಮರಿಸಿಕೊಂಡು ತರ್ಕಕ್ಕಿ ಳಿದರೆ ಭಾವನೆ ಕುಂಠಿತವಾಗುವುದು ಸಹಜ. ಅಂತಲೇ ಆತ್ಮನ ನಾನಾತ್ವ ಗಳ ಭಾವನೆಗೆ ಆಧಾರ ಕಾಲ-ದೇಶ ಎಂದು ತಿಳಿಯಬೇಕು.

ಯಾವನು ದೇಹಾಂತರ್ಯದಲ್ಲಿದ್ದುಕೊಂಡು ದೇಹಪ್ರಕೃತಿಯನ್ನು ಸದಾನಿಯಂತ್ರಿಸುವನೋ ಅವನು ಆತ್ಮನು. ಅವನು ಜರಾಮರಣರಹಿತನು. ಅವನಿಗೆ ಪ್ರತ್ಯೇಕವಾದ ಇಂದ್ರಿಯಗಳಿಲ್ಲ. ಆದರೂ, ದೈಹಿಕಪ್ರವೃತ್ತಿ-ನಿವೃ ತ್ತಿಗಳಿಗೆ ಅವನೇ ಕಾರಣೀಭೂತನು. ದೇಹದಲ್ಲಿ ಅವನಿರುವತನಕ ಲೋಕಾ ಲೋಕ. ಅವನಿಲ್ಲದಿದ್ದಲ್ಲಿ ಯಾವುದೂ ಇಲ್ಲ. ಆತ್ಮನಿಂದಲೇ ಶ್ರೇಷ್ಠತೆ. ಆತ್ಮ ನಿಂದಲೇ ಸಾಯುಜ್ಯ. ಆತ್ಮಬ್ರಹ್ಮನನ್ನು ಉಪಾಸಿಸುವುದೇ ಭಾವಸ್ಫೂರ್ತಿ. ಈ ಎಲ್ಲಾ ಆಧಾರಗಳಿಂದ ವಿಶ್ವವ್ಯಾಪಿಯಾದ ಅವನು ಏಕತ್ರನು ಎಂದು ತಿಳಿಯತಕ್ಕದ್ದು. ಆತ್ಮನು ಸರ್ವತ್ರಸದಾ ಕ್ರಿಯಾಶೀಲನಾದರೂ ಸುಖ ದುಃಖಗಳಲ್ಲಿ ಭಾಗಿಯಾಗಲಾರ. ಜನ್ಮಕರ್ಮಫಲಗಳಿಗೆ ಅವನು ನಿರ್ವಿಕಲ್ಪ ಸಾಕ್ಷಿ. ಅವನು ಪ್ರಾಣವಾಯುವಿನಲ್ಲಿ ಉಪಸ್ಥಿತನಾದರೆ ವಿಜ್ಞಾನಿ ಎನಿಸು ವನು. ಹೃದಯಸ್ಥಿತನಾದರೆ ಅಂತರ್ಯಾಮಿ ಎನಿಸುವನು. ಆತ್ಮರಹಸ್ಯದಲ್ಲಿ ಇದು ಗಮನಿಸಬೇಕಾದ ಅಂಶ. ಆತ್ಮಜ್ಞಾನವನ್ನು ಪಡೆಯುವುದೆಂದರೆ ಲೋಕಾವಶ್ಯಕವಾದ ಕರ್ಮವನ್ನು ಕೈಬಿಡದೆ ಅಂತರಾತ್ಮನಲ್ಲಿ ನೆಲೆನಿಂತ ಯೋಗಸ್ಥಿತಿಯನ್ನು ಅರಿತುಕೊಳ್ಳುವುದರಲ್ಲಿ ಶ್ರದ್ಧೆ ತೋರಬೇಕು. ಅಂದರೆ ಆತ್ಮನನ್ನು ಮನನಮಾಡು; ಶ್ರವಣಮಾಡು; ತಿಳಿದುಕೊಳ್ಳು. ಹಾಗೆ ಮನನಮಾಡುವುದರಿಂದ ಶ್ರವಣಮಾಡುವುದರಿಂದ ತಿಳಿದುಕೊಳ್ಳುವುದ ರಿಂದ ಭಾವನೆ ಸರಾಗ.

ಆತ್ಮಜ್ಞಾನವನ್ನು ಪಡೆದಮೇಲೆ ಮಾನವ ಪ್ರಕೃತಿಯ ವ್ಯಾಪಾರಗಳಿಗೆ ಅತೀತನಾಗುವನು. ಈಶ್ವರಸಂಕಲ್ಪಾರ್ಥ ಕರ್ಮವನ್ನು ಕೈಕೊಂಡಲ್ಲಿ ಆತ್ಮನು ಕರ್ಮಬಂಧಕ್ಕೆ ಒಳಗಾಗದೆ ಸಮತ್ವ ಪಡೆಯುವನು. ಬುದ್ಧಿಯೋಗವೆಂದರೆ ಕರ್ಮಸನ್ಯಾಸವಲ್ಲ; ಕರ್ಮವಿನ್ಯಾಸ. ಪರಿಚ್ಛಿನ್ನವಾದ ಜೀವದಿಂದ ಅಪರಿಚ್ಛಿನ್ನವಾದ ಜೀವನಜ್ಞಾನವನ್ನು ಪಡೆಯುವುದೇ ಗುರಿಯಾದರೆ ಜೀವನ ಯಾತ್ರೆಯೂ ಸಫಲ; ಕಾರ್ಯವಿಧಾನವೂ ಸಫಲ.

ಜನಕ ಮಹಾರಾಜ ಅತ್ಯಂತ ಸಂತುಷ್ಟಭಾವನೆಯಿಂದ ಕೈಗಳನ್ನು ಜೋಡಿಸಿಕೊಂಡು– ಭಗವನ್, ಇದೇ ಕೆಲವು ನಿಮಿಷಗಳ ಮೊದಲು ಆತ್ಮ ತತ್ತ್ವ ಮೀಮಾಂಸೆಯನ್ನು ಇಷ್ಟು ಸುಲಭವಾಗಿ ತಿಳಿದುಕೊಳ್ಳುವೆನೆಂದು ನಾನು ಭಾವಿಸಿರಲಿಲ್ಲ. ನಾನು ಕೃತಾರ್ಥನಾದೆ. ದಯವಿಟ್ಟು ನಮ್ಮ ಕಿರು ಕಾಣಿಕೆಯನ್ನು–ಪ್ರವಚನಗಳಿಗೆಂದು ಮೀಸಲಾಗಿ ಸ್ವರ್ಣವರಹಗಳಿಂದ ಅಲಂಕೃತವಾದ ಸಾವಿರ ಗೋವುಗಳನ್ನು ತಾವು ಸ್ವೀಕರಿಸಬೇಕು, ಭಗವನ್.

ಯಾಜ್ಞವಲ್ಕ್ಯ ಮಹರ್ಷಿ–ಇರಲಿ ಮಹಾರಾಜ, ಇನ್ನೂ ನಿಮ್ಮ ಸಂಶಯ ಪೂರ್ಣಯಾಗಿ ಬಗೆಹರಿಯಲಿಲ್ಲ. ಶಿಷ್ಯನಿಗೆ ಸರಿಯಾಗಿ ಉಪದೇಶ ಮಾಡದೆ ನಾನದನ್ನು ಪರಿಗ್ರಹಿಸಬಾರದೆಂದು ನನಗೆ ನನ್ನ ತಂದೆಯು ಹೇಳಿದ್ದಾರೆ. "ಅನನುಶಿಷ್ಯ ನ ಹರೇತ್" ಎಂಬ ಮಾತನ್ನು ನಾನೆಂದೂ ಮರೆಯಲಾರೆ.

ಸಭಾಸದರು ಮಂತ್ರಮುಗ್ಧರಂತೆ ಸಂಭಾಷಣೆಯನ್ನು ಆಲೈಸುತ್ತ ತಲೆದೂಗುವರು.

ಜನಕ ಮಹಾರಾಜ–ಹಾಗಿದ್ದರೆ ತಮ್ಮ ವ್ಯಾಖ್ಯಾನವನ್ನು ಮುಂದುವರಿಸೋಣವಾಗಲಿ ಭಗವನ್.

ಯಾಜ್ಞವಲ್ಕ್ಯ ಮಹರ್ಷಿ–ದೇಹಕೋಶಕ್ಕೆ ಆತ್ಮಬ್ರಹ್ಮನು ಸರ್ವತ್ರ ಸರ್ವದಾ ಭೂಯಿಷ್ಠನಾದರೂ ವಾಕ್ಕಿನ ಆಯತನವೂ ಸಹ ಅಷ್ಟೇ ಸರ್ವಶ್ರೇಷ್ಠ ; ಆತ್ಮಬ್ರಹ್ಮನ ಅಭಿಧ್ಯಾನದಿಂದ ವಾಕ್ಕು ಸರ್ವಾಂಗೀಣ ಪ್ರಜ್ಞೆ ತಳೆಯುವುದು. ಅಂದರೆ ಮಾತಿನಿಂದ ಆದರಣೆ, ವೇದೋಪನಿಷತ್ತುಗಳ ಪ್ರವ

ಚನ, ಶ್ಲೋಕ ಸ್ತೋತ್ರಾದಿಗಳ ಕಂಠಪಾಠ, ಪುರಾಣೇತಿಹಾಸಗಳ ಅಧ್ಯಯನ ಇತ್ಯಾದಿಗಳು ವಾಕ್ಕಿನಿಂದ ಸಾಧ್ಯವಾಗುವುದರಿಂದ ವಾಕ್ಕು ಬ್ರಹ್ಮ ಎನಿಸುವುದು.

ಜನಕ ಮಹಾರಾಜ–ಸಾಧು. ಸಾಧು.

ಯಾಜ್ಞವಲ್ಕ್ಯ ಮಹರ್ಷಿ–ಈ ವಿದ್ಯೋಪನಿಷತ್ತಿನಿಂದ ನನ್ನ ಜನ್ಮವೂ ಸಾರ್ಥಕ ಪಡೆಯಲಿ. ಇನ್ನೂ ಕೇಳಿ, ಸಾಮ್ರಾಟ್. ಮಡಕೆಯನ್ನು ಕಣ್ಣಿಂದ ಕಂಡಾಗ ಅದು ಮಣ್ಣಿಂದಾದುದು ಎಂಬುದು ಹೇಗೆ ತಿಳಿದು ಬರುವುದೋ, ಪ್ರಕಾಶವನ್ನು ನೋಡಿದಾಗ ಅದು ದೀಪದ್ದು ಎಂಬುದು ಹೇಗೆ ತಿಳಿದು ಬರುವುದೊ, ಬಿಂದಿಗೆಯನ್ನು ನೋಡಿದಾಗ ಅದು ತಾಮ್ರದ್ದು ಎಂದು ಹೇಗೆ ತಿಳಿದು ಬರುವುದೋ ಹಾಗೆಯೇ ಪ್ರತ್ಯೇಕತೆಯ ವಿಕಾರ ಕಣ್ಣಿಗೆ ಕಂಡರೂ ಅದು ಪ್ರಕೃತಿಯ ಅಂಗಾಂಗಗಳೇ ಎಂಬುದು ಸ್ಪಷ್ಟವಾಗಿ ತಿಳಿಯುತ್ತದೆ. ಅಂದರೆ ಪ್ರಕೃತಿಯು ಪ್ರತಿ ವಸ್ತುವಸ್ತುವಿಗೂ ತನ್ನ ಅಂಶವನ್ನು ಭಾಗ ಭಾಗವಾಗಿ ಕಳೆದುಕೊಂಡರೂ ತನ್ನ ಅಸ್ತಿತ್ವವನ್ನೆಂದೂ ಕಳೆದು ಕೊಳ್ಳಳು, ಎಂದಂತಾಯಿತು ಅಲ್ಲವೇ ?

ಜನಕ ಮಹಾರಾಜ-ಹೌದು, ಭಗವನ್.

ಯಾಜ್ಞವಲ್ಕ್ಯ ಮಹರ್ಷಿ–ಕೇಳಿ ಸಾಮ್ರಾಟ್, ಸಂಗೀತಕ್ಕೆ ಷಡ್ಜವು ಆಧಾರ, ಮಿಕ್ಕ ಸ್ವರಗಳು ಅದರ ಆಧೇಯು. ಆತ್ಮಬ್ರಹ್ಮಕ್ಕೆ ದೇಹವೇ ಆಧಾರ ಎಂದರೂ ದೇಹವು ಅದರ ಆಧೇಯ. ಹೀಗೆ ಆಧಾರಕ್ಕೆ ಆಧಾರ. ಪ್ರತಿಷ್ಠೆಗೆ ಪ್ರತಿಷ್ಠೆ ಎನ್ನಿಸುವ ಪ್ರಕೃತಿದತ್ತವಾದ ವಿಕೃತಿಗಳನ್ನು ಗಮನಿಸದಿರುವುದೇ ಅಭಯ. ಮತ್ತು ಅದೇ ಮೋಕ್ಷ ಸಾಧನ ಅಥವಾ ಬ್ರಹ್ಮ ಸಾಕ್ಷಾತ್ಕಾರ.

ಜನಕ ಮಹಾರಾಜ–ಈಗ ತಿಳಿಯಿತು, ಭಗವನ್.

ಯಾಜ್ಞವಲ್ಕ್ಯ ಮಹರ್ಷಿ–ಬ್ರಹ್ಮ ಚೇತನಾಂಶವಾದ ಆತ್ಮವನ್ನು ಅರಿತು ಕೊಳ್ಳಲಾರದವರು ಬ್ರಹ್ಮವಸ್ತು ಎಂಬುದನ್ನು ಹೊರಗಿನ ಚೇತನ ಎಂದು ಸಾಮಾನ್ಯವಾಗಿ ಭಾವಿಸುವುದರಿಂದ ಅದನ್ನು ಹುಡುಕಿಕೊಳ್ಳಲು

ಅನವರತ ಶ್ರಮಿಸುವರು. ಅದಿರುವುದು ತನ್ನಲ್ಲೇ; ಅದು ತಾನೇ ಎಂಬುದನ್ನು ಕ್ರಮಶಃ ತಿಳಿದುಕೊಂಡಾಗ ಮೋಕ್ಷದ ಬಾಗಿಲು ತಾನಾಗಿ ತೆರೆದು ಕೊಳ್ಳುತ್ತದೆ. ಇದನ್ನೆ ಬ್ರಹ್ಮಜ್ಞಾನ ಎನ್ನುತ್ತಾರೆ ಸಾಮ್ರಾಟ್.

ಆಸ್ಥಾನದ ವಿದ್ವಾಂಸರು ಕೇಳುಕೇಳುತ್ತ ಆನಂದಪುಳಕಿತರಾಗುವರು.

ಜನಕ ಮಹಾರಾಜ–ಭಗವನ್, ತಮ್ಮಲ್ಲಿ ನಾನೊಂದು ವರವನ್ನು ಬೇಡಿಕೊಳ್ಳುವೆ ದಯಮಾಡಿ ಕರಣಿಸಬೇಕು.

ಯಾಜ್ಞವಲ್ಕ್ಯ ಮಹರ್ಷಿ–ಅಗತ್ಯವಾಗಿ ಆಗಬಹುದು. ಹೇಳಿ, ಸಾಮ್ರಾಟ್.

ಜನಕ ಮಹಾರಾಜ-ತಮ್ಮೊಡನೆ ನಾವು ಯಾವಾಗಲೂ ಸಕಾಮರಾಗಿ ವ್ಯವಹರಿಸಲು ಅವಕಾಶ ಕಲ್ಪಿಸಿಕೊಡಬೇಕು. ಇದೇ ನಿಮ್ಮಲ್ಲಿ ನನ್ನ ಅತ್ಯಂತ ಸವಿನಯ ಯಾಚನೆ, ಮಹರ್ಷಿಗಳೇ.

ಯಾಜ್ಞವಲ್ಕ್ಯ ಮಹರ್ಷಿ–ಆಗಬಹುದು. ತಮ್ಮ ಅಭೀಷ್ಟವು ನಮಗೆ ಪ್ರಿಯವಾದುದೇ. ಯಾರು ಸಕಾಮರಾಗಿ ಪ್ರವಚನವನ್ನು ಕೇಳಿ ಮನನ ಮಾಡುವರೋ ಅವರಿಗೆ ಪ್ರವಚನ ಮಾಡುವುದರಲ್ಲಿ ಖಂಡಿತಾ ಆತ್ಮ ಸಂತೋಷ ಬರುತ್ತದೆ.

ಜನಕ ಮಹಾರಾಜ–ತಾವು ಹೀಗೆ ಮೋಕ್ಷದ ವಿಚಾರವಾಗಿ ಪ್ರವಚನ ಮಾಡುವಾಗಲೆಲ್ಲ ನನ್ನ ಪ್ರಶ್ನೋಪಪ್ರಶ್ನೆಗಳಿಗೆ ಬೇಸರಿಸದೆ ಉತ್ತರಿಸಬೇಕು.

ಯಾಜ್ಞವಲ್ಕ್ಯ ಮಹರ್ಷಿ–ಸಾಮ್ರಾಟ್, ನಾವು ತಪಸ್ಸಿನ ಮೂಲಕ ಸಾಧಿಸಿದುದನ್ನು ತಾವು ವಾಕ್ಕಿನ ಮೂಲಕ ಸಾಧಿಸುವುದಾದರೆ ವಿಶೇಷವೇ !

ಸಭೆಯಲ್ಲಿ ಎಳೆ ನಗುವಿನ ಲಹರಿಯು ಪ್ರವಹಿಸುವುದು.

ಜನಕ ಮಹಾರಾಜ–ನಾನಿದುವರೆಗೂ ಪೂರ್ಣವನ್ನು ತಲುಪಲಿಲ್ಲ ನಿಜ. ಗುರುಗಳ ಅನುಗ್ರಹವಿಲ್ಲದೆ ಏನನ್ನೂ ಸಾಧಿಸಲಾರೆನೆಂಬುದು ಗೊತ್ತು. ಅದಕ್ಕಾಗಿಯೇ ತಮ್ಮ ಅನುಗ್ರಹವನ್ನು ಯಾಚಿಸುತ್ತಿರುವೆ.

ಯಾಜ್ಞವಲ್ಕ್ಯ ಮಹರ್ಷಿ–ಯಾರು ತಮ್ಮ ಜೀವಿತದಲ್ಲಿ ಸತ್ಕರ್ಮಗಳನ್ನು ನಿಷ್ಠೆಯಿಂದ ಮಾಡುವರೋ ಅವರಿಗೆ ಸದ್ಗತಿ ಕಟ್ಟಿಟ್ಟ ಬುತ್ತಿ. ಅನಂತರ ಆ ಸತ್ಕರ್ಮಗಳಿಂದಲೇ ಉತ್ತಮ ಮಾರ್ಗದರ್ಶನವು. ಮುಂದೆ ಅವೇ ಅವರನ್ನು ದೇವದೂತರಂತೆ ದೇವಾಧಿದೇವನ ಬಳಿಗೆ ಕರೆದೊಯ್ಯುತ್ತವೆ. ನಾವು ಇಲ್ಲಿ ಏನಾದರೂ ಒಳ್ಳೆಯದನ್ನು ಮಾಡಿದ್ದರೆ ಅದರ ಪ್ರತಿಫಲ ಅನಂತರ ದೊರೆಯುವುದು. ಬದುಕಿನಲ್ಲಿ ಸತ್ಕರ್ಮವನ್ನು ಮಾಡದೆ ಸದ್ಗತಿಯನ್ನು ಬಯಸುವುದು ಬರೀ ಕೈಯ್ಯಲ್ಲಿ ಮೊಳ ಹಾಕಿದಂತೆ ವ್ಯರ್ಥವೇ ಸರಿ. ಯಾವುದು ಪ್ರೇಯಸ್ಸೋ ಅದನ್ನು ಶ್ರೇಯಸ್ಸು ಎಂದು ಭಾವಿಸುವುದರಿಂದ ಆಸೆ ಪ್ರತ್ಯಾಸೆಗಳು ಪುಂಖಾನುಪುಂಖವಾಗಿ ಮೂಡುತ್ತವೆ. ಇಂದ್ರಿಯಗಳ ಚಾಪಲ್ಯಕ್ಕೆ ಅನುಗುಣವಾಗಿ ಪ್ರಿಯವಾದ ವಸ್ತುಗಳನ್ನು ಪ್ರಯತ್ನಪೂರ್ವಕವಾಗಿ ಪಡೆದುಕೊಂಡು ಅನುಭವಿಸಿ, ತಾತ್ಕಾಲಿಕ ತೃಪ್ತಿಯಿಂದ ಸಂತುಷ್ಟರಾಗಿ ತದನಂತರ ಸರ್ವತ್ರ ಅದರಲ್ಲೇ ಮುಳುಗಿದ್ದು ಎಂದೂ ಸಂತೃಪ್ತಿಯನ್ನು ಸಂಪಾದಿಸಲಾಗದೆ ದುಃಖದ ಪಾಲಾಗುವುದು ಮೂಢತನದ ಪರಮಾವಧಿ. ಇಂದ್ರಿಯ ಸುಖದಾಸೆ ಎಂಥ ದುರಂತಸ್ಥಿತಿಗೆ ತನ್ನನ್ನು ಒಯ್ಯುತ್ತದೆ ಎಂಬುದನ್ನು ಅರಿತುಕೊಳ್ಳದಿದ್ದರೆ ಪತಂಗವೊಂದು ಜೇಡನ ಬಲೆಯತ್ತ ಹಾರಿದಂತೆಯೇ ಸರಿ; ಒಮ್ಮೆ ಬಲೆಗೆ ಬಿದ್ದರೆ ಮತ್ತೆ ಬಿಡುಗಡೆ ಎಂಬುದಿಲ್ಲ. ಆದ್ದರಿಂದ, ಶ್ರೇಯಸ್ಸು ಎಂಬುದು ಏನು? ಅದರ ಮಾರ್ಗ ಯಾವುದು? ಎಂಬುದನ್ನು ಅರಿತುಕೊಳ್ಳದೆಹೋದರೆ ಪೂರ್ಣತ್ವ ಎಂಬುದು ಕನಸಿನ ಮಾತು.

ಜನಕ ಮಹಾರಾಜ–ತಮ್ಮ ಕೃಪೆಯಿಂದ ನನ್ನ ಜ್ಞಾನಜ್ಯೋತಿ ಬೆಳಗಲಿ.

ಯಾಜ್ಞವಲ್ಕ್ಯ ಮಹರ್ಷಿ–ತಮ್ಮ ಯಾವುದೇ ಸಮಸ್ಯೆಯನ್ನು ತಿಳಿಸಿದರೆ ಯಥೋಚಿತ ಉತ್ತರ ನೀಡುವೆ.

ಜನಕ ಮಹಾರಾಜ–ನಾನು ಧನ್ಯ. ನಮಸ್ತೇಸ್ತು ಭಗವನ್ !

ಉಚ್ಛ್ವಾಸ ೭

೦

ದಿಗಂತದಿಂದ ದಿಗಂತರಕ್ಕೆ ತೀಡಿ ಬರುವ ಗಾಳಿ-ತೆಂಗಾಳಿ. ಸುಡು ಬಿಸಿಲಿನ ವ್ಯಾಪಕತೆಯಲ್ಲಿ ಅದೆಷ್ಟು ಮನಮೋಹಕವೋ. ಹಾಯೆಂದು ಆಸ್ವಾದಿಸುತ್ತವೆ ಮನಃಪ್ರಾಣಗಳು ಒಗ್ಗೂಡಿ.

ಅಪರಾಜಿತಾ ಪುಷ್ಪಗಳ ಸೌಗಂಧಸಾರ ಪರಿಸರದಲ್ಲೆಲ್ಲಾ ಹರಡಿತ್ತು ಆಪ್ಯಾಯಮಾನವಾಗಿ.

ವನಪ್ರದೇಶವನ್ನು ಇಬ್ಭಾಗವಾಗಿಸಿ ಹರಿದ ಚರಣರೇಖೆಯ ಅರಣ್ಯ ಪಥ. ಅದರ ಎಡಬಲದಲ್ಲಿ ಹಚ್ಚನೆಯ ಗರಿಕೆಯ ಹಾಸು. ವನದೇವಿಯ ಸೀಮಂತರೇಖೆಗೆ ಉಪಮಾನವಾಗುವಂತಿದ್ದ ಅದರ ಮೇಲೆಯೇ ಯೋಗಿನಿ ಮೈತ್ರೇಯಿಯು ಪಾದಯಾತ್ರೆ ನಡೆಸಿದ್ದಾಳೆ. ತಲೆಯ ಮೇಲೆ ಹೊದ್ದ ನಾರುಮಡಿಯ ಉತ್ತರೀಯ ತಂಗಾಳಿಯ ಚೆಲ್ಲಾಟದಿಂದ ಹಿಂಜರಿಯದಂತೆ ಬಿಗಿಹಿಡಿದುಕೊಂಡ ಕೈಬೆರಳುಗಳಲ್ಲಿ ಮತ್ತು ತಾಳಲಯಬದ್ಧವಾದ ಅಭಿಶಸ್ತ ಹೆಜ್ಜೆಗಳ ವಿಕ್ಷೇಪಗಳಲ್ಲಿ ತತ್ತ್ವಬದ್ಧವಾದ ಅತುಲನಿಷ್ಠೆ. ಮಾನಸಿಕ ವ್ಯಾಪಾರದಲ್ಲಿ ಅಲೌಕಿಕ ವಿಚಾರ ಸಂಪತ್ತಿ-ಐಹಿಕಜೀವನ ಮೌಲ್ಯಗಳ ಚಿಂತನೆಗೆ ಆದಿ-

ಅಂತ್ಯಗಳೇ ಇಲ್ಲ. ಮೇಲಾಗಿ, ಇನ್ನು ತನ್ನ ಮುಂದಿನ ಜೀವನಬದ್ಧವಾದ ಸಂಸ್ಕೃತಿಯಿಂದ ಕಾತ್ಯಾಯಿನಿಯಲ್ಲಿ ಯಾವೊಂದು ಅನುಚಿತವೂ ಆಗಬಾರದೆಂಬ ಚಿಂತನೆಯೂ ಸಹ. ಹೀಗೆ ನಾನಾ ಯೋಚನೆಗಳ ತುಮುಲದಲ್ಲಿ ಶಿರೋಭಾರವಿದ್ದರೂ ಅವ್ಯಾಹತವಾಗಿ ಸಾಗಿತು ಅರಣ್ಯಪಥ.

ಅವಳು ಆಶ್ರಮದ ಪ್ರಾಂಗಣಕ್ಕೆ ಪದಾರ್ಪಣೆ ಮಾಡಿದಾಗ ಮನಃಪ್ರಾಣಗಳನ್ನು ಒಮ್ಮೆಗೇ ಮೃದುಮಂದವಾಗಿ ಆವರಿಸಿತು ಸತ್ ಶಾಂತಿಯ ಮೋಹನೀಯವಾದ ಪರಿಮಳ. ಅಲ್ಲಿ ವಟುಗಳ ವೇದಾಂತ ಪಾರಾಯಣವಾಗಲೀ ಪಶುಪಕ್ಷಿಗಳ ಸೊಲ್ಲಾಗಲೀ ಕೇಳಿ ಬರುತ್ತಲೇ ಇಲ್ಲ. ಎಲ್ಲಾ ಜೀವಜಾತಿಯೂ ತಮ್ಮ ತಮ್ಮ ಇಷ್ಟಾರ್ಥವಾಗಿ ಹೊರಹೋಗಿದ್ದುದರಿಂದ ಸತ್ ಶಾಂತಿಯು ಹೆಪ್ಪುಗಟ್ಟಿದಷ್ಟು ಘನ. ನೆಟ್ಟದೃಷ್ಟಿಯು ಕೈಸಾಲೆಯ ಕಡೆ ತಾನಾಗಿಯೇ ಹರಿಯಿತು ಮನಸ್ಸು ಆದೇಶ ನೀಡದಿದ್ದರೂ. ಅಗ್ನಿಕುಂಡದ ಕೆಂಡ ಭಸ್ಮಾವೃತವಾಗಿದ್ದು ಮಹರ್ಷಿಯು ದೃಷ್ಟಿಗೆ ಬೀಳಲಿಲ್ಲ. ಈ ಸಮಯದಲ್ಲಿ ಕಾತ್ಯಾಯಿನಿಯಲ್ಲದೆ ಅಲ್ಲಿ ಬೇರೆಯಾರೂ ಇರುವುದಿಲ್ಲ ಎಂಬುದು ಅವಳಿಗೆ ಮನೋಗತ ಸಹ. ಆದುದರಿಂದ ಅವಳು, ಕಾತ್ಯಾಯಿನಿಯೊಂದಿಗೆ ಪ್ರತ್ಯೇಕ ಭೇಟಿಗಾಗಿ ಆರಿಸಿಕೊಂಡಿದ್ದು ಮಧ್ಯಾಹ್ನ ಸಮಯವನ್ನು. ಪ್ರಾಯೇಣ, ಕಾತ್ಯಾಯಿನಿಯು ಒಳಗಡೆ ಇರಬಹುದು ಎಂಬ ಭಾವನೆ ಮನದಲ್ಲಿ. ಹಾಗೆಂದು ಕೈಸಾಲೆಯ ಮೆಟ್ಟಲು ಏರುವುದರೊಳಗಾಗಿ ಹಿಂದಿಲಿಂದ 'ಮೈತ್ರೇಯೀ' ಎಂಬ ಆತ್ಮೀಯ ಕರೆ ಮೃದುಮಧುರವಾಗಿ ಕರ್ಣ ಕುಂಡಲಿಯನ್ನು ತಾಗಿತು. ಆ ಕ್ಷಣವೇ ಹಿಂತಿರುಗಿ ನೋಡಿದಳು ಮೈತ್ರೇಯೀ. ಧ್ವನಿ ತುಂಡುಗಡಿದರೂ ಇನ್ನೂ ಕರ್ಣಕುಂಡಲಿನಿಯಲ್ಲಿ ಮೊಳಗುತ್ತಲೇ ಇತ್ತು ಅದರ ಮಾಧುರ್ಯ ಅಲೆಯಲೆಯಾದ ಘಂಟಾರವದಂತೆ. ಮೈತ್ರೇಯೀ ಹೆಜ್ಜೆ ಕೀಳದೆ ಅಲ್ಲೇ ನಿಂತು ನೋಡಿದರೂ ವ್ಯಕ್ತಿ ಗೋಚರಿಸಲಿಲ್ಲ. ಅದು ಕಾತ್ಯಾಯಿನಿಯ ಧ್ವನಿಯೇ ಹೌದೆಂಬುದು ಆತ್ಮಗತ. ಅಂತಲೇ, ದೃಷ್ಟಿಯಲ್ಲಿ ಆತ್ಯಂತಿಕವಾದ ಕುತೂಹಲ. ಮರುಕ್ಷಣದಲ್ಲಿ ಪುನಃ ಅದೇ ದನಿ ಮೊಳಗಿತು–ಮೈತ್ರೇಯೀ !

ಆ ತಕ್ಷಣ ಅತ್ತದಿಟ್ಟಿಯನ್ನು ಹೊರಳಿಸಿ ನೋಡಿದರೆ ಅಶೋಕ ವೃಕ್ಷ ಳ ಮಧ್ಯೆ ಹಾಸುಗಲ್ಲಿನ ಮೇಲೆ ಕಾತ್ಯಾಯಿನಿ ! ಮೈತ್ರೇಯಿಯು ಆನಂದ ಪುಳಕಿತಳಾಗಿ ಮೆಟ್ಟಲಿಳಿದಳು. ಹೃತ್‌ಕಲಶದಲ್ಲಿನ ಆಶಾಮೃತ ಆಗಲೇ ತುಂಬಿ ಬಂದಷ್ಟು ಹಿತ ಮನದಲ್ಲಿ. ಅಪರಾಜಿತಾ ಪುಷ್ಪಗಳ ಹರಿವಾಣವನ್ನು ಮುಂದಿಟ್ಟುಕೊಂಡು ನಾರಿನಿಂದ ಮಾಲೆ ಕಟ್ಟುತಿದ್ದಾಳೆ ಕಾತ್ಯಾಯಿನಿ. ಮೈತ್ರೇಯಿಯು ಅಲ್ಲಿಂದ ಹೆಜ್ಜೆ ತೆಗೆಯುವುದರೊಳಗಾಗಿ ಮತ್ತೆಂದಳು ಕಾತ್ಯಾಯಿನಿ–ಹೀಗೆಯೇ ಬಾ. ಇಲ್ಲಿ ಬಹಳ ತಂಪಿದೆ.

ಮೈತ್ರೇಯೀ–ನೀವು ಒಗಳಡೆ ಇರಬಹುದೆಂದು ಭಾವಿಸಿ ನಾನು ಒಳ ಹೋಗುವುದರಲ್ಲಿದ್ದೆ.

ಕಾತ್ಯಾಯಿನಿ– ನಾನು ಹೊರಬಂದದ್ದು ಈಗಷ್ಟೆ ಕೂಡ.

ಮೈತ್ರೇಯಿಯು ಬಳಿಯಲ್ಲಿ ಕುಳಿತುಕೊಳ್ಳುತ್ತ–ಅಹಃ, ಎಂತಹ ಅಮೋಘವಾದ ಪರಿಮಳ ?

ಕಾತ್ಯಾಯಿನಿ–ದೈವಸೃಷ್ಟಿ.

ಮೈತ್ರೇಯೀ–ಖಂಡಿತ. ಇಷ್ಟೊಂದು ಹೂಗಳು ನಿಮಗೆ ದೊರೆತದ್ದಾದರೂ ಎಲ್ಲಿ ?

ಕಾತ್ಯಾಯನಿ–ಇದೋ, ಇಲ್ಲಿಂದ ಸ್ವಲ್ಪದೂರದಲ್ಲೇ ಇದರ ಗಿಡಗಳ ತೋಪು ಇದೆ. ವಟುಗಳು ಕಿತ್ತು ತಂದಿದಾರೆ. ಇದರ ಮಾಲೆಗೆ ಇನ್ನಾವ ಹೂ ಮಾಲೆಗಳ ಮಿಶ್ರಣವೂ ಬೇಕಿಲ್ಲ. ಹೀಗೆಯೇ ಚೆನ್ನ.

ಮೈತ್ರೇಯಿ–ಹೌದೌದು, ಇತ್ತ ಒಂದು ನಾರನ್ನು ನೀಡಿ. ನಾನೂ ಸಹ ಕಟ್ಟುವೆ.

ಕಾತ್ಯಾಯಿನಿಯು ಮರು ಮಾತಾಡದೆ ನಾರಿನ ಬಟ್ಟಲನ್ನು ಮುಂದಿಡು ದಳು. ನಾಲ್ಕೂ ಕೈಗಳ ಚಟುವಟಿಕೆ ಒಮ್ಮನದಿಂದ ಒಮ್ಮತದಿಂದ ಮುಂದು ವರಿಯಿತು.

ಮೈತ್ರೇಯೀ-ಈ ನಲ್ದಾಣಕ್ಕೂ ಈ ಹೂವುಗಳಿಗೂ ನಿಮಗೂ ಬಹ
ಹೊಂದಾಣಿಕೆಯಿದೆ. ಸಂಜೀವನತ್ರಯ.

ಕಾತ್ಯಾಯಿನಿಯು ಆ ಮಾತು ಕೇಳಿ ಮರುನುಡಿಯಲಿಲ್ಲ. ಅಧರಗಳ
ಮಂದಸ್ಮಿತದ ಮುಗುಳು ಅರಳಿತು.

ಮೈತ್ರೇಯೀ-ನನ್ನ ಮಾತು ಉತ್ಪ್ರೇಕ್ಷೆ ಎನಿಸಿರಬಹುದು ನಿಮಗೆ

ಕಾತ್ಯಾಯಿನಿ-ಹಾಗೇನಿಲ್ಲ. ಆದರೂ ...

ಮೈತ್ರೇಯೀ-ಅದೇಕೆ ಅರ್ಧಮಾತು ?

ಕಾತ್ಯಾಯಿನಿ-ಯೋಚಿಸಿ ನೋಡಿದರೆ, ನಿನ್ನ ಅಭಿಪ್ರಾಯದಲ್ಲಿ
ಹುರುಳಿಲ್ಲ ಎನ್ನಲಾರೆ. ಅರ್ಥಾತ್ ವನಶ್ರೀಗೆ ಹೂಗಳಿಂದಲೇ ಶೋಭೆ.
ಇನ್ನು ನನ್ನ ವಿಚಾರ ಹೇಳುವುದಾದರೆ ನನ್ನ ಜೀವನ್ಮರಣಯೋಗ ಇಲ್ಲಿಯೇ.
ಅಂದಮೇಲೆ, ಹೊಂದಾಣಿಕೆ ವಾಸ್ತವ್ಯ ಎನ್ನಲೇಬೇಕಲ್ಲ ?

ಮೈತ್ರೇಯಿ-ಹೌದು...., ಯಾವುದನ್ನು ನಾವು ಧರ್ಮಸಮ್ಮತ
ಎನ್ನುತ್ತೇವೊ ಅದು ಸುಮ್ಮನೆ ಸಂಭವಿಸುವುದಿಲ್ಲ.

ಕಾತ್ಯಾಯಿನಿ-ದೇವಿ, ಅಷ್ಟು ಮಾತ್ರವಲ್ಲ; ಯಾವುದು ಅಧರ್ಮ
ಬದ್ಧವೋ ಅದೂ ಸಹ ಸುಮ್ಮನೆ ಸಂಭವಿಸುವುದಿಲ್ಲ ಎಂಬುದನ್ನೂ ನೀನು
ಗಮನಿಸತಕ್ಕದ್ದು.

ಒಡನೆ ಇಬ್ಬರ ಮುಖಬಿಂಬದಲ್ಲೂ ಮಂದಹಾಸ ಕ್ಷಣಕಾಲ ಬೆಳಗಿ
ಮಾಯವಾಗುವುದು.

ಮೈತ್ರೇಯೀ-ಅಂದಮೇಲೆ ಸೃಷ್ಟಿವೈಚಿತ್ರ್ಯದಲ್ಲಿ ವಿಶೇಷವೇನೂ ಇಲ್ಲ.

ಕಾತ್ಯಾಯಿನಿ-ವಾಸ್ತವ್ಯ.

ಮೈತ್ರೇಯಿಯು ಮುಗಿದಿದ್ದ ನಾರಿನ ತುದಿಗೆ ಮತ್ತೊಂದು ನಾರನ್ನು
ಸೇರಿಸಿ ಗಂಟುಹಾಕುತ್ತ-ಜಾಗ್ರತಾವಸ್ಥೆಗೂ ಸಾಕಾರಕ್ಕೂ ಸಾಮ್ಯವಿರುವು
ದರಿಂದ ಮನಸ್ಸು ಮೊದಲು ಹರಿಯುವುದೇ ಸಕಾರದ ಮೇಲೆ. ಸ್ವಪ್ನ ಸುಷು
ಪ್ತಿಗಳ ಮೌಲ್ಯಮಾಪನೆಯೂ ಜಾಗ್ರತಾವಸ್ಥೆಯಲ್ಲೇ. ಅಂತಲೇ ಎಲ್ಲಾ

ಕ್ಷರಗಳಿಗಿಂತ ಅಕಾರವೇ ಮಿಗಿಲಾಗಿ ಸರ್ವವ್ಯಾಪಿಯಾಗಿ ಕಂಡುಬರುವು ರಿಂದ ನಾವು ಏನನ್ನಾದರೂ ಕುರಿತು ಹೇಳಬೇಕೆಂದರೂ ಮಾತು ಅಕಾರ ಂದಲೇ ಆರಂಭವಾಗುವುದು ಸರ್ವೇಸಾಮಾನ್ಯ. ಅದೇ ಬಾಹ್ಯಾಡಂಬರದ ಾನ್ಯತೆ.

ಕಾತ್ಯಾಯಿನಿ–ಹಾಗೆನ್ನುವುದು ಪ್ರಾಥಮಿಕ ಅಂಕದಲ್ಲಿ. ಅನಂತರ?

ಅನಂತರ....?

ಆ ಪ್ರಶ್ನೆ ಮನವನ್ನು ಬಾಣದಂತೆ ಹೊಕ್ಕಿತು. ಮೈತ್ರೇಯಿಯು ನ್ನೊಳಗೆ ಒಂದೆರಡು ಕ್ಷಣ ಯೋಚಿಸಿ ಮರುನುಡಿದಳು–ನಾವು ಯಾವು ನ್ನು ಮನದಲ್ಲಿ ಸಂಗ್ರಹಿಸಿಟ್ಟುಕೊಳ್ಳುತ್ತೇವೋ ಅದನ್ನು ಕನಸಿನಲ್ಲಿ ಕಾಣು ದು ಸಹಜ. ಪ್ರಥಮ ಅಂಕದಲ್ಲಿ ಜಾಗ್ರತಾವಸ್ಥೆಯ ಕ್ಷೇತ್ರದಿಂದ ಪಡೆದು ೂಂಡ ಅನುಭವಗಳು ಸ್ಮೃತಿಪಟಲದಲ್ಲಿ ಅಚ್ಚೊತ್ತಿ ಸಂಸ್ಕಾರರೂಪ ತಳೆ ುತ್ತವೆ. ಯಾವುದು ಸತ್ಯವೋ ಅದು ಸತ್ಯವೇ. ಯಾವುದು ಮಿಥ್ಯವೋ ದು ಮಿಥ್ಯವೇ. ಅವುಗಳನ್ನು ಯಥಾಶಕ್ತಿ ವಿಶ್ಲೇಷಣೆ ಮಾಡುವುದೆಂದರೆ ದು ಜಾಗ್ರತಾವಸ್ಥೆಯಲ್ಲಿಯೇ. ಆದ್ದರಿಂದ, ಬೌದ್ಧಿಕ ಉನ್ನತಿಗೆ ಜಾಗ್ರ ಾವಸ್ಥೆಯೇ ನಾಂದಿ.

ಆ ಮಾತಿಗೆ ಸಂಪ್ರೀತಳಾದ ಕಾತ್ಯಾಯಿನಿಯು ಪ್ರಸನ್ನ ವದನದಿಂದ ಈ ಹೊತ್ತಿದಲ್ಲಿ ಅನುದಿನವೂ ಮಹರ್ಷಿಗಳು ಆಶ್ರಮದಲ್ಲಿರುವುದಿಲ್ಲವೆಂಬುದು ನಗೆ ತಿಳಿದಿದೆಯಷ್ಟೆ ?

ಮೈತ್ರೇಯೀ– ಹೌದು. ಅದನ್ನರಿತೇ ನಾನು ಈ ಸಮಯದಲ್ಲಿ ಇಲ್ಲಿಗೆ ಂದದ್ದು. ಇಂದು ನನಗಿರುವುದು ನಿಮ್ಮನ್ನು ನೋಡುವ ಉದ್ದೇಶ.

ಕಾತ್ಯಾಯಿನಿ–ಒಳ್ಳೆಯದು. ಕಾರಣವೇನೆಂಬುದನ್ನು ನಿನ್ನಿಂದಲೇ ತಿಳಿಯೋಣ.

ಮೈತ್ರೇಯೀ–ನಿಮ್ಮಿಂದ ಒಂದು ಉಪಕಾರವನ್ನು ಬಯಸಿ ನಾನು ಇಲ್ಲಿಗೆ ಬಂದಿರುವೆ. ದಯಮಾಡಿ ಉಪಕರಿಸಬೇಕು.

ದನಿ ಹೃದಯದಾಳದಿಂದ ಹೊರಬಿತ್ತು. ನಸುಸಂಕೋಚದ ಸಣ್ಣ

ಕೆಂಪು ಛಾಯೆ ಮುಖಬಿಂಬದಲ್ಲಿ ಕ್ಷಣ ಮಾತ್ರ ಮಿಂಚಿ ಮಾಯವಾಯಿತ

ಕಾತ್ಯಾಯಿನಿ ಎಳೆನಗುವನ್ನು ಬೀರಿ ಅಷ್ಟೊಂದು ಹಿರಿಯ ಮಾತ ದರೂ ಏಕೆ?

ಮೈತ್ರೇಯಿಯು ಭಯ-ಲಜ್ಜೆಗಳ ಗಣಿಯಾದರೂ ಅದನ್ನು ತೋ ಗೊಡದಂತೆ ಅತ್ಯಂತ ಗಂಭೀರಗತಿಯಲ್ಲಿ ಉತ್ತರಿಸುತ್ತಾಳೆ-ಇರಲಿ, ಅದರ ದೇನೂ ಬಾಧಕವಿಲ್ಲ. ಬರೀ ಸೌಜನ್ಯಕ್ಕಾಗಿ ಅಷ್ಟೆ.

ಕಾತ್ಯಾಯಿನಿಯ ಮನಃಬುದ್ಧಿಗಳು ವಿಚಾರಪರವಶವಾದುವು. ಅವಳ ಬಯಸುವ ವಿಚಾರವೇನೆಂಬುದು ಅಂದೇ ತಿಳಿದಿತ್ತು. ಅದರಲ್ಲಿ ಅವಳಿ ಇನಿತೂ ಸಂಕೋಚವೆನಿಸಲಿಲ್ಲ; ಅದಕ್ಕೆ ಬದಲಾಗಿ ಶಕ್ತಿತತ್ತ್ವವನ್ನೇ ಕಂ ದ್ದಾಳೆ. ಜೀವನಧರ್ಮದಲ್ಲಿ ತನ್ನನ್ನು ತಾನೇ ಉತ್ಸರ್ಜನೆಗೊಳಿಸುವುದೆ ನಾರೀತತ್ತ್ವ. ಜಡಮಾಂಸಪಿಂಡವಾದ ಶರೀರಕ್ಕೆ ಯಾವ ಪ್ರಾಧಾನ್ಯತೆಯೂ ಇಲ್ಲ ಅವಳಲ್ಲಿ. ಅಂತಲೇ, ಅವಳು ಉತ್ಸುಕಳಾದಳು. ಉತ್ತರಿಸಲು ಸ್ವಲ್ಪವೂ ಹಿಂದುಮುಂದು ಯೋಚಿಸಲಿಲ್ಲ. ಧ್ವನಿ ಸರಾಗವಾಗಿ ಹೊಮ್ಮಿತು-ಶುಭೆ ಇರಲಿ ಸಂತೋಷ. ನಿನ್ನ ಹಿರಿಮೆ ನನ್ನ ಹಿರಿಮೆಯೂ ಕೂಡ. ನಾನೂ ಅದರಲ್ಲಿ ಸಹಭಾಗಿಯಾಗುವೆ.

ಮೈತ್ರೇಯಿಯ ಸರಳಸ್ಮಿತವೇ ಉತ್ತರವಾಯ್ತು. ನುಡಿ ಹೊಮ್ಮಲಿಲ್ಲ.

ಕಾತ್ಯಾಯಿನಿ-ಇದುವರೆಗೂ ನಿನ್ನ ಸಾಧನೆಯ ಬಗ್ಗೆ ಬಹಳ ಕೇಳಿ ಬಲ್ಲೆ. ಸ್ತ್ರೀ ಕೋಟಿಗೆ ನಿನ್ನಿಂದ ಕೀರ್ತಿ ಲಭಿಸಲಿ.

ಮೈತ್ರೇಯೀ-ನಿಮ್ಮ ಹರಕೆ ನನ್ನನ್ನು ಮುನ್ನಡೆಸಲಿ. ಅದರ ಸಲು ವಾಗಿಯೇ ನಾನು ನಿಮ್ಮ ಬಳಿಗೆ ಬಂದದ್ದು. ಈ ಹೊತ್ತಿನಲ್ಲಿ ನೀವು ವಿರಾಮ ವಾಗಿರುತ್ತೀರೆಂಬುದು ಗೊತ್ತು. ಅದರಿಂದ ನಿಮ್ಮೊಡನೆ ಸವಿಸ್ತಾರವಾಗಿ ಮಾತಾಡಲು ಅವಕಾಶ ದೊರೆಯುತ್ತದೆ ಎಂಬ ಆಲೋಚನೆಯಿಂದಲೇ ನಾನು ನಿಮ್ಮ ದರ್ಶನ ತೆಗೆದುಕೊಂಡದ್ದು.

ಕಾತ್ಯಾಯಿನಿ-ಒಳ್ಳೆಯದು. ನಿನ್ನಂತಹ ಸಾಧ್ವೀಮಣಿಯನ್ನು ಆದರಿ ಸುವ ಸುಯೋಗ ನನಗೆ ಒದಗಿದ್ದು ವಿಶೇಷವೇ. ಹೇಳು, ನನ್ನಿಂದ ಏನಾಗ

ಬೇಕೋ ಅದನ್ನು ಅಗತ್ಯವಾಗಿ ವಿಮರ್ಶಿಸೋಣ.

ಮೈತ್ರೇಯೀ-ನಿಮ್ಮ ಮನಸ್ಸಿನ ಆಳವನ್ನು ಬಲ್ಲೆ. ಅಂತಲೇ ಧೈರ್ಯವಾಗಿ ವಿಷಯವನ್ನು ಮುಂದಿಡುವೆ, ಅಪ್ಪಣೆಯಾಗಬೇಕು.

ಕಾತ್ಯಾಯಿನಿ-ಆಗಬಹುದು ತಂಗೀ! ನಿನ್ನಂತೆ ವಿಶಾಲ ಮನೋ ಭಾವ ಉಳ್ಳವರು ವಿರಳ.

ಮೈತ್ರೇಯೀ-ನಾನು ಯೋಗಿನಿ, ನನ್ನ ಅಭ್ಯಾಸ ಇನ್ನೂ ವಿದ್ಯಾರ್ಥಿ ದೆಸೆಯಲ್ಲಿದೆ ಎಂಬುದು ನಿಮಗೂ ಗೊತ್ತು. ಅದನ್ನು ನಾನು ಹೆಚ್ಚು ವಿವರಿಸಬೇಕಿಲ್ಲ. ಮುಂದೆ ಕಲಿಯತಕ್ಕದ್ದು ಬಹಳಷ್ಟು ಉಂಟು ನನಗೆ. ಅದಕ್ಕಾಗಿ ಸರಿಯಾದ ಗುರುವೊಬ್ಬನಿಲ್ಲದಿದ್ದಲ್ಲಿ ನಾನು ಇದುವರೆವಿಗೆ ಸಾಧಿಸಿರುವುದೆಲ್ಲಾ ವ್ಯರ್ಥವಾಗುತ್ತದೆ. ಆದುದರಿಂದ ಒಬ್ಬ ಸದ್ಗುರುವಿನಲ್ಲಿ ಶಿಷ್ಯವೃತ್ತಿಯನ್ನು ಕೈಕೊಳ್ಳುವ ಯೋಚನೆಯಲ್ಲಿದ್ದು, ಆ ವಿಚಾರವಾಗಿ ನಿಮ್ಮ ಪತಿವರ್ಯರಾದ ಯಾಜ್ಞವಲ್ಕ್ಯ ಮಹರ್ಷಿಗಳನ್ನು ನಾನು ಕೇಳಿಕೊಂಡಿರುವೆ.

ಕಾತ್ಯಾಯಿನಿಯು ಸಮ್ಮತಿ ಸೂಸುವ ಮನೋಭಾವದಿಂದ ತಲೆದೂಗುತ್ತ—ಅದು ಮಹರ್ಷಿಗಳಿಂದಲೇ ತಿಳಿದು ಬಂದಿದೆ.

ಮೈತ್ರೇಯೀ-ಹಾಗಾದರೆ....

ಮಾತನ್ನು ಅಷ್ಟಕ್ಕೆ ತುಂಡುಗಡಿದು ಅವಳ ಮುಖಭಾವವನ್ನು ಗಮನಿಸುವಳು.

ಕಾತ್ಯಾಯಿನಿ-ಹೇಳು, ಅಷ್ಟೇಕೆ ಅನುಮಾನ-ಸಂಕೋಚ.

ಮೈತ್ರೇಯೀ-ನಾನು ಸ್ತ್ರೀಯಾದುದರಿಂದ ಪರಕೀಯರೊಡನೆ ಶಿಷ್ಯವೃತ್ತಿ ಸರಿದೋರುವುದಿಲ್ಲ. ನನಗೆ ಗೌರವ ರಕ್ಷೆಯು ಬೇಕು. ಆದ್ದರಿಂದ ನಾನು ಮೋಕ್ಷಪತ್ನಿಯಾಗಿರಲು ಅಪ್ಪಣೆ ದೊರೆತರೆ ಮಹಾ ಉಪಕಾರ. ಅದೂ ಅಲ್ಲದೆ, ಅವರಲ್ಲಿ ನಿಮ್ಮ ಅನುಮತಿ ದೊರೆತನಂತರವೇ ಸ್ವೀಕರಿಸಬೇಕೆಂದು

ಕೇಳಿಕೊಂಡಿರುವೆ. ಆದರೆ, ನಾನು ನಿಮಗೆಂದೂ ಸಾಪತ್ನವನ್ನುಂಟುಮಾಡುವುದಿಲ್ಲ. ಯೋಗಿನಿ ಎಂದೆಂದೂ ಯೋಗಿನಿಯೇ!

ಕಾತ್ಯಾಯಿನಿ–ನೀನು ನನ್ನೊಂದಿಗೆ ಸೋದರಿಯಂತೆ ನಡೆದು ಕೊಳ್ಳಬಲ್ಲೆಯಾ?

ಮೈತ್ರೇಯೀ–ಹೌದು, ಅಂತರಾತ್ಮಪೂರ್ವಕವಾಗಿಯೂ ನಾನು ನಡೆದುಕೊಳ್ಳುವೆ.

ಕಾತ್ಯಾಯಿನಿ–ನನ್ನ ಪ್ರಶ್ನೆಗೆ ಕ್ಷಮೆಯಿರಲಿ. ಒಂದುವೇಳೆ, ನೀನೇ ಬಲಿಯಾದರೆ....?

ಮೈತ್ರೇಯಿಯು ತಲೆಯಾಡಿಸುತ್ತ ಅಸಮ್ಮತಿಯನ್ನು ಸೂಚಿಸಿ ಗಂಭೀರ ಧ್ವನಿಯಲ್ಲಿ–ಅದು ಸಾಧ್ಯವೇ ಇಲ್ಲ. ನನ್ನ ಮಾನರಕ್ಷೆಗೊಬ್ಬ ಭರ್ತನಿರಲೇ ಬೇಕು; ಅಷ್ಟಲ್ಲದೆ ನಾನು ಶಿಷ್ಯವೃತ್ತಿ ಕೈಕೊಳ್ಳುವಂತಿಲ್ಲ. ಆದ್ದರಿಂದ ನನ್ನನ್ನು ಮೋಕ್ಷಪತ್ನಿಯಾಗಿ ಸ್ವೀಕರಿಸಲು ಕೇಳಿಕೊಂಡಿರುವೆ. ನಾನು ಅವರ ಮೋಕ್ಷದಲ್ಲಿ ಮಾತ್ರ ಸಹಭಾಗಿ.

ಕಾತ್ಯಾಯಿನಿ–ಅದೂ ಸಹ ಮಹರ್ಷಿಗಳಿಂದಲೇ ತಿಳಿದುಬಂದಿದೆ.

ಮೈತ್ರೇಯೀ–ಇದರಿಂದ ನಿಮಗೆ ಯಾವ ತೊಂದರೆಯೂ ಆಗದೆಂದು ಭಾವಿಸಿಕೊಂಡಿರುವೆ.

ಕಾತ್ಯಾಯಿನಿಯು ಸಸ್ನೇಹಭಾವದಿಂದ ನೋಡುತ್ತ–ಅದರಿಂದ ಎಲ್ಲಿಯ ತೊಂದರೆ?

ಮೈತ್ರೇಯೀ–ನಾನು ನಿಮಗೆ ತುಂಬ ಕೃತಜ್ಞಳಿರುವೆ.

ಕಾತ್ಯಾಯಿನಿ–ದೇವರು ನಿನಗೆ ಮಂಗಳವನ್ನುಂಟು ಮಾಡಲಿ ತಂಗೀ.

ಮೈತ್ರೇಯೀ–ನಿಮ್ಮ ಸೌಜನ್ಯವನ್ನು ಅರಿತಿದ್ದುದರಿಂದಲೇ ನಾನು ಮಹರ್ಷಿಗಳಲ್ಲಿ ನನ್ನ ಬೇಡಿಕೆಯನ್ನು ಮುಂದಿಟ್ಟದ್ದು. ನಿಮ್ಮ ಸಹವಾಸ ನನ್ನ ಪುಣ್ಯಯೋಗವೇ ಸರಿ.

ಕಾತ್ಯಾಯಿನಿಯು ಮಾತಾಡದೆ ಸುಮ್ಮನಾಗುವಳು. ಪ್ರಸಂಗವಶಾತ್ ಮುಖಬಿಂಬದಲ್ಲಿ ಹಸನಾದ ಎಳೆನಗು ಅರಳಿ ಮಿನುಗಿ ಮಾಯವಾದಾಗ ಸಾತ್ವಿಕತೆಯ ಕಳೆ ಸ್ವಚ್ಛಂದವಾಗಿ ಬೆಳಗುತಿತ್ತು ಕಣ್ಣುಗಳಲ್ಲಿ.

ಮೈತ್ರೇಯೀ–ಆರ್ಯೆ, ನನ್ನ ಜೀವನದ ಮುಖ್ಯೋದ್ದೇಶ ಮೋಕ್ಷ ಸಾಧನವಾದ ವೇದಾಂತ ಮತ್ತು ಆಧ್ಯಾತ್ಮಿಕ ಕ್ಷೇತ್ರ. ಅದು ವಿನಾ ನನಗೆ ಇನ್ನಾವಗುರಿಯೂ ಇರುವುದಿಲ್ಲ. ನಾನು ಮುಮುಕ್ಷು.

ಕಾತ್ಯಾಯಿನಿ–ಸಾಧು, ಸಾಧು. ನಿಮ್ಮ ಮೋಕ್ಷ ಸಾಧನೆಯಿಂದ ನನಗೂ ಲಾಭ ಉಂಟಾಗಲಿ. ನಾನೂ ಸಹ ಮುಮುಕ್ಷುವೇ.

ಮೈತ್ರೇಯೀ–ಇರಲಿ, ನಮ್ಮ ಸಾಧನೆಯಿಂದ ನಿಮಗೆ ಲಾಭ ಉಂಟಾಗುವ ಮಾತೇಕೆ? ನೀವೇ ಮುಮುಕ್ಷುವಾಗಿರುವಾಗ ಸಾಧನೆಯು ನಿಮ್ಮ ಹೃದ್ಗತವಾಗಿರತಕ್ಕದ್ದೆ. ಅಂದಮೇಲೆ, ನಮ್ಮಿಂದ ಲಾಭ ಉಂಟಾಗುವ ಮಾತಂತೂ ತುಂಬಾ ಅನುಚಿತ.

ಕಾತ್ಯಾಯಿನಿ–ಸರಿ ಬಿಡು, ಹನಿಗೂಡಿದರೆ ಹಳ್ಳ. ಅದರಲ್ಲೂ ಆಧ್ಯಾತ್ಮಿಕ ಸತ್ಯಧಾರೆ ಎಂದರೆ ವಿಶೇಷವೇ. ಕೇಳು, ಮೈತ್ರೇಯೀ ಉಪನಿಷತ್ತುಗಳ ತತ್ತ್ವ ಪ್ರತಿಪಾದನೆಯಲ್ಲಿ ಚರಾಚರ ವಸ್ತುಗಳ ಹಿಂದೆ ಇರುವ ಅಖಂಡವಾದ ಮೂಲಚೈತನ್ಯವನ್ನು ಗುರುತಿಸುವುದು ಸಾಮಾನ್ಯವಲ್ಲ. ಉಪನಿಷತ್ಕಾರಕರ ಅಧ್ಯಾತ್ಮಿಕ ಅನುಭವ, ಧಾರ್ಮಿಕ ಪ್ರವೃತ್ತಿ, ವೇದಾಂತ ಚಿಂತನೆ ಇವು ಎಷ್ಟೊಂದು ಆಳ ಎಂಬುದನ್ನು ಅಳೆಯಬೇಕಾದರೆ ಅದು ಉಪನಿಷತ್ತುಗಳ ಮೂಲಕವೇ.

ಮೈತ್ರೇಯೀ–ಹೌದು, ಹಿರಿಯ ಉಪನಿಷತ್ಕಾರಕರು ತಮ್ಮ ಕಾವ್ಯ ಮನೋಹರತೆಯನ್ನಾಗಲೀ ಮತ್ತು ತಮ್ಮ ಕರ್ತೃತ್ವವನ್ನಾಗಲೀ ಲವಲೇಶವೂ ಲೆಕ್ಕಿಸದೆ ಅದ್ಭುತ ವೈಚಾರಿಕತೆಗೆ ತಮ್ಮನ್ನೇ ಲೀಲಾಜಾಲವಾಗಿ ಬಲಿಗೊಟ್ಟಿರುವುದನ್ನು ಗಮನಿಸಿದರೆ ಮೈನವಿರೇಳುತ್ತದೆ. ನಾವು ಅವರಿಗೆ ಚಿರಋಣಿಗಳಾಗಿರಲೇ ಬೇಕು.

ಕಾತ್ಯಾಯಿನಿ–ಅಹಃ, ಎಂತಹ ಕರ್ತವ್ಯನಿಷ್ಠೆ! ಮಹಾ ಮಹಿಮೋನ್ನತ ಕಾರ್ಯರ್ಷಿತ್ವ ಎಂದರೆ ಇದು?

ಮೈತ್ರೇಯೀ–ನಿಜ, ನಿಜ. ಯಾರಿಗೆ ಲೋಕಕಲ್ಯಾಣಾರ್ಥ ಶ್ರಮಿಸಬೇಕೆಂಬ ಅಭಿಲಾಷೆಯಿದೆಯೋ ಅವರಿಗೆ ತಮ್ಮ ವಿಶೇಷ ಗಮನಕ್ಕೆ ಬರುವುದಿಲ್ಲ ಅಥವಾ ಅವರು ಲೆಕ್ಕಿಸುವುದಿಲ್ಲ. ಇಂಥ ವಿಚಾರಗಳು ನಮ್ಮಂತಹ ಸಾಮಾನ್ಯರ ಮನದಲ್ಲಿ ಮೂಡುವುದು ಸಹಜ. ಆ ಬಗ್ಗೆ ನಾನೂ ಬಹಳಷ್ಟು ಯೋಚಿಸಿರುವೆ. ಯಾರು ಬ್ರಹ್ಮನಿಷ್ಠರೋ ಅವರಿಗೆ ತಮ್ಮ ಶ್ರೇಷ್ಠತೆ ಎಲ್ಲಿರುತ್ತೆ? ಅಲೌಕಿಕವಾದ ಪರಮ ಆಧ್ಯಾತ್ಮಿಕ ಸತ್ಯದ ಚಿರಂತನತೆಯೇ ಅದಕ್ಕೆ ಸಮಾಧಾನ. ಕಾಲವಶಾತ್ ಚರಾಚರಗಳು ಉಳಿಯಲಿ ಅಳಿಯಲಿ ಅಧ್ಯಾತ್ಮಿಕ ಸತ್ಯಗಳು ವಿಶ್ವ ಪ್ರಪಂಚದಲ್ಲಿ ಕುಂದಿಲ್ಲದಂತೆ ಸ್ಪಂದಿಸುತ್ತಿರುತ್ತವೆ. ಯಾರು ಚಿತ್ತಶುದ್ಧಿಯಿಂದ ಅದರ ಮೇಲೆ ಮನಸ್ಸನ್ನು ಕೇಂದ್ರೀಕರಿಸುವರೋ ಅವರಿಗೆ ಮಾತ್ರ ಅದು ಮನೋಗತ ಮತ್ತು ಆತ್ಮಗತ.

ಕಾತ್ಯಾಯಿನಿ–ನೀನು ಸರಿಯಾಗಿ ತಿಳಿದುಕೊಂಡಿದ್ದಿ. ಬಹುಶಃ ಇದು ನಿನ್ನ ಆಧ್ಯಾತ್ಮಿಕ ಅನುಭವ ಇರಬಹುದು, ಶುಭೆ.

ಮೈತ್ರೇಯೀ–ಇರಲಿ, ಈ ಅಧ್ಯಾತ್ಮಿಕ ಸತ್ಯದ ಗ್ರಹಿಕೆ ಬರಿಯ ಋಷಿವರ್ಗಕ್ಕೆ ಮಾತ್ರವಲ್ಲ. ಅದು ಮಾನವವರ್ಗಕ್ಕೆಲ್ಲಾ ಅನುಗತವಾದುದು; ಅಂದರೆ, ಅದನ್ನು ಅರ್ಥೈಸುವಷ್ಟು ವಿದ್ಯಾಸಂಪನ್ನತೆಯೊಂದಿಗೆ ದೃಢಸಂಕಲ್ಪ ಹೊಂದಿದರೆ ಸಾಕು. ಉಪನಿಷತ್ಕಾರಕರು ಎಷ್ಟೊಂದು ಶ್ರದ್ಧಾಪೂರ್ವಕವಾಗಿ ಎಲ್ಲಾ ವಿಚಾರಗಳನ್ನೂ ತಿಳಿಯಹೇಳಿದ್ದಾರೆ? ಅವರ ಅನುಭವ ಎಷ್ಟೊಂದು ಅಪಾರವಾದುದು? ಮುಮುಕ್ಷುಗಳು ಆ ವಿಚಾರವಾಹಿನಿಯಲ್ಲಿ ಮನವಿಟ್ಟರೆ ತಿಳಿಯುವುದೇನೂ ಕಷ್ಟದ ವಿಷಯವಲ್ಲ.

ಕಾತ್ಯಾಯಿನಿ–ಅಂತಲೇ ಬಹಳ ಮಂದಿ ಆಕರ್ಷಿತರಾಗುತಿದ್ದಾರೆ. ವಿದ್ಯೆ ಬುದ್ಧಿಗಳಲ್ಲಿ ಸೂಕ್ತಿರಚನೆಗಳಲ್ಲಿ ಸಾಧನಾಮಾರ್ಗದಲ್ಲಿ ಸ್ತ್ರೀಯರು ಪುರುಷ

ವರ್ಗದ ಸರಿಸಮಾನತೆಯನ್ನು ಪಡೆದು ತಾತ್ತ್ವಿಕ ಪ್ರಪಂಚದಲ್ಲಿ ಮಿನುಗು ತಾರೆಗಳಾಗಿದ್ದಾರೆ. ಗಾರ್ಗಿ, ನಿವಾವರೀ, ಲೋಪಾಮುದ್ರ, ಸಿಕತಾ, ವಿಶ್ವಾವರ ಮೊದಲಾದ ಸ್ತ್ರೀಯರುಗಳ ಜೀವನ ಸ್ಫೂರ್ತಿಯಿಂದ ಸ್ತ್ರೀಲೋಕದ ಕೀರ್ತಿಯ ಕಸ್ತೂರಿ ಜಗದಾದ್ಯಂತ ಘಮಘಮಿಸಲಿದೆ. ನಮ್ಮವರು ಇನ್ನೂ ಕಲಿತು ಕಣ್ತೆರೆಯಬೇಕು. ಮಾನವಜನ್ಮ ಪಡೆದು ಪಶುಗಳಾಗಿ ಬಾಳುವುದೇನು ಚೆನ್ನು ? ಬಿಡು, ನೀನಂತೂ ಬಹಳ ಶ್ರದ್ಧೆಯಿಂದ ಜೀವನ ಜ್ಯೋತಿಯನ್ನು ಬೆಳಗಿಸುತ್ತಿರುವೆ. ಅದು ಎಂದೆಂದಿಗೂ ನಂದಾದೀಪವಾಗಿ ಉರಿಯಲಿ. ದೀಪವರ್ತಿಕೆಯಿಂದ ಮನೆಯೆಲ್ಲಾ ಬೆಳಕು. ನೀನು ನನಗೆ ಸೋದರಿಯಾಗಿ ಬಂದುದಂತೂ ತುಂಬ ಆನಂದದಾಯಕವಾದ ವಿಚಾರ. ಸ್ತ್ರೀಲೋಕಕ್ಕೆ ನಿನ್ನಿಂದ ಉಪಕಾರವಾಗಲಿ ಎಂದೇ ನನ್ನ ಹೃತ್ಪೂರ್ವಕವಾದ ಹಾರೈಕೆ. ನೀನು ಇನ್ನೂ ಹೆಚ್ಚಿನ ಸಾಧನೆಮಾಡಿ ಗಾರ್ಗಿಯಂತೆ ಪೌರುಷೇಯವಾದ ಮನಸ್ಥೈರ್ಯವನ್ನು ಹೊಂದಬೇಕು. ಅವಳು ಹೇಗೆ ದಿಟ್ಟತನದಿಂದ ವಾದಸ್ಥಾನದಲ್ಲಿ ನಿಲ್ಲುತ್ತಾಳೆ ? ಅದು ಎಲ್ಲರೂ ಮೆಚ್ಚುವಂತಾದ್ದು.

ಆ ಮಾತು ಹೃದಯದಾಳಕ್ಕೆ ಇಳಿಯಿತು. ಮೈತ್ರೇಯಿಯು ಭವಿಷ್ಯದ ವೇದಿಕೆಯಲ್ಲಿ ಮನವನ್ನು ನೆಟ್ಟು ಆನಂದನಿಮಗ್ನಳಾದಳು. ಮಾನಸಿಕ ವೇಗದಿಂದ ಪ್ರತಿನುಡಿಯುವುದೂ ಸಹ ಮರೆತುಹೋಯಿತು. ಕೈಗಳು ಯಥಾಪ್ರಕಾರವಾಗಿ ಹೂಹಾರವನ್ನು ಕಟ್ಟುತ್ತಲೇ ಇವೆ. ಮಾನಸಿಕಚಕ್ರ ಇನ್ನೆಲ್ಲೋ ಸುಳಿಸುತ್ತುತ್ತಿದೆ. ಹೃದಯ ಮೃದಂಗದ ಘೋಷಣೆಯೇ ಬೇರೆ. ಸ್ವಲ್ಪಹೊತ್ತು ಮೌನ ದೀಕ್ಷೆಯಲ್ಲಿ ಉರುಳಿತು. ಬಹುಶಃ ಅದೇ ವೇಳೆಗೆ ವನ್ಯವೀಥಿಯ ತುತ್ತತುದಿಯಲ್ಲಿ ಚಿರಪರಿಚಿತವಾದ ಪಾದಸಪ್ಪಳ ಕೇಳಿಬಂತು. ಒಡನೆ ಈರ್ವರ ದೃಷ್ಟಿಯೂ ಕುತೂಹಲಭರಿತವಾಗಿ ಅತ್ತ ಹೊರಳಿದಾಗ ದೃಷ್ಟಿಗೋಚರವಾದುದು ಯಾಜ್ಞವಲ್ಕ್ಯ ಮಹರ್ಷಿಯ ಭವ್ಯ ಶರೀರಪ್ರಕೃತಿ. ಮೇರುಪರ್ವತವೇ ನಡೆದು ಬಂದಂತೆ ಹಜ್ಜೆ ಹೆಜ್ಜೆಯಲ್ಲಿಯೂ ಪ್ರೌಢ ಸಹಜಗಂಭೀರತೆ ಕಂಡುಬರುತಿತ್ತು. ಇಬ್ಬರ ದೃಷ್ಟಿಯೂ ಅಲ್ಲಿಂದ ಕದಲಲಿಲ್ಲ. ಮಹರ್ಷಿಯು ಸಮೀಪಗತನಾದ ಮೇಲೆ ಮಡದಿಯರನ್ನು ಅಶೋಕವೃಕ್ಷಪುಂಜದಲ್ಲಿ ಕಂಡು ಸನಿಹಕ್ಕೈತಂದು

ಮುಖದಲ್ಲಿ ಮಂದಹಾಸವನ್ನು ಸೂಸಿ–ಓಹೋ! ಇಬ್ಬರೂ ಸೇರಿ ಬ
ದ್ದೀರಿ! ಈಗಾಗಲೇ ಬಹಳ ವಿಚಾರಗಳನ್ನು ಕುರಿತು ಚರ್ಚಿಸಿರಬಹು
ಇನ್ನು ನನ್ನ ಅವಶ್ಯಕತೆ ಏನೂ ಇಲ್ಲ ಅಲ್ಲವೇ?

ಕಾತ್ಯಾಯಿನಿ–ನಿಮ್ಮನ್ನು ಬಿಟ್ಟು ಯಾವ ವಿಚಾರವೂ ಪೂರ್ಣಗೊ
ವುದಿಲ್ಲ ಬಿಡಿ. ನಾವೆಷ್ಟು ಚರ್ಚಿಸಿದರೂ ಅದು ಅಪೂರ್ಣವೇ.

ಮೈತ್ರೇಯೀ–ವಾಸ್ತವ್ಯ. ಗುರುವಿಲ್ಲದ ವಿದ್ಯೆಯಿಂದ ಏನಾದೀತು

ಯಾಜ್ಞವಲ್ಕ್ಯ ಮಹರ್ಷಿಯು ಪ್ರಸನ್ನಮುಖಿಯಾಗಿ ನುಡಿ
ಹಾಗಾದರೆ ನನ್ನ ಅವಶ್ಯಕತೆಯುಂಟು ಎಂದಂತಾಯಿತು.

ಮೈತ್ರೇಯೀ–ಹೌದು. ಅದರಿಂದಲೇ ನಾವು ನಿಮ್ಮ ಪ್ರತೀಕ್ಷೆಯ
ದ್ದೇವೆ.

ಕಾತ್ಯಾಯಿನಿಯು ಸಹ 'ಹೌದು' ಎಂಬಂತೆ ತಲೆಯಾಡಿಸಿದಳು.

ಮೈತ್ರೇಯೀ–ಈಗ ಸಮಯ ಪ್ರಶಸ್ತವಾಗಿದೆ. ಯಾವ ಅಡಚಣೆಯ
ಇಲ್ಲದೆ ಪ್ರಶಾಂತತೆಯಿಂದ ಕೂಡಿದ ಮಂಗಳ ಮುಹೂರ್ತ. ನೀವು ಮನಸ
ಮಾಡಿದರೆ ನಾವು ವ್ಯಾಖ್ಯಾನವನ್ನು ಆಸ್ಥೆಯಿಂದ ಕೇಳಬಹುದು. ಆದ
ತಮಗೆ ಮಾನಸಿಕ ತ್ರಾಸ ಇಲ್ಲದಿದ್ದರೆ ಮಾತ್ರ ಎಂತಲೂ ವಿಜ್ಞಾಪಿ
ಕೊಳ್ಳುವೆ.

ಯಾಜ್ಞವಲ್ಕ್ಯ ಮಹರ್ಷಿ–ಬಿಡು, ಈಗ ಅಂತಹ ಪ್ರಸಂಗವೇನ
ಇಲ್ಲ. ಎಷ್ಟಾದರೂ ವ್ಯಾಖ್ಯಾನ ಮಾಡಬಹುದು.

ಕಾತ್ಯಾಯಿನಿಯು ಕುಂಭೋದಕವನ್ನು ತರಲು ಒಳಹೋದಳ
ಯಾರಾದರೂ ಆಶುಕವಿಗಳು ಆಗ ಅವಳನ್ನು ನೋಡಿದ್ದರೆ ಅನುರಾ
ವತೀ ಸಂಧ್ಯಾ ದೇವಿಯಂತೆ, ಭಕ್ತಿಭಾವವೇ ಮೂರ್ತಿತಳೆದಂತೆ ಎಂ
ಹೃತ್ಪೂರ್ವಕವಾಗಿ ಬಣ್ಣಿಸುತಿದ್ದರು ಎಂಬುದು ನಿಸ್ಸಂಶಯ. ಅ
ಆತ್ಮೀಯತೆಯಿಂದ ಕುಂಭೋದಕವನ್ನು ತಂದ ಅವಳರೀತಿ ಹೃದ್ದೇಶವನ
ತಣಿಸುವಂತಿತ್ತು, ಮಹರ್ಷಿಯು ಅಂಗಳದಂಚಿನ ಕಗ್ಗಲ್ಲಿನ ಮೇಲೆ ನಿಂತ
ಎರಡೂ ಕೈಗಳಿಂದ ಬೊಗಸೆಯೊಡ್ಡಿದ. ಮಡದಿ ಸ್ವಲ್ಪಸ್ವಲ್ಪವಾ

ತುರಿದ ಕುಂಭೋದಕದಿಂದ ಕೈಕಾಲುಗಳನ್ನು ತೊಳೆದು ಮುಖಮಜ್ಜನ ಮಾಡಿದನಂತರ ಕೈಸಾಲೆಗೆ ಹೋಗಿ ಕೃಷ್ಣಾಜಿನದಮೇಲೆ ಕುಳಿತು ಕೊಂಡ. ಹಿಂದೆಯೇ ಅವನನ್ನು ಹಿಂಬಾಲಿಸಿ ಬಂದ ಕಾತ್ಯಾಯಿನಿ ಮೈತ್ರೇಯಿಯರು ಸಮೀಪದಲ್ಲಿ ತೃಣಾಸ್ತರದ ಮೇಲೆ ಮಂಡಿಸಿದರು. ಶಿರದ್ದೇಶದಲ್ಲಿ ಸ್ವಚ್ಛಂದವಾಗಿ ಹರಿದಾಡುವ ಅಲಕರಾಶಿ, ಸಿಂಧೂರ ಯುಕ್ತ ಸೀಮಂತರೇಖೆ, ಕೊರಳಲ್ಲಿ ರುದ್ರಾಕ್ಷಮಾಲೆ, ಹರಿದ್ರಾಕುಂಕುಮ ಸುಶೋಭಿತ ವದನಶ್ರೀ, ಅಧ್ಯಾತ್ಮಿಕ ಓಜಸ್ಸು ಮುಸದಲ್ಲಿ.

ಆ ವೇದಾಂತಕಾಲೀನ ಚಿತ್ರ ಚಿರಸ್ಮರಣೀಯವಾದುದು.

ಯಾಜ್ಞವಲ್ಕ್ಯ ಮಹರ್ಷಿ–ಕೇಳಿ, ವೇದಾಂತ ತತ್ವಶಾಸ್ತ್ರವನ್ನು ಅರ್ಥ ಮಾಡಿಕೊಳ್ಳುವುದು ಅನೇಕರಿಗೆ ಬಲು ಕಠಿಣ. ಆದ್ದರಿಂದ ಅಂತಹ ಸಂದರ್ಭದಲ್ಲಿ ಕಥಾರೂಪದಿಂದ ತತ್ತ್ವಬೋಧೆ ಮಾಡುವುದೇ ಒಳ್ಳೆ ಯದು. ಆದರೆ, ನೀವಿಬ್ಬರೂ ಆ ಅವಸ್ಥೆಯನ್ನು ದಾಟಿದವರು ಆದ್ದ ರಿಂದ ಪ್ರವಚನವೇ ಸರಾಗ. ಈಗ ಯಾವ ಮಂತ್ರವನ್ನು ಕುರಿತು ಪ್ರವಚನವನ್ನು ಕೇಳಬೇಕೆಂದು ನಿಮ್ಮಗಳ ಅಭೀಪ್ಸೆ?

ಮೈತ್ರೇಯಿಯು ಕಾತ್ಯಾಯಿನಿಯತ್ತ ದೃಷ್ಟಿಯನ್ನು ಹೊರಳಿಸಿ ನಾವು ಈಶಾವಾಸ್ಯ ಉಪನಿಸತ್ತಿನ ಮೊದಲ ಮಂತ್ರದ ಪ್ರವಚನವನ್ನು ಕೇಳೋಣವೇ ?

ಕಾತ್ಯಾಯಿನಿ-ಆಗಬಹುದು. ಇಂದು ಅದರ ಪ್ರವಚನವೇ ಆಗಲಿ.

ಅನಂತರ ಮೈತ್ರೇಯಿಯು ಮಹರ್ಷಿಯತ್ತ ದೃಷ್ಟಿಯನ್ನು ಹೊರ ಳಿಸಿ ಭಗವನ್! ನಾವು ಈಶಾವಾಸ್ಯ ಉಪನಿಷತ್ತಿನ ಮೊದಲನೆಯ ಮಂತ್ರ ವನ್ನು ಕೇಳೋಣ.

ಆ ಕೂಡಲೆ ಕಾತ್ಯಾಯಿನಿಯೂ ಆ ಮಾತನ್ನು ಮತ್ತೆ ಸಮರ್ಥಿ ಸುತ್ತಾಳೆ.

ಪೂರ್ಣಮದಃ ಪೂರ್ಣಮಿದಂ ಪೂರ್ಣಾತ್ ಪೂರ್ಣಮುದುಚ್ಯತೇ |
ಪೂರ್ಣಸ್ಯ ಪೂರ್ಣಮಾದಾಯ ಪೂರ್ಣಮೇವಾವಶಿಷ್ಯತೇ ||

ಕೇಳಿ, ಅದರ ಭಾವಾರ್ಥವು ಹೀಗಿದೆ :—

ಅದು ಪೂರ್ಣವು ; ಇದೂ ಪೂರ್ಣವು ; ಪೂರ್ಣದಿಂದಲೇ ಪೂರ್ಣವು ಉಂಟಾಗಿದೆ. ಪೂರ್ಣದಿಂದ ಪೂರ್ಣವನ್ನುಕಳೆದವೇಲೆ ಉಳಿಯುವ ಶೇಷವೂ ಸಹ ಪೂರ್ಣವೇ. ಅಂದರೆ ಎಂತಹ ಪೂರ್ಣಾರ್ಥವಿದು ಮೈತ್ರೇಯೀ. ಉಪನಿಷತ್ತಿನ ಧ್ಯಾನಶ್ಲೋಕಗಳನ್ನು ಪಠಿಸುವ ರೂಢಿ ಇಂದು ನಿನ್ನೆಯದಲ್ಲ. ಇಲ್ಲಿ ಬರುವ ತಾತ್ತ್ವಿಕ ಭಾವನೆ ಯಾವೊಬ್ಬ ವ್ಯಕ್ತಿಗಾಗಿ ಸೀಮಿತವಾಗಿಲ್ಲ. ಯಾವಜಾತಿ ಮತ ಬೇಧವಿಲ್ಲದೆ ಎಲ್ಲಾ ವರ್ಣೀಯರೂ,ಎಲ್ಲಾ ವರ್ಗೀಯರೂ ಅನುಸರಿಸಬಹುದಾದ ನೀತಿಬೋಧೆ. ಉಪನಿಷತ್ತು ಯಾವ ದೇವರನ್ನೂ ಕುರಿತು ಹೇಳುತ್ತಿಲ್ಲ ; ಸೃಷ್ಟಿಶಕ್ತಿ ಯನ್ನು ಪರಬ್ರಹ್ಮ ಎಂದು ಮಾತ್ರ ಕರೆಯುತ್ತದೆ. ಇದಕ್ಕೆ ದೇವದೇವಿ ಯರ ಆಕಾರವೂ ಇಲ್ಲ. ಆ ಹೆಸರು ಒಂದು ವ್ಯಕ್ತಿಗೆ ಮಾತ್ರ ಸೀಮಿತವೂ ಅಲ್ಲ. ಇಡೀ ಬ್ರಹ್ಮಾಂಡವನ್ನೆಲ್ಲಾ ಆದ್ಯಂತವಾಗಿ ವ್ಯಾಪಿಸಿ ಸೃಷ್ಟಿ–ಸ್ಥಿತಿ–ಲಯವನ್ನು ಅನೂಚಾನವಾಗಿ ನಿಯಂತ್ರಿಸುತ್ತಿರುವ ಮಹಾತಾತ್ತ್ವಿಕ ಸಂಪತ್ತೇ 'ಪರಬ್ರಹ್ಮ' ಎನಿಸುತ್ತದೆ.

ಮಂತ್ರದ ಪ್ರಕಾರ–ಪೂರ್ಣಮದಃ ಅಂದರೆ ಅದು ಪೂರ್ಣ ಎಂಬ ಉಕ್ತಿಯಲ್ಲಿ 'ಅದು' ಎನಿಸಿಕೊಳ್ಳುವುದೂ ಪರಬ್ರಹ್ಮತತ್ತ್ವ. ಅದೊಂದೇ ಆದಿದೈವ ಅಥವಾ ಆದಿಶಕ್ತಿ ಅಥವಾ ನಿತ್ಯ ಸತ್ಯಸ್ಯ ಸತ್ಯ. ಅದು ಪರಿ ಪೂರ್ಣವಾದುದು ಎಂದರೆ ಅದರಲ್ಲಿ ಯಾವ ಕುಂದುಕೊರತೆಯಾಗಲಿ, ಲೋಪದೋಷಗಳಾಗಲೀ ಇಲ್ಲ. ಅದು ಸಮಸ್ತ ಬ್ರಹ್ಮಾಂಡವ್ಯಾಪಿ. ಅದು ಆವರಿಸದ ಸ್ಥಳವೇ ಇಲ್ಲ. ಎಲ್ಲವೂ ಪೂರ್ಣ ಎಂಬ ಮಹತ್ತಿನಲ್ಲಿ ಅಡಕವಾಗಿದೆ ಅದು. ಪೂರ್ಣ ಎಂದೆಂದಿಗೂ ಪೂರ್ಣವೇ ; ಪರಿಪೂರ್ಣವೇ.

ಇನ್ನು ಪೂರ್ಣಮಿದಂ ಎಂಬ ಚಿರಸತ್ಯವನ್ನು ತೆಗೆದುಕೊಳ್ಳೋಣ. 'ಇದು' ಎಂದರೆ ನಾವು ಮತ್ತು ಈ ವಿಶ್ವಪ್ರಪಂಚ ಇದನ್ನೂ ಸಹ ಪೂರ್ಣವೇ ಎನ್ನುತ್ತದೆ ಮಂತ್ರ. ಇಲ್ಲಿ ತಾತ್ತ್ವಿಕ ದೃಷ್ಟಿಯಿಂದಲೇ ಆಗಲೀ, ವ್ಯಾವಹಾರಿಕ ದೃಷ್ಟಿಯಿಂದಲೇ ಆಗಲಿ, ಧಾರ್ಮಿಕ ದೃಷ್ಟಿ

ಯಿಂದಲೇ ಆಗಲೀ ನೋಡಹೋದರೆ ಎಲ್ಲವೂ ಭಿನ್ನ ಭಿನ್ನವೇ. ಜೀವ ರಾಶಿಗಳಲ್ಲೇ ಆಗಲೀ ಬೌದ್ಧಿಕಸ್ತರದಲ್ಲೇ ಆಗಲೀ, ನೈಸರ್ಗಿಕ ಸ್ಥಿತಿಯಲ್ಲೇ ಆಗಲೀ, ಒಂದರಿಂದ ಒಂದಕ್ಕೆ ನಾನಾ ರೀತಿಯಲ್ಲಿ ಭಿನ್ನತೆಯಿದೆ. ಎಲ್ಲಿಯೂ ಪರಿಪೂರ್ಣತ್ವ ಎಂಬುದು ಕಂಡು ಬರುವುದಿಲ್ಲ. ಜನಗತಿ ಯಲ್ಲಿ ನಾವು ನೋಡುತ್ತಿರುವುದೆಲ್ಲ ಸ್ವಾರ್ಥದ ಕೀಳರಿಮೆಯೋ ಹೊರತು ಪರಮಾರ್ಥದ ಹಿರಿಮೆಯಲ್ಲ. ಇಂಥ ಪರಿಸ್ಥಿತಿಯಲ್ಲಿ ಪೂರ್ಣವಾದರೂ ಎಲ್ಲಿದ್ದೀತು ಎಂಬ ಅನುಮಾನ ಯಾರಿಗಾದರೂ ಮೂಡುವುದು ಸಹಜ. ಆದರೂ, ವ್ಯವಹಾರಿಕ ದೃಷ್ಟಿಯಿಂದ ನೋಡುವಾಗ ಹಾಗೆನಿಸಿದರೆ ಪಾರಮಾರ್ಥಿಕ ದೃಷ್ಟಿಯಿಂದ ನೋಡುವುದು ಯುಕ್ತ. ಇಲ್ಲಿ ಪೂರ್ಣ ತೆಯ ವಿಕಾಸವಿರುವುದು ದೇಶ–ಕಾಲ–ನಿಮಿತ್ತಗಳ ಚೌಕಟ್ಟನಲ್ಲಿ. ಯಾರೇ ಆಗಲೀ. ಪಾರಮಾರ್ಥಿಕ ವಿಚಾರ ಸಂಪತ್ತಿಯನ್ನು ಅರ್ಥಮಾಡಿಕೊಳ್ಳ ಬೇಕೆಂದರೆ ಕಾಲ–ದೇಶ–ನಿಮಿತ್ತಗಳಿಗೆ ಅತೀತರಾಗಿ ಮುನ್ನಡೆದರೇನೇ ಸಾರ್ಥಕತೆ. ಇದನ್ನೆಲ್ಲಾ ಅಜ್ಞಾನಿಯಾದವನು ಅರಿತುಕೊಳ್ಳುವುದು ಕಷ್ಟ. ಪ್ರಾಕೃತಿಕಸತ್ಯವನ್ನು ಅರಿಯದೇ ಹೋದಲ್ಲಿ ಆ ನಷ್ಟ ನಮಗೇ ಹೊರತು ಬ್ರಹ್ಮನಿಗಲ್ಲ. ಕಾಲಚಕ್ರವನ್ನು ನಿಯಂತ್ರಿಸಲು ಹಗಲಿರುಳೂ ಸೂತ್ರಧಾರಿಯಾಗಿ ಕುಳಿತಿರುವುದಿಲ್ಲ ಬ್ರಹ್ಮ. ಯಾವ ದೃಷ್ಟಿಯಿಂದ ಲೋಕಾಲೋಕಗಳು ನಿರ್ಮಿತವಾದುವೋ, ಅದೇ ದೃಷ್ಟಿಯಲ್ಲಿ ನಿಯಮ ಬದ್ಧವಾಗಿ ನಿಯಂತ್ರಿಸಲ್ಪಡುತ್ತವೆ ಅವು. ಲೋಕದಲ್ಲಿ ಜ್ಞಾನದೃಷ್ಟಿ ತೀರ ಕಡಿಮೆ; ಅಲ್ಪಜ್ಞತೆ ಜಾಸ್ತಿ. ಅಂತಲೇ ಬ್ರಹ್ಮಸ್ವರೂಪ ಅದ್ವಿತೀಯವಾದರೂ ಅವ್ಯಕ್ತ. ಅದ್ಭುತವಾದರೂ ಅಗಣ್ಯ.

ಪೂರ್ಣಾತ್ ಪೂರ್ಣ ಮುದುಚ್ಯತೇ ಎಂದರೆ ಪೂರ್ಣದಿಂದ ಪೂರ್ಣ ಉಂಟಾಗಿದೆ ಎಂಬುದು ಪೂರ್ಣನಾದ ಪರಬ್ರಹ್ಮನಿಂದ ಈ ದೃಗ್ವಸ್ತುವಾದ ಜೀವಜಗತ್ ಪೂರ್ಣರೂಪದಿಂದ ಬಂದಿದೆ ಎಂದು ಅರ್ಥ ಅಥವಾ ಪೂರ್ಣ ಬ್ರಹ್ಮನ ಅಪರಾವತಾರ ಎಂದರೂ ಸರಿಯೆ. ಅನುಗಾಲವೂ ಸತ್ಯವಾಗಿ ರುವುದು ಅಥವಾ ಪೂರ್ಣತರುವುದೇ ಪರಬ್ರಹ್ಮ. ಅವನು ಯಾವಸ್ಥಿತಿ ಯಲ್ಲೂ ಪೂರ್ಣತ್ವವನ್ನು ಕಳೆದುಕೊಳ್ಳುವುದಿಲ್ಲ ಎಂಬುದು ಮನೋಗತ

ವಾಗಬೇಕಾದರೆ ಒಳಗಣ್ಣು ತೆರೆಯಬೇಕು, ಅಲ್ಪಜ್ಞನಿಗೂ ಮಹಾ ಜ್ಞಾನಿಗೂ ಇರುವ ವ್ಯತ್ಯಾಸ ಅವರು ನೋಡುವ ದೃಷ್ಟಿಯಲ್ಲಿರುತ್ತದೆ. ಇಬ್ಬರ ದೃಷ್ಟಿಕೋನವೂ ಬೇರೆಬೇರೆ. ಅರ್ಥೈಸುವ ವಿಧಾನವೂ ಬೇರೆಬೇರೆ. ಜ್ಞಾನಿಯದೃಷ್ಟಿ ಬ್ರಹ್ಮದೃಷ್ಟಿ. ಅಜ್ಞಾನಿಯ ದೃಷ್ಟಿ ಕಾಕದೃಷ್ಟಿ. ಇವನಿಗೆ ಯಾವುದು ದೃಗ್ವಸ್ತುವೋ ಅದೇ ಪರಮಸತ್ಯ. ಯಾವುದು ತಾತ್ಕಾಲಿಕವೋ ಅದೇ ಸರ್ವಕಾಲಿಕ. ಯಾವುದು ಅಲ್ಪವೋ ಅದೇ ಭವ್ಯ. ಯಾವುದು ಮಿಥ್ಯವೋ ಅದೇ ಸತ್ಯ. ಅದೇ ಜ್ಞಾನಿಯು ಬ್ರಹ್ಮನನ್ನು ಬ್ರಹ್ಮದೃಷ್ಟಿಯಿಂದಲೇ ನೋಡುವನು. ಯಾವುದು ಪಾರ ಮಾರ್ಥಿಕಸತ್ಯವೋ ಅದರ ಅನ್ವೇಷಣೆಯೇ ಅವನ ಗುರಿ. ಹೀಗೆ ದೃಷ್ಟಿ ವ್ಯತ್ಯಾಸದಿಂದ ತೋರಿಕೆಯೂ ವ್ಯತ್ಯಾಸ. ನಾವು ಅನಂತವನ್ನು ಸಾಂತ ದೃಷ್ಟಿಯಿಂದ ನೋಡಿದಾಗ ತಿಳಿದು ಬರುವುದು ಪೂರ್ಣತೆಯ ಮುಖ ಮತ್ತು ಸ್ವರೂಪ. ಒಂದು ವಸ್ತುವಿನ ನಾಮರೂಪವು ಬದಲಾದರೆ ಗುಣದಲ್ಲಿ ಬದ ಲಾಗದು. ಅದರಂತೆಯೇ ಈ ಜೀವ ಜಗತ್. ಬ್ರಹ್ಮನ ಅಂಶದಿಂದ ಅಥವಾ ಅವತರಣಿಕೆಯಿಂದ ಉಂಟಾಗಿರುವುದರಿಂದ ಅದರ ಗುಣಭಾವಗಳು ಬದ ಲಾಗುವಂತಿಲ್ಲ. ಆದ್ದರಿಂದಲೇ ಪೂರ್ಣದಿಂದ ಪೂರ್ಣವುಂಟಾಗಿದೆ ಎಂಬುದು ಸಮಂಜಸವಾದ ಅರ್ಥ.

ಇನ್ನು–ಪೂರ್ಣಸ್ಯ ಪೂರ್ಣಮಾದಾಯ ಪೂರ್ಣಮೇವಾವಶಿಷ್ಯತೇ ಎಂದರೆ ಪೂರ್ಣದಿಂದ ಪೂರ್ಣವನ್ನು ಕಳೆದರೆ ಉಳಿಯುವುದು ಪೂರ್ಣವೇ ಎಂಬುದರ ಪೂರ್ಣ ಸತ್ಯ ಇದು. ಆ ಪರಬ್ರಹ್ಮನೆಂಬ ಪೂರ್ಣದಿಂದ ಈ ಜೀವ ಜಗತ್ ಎಂಬ ಪೂರ್ಣವನ್ನು ಕಳೆದರೆ ಉಳಿಯುವುದು ಪೂರ್ಣವೇ. ಇ ದೊಂದು ವಿಚಿತ್ರವಾದ ಸತ್ಯ ಎಂದರೂ ಅದರಲ್ಲಿ ನಿಜವಾದ ಹುರುಳು ಇದೆ. ಬ್ರಹ್ಮನ ಅಂಶವಾದ ಈ ಜೀವಜಗತ್ತನ್ನು ತೆಗೆದರೆ ಬ್ರಹ್ಮನ ಪೂರ್ಣತೆಗೆ ಕಳಂಕ ಬರುವುದಿಲ್ಲ. ಪೂರ್ಣದಿಂದ ಪೂರ್ಣವನ್ನು ಕಳೆದರೆ ಪೂರ್ಣವೇ ಎಂಬುದು ಚಿರಸತ್ಯ. ನಾವು ಯಾವಾಗ ಪೂರ್ಣತೆಯನ್ನು ಒಪ್ಪಿಕೊಳ್ಳು ತ್ತೇವೋ ಆಗ ಇಲ್ಲಿರುವ ಪ್ರತಿಯೊಂದು ಅಂಶವೂ ಪೂರ್ಣವೇ ಆಗುತ್ತದೆ. ಇದೊಂದು ಕೃತಕತೆ ಎನ್ನಬಹುದಾದರೂ ಮನಃಬುದ್ಧಿಗಳಿಗೆ ಅನಂತ ಭಾವ

ನೆಯನ್ನು ತಿಳಿಸಿಕೊಡುವ ಸಲುವಾಗಿ ಇದನ್ನು ಉದಹರಿಸುತ್ತೇವೆ. ಈ ವಿಚಾರವಾಗಿ ಅನಂತಾಕಾಶವನ್ನು ಒಂದು ಉದಾಹರಣೆಗೆ ತೆಗೆದುಕೊಳ್ಳಬಹುದು. ಅದರಲ್ಲಿ ತೇಲುವ ಮೋಡಗಳನ್ನೆಲ್ಲಾ ತೆಗೆದರೆ ಆಕಾಶದ ಅಂಶ ಕಡಿಮೆಯಾಗುವುದೇ ? ಮೋಡಗಳು ಇಲ್ಲದಿದ್ದರೂ ಆಕಾಶ ಇದ್ದಷ್ಟೇ ಇರುವುದು.

ಆದ್ದರಿಂದ ಅದು ಪೂರ್ಣ. ಇದೂ ಪೂರ್ಣ. ಪೂರ್ಣದಿಂದಲೇ ಪೂರ್ಣವುಂಟಾಗಿದೆ. ಪೂರ್ಣವೇ ಪೂರ್ಣಕ್ಕೆ ಆಧಾರ. ಪೂರ್ಣದಿಂದ ಪೂರ್ಣವನ್ನು ಕಳೆದ ಮೇಲೆ ಉಳಿಯುವುದೂ ಪೂರ್ಣವೇ. ಇದನ್ನು ಸುಲಭವಾಗಿ ನೀವು ಅರ್ಥೈಸಬೇಕಾದರೆ ಸೊನ್ನೆಯನ್ನು ಉದಾಹರಿಸಬಹುದು. ಕೇಳಿ, ಸೊನ್ನೆಗೊಂದು ಸೊನ್ನೆಯನ್ನು ಕೂಡಿದರೆ ಸೊನ್ನೆಯೇ. ಸೊನ್ನೆಯಿಂದ ಸೊನ್ನೆಯನ್ನು ಕಳೆದರೆ ಉಳಿಯುವುದು ಸೊನ್ನೆಯೇ. ಇದೇ ಸೃಷ್ಟಿಗೂ ಸೃಷ್ಟಿಬ್ರಹ್ಮನಿಗೂ ಇರುವ ಸಂಬಂಧ.

ಉಚ್ಛ್ವಾಸ ೮

೦

ಪಶ್ಚಿಮ ದಿಗ್ದೇಶದ ನೀಲಭಿತ್ತಿಯಲ್ಲಿ ಸಂಜೆಗೆಂಪಿನ ಸುಂದರ ಪೆಂಪು.

ನೀಲರಾಗದ ಕಮಲ ಮಾಲೆಯಂತೆ ಕಣ್ಗೊಳಿಸುವ ಮನಮೋಹಕವಾದ ಮೋಡಗಳ ಮಾಲೆ.

ಎಲ್ಲಿಂದ ಎಲ್ಲಿಯವರೆಗೂ ಹೂಗಂಪು ಹಣ್ಗಂಪು ತಣ್ಗಂಪು ಮಣ್ಗಂಪುಗಳಿಂದ ಕೂಡಿದ ಕಮನೀಯ ಕಂಪು ಸಾಯಂ ಆಲಂಪಿನಲ್ಲಿ. ಗಿಡುಮರಗಳಲ್ಲಿ ಕಲೆತ ವಿವಿಧವರ್ಗದ ಪಕ್ಷಿಗಳು ಸಂಧ್ಯಾರಾಗವನ್ನು ಮನೋರಮ ವೈಖರಿಯಲ್ಲಿ ಉಲಿಯುತ್ತಿವೆ. ಸ್ವಚ್ಛಂದವಾದ ರಾಗಾನುರಾಗಗಳಿಂದ ವೈಶಂಪಾಯನ ಮಹರ್ಷಿಗಳ ಆಶ್ರಮದಲ್ಲಿ ಮೈಮನಗಳಿಗೆ ಕಾಯಕಲ್ಪಗೊಳಿಸುವಂತಹ ವೇದಗಾನ ಲಹರಿ ಅನೇಕ ಕಂಠಗಳಿಂದ ಸ್ತುತಿರೂಪದಲ್ಲಿ ಹೊಮ್ಮುತಿತ್ತು; ಕಾಂಸ್ಯ, ಕೋಶಿ, ಕರತಾಲಗಳನ್ನು ಒಮ್ಮೆಗೇ ನುಡಿಸಿದಂತೆ. ಋಷ್ಯಾಶ್ರಮದಲ್ಲಿ ವಟುಗಳ ಚಟುವಟಿಕೆ ಬಗೆಬಗೆಯದು. ಅನೇಕರು ಅವರವರ ನಿತ್ಯಕರ್ಮದಲ್ಲಿ ನಿಮಗ್ನರಾಗಿರುವುದು ಕಂಡು ಬರುತ್ತದೆ. ಹಿಂಬದಿಯಲ್ಲಿ ಕಾರ್ಯನಿರತ ಸ್ತ್ರೀ ಜನರು ಇದ್ದಾರೆ.

ಕೈಸಾಲೆಯಲ್ಲಿ ಹೊಮ್ಮುವ ಧರ್ಮಚರ್ಚೆಯು ಕಂಠಸ್ವರ ವಾಯು ಮಂಡಲದ ಪ್ರತಿಯೊಂದು ಪದರದಲ್ಲಿಯೂ ಅನುರಣಿತವಾಗುವಂತೆ ಪ್ರತಿ ಧ್ವನಿಸುತ್ತಿತ್ತು ಮೃದು ಜಲಘೋಷವನ್ನು ಮೀರಿ. ವೈಶಂಪಾಯನ ಮಹರ್ಷಿಯು ಕೆಲವೊಮ್ಮೆ ಧರ್ಮಚರ್ಚೆಯಲ್ಲಿ ನಿಮಗ್ನನಾದರೆ ಇನ್ನೊಮ್ಮೆ ಬರವಣಿಗೆಯಲ್ಲಿ ತಲ್ಲೀನನಾಗುವನು ಬಳಿಯಲ್ಲಿ ಕೆಲವು ಬರೆದ ಗ್ರಂಥಗಳೂ ಇವೆ. ತಾನು ಬರೆಯುತಿದ್ದ ಗ್ರಂಥವನ್ನು ಬದಿಗಿಟ್ಟು ಭಾವಾವಿಷ್ಟನಾಗಿ ಈ ಮಂತ್ರವನ್ನು ಹೇಳುತ್ತಾನೆ.

ಅಣೋರಣೀಯಾನ್ಮಹತೋ ಮಹೀಯಾ–
　ನಾತ್ಮಾ ಗುಹಾಯಾಂ ನಿಹಿತೋಽಸ್ಯ ಜಂತೋಃ |
ತಮಕ್ರತುಂ ಪಶ್ಯತಿ ವೀತಶೋಕೋ
　ಧಾತುಃ ಪ್ರಸಾದಾನ್ಮಹಿಮಾನಮೀಶಮ್ ||.

ಅದೇ ವೇಳೆಗೆ ಆರುಣಿ, ಉಷಸ್ತ, ಗಾರ್ಗಿ ಇವರು ಆಗಮಿಸುವರು.

ವೈಶಂಪಾಯನ ಮಹರ್ಷಿ–ಬನ್ನಿ. ನಿಮ್ಮಂತಹವರ ಆಗಮನ ಮನಸ್ಸಿಗೆ ತಂಪು ತರುತ್ತದೆ. ಎಲ್ಲರೂ ಹೀಗೆಯೇ ಬನ್ನಿ.

ಅವರ ಕಡೆಗೆ ದರ್ಭೆಯ ಹಾಸನ್ನು ಆದರಪೂರ್ವಕವಾಗಿ ನೀಡಿದ ವೈಶಂಪಾಯನ ಮಹರ್ಷಿ. ಅದನ್ನು ಹಾಸಿ ಸನಿಹದಲ್ಲಿ ಕುಳಿತುಕೊಂಡರು ಆರುಣಿ ಉಷಸ್ತರು. ನಸುದೂರದಲ್ಲಿ ವಾಚಕ್ನವಿ ಗಾರ್ಗಿ ಮಂಡಿಸಿದಳು ವೇದಾಂತದ ಗಣಿಯಂತೆ.

ಉಷಸ್ತ–ಭಗವನ್ ! ನೀವು ವರ್ಧಮಾನ ಪುರಿಯ ಸುಪ್ರಿಯ ಮಹಾರಾಜನಿಗಾಗಿ ಗಂಗೋದಕವನ್ನು ಅಭಿಮಂತ್ರಿಸಿ ಕಳುಹಿಸಿದ್ದು ಏನೇನೂ ಪ್ರಯೋಜನವಾಗಲಿಲ್ಲ. ಏಳೇಳು ಜನ್ಮಗಳ ಕರ್ಮ ಸಂಯೋಜಿತವಾದ ರೋಗಬಾಧೆ ಹರಿಯುವುದು ಅಷ್ಟು ಸುಲಭವೂ ಅಲ್ಲ. ಅತೀವ ತಮೋಗುಣಿಯಾದ ಅವನಲ್ಲಿ ಮನಸ್ಸನ್ನು ನಿಗ್ರಹಿಸುವ ಶಕ್ತಿ ಲವಲೇಶವೂ ಇದ್ದಂತಿಲ್ಲ. ಸಾಕಷ್ಟು ಸುಖ–ದುಃಖ ಅನುಭವಿಸಿದರೂ ಬುದ್ಧಿ ಬಲಿಯಲಿಲ್ಲ.

ಮನಸ್ಸು ಕೊಳಚೆಯ ಉಗ್ರಾಣವಾದುದರಿಂದ ಜೀವನವೂ ಕೊಳಕು
ವೈಷಯಿಕ ವಿಚಾರಗಳಲ್ಲೇ ದಿನಗಳು ಕಳೆದಿವೆ. ಆತನ ಜೀವನ ಪರಿಸ್ಥಿ
ಹಾಗಿದ್ದು, ಧರ್ಮ-ಕರ್ಮಗಳು ಬಾಧಿಸುತ್ತಿರುವಾಗ ನೀವು ಎಷ್ಟು ಮಾ
ದರೂ ತಾನೇ ಏನು ಆದೀತು ? ಎಂತಹ ಕರ್ಮವೋ ಅಂತಹ ಫಲ

ಆರುಣಿ-ಶರೀರ ಮತ್ತು ಇಂದ್ರಿಯಗಳಿಂದ ಕೂಡಿರುವ ವ್ಯಕ್ತಿಯ
ಬುದ್ಧಿ ಮನೋಗತವಾಗಿರುವುದು ಸಹಜ. ಆತನಿಗೆ ಸರಿಯಾದ ವಿದ್ಯೆಯು
ಅಲಭ್ಯವಾಗಿದೆ. ಅಂದಮೇಲೆ, ಮನೋನಿಗ್ರಹ ಸಾಮಾನ್ಯರಿಗೆ ಅಷ್ಟು
ಸುಲಭವೂ ಅಲ್ಲ. ಭೋಗಲಾಲಸೆಯಿಂದ ವಿಮುಕ್ತರಾಗುವುದು ಕಷ್ಟವೇ
ಆದರೂ, ಅದನ್ನೇ ಹಿಡಿದುಕೊಂಡು ಕೆಟ್ಟ ಎಂದು ಬಿಟ್ಟರೆ ಏನಾದೀತು
ಯಾರು ಕೆಟ್ಟರೋ ಯಾರು ದಾರಿ ತಪ್ಪಿದರೋ ಅವರಿಗೆ ದಾರಿ ತೋರಿಸ
ಬೇಕಾದುದು ವೇದಾಂತಿಗಳ ಧರ್ಮ ಹಾಗೂ ಕಷ್ಟವನ್ನು ನಿವಾರಿಸುವುದು
ಯುಕ್ತ. ಅದಕ್ಕಾಗಿ ನೀವು ಸಾಕಷ್ಟು ಶ್ರಮಿಸಿದರೂ ಪ್ರಯೋಜನವಾಗ
ಲಿಲ್ಲ, ಹೀಗಾಗಬಾರದಿತ್ತು. ಮುಂದಾದರೂ ಇದಕ್ಕೆ ಪರಿಹಾರವೇನ
ಎಂದು ಕೇಳಬಹುದೇ ?

ವೈಶಂಪಾಯನ ಮಹರ್ಷಿ-ಪರಿಹಾರ ಎಂಬುದು ವ್ಯಕ್ತಿಯ ಜನ
ಯೋಗಕ್ಕೆ ಸಂಬಂಧ ಪಟ್ಟದ್ದು. ಅದನ್ನು ಬೇರ್ಪಡಿಸುವುದು ಅಷ್ಟು ಸುಲಭ
ವಲ್ಲ. ಅಲ್ಲದೆ ಎಲ್ಲಕ್ಕೂ ಅಂತ್ಯ ಎಂಬುದಿದೆಯಷ್ಟೆ ? ಪಯಣದ ಕೊನ
ಅಂದರೆ ಪರಾಗತಿಗೆ ದಾರಿ. ವ್ಯಕ್ತಿ ದುಷ್ಟನಿರಲಿ, ಶಿಷ್ಟನಿರಲಿ ಮೃತ್ಯುವಿನ ಕರೆ
ಬಂದಾಗ ಎಲ್ಲಿಯ ಪರಿಹಾರ ? ನದಿಗಳು ಹರಿದು ಸಾಗರವನ್ನು ಸೇರುವಂತೆ,
ಅದಕ್ಕೆ ಮೀರಿದ ಗತಿ ಇನ್ನಿಲ್ಲ. ಆದರೂ, ಆತನಿಗೆ ಉಪಕರಿಸುವ ಯೋಚನ
ಇತ್ತು.

ಉಷಸ್ತ-ಅದು ಸರಿಯೆ, ಆದರೆ ಇಂಥ ಭವರೋಗ ?

ವೈಶಂಪಾಯನ ಮಹರ್ಷಿ-ಅದು ಕರ್ಮಬದ್ಧವಾದ ಅನುಬಂಧ.

ಆ ವೇಳೆಗೆ ವರ್ಧಮಾನಪುರಿಯಿಂದ ದೂತನೊಬ್ಬ ಆಗಮಿಸಿ ಮಹರ್ಷಿ
ಗಳಿಗೆ ಅಡ್ಡ ಬೀಳುತ್ತಾನೆ.

ವೈಶಂಪಾಯನ ಮಹರ್ಷಿ–ಏನಪ್ಪಾ, ಏತಕ್ಕಾಗಿ ಬಂದೆ ? ಏನು ಸಮಾಚಾರ ?

ದೂತ-ಮಹರ್ಷಿಗಳೇ, ಸುಪ್ರಿಯ ಮಹಾರಾಜರು ತಮ್ಮ ಕಡೆಗೆ ಒಂದು ಪತ್ರವನ್ನು ಕಳುಹಿಸಿದ್ದಾರೆ.

ವೈಶಂಪಾಯನ ಮಹರ್ಷಿ–ಇಲ್ಲಿ ಕೊಡು.

ದೂತನು ವಸ್ತ್ರದಲ್ಲಿ ಸುತ್ತಿಕೊಂಡಿದ್ದ ಅದನ್ನು ತೆಗೆದು ಮಹರ್ಷಿಗಳ ಕೈಗೆ ಅತ್ಯಂತ ವಿನಮ್ರತೆಯಿಂದ ನೀಡಿ ದೂರ ಸರಿದು ನಿಲ್ಲುವನು.

ವೈಶಂಪಾಯನ ಮಹರ್ಷಿಯು ಅದನ್ನು ಬಿಚ್ಚಿ ಓದಿದಾಗ ಅದರ ಸಾರಾಂಶ ಈ ರೀತಿ ಇತ್ತು,

....ತಾವು ಈ ಹಿಂದೆ ಯಾಜ್ಞವಲ್ಕ್ಯ ಮಹರ್ಷಿಗಳೊಂದಿಗೆ ಕಳುಹಿಸಿದ ಗಂಗೋದಕದ ಮಂತ್ರಬಲದಿಂದ ನಮ್ಮ ಅರಮನೆಯ ಕೈಸಾಲೆಯ ಕಂಬಗಳು ಚಿಗುರೊಡೆದು ನಳನಳಿಸುತ್ತಿವೆ. ಪಾಮರನಾದ ನನಗೆ ಅದರಿಂದ ಅಂದು ಏನೂ ಪ್ರಯೋಜನವಾಗದಿದ್ದರೂ, ಮುಂದೆ ಎಂದಾದರೂ ಆಗಬಹುದೆಂಬ ನಂಬಿಕೆ ನನ್ನಲ್ಲಿ ಮೂಡಿಸಿದೆ. ಇನ್ನೂ ಕೆಲವು ದಿನ ಅಂದರೆ ನನ್ನರೋಗ ಹರಿಯುವವರೆಗೆ ನಿತ್ಯವೂ ಅವರೊಂದಿಗೇನೇ ಮಂತ್ರೋದಕವನ್ನು ಕಳುಹಿಸಿಕೊಡುವ ಉಪಕಾರ ಮಾಡಬೇಕು. ಅದರಿಂದ ಒಂದಲ್ಲ ಒಂದು ದಿನ ನನ್ನ ರೋಗ ಹರಿಯಬಹುದು ಎಂಬ ನಂಬಿಕೆಯಿರುವುದರಿಂದ ಖಂಡಿತ ತಪ್ಪದೆ ದಯಮಾಡಿ ಉಪಕರಿಸಿರಿ........

ವೈಶಂಪಾಯನ ಮಹರ್ಷಿಯು ಪತ್ರವನ್ನು ಓದಿ ಹೇಳಿದನಂತರ ಗಾರ್ಗಿಯನ್ನು ಕುರಿತು–ದೇವಿ ಗಾರ್ಗಿ, ಪತ್ರದ ಸಾರಾಂಶವನ್ನು ತಿಳಿದೆಯಷ್ಟೆ ಈ ವಿಚಾರವಾಗಿ ನಿನ್ನ ಅಭಿಪ್ರಾಯವೇನು ?

ಗಾರ್ಗಿ-ಅರಸನ ಅಭೀಷ್ಟದಂತೆ ಯಾಜ್ಞವಲ್ಕ್ಯ ಮಹರ್ಷಿಗಳೊಂದಿಗೆ ನಿತ್ಯವೂ ಕಳುಹಿಸಿಕೊಡುವುದೇ ಉಚಿತ.

ವೈಶಂಪಾಯನ ಮಹರ್ಷಿ–ವಾಚಕ್ನವಿ ಗಾರ್ಗಿ, ನೀನು ಸರಿಯಾಗಿಯೆ
ಹೇಳಿದೆ. ನಿನ್ನದು ಆಳವಾದ ಅನುಭವ.

ಗಾರ್ಗಿ–ನಿಮ್ಮ ನಲ್ಮಾತುಗಳಿಗೆ ಬಹಳ ವಂದನೆಗಳು.

ವೈಶಂಪಾಯನ ಮಹರ್ಷಿ–ನಿನ್ನ ಜನ್ಮಯೋಗ ಪವಿತ್ರವಾದುದು
ನಿನ್ನ ಪ್ರೌಢಿಮೆಗೆ ಮುನಿಗಣ ತಲೆದೂಗುತ್ತಿದೆ. ನಿನಗೆ ಮಂಗಳವುಂಟಾಗಲಿ

ಅನಂತರ ವೈಶಂಪಾಯನ ಮಹರ್ಷಿಯು ಆರುಣಿ ಉಷಸ್ತರನ್ನು
ಕುರಿತು ನಿಮ್ಮ ಮುಂದೆ ದೇವೀ ಗಾರ್ಗಿಯ ಪ್ರೌಢಿಮೆಯನ್ನು ಪ್ರಶಂಸಿಸಿ
ನೆಂದು ನಿಮಗೆ ಅಸಮಾಧಾನವಿಲ್ಲವಷ್ಟೆ ? ಅದರಿಂದ ನಿಮ್ಮನ್ನು ಸಣ್ಣವ
ನ್ನಾಗಿಸಿದೆ ಎಂದೇನೂ ಭಾವಿಸಬಾರದು.

ಆರುಣಿ–ಛೆ ! ಛೆ ! ಹಾಗೇನೂ ಇಲ್ಲ. ಪ್ರಶಂಸನೀಯವಾದುದು
ಎಂದೆಂದೂ ಪ್ರಶಂಸನೀಯವೇ.

ಉಷಸ್ತ–ಪುಣ್ಯವತಿ ಗಾರ್ಗಿಯ ಪ್ರೌಢಿಮೆಯನ್ನು ಅರಿಯದವರಾರು
ಅವಳ ಬಗ್ಗೆ ಯಾರಿಗೂ ಅಸಹನೆ ಎಂಬುದೇ ಇಲ್ಲ. ನಮಗೆ ಅವಳಲ್ಲಿ ತುಂಬ
ಗೌರವ ಭಾವನೆಯಿದೆ.

ಅನಂತರ ಉಷಸ್ತನು ಗಾರ್ಗಿಯನ್ನು ಕುರಿತು–ದೇವಿ, ಗಾರ್ಗಿ
ವೇದೋಪನಿಷತ್ತಿನ ಗಣಿಯಾದ ನೀನು ಸಮಾಜಕ್ಕೆ ಭೂಷಣಪ್ರಾಯಳು
ನಿನ್ನಿಂದ ಸ್ತ್ರೀ ಕುಲದ ಜ್ಞಾನಚಕ್ಷು ತೆರೆದು ಧನ್ಯವಾಗಲಿ.

ವೈಶಂಪಾಯನ ಮಹರ್ಷಿ–ಆರುಣಿ ! ಮಹಾರಾಜನ ಕೋರಿಕೆಯ
ವಿಚಾರವಾಗಿ ನಿನ್ನ ಅಭಿಪ್ರಾಯವೇನು ?

ಆರುಣಿ–ಗುರುವರ್ಯ, ಸುಪ್ರಿಯ ಮಹಾರಾಜನು ತಮ್ಮನ್ನು ಆ ರೀ
ಕೋರಿರುವುದರಿಂದ ಯಾಜ್ಞವಲ್ಕ್ಯನೊಡನೆ ದಿನವೂ ಮಂತ್ರೋದಕವನು
ಕಳುಹಿಸಿಕೊಡುವುದೊಳ್ಳೆಯದು. ಅದರಿಂದ ಕೊನೆಯ ಪಕ್ಷ ಆತನ ಅಭೀಷ್ಟ
ವಾದರೂ ನೆರವೇರಿದಂತಾಗುವುದು.

ವೈಶಂಪಾಯನ ಮಹರ್ಷಿಯು ಉಷಸ್ತನೆಡೆಗೆ ತಿರುಗಿ--ನಿನ್ನ ಅಭಿಪ್ರಾಯವನ್ನು ತಿಳಿಸು ಉಷಸ್ತ.

ಉಷಸ್ತ—ನನ್ನ ಅಭಿಪ್ರಾಯವೂ ಸಹಾ ಅದೇ. ಅರಸನ ಯಾಚನೆಯನ್ನು ಖಂಡಿತ ನಡೆಸಿಕೊಡಲೇಬೇಕು. ಅದು ಒಂದಲ್ಲ ಒಂದು ದಿನ ಫಲಿಸಿದರೂ ಫಲಿಸಬಹುದು, ಆತನ ದೃಢ ನಂಬಿಕೆಯಂತೆ ಎನ್ನೋಣ.

ವೈಶಂಪಾಯನ ಮಹರ್ಷಿ—ನನಗೂ ಸಹ ಹಾಗೇ ಅನಿಸುತ್ತೆ. ಇನ್ನು ಯಾಜ್ಞವಲ್ಕ್ಯನಿಗೆ ಹೇಳಿ ಕಳುಹಿಸುವುದೇ ಸರಿ.

ಅನಂತರ ವರ್ಧಮಾನಪುರಿಯ ದೂತನನ್ನು ಕುರಿತು—ಆಯಿತಪ್ಪಾ, ನೀನು ಹೋಗು ನಾನು ಅದಕ್ಕೆ ಸರಿಯಾದ ಏರ್ಪಾಡು ಮಾಡುವೆ. ಹಾಗೆಂದು ಸುಪ್ರಿಯ ಮಹರಾಜನಿಗೆ ತಿಳಿಸು.

ದೂತನು ಮಹರ್ಷಿಗಳಿಗೆ ಸಾಷ್ಟಾಂಗ ನಮಸ್ಕಾರ ಮಾಡಿ ಅಲ್ಲಿಂದ ಹೊರಡುವನು.

ಗಾರ್ಗಿ—ಭಗವನ್, ಇಂಥ ಸಮಸ್ಯೆಗೆ ಪರಿಹಾರ ಸೂಚಿಸುವಿರಾ ?

ವೈಶಂಪಾಯನ ಮಹರ್ಷಿ— ಹೇ, ಗಾರ್ಗಿ, ದೃಗ್ವಸ್ತುವಾದ ಸಮಸ್ತ ಪ್ರಪಂಚವೂ ಸ್ಥೂಲ. ಯಾವುದು ದೃಗ್‌ವಲಯದಾಚೆ ಇರುವುದೋ ಅದು ಸೂಕ್ಷ್ಮಾತಿಸೂಕ್ಷ್ಮ ಎಂಬುದನ್ನು ನೀನು ಬಲ್ಲೆ. ಅದನ್ನು ಕ್ರಮಶಃ ಅರಿತುಕೊಳ್ಳಬೇಕಾದರೆ ಮನೋನೈರ್ಮಲ್ಯವೂ ಏಕಾಗ್ರತೆಯೂ ಬೇಕು. ಅನಂತರ ನಾವು ಯಾವ ಜಟಿಲತೆಯನ್ನು ಬಿಡಿಸಲು ಬಯಸುತ್ತೇವೋ ಅದರೆಡೆಗೆ ಮನಃಬುದ್ಧಿಗಳನ್ನು ಸೂಕ್ಷ್ಮವಾಗಿ ಹರಿಸಿ ಅದರಲ್ಲೇ ಏಕಾಗ್ರಗೊಳಿಸಿದರೆ ಉತ್ತರ ಸುಲಭ. ಕಾಲ-ದೇಶ—ನಿಮಿತ್ತಗಳ ಭೂಮಿಕೆಯಲ್ಲಿರುವ ಆತ್ಮಸ್ಥಿತಿಯೇ ನಮ್ಮ ಸತ್ಯತರವಾದ ಹಿನ್ನೆಲೆ. ಅದರ ಆಧಾರದ ಮೇಲೆಯೇ ನಾನೆಂಬ ವ್ಯಕ್ತಿತ್ವ ಮತ್ತು ವ್ಯವಹಾರ; ಲೌಕಿಕ ಮತ್ತು ಪಾರಮಾರ್ಥಿಕ.

ಪ್ರಾಜ್ಞತೆ ಎಂದರೆ ವಾಕ್ಕನ್ನು ಮನಸ್ಸಿನ ಮೂಲಕ ಅದುಮಿ ಹಿಡಿಯುವುದು. ಎಲ್ಲಾ ಇಂದ್ರಿಯ ವ್ಯಾಪಾರವೂ ವ್ಯಕ್ತವಾಗುವುದಕ್ಕೆ ಮುಂಚೆ

ಮನಸ್ಸಿನ ದಡದಲ್ಲಿ ನಿಂತು ಹಿತಾಹಿತಗಳನ್ನು ಪರಾಮರ್ಶಿಸುವಷ್ಟು ಸೂಕ್ಷ್ಮತೆ ಇರಬೇಕು. ಅನಂತರ ಮುಂದಿನ ವ್ಯವಹಾರಕ್ಕೆ ಶುದ್ಧವಾದ ಚೌಕಟ್ಟು ಮೂಡುವುದು. ಅಂದರೆ, ಆಗಲೇ ಕಾರ್ಯಕಾರಣಗಳ ಭಾವನೆ ಏಕತ್ರ. ಮನಸ್ಸಿನ ಮೇಲಿನ ಹತೋಟಿ ಇಲ್ಲದೆ ಹೋದರೆ ನಾವು ಮೃಗ ಸಮಾನ. ಮನಸ್ಸಿನ ಅಲೆಗಳು ಒಂದು ಕ್ಷಣವಾದರೂ ಒಂದೆಡೆ ತಂಗುವುದಿಲ್ಲ. ಯೋಚನೆಯಲೆಗಳು ತರಂಗ ತರಂಗವಾಗಿ ಬರುತ್ತಲೇ ಇರುತ್ತವೆ. ಅದರಲ್ಲಿ ಒಳ್ಳೆಯುದೂ ಉಂಟು ; ಕೆಟ್ಟದ್ದೂ ಉಂಟು. ತೀರ ಅಸಂಬದ್ಧವಾದ ಆಲೋಚನೆಯೂ ಮೂಡದಿರುವುದಿಲ್ಲ. ಅವನ್ನು ಅಲ್ಲಿಂದಲ್ಲೇ ಅದುಮದೆ ಇದ್ದರೆ ಅವು ಕ್ರಿಯಾರೂಪಕ್ಕೆ ಇಳಿಯುವುದು ಸಹಜ. ಅದು ಪ್ರಯುಕ್ತ ಮನೋನಿಗ್ರಹ ಬೇಕೇ ಬೇಕು. ನಿರ್ಮಲ ಜೀವನಕ್ಕೆ ಅದೇ ಅಡಿಪಾಯ.

ಮನಸ್ಸನ್ನು ಬುದ್ಧಿಯಲ್ಲಿ ಲಯಗೊಳಿಸಿದಲ್ಲಿ ನಿಗ್ರಹ ಸುಲಭ. ಅದನ್ನು ಬುದ್ಧಿಯಲ್ಲಿ ಲಯಿಸುವುದೆಂದರೆ ಆಲೋಚನೆಗಳಿಂದ ನಮ್ಮ ಮೇಲೆ ಯಾವ ಪರಿಣಾಮ ಉಂಟಾಗುವುದು ಎಂಬುದು ಮುಖ್ಯ. ಯಾವುದೇ ಆಲೋಚನೆಯಿಂದ ಸೂಕ್ಷ್ಮವಾಗಿ ಭಾವಿಸಿದರೂ ಅದು ಮನಸ್ಸಿನಮೇಲೆ ಮಹತ್ಪರಿಣಾಮ ಉಂಟುಮಾಡುತ್ತದೆ. ಹೀಗೆಯೇ ಹಲಕೆಲವು ಚಿಂತನೆಗಳು ಕೂಡಿ ಗೊಂದಲ ಹೂಡಿದುವೆಂದರೆ ಮುಗಿಯಿತು, ಅದು ಅತ್ಯಂತ ಪ್ರಬಲವಾದ ವೈಷಯಿಕವಾಸನೆಯಾಗಿಯೇ ಬಿಡುತ್ತದೆ. ಈ ಕಾರಣದಿಂದ ವಿಚಾರಗಳನ್ನು ಬುದ್ಧಿಯ ಒರೆಗಲ್ಲಿಗೆ ತೀಡಿ ಪರಾಮರ್ಶಿಸಿದರೆ ಒಳಿತು ಕೆಡಕುಗಳು ಬೇರ್ಪಡೆಯಾಗುತ್ತವೆ. ಮನೋನಿಗ್ರಹ ಎಂದರೆ ಮಾನಸಿಕವಾದ ಎಲ್ಲಾ ಕಾರ್ಯಕಲಾಪವನ್ನು ಸಂಪೂರ್ಣ ವರ್ಜಿಸುವುದು ಎಂದೇನಲ್ಲ ; ಜೀವನ ಸಾರ್ಥಕತೆಯ ಕಡೆ ಪಳಗಿಸುವುದು ಎಂದರ್ಥ. ಹಾಗೆಂದಾಗ ಒಮ್ಮಿಂದೊಮ್ಮೆಲೇ ಬುದ್ಧಿಯನ್ನು ಪಳಗಿಸುವುದು ಹೇಗೆ ಎಂಬ ಪ್ರಶ್ನೆ ಏಳುವುದು ಸಹಜ. ಅದಕ್ಕೆ ಸರಿಯಾದ ಮದ್ದು ಎಂದರೆ ಬುದ್ಧಿಯನ್ನು ಪವಿತ್ರಾತ್ಮನಲ್ಲಿ ಲಯಗೊಳಿಸುವುದೇ ಆಗಿದೆ. ಈ ದೃಶ್ಯ ಪ್ರಪಂಚದಿಂದ ಏನೇನನ್ನು ನೋಡುತ್ತೇವೋ ಅದನ್ನು ಪಡೆದು ಮಾನಸಿಕವಾಗಿ ಬೌದ್ಧಿಕವಾಗಿ ಅನುಭವಿಸುವುದಕ್ಕೆ ಸಾಧ್ಯ. ಅದಕ್ಕೆ ಮೊದಲು ಅವುಗಳು

ಹೇಗೆ ಏನು ಎತ್ತ ಎಂಬುದನ್ನು ತಿಳಿಯಬೇಕಾದರೆ ಬುದ್ಧಿಯ ಮೂಲಕವೇ. ಕಳ್ಳ, ದುಷ್ಟ, ವ್ಯಾಘ, ಕಟುಕ ಮುಂತಾದವರೂ ಸಹ ಅದೇ ಬುದ್ಧಿ ಶಕ್ತಿಯನ್ನು ಉಪಯೋಗಿಸಿ ಸ್ಥೂಲ-ಸೂಕ್ಷ್ಮ ವಿಚಾರಗಳನ್ನು ಪರಾಮರ್ಶಿಸುವರು. ಅಂದರೆ, ಕೀಳರಿಮೆಯೂ ಸಹ ಬುದ್ಧಿಶಕ್ತಿಯಿಂದಲೇ. ಅಂದಮೇಲೆ ಹೆಜ್ಜೆ ಹೆಜ್ಜೆಗೂ ವಿಮರ್ಶೆಯು ಅಗತ್ಯ. ಜೀವನ ನೈರ್ಮಲ್ಯದಿಂದ ಶಾಂತಿ-ಸಮಾಧಾನಗಳು ಮೂಡುತ್ತವೆ.

ಈ ವಿಶ್ವ ಜಗತ್ತಿನಲ್ಲಿ ಅತಿ ಮುಖ್ಯವಾದ ಜ್ಞಾನ ಎಂದರೆ ಯಾವುದು ? ಈ ಪ್ರಶ್ನೆಗೆ ಉತ್ತರಿಸಬೇಕಾದರೆ ಬಹಳವಾಗಿ ಯೋಚಿಸಬೇಕು ಗಾರ್ಗಿ. ನಾನು ಯಾರು ? ನಾನು ಎಲ್ಲಿಂದ ಬಂದೆ ? ಏತಕ್ಕಾಗಿ ಬಂದೆ ? ನನ್ನ ಆದಿ-ಅಂತ್ಯಗಳೆತ್ತ ? ಎಂಬೀ ವಿಚಾರಗಳ ಕಡೆಗೆ ಗಮನ ಹರಿಸಿದರೆ ಬುದ್ಧಿ ಅಂತರ್ಮುಖಿಯಾಗುವುದು. ಆಗ ಅಂತರ್ದೃಷ್ಟಿಗೆ ಕಂಡು ಬರುವುದು ಜೀವಾತ್ಮ. ವ್ಯಕ್ತಿತ್ವ ತಂದುದು ಶರೀರವಾದರೂ ಶರೀರ ಶರೀರವೇ ; ಶರೀರದಿಂದ ಒಂದು ವ್ಯಕ್ತಿ ಎನಿಸಿಕೊಂಡರೂ ನನ್ನ ಸ್ವಭಾವವೇನು ಎಂಬ ಚಿಂತನೆ ಮೂಡಬೇಕಾದರೆ ಅದು ಜೀವಾತ್ಮನ ಮೂಲಕವೇ. ಹಾಗೆಂದು ನಮ್ಮಂತಹ ಅನೇಕ ಜೀವರಾಶಿಗಳಿಂದ, ನೈಸರ್ಗಿಕವಾದ ಸಂಪನ್ಮೂಲಗಳಿಂದ ಮತ್ತು ಅಸಂಖ್ಯ ಗ್ರಹಕೋಟಿಗಳಿಂದ ಕೂಡಿದ ಈ ಬ್ರಹ್ಮಾಂಡವನ್ನು ತುಲನೆ ಮಾಡಿ ನೋಡಿದರೆ ಇದನ್ನು ಸಲಹಲು ಜಗದೀಶನೊಬ್ಬ ಇದ್ದೇ ಇದ್ದಾನೆ ಎಂಬುದು ಮನದಟ್ಟಾಗಿಯೇ ಆಗುತ್ತದೆ. ಒಂದನ್ನು ಒಪ್ಪಿಕೊಂಡು ಮತ್ತೊಂದನ್ನು ಒಪ್ಪಿಕೊಳ್ಳದಿರುವುದು ಸಾಧ್ಯವಿಲ್ಲ. ಆದುದರಿಂದ ಒಂದರಿಂದ ಒಂದಕ್ಕೆ ಸ್ಥೂಲವಾದ ಸಂಬಂಧವಿದೆ; ಸೂಕ್ಷ್ಮವಾದ ಅನುಬಂಧವೂ ಇದೆ. ಈ ಎಲ್ಲವನ್ನೂ ಅರ್ಥೈಸಿ ಅನುಷ್ಠಾನಕ್ಕೆ ತರಬೇಕು ಜೀವನ ನಿರ್ಮಲವಾಗಬೇಕಾದರೆ.

ಆರುಣಿ– ಭಗವನ್ ನಿಮ್ಮ ವಿವರಣೆಯನ್ನು ಇನ್ನೂ ಕೇಳುವ ಮನಸ್ಸುಂಟಾಗಿದೆ. ತಮಗೆ ಶ್ರಮವೆನಿಸದಿದ್ದರೆ ನಮ್ಮ ಇನ್ನೂ ಕೆಲವು ಸಮಸ್ಯೆಗಳನ್ನು ಮುಂದಿಡಲು ಅಪ್ಪಣೆಯಾಗಬೇಕು.

ವೈಶಂಪಾಯನ ಮಹರ್ಷಿ– ಆಗಬಹುದು, ಅಡ್ಡಿಯೇನಿಲ್ಲ.

ಆರುಣಿ– ಯಾವ ಪೃಥ್ವಿ ನಮಗೆ ಆಧಾರವಾಗಿದೆಯೋ ಆ ಪೃಥ್ವಿಗೆ ಯಾವುದು ಆಧಾರವು ?

ವೈಶಂಪಾಯನ ಮಹರ್ಷಿ– ನಿನ್ನ ಪ್ರಶ್ನೆ ಸಾಮಾನ್ಯವಲ್ಲ. ಅದರ ಹಿಂದೆಯೇ ಪ್ರಶ್ನೋಪಪ್ರಶ್ನೆಗಳು ಏಳುವಂತಹ ಪ್ರಶ್ನೆ. ಕೇಳು, ನೀನು ಯಾವ ಇಚ್ಛಾಶಕ್ತಿಯಿಂದ ಪ್ರಶ್ನೆ ಹಾಕಿದೆಯೋ ಆ ಇಚ್ಛಾಶಕ್ತಿ ನಿನ್ನ ಬೌದ್ಧಿಕಸ್ತರದಿಂದ ಮೂಡಿದುದು. ಹೇಗೆ ನಿನ್ನ ಇಚ್ಛಾಶಕ್ತಿಗೂ ಬುದ್ಧಿ ಶಕ್ತಿಗೂ ಜೀವಾತ್ಮನು ಆಧಾರವೋ ಹಾಗೆಯೇ ಈ ವಿಶ್ವಾತ್ಮಕವಾದ ಆಕಾಶವು ಪೃಥ್ವಿಗೆ ಆಧಾರವು ಹಾಗೂ ಆದಿತ್ಯಮಂಡಲ, ಚಂದ್ರಮಂಡಲ, ನಕ್ಷತ್ರಮಂಡಲ, ಬ್ರಹ್ಮಲೋಕ, ಇಂದ್ರಲೋಕ ಪ್ರಜಾಪತಿಲೋಕಗಳಂತಹ ನಾನಾ ಬ್ರಹ್ಮಾಂಡಗಳೂ ಒಕ್ಕೂಡಿದಂತೆ ಅವು ಒಂದಕ್ಕೊಂದು ಆಧಾರ ವನ್ನು ಹೊಂದಿವೆ. ಅಂದರೆ ಆಧಾರವು ಆಧೇಯಕ್ಕಿಂತ ಸೂಕ್ಷ್ಮಾತಿ ಸೂಕ್ಷ್ಮವೂ ದೃಢಾತಿದೃಢವೂ ಆದುದು ಎಂಬುದನ್ನು ಮರೆಯಬಾರದು. ಅಚಿಂತ್ಯವೂ ಅಭೇದ್ಯವೂ ಆದ ಬ್ರಹ್ಮಲೋಕದೆತ್ತರಕ್ಕೆ ಮನುಷ್ಯಬುದ್ಧಿಯು ಏರುವುದು ಕಷ್ಟವಾದ್ದರಿಂದ ವಿಚಾರಶಕ್ತಿ ದಿಕ್ಕೆಟ್ಟು ತರ್ಕ ಕುಂಠಿತವಾದರೆ ಆಶ್ಚರ್ಯವಿಲ್ಲ. ನಮ್ಮ ಮನಸ್ಸೂ ಬುದ್ಧಿಯೂ ಅಷ್ಟೇ ಸೂಕ್ಷ್ಮವಾಗ ಬೇಕು; ವಿಷಯ ಅರ್ಥವಾಗಬೇಕಾದರೆ.

ಆರುಣಿಯು ಕೈಗಳನ್ನು ವಿನಮ್ರತೆಯಿಂದ ಜೋಡಿಸಿಕೊಂಡು– ತುಂಬ ಉಪಕೃತನಾದೆ. ನನ್ನ ಸಮಸ್ಯೆ ಸುಲಭದರಲ್ಲಿಯೇ ಪರಿಹಾರ ವಾಯಿತು. ಬಹಳ ಸಂತೋಷ.

ಉಷಸ್ತ– ನನ್ನದೊಂದು ಸಂಶಯವುಂಟು, ಅಪ್ಪಣೆಯಾಗಬೇಕು.

ವೈಶಂಪಾಯನ ಮಹರ್ಷಿ– ಆಗಬಹುದು. ನಿನ್ನ ಪ್ರಶ್ನೆಯನ್ನು ಇತ್ಯರ್ಥಗೊಳಿಸುವುದರಲ್ಲಿ ಸಂತೋಷವಿದೆ. ನೀವು ಬ್ರಹ್ಮಜ್ಞರು. ನಿಮ್ಮಲ್ಲಿ ಯಾರು ವಿಷಯವನ್ನು ಮುಂದಿಟ್ಟರೂ ಸರಿಯಾದುದನ್ನೆ ಇಡಬಲ್ಲಿರಿ. ಆದ್ದ ರಿಂದ ಕೇಳುವುದರಲ್ಲೂ ಹೇಳುವುದರಲ್ಲೂ ಹಿತವಿದೆ.

ಉಷಸ್ತ–ಯಾವುದರಿಂದ ಭೂಲೋಕವೂ ಪರಲೋಕಗಳೂ ಸುಸೂತ್ರವಾಗಿ ಪೋಣಿಸಲ್ಪಟ್ಟು ಯಾರಿಂದ ನಿಯಂತ್ರಿತವಾಗಿವೆಯೋ ಆ ಅಂತರ್ಯಾಮಿಯು ಬ್ರಹ್ಮವಿದನು, ಲೋಕವಿದನು, ದೇವವಿದನು, ಆತ್ಮವಿದನು, ಸರ್ವವಿದನು ಎಂಬುದನ್ನು ಅರಿತಿರುವೆ. ಅದರ ಸರ್ವಾಂಗೀಣ ಸೂತ್ರಸಾರವನ್ನು ತಿಳಿಸಿರಿ.

ವೈಶಂಪಾಯನ ಮಹರ್ಷಿ– ಯಾರಿಗೆ ಪೃಥ್ವಿ ಶರೀರವೋ, ಯಾರು ಅದರ ಒಳಗಿದ್ದು ನಿಯಂತ್ರಿಸುವನೋ ಅವನೇ ಅಂತರ್ಯಾಮಿಯು. ಯಾರು ನೀರು, ಅಗ್ನಿ, ಅಂತರಿಕ್ಷ, ವಾಯು, ದ್ಯುಲೋಕ, ಆದಿತ್ಯ, ಚಂದ್ರ, ದಿಕ್ಕು, ತಮಸ್ಸು, ತೇಜಸ್ಸು ಇವುಗಳ ಒಳಗಿದ್ದು ಇವುಗಳೇ ಶರೀರವಾಗಿ ಇವುಗಳಿಗೆ ತಿಳಿಯದಂತೆ ನಿಯಂತ್ರಿಸುವನೋ ಅವನೇ ಅಂತರ್ಯಾಮಿಯು. ಯಾರು ಪ್ರಾಣಿಕೋಟಿಯ ಪ್ರಾಣ, ವಾಕ್ಕು, ಕಣ್ಣು, ಶ್ರೋತೃ, ಮನಸ್ಸು, ಚರ್ಮ, ಬುದ್ಧಿ, ರೇತಸ್ಸು ಇವುಗಳ ಅಂತರ್ಯದಲ್ಲಿ ನೆಲಸಿ, ಇವುಗಳಿಗೆ ಏನೇನೂ ತಿಳಿಯದಂತೆಯೇ ನಿಯಂತ್ರಿಸುವನೋ ಅವನೇ ಸರ್ವಾಂತರ್ಯಾಮಿಯು. ಅವನೇ ಅಮೃತಾತ್ಮನು. ಅವನು ನೋಡಲ್ಪಡದಿದ್ದರೂ ಅದ್ಭುತ ಸಾಕ್ಷಿ; ಅವನು ಕೇಳಲ್ಪಡದಿದ್ದರೂ ಶ್ರೋತೃ; ಅವನು ಮಂತೃವಾದರೂ ಆಲೋಚನೆಗೆ ವಿಷಯನಲ್ಲ; ಅವನಿಗಿಂತ ಬೇರೆ ಯಾವ ಸಾಕ್ಷಿಯಿಲ್ಲ; ಶ್ರೋತೃವಿಲ್ಲ; ಮಂತೃವೂ ಇಲ್ಲ; ಅವನಿಗಿಂತ ಭಿನ್ನವಾದುದೆಲ್ಲ ನಶ್ವರವು.

ಸೂತ್ರಾತ್ಮನಾದ ಪ್ರಾಣನೇ ಸರ್ವಾಂಗವನ್ನೂ ನಿಯಂತ್ರಿಸುವನು. ಅವನಿದ್ದರೆ ಎಲ್ಲವೂ ಉಂಟು. ಅವನಿಲ್ಲದಿದ್ದರೆ ಯಾವುದೂ ಇಲ್ಲ. ಆದ್ದರಿಂದ ಪ್ರಾಣವೇ ಬ್ರಹ್ಮವು. ಬ್ರಹ್ಮೋಪಾಸನೆಯಿಂದ ಸಂತೃಪ್ತವಾದ ಪ್ರಾಣವು ಮುಕ್ತಿ ಪಡೆಯುವುದು. ಅದು ಸಂತೃಪ್ತಿ ಪಡೆಯದಿದ್ದಲ್ಲಿ ತನ್ನ ಸ್ವರೂಪವನ್ನು ತೋರಲಾರದು. ವಿಶ್ವಂಚರನಾದ ಪ್ರಾಣಬ್ರಹ್ಮನನ್ನು ಇಂದ್ರಿಯಗಳಿಂದ ಸಾಕ್ಷಾತ್ಕರಿಸಲಾಗುವುದಿಲ್ಲ. ಅದರ ಸಂದರ್ಶನ ಪಡೆಯುವುದೆಂದರೆ ದೃಗ್ದೃಶ್ಯಗಳೆರಡೂ ಒಂದಾಗಲೇಬೇಕು. ಈ ಅತ್ಯದ್ಭುತ ನಿರ್ವಿಶೇಷ ಬ್ರಹ್ಮವು ಇಲ್ಲಿ ಕ್ರಿಯಾತ್ಮಕವಾಗಿ, ಗುಣಾತ್ಮಕವಾಗಿ ನಾನಾ

ಆಗಿರುವಂತೆ ಉದ್ಭಾಸವಾಗುವುದು ಸಹಜ. ಜನ್ಮಜನ್ಮಾಂತರಗಳ ಜೀವನವಾಸನೆಯಿಂದ ಸಂತೃಪ್ತಿ ಮೂಡದಿದ್ದಲ್ಲಿ ಪೂರ್ಣದೃಷ್ಟಿ ಬಲಿಯು ವುದಿಲ್ಲ.

ಉಷಸ್ತ–ನಮ್ಮ ಜ್ಞಾನಚಕ್ಷುವನ್ನು ತೆರೆಸಿದಿರಿ, ನಿಮಗೆ ಅನಂತ ಪ್ರಣಾಮಗಳು.

ಆರುಣಿ– ಇದುವರೆಗೆ ಸೂತ್ರಧಾರಿಯಾದ ಅಂತರಾತ್ಮನನ್ನು ಕುರಿತು ವಿವರಿಸಿದಿರಿ. ಈ ಮಹತ್ತಾದ ವಿಚಾರವನ್ನು ಸರ್ವಾಂಗವಾಗಿ ಬಲ್ಲವನು ಸರ್ವವಿತ್ತಾಗುವನೇ ?

ವೈಶಂಪಾಯನ ಮಹರ್ಷಿ– ಬ್ರಹ್ಮೋಪಾಸನೆಯಿಂದ ಆತ್ಮವು ಬ್ರಹ್ಮ ಮಯವಾಗಿ ವಿಶ್ವಂಚರವಾಗುವುದು. ಅಂದರೆ, ಆತ್ಮದರ್ಶನ ಅಥವಾ ಆತ್ಮ ಸಾಕ್ಷಾತ್ಕಾರದಿಂದ ದೃಗ್ದೃಶ್ಯಗಳೊಂದಾಗಿ ಅಖಂಡಭಾವ ಮೂಡಿದಾಗ ಎಲ್ಲೆಲ್ಲೂ ನಿರ್ವಿಶೇಷ ಬ್ರಹ್ಮವು ತಾನೇ ತಾನಾಗುವುದು. ಪೂರ್ಣದರ್ಶನ ಪಡೆದ ಪೂರ್ಣಾತ್ಮನು ಕೃತಾರ್ಥನಾಗುವುದರಿಂದ ಸರ್ವವಿತ್ ಆಗುವುದರಲ್ಲಿ ಸಂಶಯವಿಲ್ಲ.

ಗಾರ್ಗಿ– ತಮ್ಮ ವಿವರಣೆಯನ್ನು ಸರಳ ಸಾಂಗತ್ಯ ಎನ್ನಬೇಕೋ ಅದ್ಭುತ ಜ್ಞಾನವೈಖರಿ ಎನ್ನಬೇಕೋ ಎಂಬ ಪ್ರಶ್ನೆಯು ಮನವನ್ನು ತುಂಬಿ ಕೊಂಡಿದೆ. ಹೇಗೆಂದು ನಿರ್ಧರಿಸುವುದೋ ಯೋಚಿಸಬೇಕಾಗಿದೆ.

ಎಲ್ಲರ ಮುಖದಲ್ಲೂ ಮಂದಹಾಸ ಮಿನುಗಿ ಮಾಯವಾಯಿತು.

ವೈಶಂಪಾಯನ ಮಹರ್ಷಿ– ಇನ್ನೇನಾದರೂ ಸಮಸ್ಯೆಗಳಿವೆಯೋ ?

ಗಾರ್ಗಿ–ಭೂತ–ವರ್ತಮಾನ–ಭವಿಷ್ಯತ್ತುಗಳು ಯಾವುದರ ಆಧಾರ ವನ್ನು ಪಡೆದಿರುವುವು ?

ವೈಶಂಪಾಯನ ಮಹರ್ಷಿ–ಪ್ರಾಕಾರಾಂತರವಾಗಿ ಪರ್ಯಾಲೋಚಿಸಿ ದರೆ ಆಕಾಶವೇ ಆಧಾರವು. ಅಖಂಡವು ಖಂಡವಾಗುವುದು ಆಕಾಶದಲ್ಲಿ.

ಆಕಾಶವೇ ಸ್ಥಿರವು; ಚರವಾಗುವ ಎಲ್ಲಕ್ಕೂ ಮೂಲಸ್ಥಾನವು. ಕಾಲ-ದೇಶಗಳ ಹೊಂದಾಣಿಕೆಯಲ್ಲಿ ಆಕಾಶದ ಪಾತ್ರ ಸ್ಪಷ್ಟ. ಭೂತ ಪಂಚಕಗಳನ್ನು ವಿಲೋಮವಾಗಿ ಹೊಂದಿಸಿದರೆ ಆಕಾಶವು ಎಲ್ಲಕ್ಕೂ ಸರ್ವಮೂಲವಾಗಿರುವುದು ಕಂಡುಬರುವುದು.

ಉಷಸ್ತ– ಭಗವನ್ ! ಅಣುವಿಗಿಂತ ಅಣುವಾಗಿ ಮಹತ್ತಿಗಿಂತ ಮಹತ್ತಾಗಿ ಇರುವ ಪರಮಾತ್ಮನನ್ನು ನಾವು ಯಾವ ರೀತಿಯಲ್ಲಿ ಚಿಂತಿಸಬೇಕು ? ಯಾವ ರೂಪದಲ್ಲಿ ಉಪಾಸನೆ ಮಾಡಿದರೆ ಒಳ್ಳೆಯದು ?

ವೈಶಂಪಾಯನ ಮಹರ್ಷಿ– ಪರಮಾತ್ಮನು ಅಣುವಿಗಿಂತಲೂ ಅಣು. ಸೂಕ್ಷ್ಮಕ್ಕಿಂತಲೂ ಸೂಕ್ಷ್ಮ. ಮಹತ್ತಿಗಿಂತಲೂ ಮಹತ್ತು. ಸ್ಥೂಲಕ್ಕಿಂತಲೂ ಸ್ಥೂಲ. ಅವನಿಲ್ಲದ ನೆಲೆಯಿಲ್ಲ; ಅವನಿಲ್ಲದ ಕಣವಿಲ್ಲ; ಅವನಿಲ್ಲದ ಲೋಕವೂ ಇಲ್ಲ; ಕಾಲವೂ ಇಲ್ಲ. ನಾವು ಯಾವುದನ್ನು ತೀರ ಚಿಕ್ಕದು ಎನ್ನುತ್ತೇವೋ ಅದರ ಜೀವಾಳವೂ ಅವನೇ. ಅಂತೆಯೇ ಯಾವುದು ಬಹಳ ದೊಡ್ಡದು ಎಂದು ತಿಳಿಯಲ್ಪಡುವುದೋ ಅದರ ಅಂತರಾಳವೂ ಅವನೇ. ಈ ಬೃಹತ್ ಬ್ರಹ್ಮಾಂಡದಲ್ಲಿ ಓತಪ್ರೋತವಾಗಿರುವ ಅವನನ್ನು ಗುರುತಿಸುವುದೇ ಪರಮಾತ್ಮನನ್ನು ಕಾಣುವಿಕೆ. ಅವನೇ ಜಗತ್ಕಾರಕ; ಅವನೇ ಜಗನ್ನಿಯಾಮಕ. ನಮ್ಮ ಅಂತರಾತ್ಮನೂ ಅವನೇ. ಸರ್ವತ್ರ ಸದಾ ನಮ್ಮೊಳಗೇ ಇರುವ ಅವನನ್ನು ನಾವು ಕಾಣದೇ ಇರಲು ಕಾರಣ ನಮ್ಮಲ್ಲಿರುವ ಕಾಮಕಾಮಗಳ ವ್ಯಾಪ್ತಿ. ನಮಗೂ ಅವನಿಗೂ ಮಧ್ಯೆ ಕಾಣುವ ದಟ್ಟವಾದ ತೆರೆ. ಈ ತೆರೆ ಹರಿಯದ ಹೊರತು ಹೃದಯಸ್ಥಿತನಾದ ಅವನನ್ನು ಕಾಣುವುದು ಅಸಾಧ್ಯ. ಕಾಮವನ್ನು ಮನಃಪೂರ್ವಕವಾಗಿ ಕಿತ್ತೊಗೆದು ಪರಮಾತ್ಮ ಚಿಂತನೆ ಮಾಡುವುದರಿಂದಲೇ ಅವನನ್ನು ತಿಳಿಯಬೇಕಾದರೆ. ಮೋಕ್ಷಸಾಧನೆಯ ಮಾರ್ಗವೇ ಜೀವನೋತ್ಕರ್ಷಕ್ಕೆ ದಾರಿ.

ಏನೋ ಒಂದು ರೀತಿಯಲ್ಲಿ ಬಲಾತ್ಕಾರ ಮಾಘಸ್ನಾನ ಮಾಡಿದರೆ ಅದರಿಂದ ಏನೇನೂ ಲಾಭವಿಲ್ಲ. ಈಗ ಬಿಟ್ಟದ್ದು ಇನ್ನೊಂದು ಘಳಿಗೆ

ಯಲ್ಲೇ ಅಂಟಿಕೊಳ್ಳುತ್ತದೆ. ಕಾಮವನ್ನು ಮೂಲತಃ ತೊಡೆದುಹಾಕಿ ಲ್ಪಟ್ಟಾಗ ಮಾತ್ರ ಪರಮಾತ್ಮನನ್ನು ಗುರುತಿಸಬಹುದು. ಇದಕ್ಕೆ ಮುಖ್ಯ ವಾಗಿ ಅವನ ಕೃಪೆಯೂ ಇರಬೇಕು. ಅವನ ಕೃಪೆ ದೊರೆತರೆ ಶೋಕ ಸಂಕಷ್ಟಗಳಿಂದ ಪಾರಾಗಿ ಶಾಂತಿಯನ್ನು ಪಡೆದುಕೊಂಡು ಏನೆಲ್ಲ ಸಾಧಿಸ ಬಹುದು ? ಎಲ್ಲಿಯವರೆಗೆ ಮನಃಶಾಂತಿ ದೊರೆಯುವುದಿಲ್ಲವೋ ಅಲ್ಲಿಯ ವರೆಗೆ ಸಾಧನೆಯೂ ವ್ಯರ್ಥ. ಆದರಿಂದಲೇ ಶ್ವೇತಾಶ್ವತರ ಮುನಿಗಳು ಯಾರನ್ನು ಜನ್ಮರಹಿತನೆಂದು ಹೇಳಿರುವರೋ ಅವನು ಯಾವಾಗಲೂ ಯಾರಿಂದಲೂ ಜನ್ಮಗ್ರಹಣ ಮಾಡಲಿಲ್ಲ. ಅವನು ಹುಟ್ಟಿಯೂ ಇಲ್ಲ; ಮರಣಿಸುವುದೂ ಇಲ್ಲ. ಅವನೇ ಆದಿ; ಅವನೇ ತಂದೆ. ಹುಟ್ಟು ಎಂಬ ಪದ ಅನ್ವಯಿಸುವುದು ನಮಗೆ, ಅವನಿಗಲ್ಲ. ನಾವು ಜನ್ಮಧಾರಣೆ ಮಾಡುವ ಮೊದಲೂ ಆತ್ಮನು ಇದ್ದ; ದೇಹ ಬಿದ್ದುಹೋದ ಮೇಲೂ ಇರುತ್ತಾನೆ. ಪಾತ್ರೆ ಒಡೆದರೂ ಹೇಗೆ ಹಿತ್ತಾಳೆ ಇರುತ್ತದೆಯೋ ಹಾಗೆ, ಬಿಂದಿಗೆ ಒಡೆ ದರೂ ಹೇಗೆ ತಾಮ್ರವಿರುತ್ತದೆಯೋ ಹಾಗೆ. ಎಲ್ಲಾ ನಾಮರೂಪಗಳ ಹಿಂದೆ ಅವನು ಇದ್ದೇ ಇರುತ್ತಾನೆ. ನಾವು ಯಾವ ರೂಪದಲ್ಲಿ ಭಾವಿಸಿದರೆ ಅವನು ಆ ರೂಪದಲ್ಲಿ ಮೈದೋರುತ್ತಾನೆ.

ಆದಿಯಲ್ಲಿ ಅಂದರೆ ಜಗತ್ಸೃಷ್ಟಿ ಪೂರ್ವದಲ್ಲಿ ಪರಬ್ರಹ್ಮ ಅವರ್ಣವ–ಅಂದರೆ ಯಾವ ಗುಣಗಳೂ ಇಲ್ಲದವನು. ಅವನು ಯಾವಾಗ ಸೃಷ್ಟಿ ಯನ್ನು ಆರಂಭಿಸಿದನೋ ಆವಾಗ ಅದರೊಂದಿಗೇನೇ ಸ್ಥಿತಿ-ಲಯಗಳು ಅಂಟಿಕೊಂಡುವು. ಆ ಗುಣತ್ರಯಗಳೇ ಅವನ ನಿಚ್ಚ ಕಾರ್ಯಕ್ರಮ ಗಳು. ಯಾವೊಂದು ಉದ್ದೇಶಕ್ಕಾಗಿ ಜಗತ್ತು ಸೃಷ್ಟಿಯಾಯಿತೋ ಅದನ್ನು ನಾವು ಅರಿಯಲಾರೆವು ಅಥವಾ ಯೋಚಿಸಲೂ ಆರೆವು. ಅವನ ಉದ್ದೇಶ್ಯ ಅಸಾಮಾನ್ಯ. ಅದನ್ನು ಅಳೆಯುವುದೆಂದರೆ ನಮ್ಮ ಉದ್ದೇಶ ಗಳನ್ನು ಅವನಿಗೆ ಆರೋಪ ಮಾಡಿದಂತೆಯೇ. ನಮ್ಮದು ಸಂಕುಚಿತ ದೃಷ್ಟಿ; ಸಂಕುಚಿತ ಭಾವ. ನಮ್ಮ ಚಿತ್ತಪ್ರವೃತ್ತಿಯ ಆಯಕಟ್ಟಿನಲ್ಲಿ ಆವನನ್ನು ಹಿಡಿಯಹೋದರೆ ಅವನನ್ನು ನಮ್ಮ ಗಾತ್ರಕ್ಕೆ ಇಳಿಸುವುದೇ ಆದೀತು.

ಅವನು ಪುರಾಣ. ಅವನು ಕಾಲಾಂತರದಿಂದಲೂ ಇದ್ದವನು. ಇಂದಿಗೂ ಇದ್ದಾನೆ. ಮುಂದೆಯೂ ಇರುತ್ತಾನೆ. ಅವನಿಗೆ ಜರಾಮೃತ್ಯುಗಳಿಲ್ಲ. ಶೋಕಸಂಕಷ್ಟಗಳಿಲ್ಲ. ಅವನು ಸರ್ವಾಂತರ್ಗತ. ಅವನಿಲ್ಲದ ಸ್ಥಳವೆಂಬುದೇ ಇಲ್ಲ. ಅವನಿಂದಲೇ ನಾವು ಮತ್ತು ನಮ್ಮ ಜೀವಾಳ; ಮಾತುಕತೆ ನಡೆನುಡಿ ಎಲ್ಲಾ. ಈ ಎಲ್ಲಾ ನಾಮರೂಪಗಳ ಹಿಂದೆ ಇರುವುದು ಅವನೇ. ಹೇಗೆ ಎಲ್ಲಾ ಅಲೆಗಳ ಹಿಂದೆಯೂ ಸಾಗರವೇ ಇರುತ್ತದೆಯೋ ಹಾಗೆಯೆ. ಅವನು ಕಾಲ-ದೇಶಗಳ ವ್ಯಾಪ್ತಿಯನ್ನು ಮೀರಿದವನು. ದೇಹಧಾರಿಯಾದವನಿಗೆ ಬಾಲ್ಯ, ಯೌವನ, ಜರೆ, ಸಾವು ಎಂಬ ಅವಸ್ಥಾಂತರಗಳು ಕಾಡುತ್ತವೆ. ಯಾರು ದೇಹಧಾರಿಯಲ್ಲವೋ ಅವನಿಗೆ ಜರಾ ಮರಣಗಳು ಹೇಗೆ ಬರುತ್ತವೆ? ಎಣೆಯಿಲ್ಲದ ನಾಮರೂಪಗಳು ಅವನನ್ನು ಮುತ್ತಿ ಮರೆಮಾಡಿದರೂ ಅವನು ಇಲ್ಲವಾಗುವುದಿಲ್ಲ. ಪರಬ್ರಹ್ಮ ಎಂದೆಂದಿಗೂ ಪರಬ್ರಹ್ಮನೇ.

ಉಷಸ್ತ-ಭಗವನ್, ತಮ್ಮ ವ್ಯಾಖ್ಯಾನ ಸರಳವೂ ಸುಲಭವೂ ಆಗಿದೆ. ನಾವು ತುಂಬಾ ಉಪಕೃತರಾದೆವು.

ಆರುಣಿ-ಗುರುವರ್ಯ, ತಮ್ಮ ಪ್ರವಚನವು ನೇರವಾಗಿ ಅಂತಃಸ್ಥಲವನ್ನು ಮುಟ್ಟುತ್ತದೆ. ನೀವೆಷ್ಟು ಸಮಯ ವ್ಯಾಖ್ಯಾನ ಮಾಡಿದರೂ ಕೇಳಬಹುದು. ಅದರಿಂದ ನಮಗೆ ಆತ್ಮತೃಪ್ತಿ ಬರುತ್ತದೆ.

ವೈಶಂಪಾಯನ ಮಹರ್ಷಿಯು ಆ ಮಾತನ್ನು ಕೇಳಿ ಉತ್ಸಾಹಿತನಾಗಿ ಮುಂದುವರಿಯುತ್ತಾನೆ-ಕೇಳಿ, ಪರಬ್ರಹ್ಮನು ಹೇಗೆ ವೇದವೇದಾಂತಗಳ ದೇವತೆಯಾಗಿದ್ದಾನೆಯೋ ಹಾಗೆಯೇ ಈ ದೃಗ್ವಸ್ತುಗಳ ಹಿಂದೆಲ್ಲಾ ಇರುವವನು ಅವನೇ. ಪರಾಪರ ವಸ್ತುಗಳ ಹಿಂದೆಯೂ, ಅಣುರೇಣುತೃಣಕಾಷ್ಠಗಳಲ್ಲಿಯೂ ಇರುವವನು ಅವನೇ. ಈ ಬ್ರಹ್ಮಾಂಡದಲ್ಲಿ ಎಷ್ಟೆಷ್ಟು ರೂಪುರೇಷೆಗಳಿವೆಯೋ ಅವುಗಳ ಹಿಂದೆಲ್ಲಾ ಇರುವವನು ಅವನೇ. ಸಕಲ ಜೀವಕೋಟಿಗೆ ಆಶ್ರಯಭೂತವಾದ ಪಂಚಭೂತಗಳೂ ಅವನೇ. ಪಂಚಪ್ರಾಣಗಳೂ ಪಂಚೇಂದ್ರಿಯಗಳೂ ಅವನೇ. ನಾವು ಮಣ್ಣಿನಿಂದ

ಬಿಂದಿಗೆ, ಗಡಿಗೆ, ಮಡಿಕೆ, ಕುಡಿಕೆ, ಬಟ್ಟಲು ಮುಂತಾದುವುಗಳನ್ನು ಮಾ
ಬೇರೆಬೇರೆ ನಾಮರೂಪಗಳನ್ನು ಕೊಟ್ಟರೂ ಸಹ ಹೇಗೆ ಅವುಗಳ ಹಿಂದಿರು
ದೆಲ್ಲಾ ಸರ್ವತ್ರ ಮಣ್ಣೇ ಆಗಿದೆಯೋ ಹಾಗೆಯೇ ಎಲ್ಲಾ ನಾಮರೂಪಗ
ಹಿಂದೆಯೂ ಇರುವವನು ಅವನೇ. ಪರಬ್ರಹ್ಮನು ಅಗ್ರಾಹ್ಯನಾಗಿರ
ಕಾರಣ ಅವನ ಮೇಲೆ ಮಾಡಿರುವ ಅನೇಕಾನೇಕ ನಾಮರೂಪಗಳ ಆರೋ
ಗಳು. ನದಿಯ ಮರಳನ್ನು ಬಗೆದಾಗ ಅದರ ಹಿಂದಿರುವ ಸಿಹಿನೀರು ಹೇ
ಕಂಡುಬರುವುದೋ ಹಾಗೆಯೇ ಪರಬ್ರಹ್ಮನ ಅಸ್ತಿತ್ವ ನಾಮರೂಪಗಳ ತೆ
ಯನ್ನು ಸರಿಸುವುದರಿಂದಲೇ ಕಂಡುಬರಬೇಕಾದರೆ. ದೃಗ್‌ದೃಶ್ಯಗಳೆಲ್ಲವ
ಕಾಲ–ದೇಶಗಳ ವ್ಯಾಪ್ತಿಗೆ ಒಳಪಟ್ಟಿರುವುದರಿಂದ ಪರಬ್ರಹ್ಮನೂ ಕಾಲ–ದೇ
ಗಳ ವ್ಯಾಪ್ತಿಗೆ ಒಳಪಟ್ಟಿದ್ದಾನೆಂದು ಭಾವಿಸಬಾರದು. ಅವನು ಕಾಲಾತೀತ
ಅವನು ಗೋಚರಾತೀತ. ಅವನು ಯೋಚನಾತೀತ. ಅವನು ಭಾವನ
ತೀತ. ಅವನು ಎಲ್ಲಾ ಅವಸ್ಥೆಯನ್ನೂ ದಾಟಿದವನು. ಅವನ
ಬ್ರಹ್ಮಾಂಡನಾಯಕ. ಅವನು ವಿರಾಟ್‌ಸ್ವರೂಪ. ಅವನು ಸರ್ವಶಕ್ತ
ಆದ್ದರಿಂದ ಅವನನ್ನು ಅರಿಯಬೇಕಾದರೆ ಒಳಗಣ್ಣು ತೆರೆಯಬೇಕು. ಅಂ
ಮುರ್ಖಿಯಾಗಿ ಜೀವಾತ್ಮನನ್ನು ನೋಡಬೇಕು.

ಗಾರ್ಗಿ–ಭಗವನ್ ! ಸರಿಯಾಗಿ ಹೇಳಿದಿರಿ. ನಿಮ್ಮ ಪ್ರವಚ
ಇನ್ನಷ್ಟು ಕೇಳಬಹುದು.

ಆರುಣಿ–ಸಾಧು ! ಸಾಧು !

ಗಾರ್ಗಿ–ಪ್ರವಚನವೆಂದರೆ ಹೀಗಿರಬೇಕು; ಕೇಳಲು ಹಿತಕರ
ತರ್ಕಕ್ಕೂ ಸರಾಗ.

ಉಷಸ್ತನು ತಲೆದೂಗಿ ಸಮ್ಮತಿಯನ್ನು ಸೂಸಿ ಕೇಳುತ್ತಾನೆ–ಭಗ
ವನ್ ! ನಾನು ಯಾಜ್ಞವಲ್ಕ್ಯನ ಕಡೆಗೆ ತಮ್ಮ ನಿರೂಪವನ್ನೇನಾದರೂ
ಕೊಂಡೊಯ್ಯುವ ಅಗತ್ಯ ಇದೆಯೆ ?

ವೈಶಂಪಾಯನ ಮಹರ್ಷಿ ಒಂದು ಕ್ಷಣ ಯೋಚಿಸಿ· ಈಗ ಅವನೇ ಈ
ಕಡೆ ಬರುವ ಸಾಧ್ಯತೆ ಇದೆ.

ಗಾರ್ಗಿ-ಭಗವಾನರ ಯೋಗದೃಷ್ಟಿ ಹರಿತವಾದುದು. ಅಗೋ ಅತ್ತ ನೋಡಿ! ಯಾಜ್ಞವಲ್ಕ್ಯ ಮಹರ್ಷಿ ಇತ್ತಲೇ ಬರುತಿದ್ದಾರೆ.

ತಕ್ಷಣ ಎಲ್ಲರ ದೃಷ್ಟಿಯೂ ವನವರ್ತ್ಮದ ಕಡೆ ಹರಿದು ದೂರ ತಿರುವಿನಲ್ಲಿ ಆಗಮಿಸುತಿದ್ದ ಯಾಜ್ಞವಲ್ಕ್ಯ ಮಹರ್ಷಿಯನ್ನು ಕಂಡು ಆಶ್ಚರ್ಯ ವಿಸ್ತೃತಗೊಳ್ಳುವುದು.

ಆರುಣಿಯು ಒಂದು ಘಳಿಗೆ ವಿಸ್ಮಯವಿಮೂಕನಾದರೂ ಅನಂತರ ನಗುಮುಖದಿಂದ ಗಾರ್ಗಿಯನ್ನು ಕುರಿತು—ನಿನ್ನ ಮನಸ್ಸಿನಷ್ಟೇ ದೃಷ್ಟಿಯೂ ಹರಿತ.

ಉಷಸ್ತ-ಒಳ್ಳೆಯದು. ಸಮಯಕ್ಕೆ ಸರಿಯಾಗಿ ಬಂದಿದ್ದಾನೆ.

ಆ ವೇಳೆಗೆ ಯಾಜ್ಞವಲ್ಕ್ಯ ಮಹರ್ಷಿಯು ಕೈಸಾಲೆಯ ಬಳಿಗೆ ಬಂದಾಗಿತ್ತು.

ವೈಶಂಪಾಯನ ಮಹರ್ಷಿ—ನಿನ್ನ ಅಗತ್ಯ ತೋರಿದಾಗಲೇ ನೀನು ಬಂದಿರುವುದು ವಿಶೇಷ.

ಯಾಜ್ಞವಲ್ಕ್ಯ ಮಹರ್ಷಿಯು ವೈಶಂಪಾಯನ ಮಹರ್ಷಿಗಳಿಗೆ ನಮಸ್ಕರಿಸಿ-ಅಂತಹ ಅಗತ್ಯವೇನಿತ್ತು ಎಂಬುದನ್ನು ತಿಳಿಯಬಹುದೇ ?

ವೈಶಂಪಾಯನ ಮಹರ್ಷಿಯು ಮಂದಹಾಸದೊಡನೆ—ಅದೇ ಹಿಂದಿನ ಪ್ರಸಂಗಕ್ಕಾಗಿ.

ಉಷಸ್ತ—ನಾನೇ ನಿನ್ನಲ್ಲಿಗೆ ಬರುವ ಯೋಚನೆ ಮಾಡಿದ್ದೆ.

ಆರುಣಿ-ಬಹುಶಃ ನಿನ್ನ ಅಂತಃಪ್ರಜ್ಞೆ ವಿಷಯಗ್ರಹಣೆ ಮಾಡಿರಬಹುದು.

ಗಾರ್ಗಿ—ಅದು ಸಾಧ್ಯ.

ವೈಶಂಪಾಯನ ಮಹರ್ಷಿ—ಯಾವುದೇ ಇರಲಿ, ಬ್ರಹ್ಮಲಿಖಿತ ಎಂಬು

ದಕ್ಕೆ ಇದೊಂದು ಸರಿಯಾದ ದೃಷ್ಟಾಂತ. ಬ್ರಹ್ಮೇಚ್ಛೆಯಿಲ್ಲದೆ ಯಾವುದೂ ನಡೆಯಲಾರದು. ಅವನ ಮೂಲಕವೇ ನಾವು ಮತ್ತು ನಮ್ಮ ಕಾರ್ಯ ವಿಧಾನ.

ಗಾರ್ಗಿ–ಸಾಧುವಾದುದನ್ನೇ ಹೇಳಿದಿರಿ.

ಯಾಜ್ಞವಲ್ಕ್ಯ ಮಹರ್ಷಿಯು ಮಂದಹಾಸದೊಡನೆ–ಅದು ಎಲ್ಲರ ಪ್ರಜ್ಞೆಯಲ್ಲೂ ಹೊಳೆದಿರುವ ಅಂಶ. ಕೆಲವರು ಗಮನಕ್ಕೆ ತೆಗೆದುಕೊಳ್ಳ ಬಹುದು ಇನ್ನು ಕೆಲವರು ತೆಗೆದುಕೊಳ್ಳದೇ ಇರಬಹುದು.

ವೈಶಂಪಾಯನ ಮಹರ್ಷಿ–ನೀನೀಗ ಬಂದದ್ದು ಒಳ್ಳೆಯದೇ ಆಯಿತು. ಹೀಗೆ ಬಾ, ಇತ್ತ ಕುಳಿತುಕೊ.

ಯಾಜ್ಞವಲ್ಕ್ಯ ಮಹರ್ಷಿಯು ದರ್ಭೆಯ ಹಾಸಿನ ಮೇಲೆ ಕುಳಿತು ಕೊಳ್ಳುವನು. ಮಂದಸ್ಮಿತ ವದನಾರವಿಂದ ಅಸ್ತವ್ಯಸ್ತ ಚಿಕುರನಿಕರದಿಂದ ಆಚ್ಛನ್ನವಾಗಿದ್ದರೂ ಅಭಿರಾಮವಾಗಿ ಸಹಜತೆಗೆ ಕಳಸಪಿಟ್ಟಿತ್ತು.

ವೈಶಂಪಾಯನ ಮಹರ್ಷಿಯು ಕುತೂಹಲಭರಿತ ನೋಟದಿಂದ ನೋಡುತ್ತ–ಸುಪ್ರಿಯ ಮಹಾರಾಜನು ಇನ್ನು ಮುಂದೆ ದಿನವೂ ನಿನ್ನೊಡನೆ ಮಂತ್ರೋದಕವನ್ನು ಕಳುಹಿಸಿಕೊಡಬೇಕೆಂದು ಪತ್ರಮುಖೇನ ನಮ್ಮನ್ನು ಕೇಳಿಕೊಂಡಿದ್ದಾನೆ. ಅದರಿಂದ ಎಂದಾದರೂ ತಾನು ಗುಣ ಹೊಂದಬಹುದೆಂಬ ನಂಬಿಕೆ ಅವನಿಗಿದೆ.

ಯಾಜ್ಞವಲ್ಕ್ಯ ಮಹರ್ಷಿಯು ದೃಢಕಂಠದಿಂದ–ಅವನಿಗೆ ಗುಣ ಹೊಂದುವ ಯೋಗವಿದ್ದಿದ್ದರೆ ಅಂದೇ ಗುಣಹೊಂದುತ್ತಿದ್ದ. ಆ ಪುಣ್ಯ ಯೋಗ ಖಂಡಿತ ಇಲ್ಲವೇ ಇಲ್ಲ ಅವನಿಗೆ.

ವೈಶಂಪಾಯನ ಮಹರ್ಷಿ–ಹೋಗಲಿ, ನಾವು ಅವನ ಕೋರಿಕೆಯನ್ನಾ ದರೂ ಈಡೇರಿಸಿಕೊಡಬೇಕಲ್ಲ ? ಅವನಿಗೆ ನಿನ್ನ ಘನತೆಯಲ್ಲಿ ಬಹಳ ನಂಬಿಕೆಯಿದೆ.

ಯಾಜ್ಞವಲ್ಕ್ಯ ಮಹರ್ಷಿ–ಆ ನಂಬಿಕೆ ಅವನಿಗಿರಬಹುದು. ಆದರೆ, ಅವನು ಬದುಕುವ ಸಂಭವವಿಲ್ಲ ಎಂಬುದು ನನ್ನ ಖಚಿತ ಅಭಿಪ್ರಾಯ.

ವೈಶಂಪಾಯನ ಮಹರ್ಷಿ–ಹಾಗೆಂದರೆ ಹೇಗೆ? ಮಹಾರಾಜನ ಸಲುವಾಗಿಯಾದರೂ ಕೊಂಡೊಯ್ಯುವುದು ಲೇಸು. ಯೋಚಿಸಿ ನೋಡು.

ಯಾಜ್ಞವಲ್ಕ್ಯ ಮಹರ್ಷಿಯು ದೃಢಭಾವದಿಂದ ತಲೆಯಾಡಿಸುತ್ತ–ಸಾಧ್ಯವೇ ಇಲ್ಲ. ಆ ನತದೃಷ್ಟನಿಗಾಗಿ ನಾನು ನನ್ನ ವೇಳೆಯನ್ನು ಹಾಳು ಮಾಡಿಕೊಳ್ಳಲಾರೆ. ನೀವು ಹಾಗೆಂದು ನನ್ನನ್ನು ಒತ್ತಾಯಿಸಲೂ ಬಾರದು.

ಆರುಣಿಯು ಸ್ವಲ್ಪ ಅಸಮಾಧಾನದಿಂದ–ಛೆ! ಛೆ! ಗುರುಗಳ ಅಪೇಕ್ಷೆಯನ್ನು ಉಪೇಕ್ಷಿಸುವುದು ಸರಿಯಲ್ಲ.

ಉಷಸ್ತ–ಇದು ತುಂಬ ಮೊಂಡುತನವಾಯಿತು ಯಾಜ್ಞವಲ್ಕ್ಯ.

ವೈಶಂಪಾಯನ ಮಹರ್ಷಿ–ನೀನು ಇನ್ನೊಮ್ಮೆ ಪರ್ಯಾಲೋಚಿಸು. ಹೀಗೆ ಹಿಂದೆ ಮುಂದೆ ಆಲೋಚಿಸದೆ ಖಂಡತುಂಡವಾಗಿ ಹೇಳುವುದು ಸರಿಯಲ್ಲ.

ಗಾರ್ಗಿ–ಹೌದು; ಹೌದು. ಮಹರ್ಷಿ ಎನಿಸಿಕೊಂಡವರಿಗಂತೂ ಇದು ಭೂಷಣವಲ್ಲ.

ಯಾಜ್ಞವಲ್ಕ್ಯ ಮಹರ್ಷಿಯು ಶುದ್ಧಾಂಗವಾಗಿ ನಿರಾಕರಿಸುತ್ತ–ಏನೇ ಇರಲಿ, ಒಮ್ಮೆ ನನ್ನ ಮನಸ್ಸು ಒಪ್ಪಲಿಲ್ಲವೆಂದಮೇಲೆ ಅದು ನನ್ನಿಂದ ಸರ್ವಥಾ ಸಾಧ್ಯವಿಲ್ಲ; ದಯವಿಟ್ಟು ಕ್ಷಮಿಸಿಬಿಡಿ.

ವೈಶಂಪಾಯನ ಮಹರ್ಷಿ–ಯಾಜ್ಞವಲ್ಕ್ಯ! ಇದು ತೀರಾ ಉದ್ಧಟತನ!

ಯಾಜ್ಞವಲ್ಕ್ಯ ಮಹರ್ಷಿ–ನೀವು ಏನಾದರೂ ಭಾವಿಸಬಹುದು. ನನ್ನ ಅಭಿಮತವನ್ನು ನಾನು ಖಂಡಿತ ಬದಲಿಸಲಾರೆ.

ಆ ಮಾತು ಯಾಜ್ಞವಲ್ಕ್ಯನ ದೃಢಕಂಠದಿಂದ ಹೊರಬಿದ್ದಾಗ ಎಲ್ಲರ ಮುಖದಲ್ಲೂ ಆಶ್ಚರ್ಯದ ಮುದ್ರೆಯೊತ್ತಿತು. ವಟುಗಳೂ ಸಹ ಆಶ್ಚರ್ಯ ಚಕಿತರಾಗುವರು. ಮಳೆಗಾಳಿಯಿಲ್ಲದೆ ಒಮ್ಮೆಗೇ ಸಿಡಿಲು ಬಡಿದಂತಾಯಿತು ವೈಶಂಪಾಯನ ಮಹರ್ಷಿ ಮತ್ತು ಶಿಷ್ಯರಿಗೆ. ಒಂದೆರಡು ಘಳಿಗೆ ರುದ್ರಮೌನ ರಾಜ್ಯವಾಳಿದರೂ ಕೋಪದ ಕಿಡಿಗಳು ಉದುರಿದುವು. ವೈಶಂಪಾಯನ ಮಹರ್ಷಿಯು ಆಶ್ಚರ್ಯ–ಕೋಪ–ಅಸಮಾಧಾನ–ಅನುತಾಪಗಳಿಂದ ಸಿಡಿದೆದ್ದು ಕೆಂಗಣ್ಣುಗಳಿಂದ ಕೆಕ್ಕರಿಸಿ ನೋಡುತ್ತ ಉರಿದುರಿದು ಉಚ್ಚಸ್ವರದಲ್ಲಿ–ಎಲೆ, ಯಾಜ್ಞವಲ್ಕ್ಯ! ನೀನು ಎಲ್ಲವನ್ನೂ ನನ್ನಿಂದಲೇ ಕಲಿತು ನನಗೇ ತಿರುಮಂತ್ರ ಹೇಳುವಂತಾದುದು ಆಶ್ಚರ್ಯ! ನಿನಗೆ ಎಷ್ಟು ದುರಹಂಕಾರ? ಎಷ್ಟು ದುರಭಿಮಾನ? ಛಿ! ಛಿ!

ಆ ಮಾತುಗಳು ಕರ್ಣಕುಂಡಲಿಯನ್ನು ಕಾದರಸದಂತೆ ಹೊಕ್ಕು ಯಾಜ್ಞವಲ್ಕ್ಯ ಮಹರ್ಷಿಯ ಕಪೋಲ ಪ್ರಾಂತಗಳು ರಂಗು ತಳೆದುವು. ಪ್ರಶಸ್ತವಾದ ಲಲಾಟದ ಮೇಲೆ ತುಂತುರು ತುಂತುರಾಗಿ ಸ್ವೇದಬಿಂದುಗಳು ಮೂಡಿದುವು. ಒಂದೆರಡು ಘಳಿಗೆ ಗಂಭೀರವಾಗಿ ತನ್ನನ್ನು ತಾನು ಹತೋಟಿಯಲ್ಲಿಟ್ಟುಕೊಳ್ಳುವಂತೆ ಸುಮ್ಮನಿದ್ದು ಅನಂತರ–ನನ್ನದು ಅಹಂಕಾರ ಎಂದು ಭಾವಿಸಬಾರದು. ಸುಪ್ರಿಯ ಮಹಾರಾಜನಿಗೆ ಬದುಕುವ ಯೋಗ ಇಲ್ಲವೇ ಇಲ್ಲ ಎಂಬುದನ್ನು ಶ್ರುತಪಡಿಸಿದೆ ಅಷ್ಟೆ.

ಅತ್ಯಂತ ನೈಜ ಸ್ವರದಲ್ಲಿ ಹೊಮ್ಮಿದ ನುಡಿಗಟ್ಟಿನಲ್ಲಿ ತನ್ನ ಮೇಲಿನ ಆಪಾದನೆಯನ್ನು ನಿರಾಕರಿಸುವ ದಿಟ್ಟತನವಿತ್ತು. ಶಿಷ್ಯತನದ ಶಿಷ್ಟತನವೂ ಇತ್ತು. ಆದರೂ, ಅದು ವೈಶಂಪಾಯನ ಮಹರ್ಷಿಯ ಮನಸ್ಸಿಗೆ ಸಮಾಧಾನ ಮೂಡಿಸಲಿಲ್ಲ; ಒಡನೆಯೇ ರೋಷೋದ್ದೀಪ್ತನಾದ. ಜ್ವಲಿಸುವ ನಯನದ್ವಯಗಳು ಅಶೋಕ ಪುಷ್ಪದಂತೆ ರಕ್ತಾಕ್ತವಾದುವು. ಚಿತ್ತಪ್ರವೃತ್ತಿಯು ಉನ್ಮಾದದ ಪ್ರಭವ ಭೂಮಿಯಾಗಿ ತೀವ್ರ ಅಸಮಾಧಾನದಿಂದ–ಸಾಕು ಪ್ರತಿಷ್ಠೆ! ಧೂರ್ತತನ! ದುಷ್ಟತನ! ಇದು ಮತ್ತೇನೂ ಅಲ್ಲ ಯಾಜ್ಞವಲ್ಕ್ಯ!

ಯಾಜ್ಞವಲ್ಕ್ಯ ಮಹರ್ಷಿಯ ಮನಃಪ್ರಾಣಗಳು ಆಕುಲತೆಯಿಂದ ಆದ್ರಾರ್ದ್ರವಾದುವು. ಒಂದು ಕ್ಷಣ ಅದ್ಭುತ ಆತ್ಮವಿಸ್ಮೃತಾವಸ್ಥೆಯಲ್ಲಿ ಮುಳುಗಿದಂತೆ ಬದ್ಧಭೃಕುಟಿಗಳು ಸಡಿಲಗೊಂಡುವು. ಶಾಂತಸ್ಫುಟ ಸ್ವರದಲ್ಲಿ ನುಡಿದ, ದನಿ ವಿಜಾತೀಯವಾದಂತಿತ್ತು- ಇದು ಪ್ರತಿಷ್ಠೆಯೂ ಅಲ್ಲ; ಧೂರ್ತತನವೂ ಅಲ್ಲ, ದುಷ್ಟತನವೂ ಅಲ್ಲ. ನನ್ನ ಸ್ವಂತ ಸ್ಪಷ್ಟ ಅಭಿಪ್ರಾಯ, ಅಷ್ಟೆ. ಮನುಷ್ಯರೆಲ್ಲರೂ ತಮ್ಮ ತಮ್ಮ ಅಭಿಪ್ರಾಯ ಪ್ರಕಟಿಸಲು ಬದ್ಧರು ಎಂಬುದನ್ನು ಯಾವ ಕಾರಣಕ್ಕೂ ಕೈಬಿಡಬಾರದು. ಹಾಗೆ ಬಿಟ್ಟುಕೊಟ್ಟಲ್ಲಿ ಕರ್ತವ್ಯಲೋಪ ಮಾಡಿದಂತಾಗುತ್ತದೆ.

ಆರುಣಿ ಸಿಟ್ಟು-ರೋಷ-ಅಸಮಾಧಾನಗಳಿಂದ ಬುಸುಗುಟ್ಟುತ್ತ-ಗುರುಗಳ ಮುಂದೆ ನಿನ್ನ ಈ ವ್ಯರ್ಥಸಲ್ಲಾಪ ಸಲ್ಲ! ಇದು ಆಟದ ಕಣವಲ್ಲ!

ಉರಿಯುತ್ತಿದ್ದ ದೀಪವರ್ತಿಕೆಯ ಜ್ಯೋತ್ಸ್ನೆಯ ಪ್ರಕಾಶದಿಂದ ಉಷಸ್ತನ ಮುಖಮಂಡಲದಲ್ಲಿ ಮೂಡಿದ್ದ ಅಸಮಾಧಾನದ ಮುದ್ರೆ ಸ್ಪಷ್ಟವಾಗಿ ಕಾಣಿಸುತಿತ್ತು. ಅವನು ಅಭಿಭೂತನಾಗಿ ದೃಢಕಂಠದಿಂದ ಅಂದ--ಇದು ತೀರ ಅಸಡ್ಡೆ. ನಿನ್ನ ಮಾತು ಯಾರಿಗೂ ಗೌರವ ತರುವಂತಾದ್ದಲ್ಲ. ಖಂಡಿತ ವಿಚಾರ ಮಾಡು!

ಗಾರ್ಗಿಯು ಶಂಕರನ ಪಾರ್ಶ್ವವರ್ತಿನಿಯಾದ ಪಾರ್ವತಿಯಂತೆ ಶಾಂತ ಗಂಭೀರ ವದನೆಯಾಗಿ ತನ್ನ ದೃಢ ಅಭಿಪ್ರಾಯವನ್ನು ಹೊರ ಹಾಕಿದಳು-ನಿಮ್ಮ ಅಭಿಪ್ರಾಯವೇನಿದ್ದರೂ ಸರಿಯೆ. ಗುರುಗಳ ಮಾತನ್ನು ಮೀರುವ ಪ್ರಸಂಗ ಎಂದೂ ಬರಬಾರದು. ನೀವು ಇನ್ನೊಮ್ಮೆ ಪರಾಮರ್ಶೆ ಮಾಡುವುದು ಒಳ್ಳೆಯದು.

ಆ ಎಲ್ಲಾ ಹಿತನುಡಿಗಳನ್ನು ಕೇಳಿಯೂ ಯಾಜ್ಞವಲ್ಕ್ಯ ಮಹರ್ಷಿ ಸ್ವಲ್ಪವೂ ವಿಚಲಿತನಾಗದೆ ಅತ್ಯಂತ ದೀಪ್ತಕಂಠದಿಂದ ಎಲ್ಲರಿಗೂ ಒಂದೇ ಆದ ವಾಕ್ಯದಲ್ಲಿ ಉತ್ತರಿಸಿದ—ನೀವೆಲ್ಲ ಏನೇನು ಹೇಳಿದಿರೋ ಅದೆಲ್ಲಕ್ಕಿಂತ ಹೆಚ್ಚಾಗಿ ನನಗೆ ಕೇಳಿಸಿದ್ದು ನನ್ನ ಸ್ವಂತ ಅಭಿಪ್ರಾಯ........! ಅದಕ್ಕೇ ನಾನು ಗೌರವ ಕೊಡುವೆ. ಅದು ಯುಕ್ತವೂ ಸಹ.

ವೈಶಂಪಾಯನ ಮಹರ್ಷಿ ರೋಷಭೀಷಣನಾಗಿ ಕಣ್ಣುಗಳಲ್ಲಿ ಕಿಡಿಗಳನ್ನು ಕಾರುತ್ತ—ಎಲೆ ಧೂರ್ತ! ಇದುವರೆವಿಗೂ ನನ್ನಿಂದ ಏನೇನು ವಿದ್ಯೆಯನ್ನು ಕಲಿತೆಯೋ ಅದನ್ನೆಲ್ಲಾ ಈಗಲೇ ಕಕ್ಕಿಬಿಡು !

ಆ ಮಾತುಗಳನ್ನು ಕೇಳಿದ ಯಾಜ್ಞವಲ್ಕ್ಯ ಮಹರ್ಷಿಯು ಅಚಿಂತ್ಯನಾಗಿ ಅವಜ್ಞನಾಗಿ ಬಾಯ್ದೆರೆದು ವಾಙ್ಮಯರಾಶಿಯನ್ನೇ ವಾಂತಿಮಾಡಿಬಿಡುವನು. ಅದುವರೆವಿಗೂ ಆ ವಾಗ್ವಾದವನ್ನು ಮಂತ್ರಮುಗ್ಧರಂತೆ ಕೇಳುತ್ತ ನಿಂತಿದ್ದ ಶಿಷ್ಯಗಣವು ತಿತ್ತಿರೀ ಹಕ್ಕಿಗಳಂತೆ ವಾಙ್ಮಯದ ವಮನರಾಶಿಯನ್ನು ಹೆಕ್ಕಿ ಹೆಕ್ಕಿ ತಿಂದು ತೈತ್ತರೀಯ ಉಪನಿಷತ್ತಿಗೆ ನಾಂದಿ ಹಾಡಿದರು.

ಉಚ್ಛ್ವಾಸ ೯

ಕೃಷ್ಣಪಕ್ಷದ ನಿಶಿಯುರುಳಿ ಉಷಃಕಾಲ ಅಡರುವ ಮುನ್ನವೇ ವೀಣಾ
ಭ್ಯಾಸ ಅಭ್ಯಾಸ ಆರಂಭವಾಯಿತು. ಶೀತಲೋಜಸ್ವಿತೆಯ ಶೈತ್ಯ ವಾತಾವ
ಣದಲ್ಲಿ, ದಿಗಂತದಿಂದ ದಿಗಂತರಕ್ಕೆ ಮಾಯಾವೇಶದಲ್ಲಿ ಬೀಸಿಬರುವ ಮಂದ
ಸುಂದಾ ನಿಲದ ಅಂತಃಕರಣ ಹರಿದು ಬಂದತಿತ್ತು. ಭವ್ಯ ಸುನೀಲ ನೀಲಿ
ಯುಗಲಕ್ಕೂ ಚಿತ್ರಿಸಿದ ಅನುಪಮ ಚಿತ್ತಾರದಂತೆ ಸರ್ವತೋಮುಖವಾಗಿ
ಕೂಡಿ ಜಗ ಜಗಿಸುವ ಬೆಳ್ಳಿಯ ಚುಕ್ಕಿಗಳ ಮಹಾಮೇಳದಲ್ಲಿ ರೋಹಿಣೀ
ಕ್ಷತ್ರವಾಗಲೀ, ಶತಭಿಷರಾಶಿಯಾಗಲೀ ಕಾಣಿಸುತ್ತಲೇ ಇಲ್ಲ. ಮೇಲಾಗಿ,
ಚಂದ್ರಮನಿಲ್ಲದೆ ಚಂದ್ರಿಕೆಯೂ ಇಲ್ಲ ; ಶೋಭೆಯೂ ಇಲ್ಲ. ಎಲ್ಲೆಡೆಯೂ
ಗ್ಗತ್ತಲೆಯ ತೆರೆ ಮುಸುಗಿತ್ತು, ನಿಶಾದೇವಿಯ ಕಾಳವರ್ಣದ ಸೀರೆಯ
ರಗಿನಂತೆ.

ಪರ್ಣಾಶ್ರಮದ ಕೈಸಾಲೆಯ ಮಧ್ಯೆ ಅಗ್ನಿಕುಂಡದಲ್ಲಿ ಸಣ್ಣಸಣ್ಣ
ನ್ನಾಲಿಗೆಗಳನ್ನು ಚಾಚುತ್ತ ಉರಿಯುತ್ತಿರುವ ಅಗ್ನಿಯ ಮುಂದೆ ಕೃಷ್ಣಾ
ಸನದ ಮೇಲೆ ಕುಳಿತು ವೀಣಾಭ್ಯಾಸದಲ್ಲಿ ತೀವ್ರ ತನ್ಮಯನಾಗಿದ್ದಾನೆ

ಯಾಜ್ಞವಲ್ಕ್ಯ ಮಹರ್ಷಿ. ಜ್ಞಾನ–ವೈರಾಗ್ಯಗಳ ಅಸಂದಾಭಿಶೀಲತೆಯ
ಭಾವಸ್ಫೂರ್ತಿ ಮುಖಬಿಂಬದಲ್ಲಿ ಉಕ್ಕುತಿತ್ತು ತೇಜೋರಾಶಿಯಾಗಿ ಮತ್ತ
ಶಾಂತಿಸಂಪದವಾಗಿ. ವೀಣಾವಾದ್ಯದ ನಾದಬ್ರಹ್ಮನಲ್ಲಿ ಹೊಮ್ಮಿ
ಉದ್ಗೀತ ತರಂಗ ತರಂಗವಾಗಿ ಮೇಲೇರುತ್ತ ಅನಂತಾನಂತದಲ್ಲಿ ವಿಲೀ
ವಾಗುವಾಗ ನಿಮೀಲಿತ ನಯನಗಳ ಏಕತ್ರಗತಿಯೇ ಮನಃಪ್ರಾಣಗಳ ಅ
ಸಂಧಾನಕ್ಕೆ ಶ್ರದ್ಧಾಭಕ್ತಿಗಳ ಉದ್ದೀಪನೆಗೆ ಸರ್ವತ್ರ ಸಾಕ್ಷಿ.

ಹೊತ್ತು ಅನುಕ್ರಮವಾಗಿ ಉರುಳುತಿತ್ತು....ಕ್ಷಣಕ್ಷಣಗಳು ಮಿಂ
ದುವು, ಘಳಿಗೆ ಘಳಿಗೆಗಳು ನಿಷ್ಕ್ರಮಿಸಿದುವು, ಮುಂಜೆಳಗು ಮೆಲ್ಲಮೆಲ್ಲ
ಮೂಡತೊಡಗಿತು ಮೂಡಣದಲ್ಲಿ. ಜೀವಜಗತ್ ಎಚ್ಚೆತ್ತು ಚಟುವಟಿಕ
ಯನ್ನು ಆರಂಭಿಸುವ ಸಮಯದಲ್ಲಿ ಅರುಣೋದಯವಾಗಿ ಎಳೆಬಿಸಿಲು ಹರ
ವಾಗಿ ಹರಡಿತು ಸಮಸ್ತ ಭೂವಿಸ್ತಾರದ ಮೇಲೆ. ಬಾಲರವಿ ಬಾನ್ಬಿತ್ತಿ
ಯನ್ನು ಏರುವಷ್ಟರಲ್ಲಿ ಆಶ್ರಮಕ್ಕೆ ಆಗಮಿಸಿದ ಮೈತ್ರೇಯೀ ವೀಣಾಭ್ಯಾಸದ
ಏಕಾಗ್ರತೆಗೆ ಭಂಗ ತರಬಾರದೆಂದು ಕೈಸಾಲೆಯ ಪಕ್ಕದಲ್ಲೇ ಸದ್ದಿಲ್ಲದೆ
ನಿಂತುಕೊಂಡಳು ಮಹರ್ಷಿಯ ಕಣ್ಣಿಗೆ ಮರೆಯಾಗಿ. ವೀಣಾಭ್ಯಾಸ
ಮುಗಿಯುವವರೆಗೂ ಅವಳು ಒಳಗೆ ತಲೆಹಾಕಲಿಲ್ಲ. ಪರ್ಣಕುಟಿಯ ಪಚ್ಚ
ಕಿಂಡಿಯಲ್ಲಿ ನೆಟ್ಟ ಆಶಾತೃಷಿತಲೋಚನಗಳಿಗೆ ಮಹರ್ಷಿಯ ದರ್ಶನಲಾಭ
ವಾಗುವುದರೊಂದಿಗೆ ವೀಣಾನಾದಬ್ರಹ್ಮ ಮನಃಪ್ರಾಣಗಳನ್ನು ಮುತ್ತ
ತಿತ್ತು, ಮಧುರಮೋಹಕ ಶೈಲಿಯಲ್ಲಿ. ಅದಷ್ಟೇ ಸಾಕು, ಹೃದಯ ಕುಂಡ
ಲಿನಿಯಲ್ಲಿ ಕೇಂದ್ರೀಕೃತವಾದ ಭಕ್ತಿಪೂರ್ಣ ವಾಙ್ಮಯರಸ ನರನಾಡಿಗಳಿಗೆ
ಹರಿದು ವಿಕೇಂದ್ರೀಕರಣವಾಗಲು.

ಯಾಜ್ಞವಲ್ಕ್ಯ ಮಹರ್ಷಿ ವೀಣಾಭ್ಯಾಸವನ್ನು ಮುಗಿಸಿದಾಗ ಮನಃ
ಪ್ರಾಣಗಳು ಉಲ್ಲಸಿತವಾಗಿದ್ದುವು. ವಾದ್ಯವನ್ನು ಎತ್ತಿ ಯುಕ್ತಸ್ಥಳದಲ್ಲಿ
ಇಟ್ಟನಂತರ ಮನಸ್ಸು ಮೈತ್ರೇಯಿಯ ಕಡೆ ಹರಿಯಿತು. ಅದೇ ಸಮಯ
ದಲ್ಲಿ ಆಕೆ ವೀಣಾಭ್ಯಾಸ ಮುಗಿಯಿತು ಎಂಬುದನ್ನು ಖಚಿತಪಡಿಸಿಕೊಂಡು
ಬಾಗಿಲಲ್ಲಿ ಹಣಿಕಿ ನಲ್ಮೆಯಿಂದ ನಿವೇದಿಸಿಕೊಂಡಳು–ದೇವ, ನಾನೀಗ ಒಳಗೆ
ಬರಬಹುದೇ ?

ಯಾಜ್ಞವಲ್ಕ್ಯ ಮಹರ್ಷಿ–ಆಗಬಹುದು, ಅಷ್ಟೊಂದು ಸಂಕೋಚ ಪಡುವುದಕ್ಕೆ ಕಾರಣವಿಲ್ಲ.

ಅವಳು ಮರುನುಡಿಯದೆ ನಗುಮುಖದಿಂದ ಒಳಹೆಜ್ಜೆಯಿಟ್ಟಳು.

ಯಾಜ್ಞವಲ್ಕ್ಯ ಮಹರ್ಷಿಯು ಆಶ್ಚರ್ಯತೃಷಿತಲೋಚನಗಳಿಂದ ನೋಡುತ್ತ–ನೀನು ಆಗಿನಿಂದಲೂ ಹೊರಗಡೆಯೇ ಕಾದಿದ್ದೆಯಲ್ಲವೇ?

ಮೈತ್ರೇಯೀ–ಹೌದು ಭಗವನ್! ವೀಣಾಭ್ಯಾಸಕ್ಕೆ ಭಂಗ ತರಬಾರದು ಎಂದು.

ಯಾಜ್ಞವಲ್ಕ್ಯ ಮಹರ್ಷಿ–ನೀನು ಒಳ ಬಂದಿದ್ದಲ್ಲಿ ಅಭ್ಯಾಸಕ್ಕೇನೂ ತೊಂದರೆಯಾಗುತ್ತಿರಲಿಲ್ಲ.

ಮೈತ್ರೇಯೀ–ನೀವು ಹಾಗೆಂದರೂ ನಮಗೆ ಸಂಕೋಚ ಎಂಬುದು ಇದೆಯಲ್ಲಾ.

ಯಾಜ್ಞವಲ್ಕ್ಯ ಮಹರ್ಷಿಯು ಸಣ್ಣಗೆ ತಲೆಯಾಡಿಸುತ್ತ–ನೀನೇ ಅಲ್ಲ; ಯಾರೇ ಇದ್ದರೂ ನನ್ನ ಅಭ್ಯಾಸಕ್ಕೆ ಭಂಗ ಬರುವುದಿಲ್ಲ. ಯೋಗಿನಿಯಾದವಳಿಗೆ ಇದರ ವಿವರಣೆ ಅನಗತ್ಯ ಎಂದು ನನ್ನ ಭಾವನೆ.

ಮೈತ್ರೇಯಿಯು ಮರು ಮಾತಾಡಲು ಪ್ರಯತ್ನಿಸಿದರೂ ತುಟಿಗಳು ತೆರಿಯಲಿಲ್ಲ. ಪ್ರತಿವಾದನೆ ಹೂಡುವಂತಹ ವಿಷಯವಲ್ಲವಾದ್ದರಿಂದ ಉತ್ಸಾಹವೂ ಮೂಡಲಿಲ್ಲ. ಏನೋ ಒಂದು ರೀತಿಯಲ್ಲಿ ಮೌನಭಾರದಿಂದ ಜೀವ ಉಸಿರಾಡಿತು.

ಯಾಜ್ಞವಲ್ಕ್ಯ ಮಹರ್ಷಿಯು ಪ್ರಸನ್ನ ಮುಖದಿಂದ–ಇನ್ನೂ ಸಂಕೋಚವೇ ?

ಮೈತ್ರೇಯೀ–ಇಲ್ಲ ಭಗವಾನ್ ! ಅಂತಹ ಸಂಕೋಚವೇನೂ ಇಲ್ಲ.

ಯಾಜ್ಞವಲ್ಕ್ಯ ಮಹರ್ಷಿ–ಬಾ, ದೇವಿ. ಒಳಗೆ ಕುಳಿತುಕೊ.

ಅವಳು ನಮಸ್ಕರಿಸಿ ತೃಣಾಸ್ತರದ ಮೇಲೆ ಕುಳಿತುಕೊಳ್ಳುವಳು.

ಯಾಜ್ಞವಲ್ಕ್ಯ ಮಹರ್ಷಿ ಪ್ರಸನ್ನಮುಖಿಯಾಗಿ–ನೀನಿಂದು ತಿಳಿದು ಕೊಳ್ಳಬೇಕಾದುದು ಯಾವುದು ?

ಮೈತ್ರೇಯೀ–ನೀವು ಏನನ್ನು ತಿಳಿದುಕೊಂಡಿದ್ದೀರೋ ಅದನ್ನೇ.

ಯಾಜ್ಞವಲ್ಕ್ಯ ಮಹರ್ಷಿ–ನೀನು ಹಿಂದೆಯೂ ನಮಗೆ ಪ್ರಿಯಳಾಗಿದ್ದೆ. ಮುಂದೆಯೂ ಪ್ರಿಯಳಾಗಿರುವೆ. ನೀನು ಅದನ್ನು ಬಲ್ಲೆ. ಅಂದಮೇಲೆ ನಿನಗೆ ತಿಳಿಯ ಹೇಳುವುದರಲ್ಲಿ ನನಗೆ ತುಂಬ ಸಂತೋಷವಿದೆ.

ಮೈತ್ರೇಯೀ ಪ್ರತಿಯಾಗಿ ಏನನ್ನೂ ಹೇಳದೆ 'ನಾನು ಭಾಗ್ಯವಂತೆ' ಎಂದುಕೊಂಡಳು ಮನದಲ್ಲಿ.

ಯಾಜ್ಞವಲ್ಕ್ಯ ಮಹರ್ಷಿ–ಆತ್ಮನೇ ಸರ್ವಸ್ವ. ಅವನಿಗಿಂತ ಭಿನ್ನವಾದ ವಸ್ತುವು ಯಾವುದೂ ಹಿರಿದಲ್ಲ. ಅವನನ್ನು ಸಂಪೂರ್ಣ ಅರಿತುಕೊಂಡಲ್ಲಿ ಎಲ್ಲವನ್ನೂ ಅರಿತುಕೊಂಡಂತೆಯೇ ಎಂಬುದನ್ನು ನೀನು ಸರ್ವತ್ರ ತಿಳಿದುಕೊಂಡಿರಬೇಕಾದ ಅಂಶ.

ಮೈತ್ರೇಯೀ–ತಿಳಿಯಿತು.

ಯಾಜ್ಞವಲ್ಕ್ಯ ಮಹರ್ಷಿ–ಎಲ್ಲವೂ ಆತ್ಮನೆ. ಈ ಪ್ರಪಂಚದಲ್ಲಿ ಯಾವ ವಸ್ತುವನ್ನೇ ಆಗಲೀ ಅದರ ಸ್ವರೂಪದಿಂದ ಪ್ರತ್ಯೇಕಿಸುವುದು ಅಸಾಧ್ಯ. ಎಲ್ಲಾ ವಸ್ತುವಿನಲ್ಲೂ ಚಿನ್ಮಾತ್ರನೇ ಸರ್ವತ್ರ ಅನುಗತನಾಗಿರುವುದರಿಂದ ಎಲ್ಲವೂ ಚಿತ್‌ಸ್ವರೂಪವೇ ಆಗಿರುವುದು. ಉದಾಹರಣೆಗಾಗಿ ದುಂದುಭಿಯನ್ನು ತೆಗೆದು ಕೊಳ್ಳ ಬಹುದು. ದುಂದುಭಿಯನ್ನು ಬಾರಿಸುವಾಗ ಅದರ ಶಬ್ದ ವಿಶೇಷವನ್ನು ಪ್ರತ್ಯೇಕಿಸುವುದು ಅಸಾಧ್ಯ. ಏಕೆಂದರೆ ಶಬ್ದ ಸಾಮಾನ್ಯದಲ್ಲಿ ಶಬ್ದವಿಶೇಷವು ಸಮ್ಮಿಳಿತವಾಗಿರುತ್ತದೆ. ಅವು ಒಂದನ್ನು ಬಿಟ್ಟು ಒಂದು ಇರುವುದಿಲ್ಲ ವೆಂಬುದೇ ಇದರ ತಾತ್ಪರ್ಯವು. ಹಾಗೆಯೇ ಸ್ವಪ್ನ–ಜಾಗರಿತಗಳಲ್ಲಿ ಯಾವ ವಸ್ತು ವಿಶೇಷವನ್ನು ಗ್ರಹಿಸುವುದಕ್ಕೂ ಆಗುವುದಿಲ್ಲ ಪ್ರಜ್ಞಾನವೊಂದನ್ನು ಬಿಟ್ಟರೆ.

ಮೈತ್ರೇಯೀ, ಕೇಳು ! ಮನಸ್ಸಿಟ್ಟುಕೇಳುವ ಶಿಷ್ಯರಿದ್ದರೆ ತಿಳಿಯ ಹೇಳುವುದೇನೂ ವಿಶೇಷವಲ್ಲ. ಈಗ ಪ್ರವಚನ ಮಾಡುವುದೆಂದರೆ ನನಗೂ

ಷ್ಟವೇ. ನಮ್ಮ ನಮ್ಮ ಭಾವನೆಗಳನ್ನು ನಮ್ಮಲ್ಲೇ ಮನನಮಾಡಿ ಬರೀ ಳಿಯಲ್ಲಿ ತೂರಿ ಬಿಟ್ಟರೆ ಏನು ಪ್ರಯೋಜನ ? ಅವನ್ನು ಎಲ್ಲಾದರೂ ಬೌದ್ಧಿ ಸ್ತರದಲ್ಲಿ ಹುಟ್ಟುಹಾಕಿದರೆ ನಮ್ಮ ತಪಸ್ಸು ಫಲಿಸಿದಂತೆಯೇ. ಬ್ರಹ್ಮಜ್ಞ ಗಿಂತಲೂ ಬೇರೆ ಏನುಂಟು ? ಬ್ರಹ್ಮನನ್ನು ಕುರಿತು ಮನನಮಾಡುವುದರಲ್ಲಿ ರುವಷ್ಟು ತಪಸ್ಸು ಪ್ರವಚನ ಮಾಡುವುದರಲ್ಲೂ ಇದೆ.

ಮೈತ್ರೇಯೀ–ಸತ್ಯ ಭಗವನ್.

ಯಾಜ್ಞವಲ್ಕ್ಯ ಮಹರ್ಷಿ–ಇನ್ನ್ಯಾವ ಸಮಸ್ಯೆ ಮನದಲ್ಲಿ ?

ಮೈತ್ರೇಯೀ–ಲೋಕಾಲೋಕಗಳನ್ನು ಉಜ್ವಲೋಜ್ವಲವಾಗಿ ಬೆಳ ುವ ಸೂರ್ಯನೂ ಸಹ ಭೇದಿಸಲಾಗದಂತಹ ತಮಸ್ಸು ಮನಸ್ಸನ್ನು ಆವ ಸಿರುವುದರ ಅರ್ಥವೇನು ದೇವ ?

ಯಾಜ್ಞವಲ್ಕ್ಯ ಮಹರ್ಷಿ–ಲೌಕಿಕವಾದ ವಾಸನೆಗಳು ಮತ್ತು ೃತ್ಯುವಿನ ಛಾಯೆ ಚಿದಾಕಾಶವನ್ನು ಸರ್ವತ್ರ ಮುಚ್ಚಿರುವುದರ ಸೂಚನೆ ದು, ಸಾಮಾನ್ಯರಿಗೆ ಅದರಿಂದ ಬಿಡುಗಡೆಯಿಲ್ಲ.

ಮೈತ್ರೇಯೀ–ಹಾಗೆನ್ನುವಿರಾದರೆ ಇನ್ನೊಂದು ಸಮಸ್ಯೆ ಏಳುತ್ತದೆ.

ಯಾಜ್ಞವಲ್ಕ್ಯ ಮಹರ್ಷಿ–ಅವುದು ?

ಮೈತ್ರೇಯೀ–ಮೃತ್ಯುವಿನ ಛಾಯೆ. ಅಂದರೆ ಜ್ಞಾನಿಗಳಿಗೂ ಪುಣ್ಯ ಂತರಿಗೂ ಇರಬಹುದಾದ ಮೃತ್ಯುಭಯಕ್ಕೇನೆನ್ನುವಿರಿ ? ಮೃತ್ಯು ಾರನ್ನು ಬಿಟ್ಟಿದೆ ?

ಯಾಜ್ಞವಲ್ಕ್ಯ ಮಹರ್ಷಿ–ದೇವಿ, ಅದನ್ನು ಮೃತ್ಯುಭಯ ಅನ್ನದಿರು. ನಸ್ಸಿನಲ್ಲಿ ಎಲ್ಲಿಯವರೆಗೆ ಪ್ರತ್ಯೇಕತೆ ಇರುವುದೋ ಅಲ್ಲಿಯವರೆಗೆ ಮಾತ್ರ ಯ. ಮನಸ್ಸು ಮತ್ತು ಬುದ್ಧಿ ಸಮ್ಮಿಲನವಾದರೆ ಅಭಯ. ಮೃತ್ಯು ೀವನದ ಅವಿಭಾಜ್ಯ ಅಂಗ. ಪುನರಾವರ್ತನರಹಿತ ನಿದ್ದೆ. ಮೈತ್ರೇಯೀ, ಾವು ಇನ್ನೂ ಸ್ವಲ್ಪ ಮುಂದೆ ಹೋಗೋಣ. ಅಕಾಲಮೃತ್ಯು–ಸಕಾಲ

ಮೃತ್ಯು ಯಾವುದೇ ಇರಲಿ ಜೀವನು ಮತ್ತೆ ಮತ್ತೆ ಜನ್ಮವೆತ್ತಿ ಬರುವುದು ಅನಿವಾರ್ಯ. ಆದ್ದರಿಂದ ಪದೇ ಪದೇ ಮೃತ್ಯುವಶನಾಗಿ ಕರ್ಮಾನುಬಂಧ ವನ್ನು ಕಳೆದುಕೊಂಡು, ಅನಂತವೂ ಅಖಂಡವೂ ಆದ ಸತ್ಯವಸ್ತುವಿನಲ್ಲಿ ಲೀನವಾಗಿ ಜನ್ಮಬಂಧನದಿಂದ ಬಿಡುಗಡೆ ಹೊಂದುವನು. ಅದೇ ಬಾಹ ಗೋಚರವಾಗದ ಮೋಕ್ಷಮಾರ್ಗ ಅಥವಾ ಗಮ್ಯಸ್ಥಿತಿ.

ಮೈತ್ರೇಯಿ ಇನ್ನೂ ಕೇಳು ! ಮೃತನನ್ನು ಕುರಿತು ಈತನ ಅಂಗಾಂಗಗಳು ಬಿದ್ದುಹೋದುವು ಅನ್ನುವುದುಂಟು. ಏಕೆಂದರೆ ಈ ಪೃಥಿವ್ಯಾದಿಭೂತಗಳಿಗೆ ಆಧಾರವಾದ ವಾಯುವಿನಿಂದಲೇ ಅವು ಪೋಣಿಸ ಲ್ಪಟ್ಟಿವೆ ಮತ್ತು ಲಿಂಗ ಶರೀರದ ಸ್ವರೂಪವನ್ನು ಪಡೆದಿದೆ. ವ್ಯಷ್ಟಿ-ಸಮಷ್ಟಿಗಳ ರೂಪವೂ ಉಂಟು. ಸಮುದ್ರಕ್ಕೆ ಅಲೆಗಳು ಹೇಗೋ ಹಾಗೆ ಮರುದ್ಗಣಗಳು ಇದರ ಬಾಹ್ಯಭೇದಗಳು. ಮಣಿಗಳು ದಾರದಿಂದ ಪೋಣಿಸಲ್ಪಟ್ಟಂತೆ ಎಲ್ಲಾ ವಸ್ತುಗಳೂ ವಾಯುವಿನಿಂದ ವ್ಯಾಪಿಸಲ್ಪಟ್ಟಿರು ವುದರಿಂದ ವಾಯುವನ್ನು ಸೂತ್ರವೆಂದು ಕರೆಯುಬಹುದು. ಇವನ ಸಾನ್ನಿಧ್ಯದಿಂದಲೇ ಶರೀರೇಂದ್ರಿಯಗಳ ಪ್ರವೃತ್ತಿ-ನಿವೃತ್ತಿಗಳು. ದಾರವು ಬಿಚ್ಚಿಹೋದರೆ ಮಣಿಗಳು ಜಾರಿ ಕೆಳಗೆ ಬೀಳುವಂತೆ ಸೂತ್ರಸ್ಥಾನೀಯ ವಾದ ವಾಯು ಹೋದರೆ ಅಂಗಾಂಗಗಳು ಬಿದ್ದುಹೋಗುವುದು ಸಹಜ.

ಮೈತ್ರೇಯಿ-ತಿಳಿಯಿತು, ಭಗವನ್.

ಯಾಜ್ಞವಲ್ಕ್ಯ ಮಹರ್ಷಿಯು ಸಂಪ್ರೀತನಾಗಿ ಪ್ರಸನ್ನ ಭಾವದಿಂದ-ಮೈತ್ರೇಯಿ, ಈಗ ನಾನು ಯಾವ ವಿಚಾರವನ್ನು ಕುರಿತು ಪ್ರವಚನ ನಡೆಸಲಿ ? ನಿನಗೆ ಯಾವುದು ಬೇಕಾಗಿದೆ ?

ಮೈತ್ರೇಯಿ-ಅಭ್ಯಾರೋಹನ ಮಂತ್ರ ?

ಯಾಜ್ಞವಲ್ಕ್ಯಮಹರ್ಷಿ-ಆಗಬಹುದು, ಎಲ್ಲಿ ಮೊದಲನೆಯ ಮಂತ್ರವನ್ನು ಹೇಳು ?

ಮೈತ್ರೇಯಿ-ಅಸತೋಮಾ ಸದ್ಗಮಯ.

ಯಾಜ್ಞವಲ್ಕ್ಯ ಮಹರ್ಷಿ–ಈ ಮಂತ್ರದ ಭಾವಾರ್ಥ ಎಷ್ಟು ಸುಂದರವಾದುದೋ ಅಷ್ಟೇ ಲೋಕೋತ್ತರವಾದುದು. ಇದರ ಆಪಾತತಃ ನಿನಗೆ ತಿಳಿದಿದೆಯಷ್ಟೆ? ಅಸತ್ತಿನಿಂದ ಸತ್ತಿಗೆ ಕರೆದೊಯ್ಯು ಎಂದು ಬಿನ್ನಯಿಸುತ್ತದೆ ಮಂತ್ರ. ಇದರಲ್ಲಿ ಅಡಕವಾದ ಎರಡು ವಸ್ತುಗಳು ಸ್ಪಷ್ಟವಾಗಿ ಕಂಡು ಬರುತ್ತವೆ ನಮಗೆ. ಒಂದು ಅಸತ್ತು ಮತ್ತೊಂದು ಸತ್ತು. ಅಸತ್ ಎಂದಾಗಲೇ ಸತ್ ಎಂಬುದೊಂದು ಇದೆ ಎಂಬುದು ಅರ್ಥವಾಯಿತು. ಬುದ್ಧಿಗೆ ನಿಲುಕುವ ವಸ್ತುವನ್ನು ಅಸತ್ ಎನ್ನುತ್ತದೆ ವೇದಾಂತ. ಸತ್ ಎಂಬುದು ಬುದ್ಧಿಗೆ ನಿಲುಕದೆ ಇರುವ ವಸ್ತು. ಬೌದ್ಧಿಕ ವಲಯದಿಂದ ಆಚೆ ಇರುವುದು ಸತ್ ಎಂದು ಗುರುತಿಸಿದಮೇಲೆ ಈಚಿನದು ಅಸತ್ ಎಂದಾಯಿತು. ಸತ್ ಕುರಿತು ಚಿಂತನೆಯೇ ಇಲ್ಲವಾದರೆ; ಸತ್–ಅಸತ್‌ಗಳ ಪ್ರಭೇದವೇ ಇಲ್ಲ. ನಾವು ಯಾವುದೇ ವಸ್ತುವನ್ನು ಕುರಿತು ದೊಡ್ಡದು ಎನ್ನುವಾಗ ಚಿಕ್ಕದು ಇದೆ ಎಂಬ ಅರ್ಥ ತಾನಾಗಿ ಮೂಡುತ್ತದೆ. ದೊಡ್ಡದು ಎಂದರೆ ಚಿಕ್ಕದು, ಚಿಕ್ಕದು ಎಂದರೆ ದೊಡ್ಡದು ಎಂಬುದು ಮೂಡಿಯೇ ಮೂಡುತ್ತದೆ. ದೊಡ್ಡದಿಲ್ಲದಿದ್ದರೆ ಚಿಕ್ಕದೂ ಇಲ್ಲ; ಚಿಕ್ಕದಿಲ್ಲದಿದ್ದರೆ ದೊಡ್ಡದೂ ಇಲ್ಲ. ಮೈತ್ರೇಯೀ, ತಿಳಿಯಿತೇ ?

ಮೈತ್ರೇಯೀ–ತಿಳಿಯಿತು ಭಗವನ್, ನಿಮ್ಮ ಆಖ್ಯಾಯಿಕೆ ತುಂಬ ಸರಳವಾದ್ದರಿಂದ ತಿಳಿವಳಿಕೆಗೆ ಸುಲಭ.

ಯಾಜ್ಞವಲ್ಕ್ಯ ಮಹರ್ಷಿ–ನೀನು ಸಾಕಷ್ಟು ಇದರ ಅಂತರಾರ್ಥವನ್ನು ಅರಿತಿರುವುದರಿಂದ ನಿನಗೆ ಅತೀ ಹೆಚ್ಚಿನ ವಿವರಣೆ ಅನಗತ್ಯ ಎನ್ನಬಹುದು.

ಮೈತ್ರೇಯೀ–ಇರಲಿ, ನಿಮ್ಮ ಪ್ರವಚನಕ್ಕಾಗಿಯೇ ಬಂದವಳು ನಾನು. ನೀವು ವಿವರಿಸಿದಷ್ಟನ್ನೂ ಕಿವಿಗೊಟ್ಟು ಕೇಳುವೆ, ಭಗವನ್! ಯಥೋಚಿತವಾಗಿ ಮುಂದುವರಿಸಿರಿ.

ಯಾಜ್ಞವಲ್ಕ್ಯ ಮಹರ್ಷಿ–ಕೇಳು ಮೈತ್ರೇಯೀ, ಆ ದೊಡ್ಡದನ್ನೇ ಚಿಂತಿಸುತ್ತ ಹೋಗುವುದೇ ಆಧ್ಯಾತ್ಮಿಕ ಮಾರ್ಗ. ಫಲವನ್ನು ಕುರಿತ

ಅಭೀಪ್ಸೆ ವೃಕ್ಷವನ್ನು ಲಕ್ಷಿಸದಿರಬಹುದು; ಆದರೆ ವೃಕ್ಷವಿಲ್ಲದಿದ್ದರೆ ಫಲವಿ ಎಂಬುದನ್ನು ಮರೆಯಲೂಬಾರದು. ಜೀವನ-ಸಾಧನೆ ಎರಡೂ ಜೀವಿತ ಅವಿಭಾಜ್ಯ ಅಂಗ. ಪ್ರಥಮ ಖಂಡವನ್ನು ದಾಟಿ ದ್ವಿತೀಯ ಖಂಡಕ ಕಾಲಿರಿಸಿ ತಾನೇ ತಾನಾಗುವುದೇ ಬ್ರಹ್ಮಮಯ. ಅಂದರೆ ಜೀವಾತ್ಮನನು ಪರಮಾತ್ಮನಲ್ಲಿ ಐಕ್ಯಗೊಳಿಸುವುದು. ಇಲ್ಲಿ ಲಯ ಎಂದರೆ ಜೀವಾತ್ಮನನ್ನು ಅಳಿಸಿಯೇ ಬಿಡುವುದು ಎಂದರ್ಥವಲ್ಲ; ಜೀವಾತ್ಮನಿಗಿಂತ ಹಿರಿದಾ ಪರಮಾತ್ಮವಸ್ತು ಒಂದಿದೆ ಎಂಬುದನ್ನು ಅರಿತುಕೊಳ್ಳುವುದು. ನಮ ಮುಂದೆ ಏನಿದೆ, ಅದರ ವಿಸ್ತಾರವೇನು, ಅದಕ್ಕೆ ಯಾವ ರೀತಿಯಲ್ಲಿ ಅಸ್ತಿತ್ವ ವನ್ನು ಕೊಡಬಹುದು ಎಂಬುದನ್ನರಿತು ಮಾನಸಿಕವಾಗಿ ಭೌತಿಕವಾಗಿ ಅ ಪರಮಾತ್ಮವಸ್ತುವಿಗಾಗಿಯೇ ಬಾಳುವುದು ಎಂದರ್ಥ. ಈಗ ಉದಾ ಹರಣೆಗಾಗಿ ಒಂದು ದೀವಿಗೆಯನ್ನು ತೆಗೆದುಕೊಳ್ಳಬಹುದು. ಬತ್ತಿ ಎಣ್ಣೆಗಳ ಮೂಲಕವೇ ದೀಪ ಉರಿಯಬೇಕಾದರೆ, ಈ ಅಗ್ನಿಕುಂಡವನ್ನು ನೋಡು. ಅಗ್ನಿದೇವನಿಗೆ ಸೌದೆಯೇ ಆಧಾರ. ಹಾಗೆಯೇ ಈ ಬೃಹತ್ ಪ್ರಾಪಂಚಿಕ ವ್ಯವಹಾರ. ಒಂದು ಮತ್ತೊಂದಕ್ಕೆ ಆಧಾರ. ಎಲ್ಲಕ್ಕೂ ಸೂತ್ರಸ್ಥಾನೀಯವಾದ ಪರಮಾತ್ಮ ವಸ್ತುವಿಲ್ಲದಿದ್ದರೆ ಈ ಜೀವಾತ್ಮನಿಗೆ ಆಧಾರವೇ ಇಲ್ಲ. ಹಾಗೆಯೇ ಎಲ್ಲಾ ಜೀವಕೋಟಿಗಳ ಮೂಲಕ ಬೆಳಗು ವವನು ಪರಮಾತ್ಮನೇ. ಆದರೆ, ಅವನನ್ನು ಗುರುತಿಸುವ ಹೊಣೆಗಾರಿಕೆ ನಮ್ಮದೇ. ಆ ಹೊಣೆಯನ್ನು ಹೊರದೆ ಹೋದರೆ ಅವನು ಅವನೇ; ನಾವು ನಾವೇ. ಮೈತ್ರೇಯೀ, ಇದೇ ಅಧ್ಯಾತ್ಮಿಕ ಚಿಂತನೆ ಅಥವಾ ಆಧ್ಯಾತ್ಮಿಕ ಅರ್ಥ ಅಥವಾ ನಮ್ಮ ಹೊಣೆಗಾರಿಕೆ.

ಮೈತ್ರೇಯೀ ಸಾನಂದದಿಂದ ಪ್ರಸನ್ನಮುಖಿಯಾಗಿ–ಈಗ ತಿಳಿಯಿತು ಭಗವನ್.

ಯಾಜ್ಞವಲ್ಕ್ಯ ಮಹರ್ಷಿ–ಸರಿ, ಮುಂದಿನದನ್ನು ಹೇಳು.

ಮೈತ್ರೇಯೀ–ತಮಸೋ ಜ್ಯೋತಿರ್ಗಮಯ.

ಯಾಜ್ಞವಲ್ಕ್ಯ ಮಹರ್ಷಿ–ದೇವಿ, ಯೋಗಿನಿ! ನೀನಿದರ ಭಾವ

ವನ್ನು ಬಲ್ಲೆಯಾದ್ದರಿಂದ ವಿಶೇಷ ವಿವರಣೆಯನ್ನು ತಿಳಿಸಿಕೊಡುವ ಕಾರಣ ವಿಲ್ಲ. ಆದರೂ ವಿವರಿಸೋಣ. ಇಲ್ಲಿ ಕೇಳು, ಕತ್ತಲಿನಿಂದ ನನ್ನನ್ನು ಬೆಳಕಿಗೆ ಕರೆದೊಯ್ಯು ಎಂಬುದು ಮಂತ್ರಾರ್ಥ. ಇಲ್ಲಿ ಹೇಳಿರುವ ಕತ್ತಲು ವೈಯಕ್ತಿಕವಾದ ತಮಸ್ಸು ಅಥವಾ ಅಜ್ಞಾನ. ಮಾನವ ಎಲ್ಲಾ ದಿಶೆ ಯಲ್ಲಿ ಮುಂದುವರಿಯಬಲ್ಲನಾದರೂ ತನ್ನನ್ನು ತಾನು ಅರಿಯದೆ ಈ ಶರೀರವೇ ತಾನೆಂಬ ಕುರುಡು ಭಾವನೆಯಿಂದ ಪಕ್ಕಾಗಿರುವ. ತೀರ ಸಂಕುಚಿತವಾದ ಮಾನಸಪ್ರವೃತ್ತಿಯು ಕಾಲ-ದೇಶಗಳ ವ್ಯಾಪ್ತಿಯನ್ನು ಮೀರಿ ಹರಿಯುವುದುದು ಕಠಿಣ. ಇಂಥ ಮಾನಸಿಕ-ಬೌದ್ಧಿಕ ಶಿಥಿಲತೆ ಯನ್ನೇ ವೇದಾಂತವು ತಮಸ್ಸು ಅಥವಾ ಮಾಯೆ ಎಂದು ಕರೆದದ್ದು. ಮಾಯೆ ಅಗಾಧವಾದು. ಅದನ್ನು ಹರಿಹಾಯುವುದು ಸಾಮಾನ್ಯರಿಂದ ಅಸಾಧ್ಯ. ಜ್ಞಾನದೀವಿಗೆಯನ್ನುರಿಸದೆ ಮಾರ್ಗಯೋಗವನ್ನು ಕೈಕೊಳ್ಳು ವುದರಿಂದ ಹಾದಿ ತಪ್ಪುವುದು ಸರ್ವೇಸಾಮಾನ್ಯ. ಜಗತ್ತಿನ ತುಂಬೆಲ್ಲಾ ಮಹಾಮಾಯೆಯಿಂದ ಕೂಡಿದ ಗಾಢವಾದ ಕತ್ತಲೆ. ಆದರ ಆಚೆ ಪ್ರಜ್ಞಾನ ಪ್ರದೀಪ್ತಿ. ಆ ಪ್ರದೀಪ್ತಿಯನ್ನು ಕೈಕೊಳ್ಳುವುದೆಂದರೆ ಆತ್ಮದೀಪ್ತಿಯ ಮೂಲಕವೇ. ಆತ್ಮಪ್ರಕಾಶ ಮಂದವಾದರೆ ಮುನ್ನ ಡೆಯೂ ಮಂದ. ಮನಸ್ಸು ಸರ್ವಥಾ ಕಾಲ-ದೇಶಗಳ ಕೂಸು. ಅದು ಕಾಲ-ದೇಶಗಳಿಗೊಳಪಟ್ಟುದುದನ್ನು ಮಾತ್ರ ಮನನ ಮಾಡ ಬಲ್ಲುದು ಮತ್ತು ಅದನ್ನು ಹಂಚಬಲ್ಲುದು. ಅದೇ ದೌರ್ಬಲ್ಯ ಅಥವಾ ಮಾಯೆ. ಸಾಂತದಿಂದ ನಿರಂತದ ಕಡೆ ಸಾಗಲು ವೇದಾಂತದ ಮರೆ ಹೋಗುವುದೊಂದೇ ದಾರಿ. ಆತ್ಮದೀಪ್ತಿಯನ್ನು ಎತ್ತಿಹಿಡಿದರೆ ಎಲ್ಲೆಲ್ಲಿಯೂ ಬೆಳಕೇ ಬೆಳಕು. ಅಂದರೆ ಆ ಮಾಯಾ ಜಗತ್ತಿನ ಸಂಸ್ರವದಿಂದ ಸಂಪೂರ್ಣ ಬಿಡುಗಡೆ. ಮೈತ್ರೇಯೀ ಅರ್ಥವಾಯಿತೇ ? ಇದನ್ನೇ ಕತ್ತಲಿನಿಂದ ಬೆಳಕಿಗೆ ಒಯ್ಯು ಎನ್ನುವುದು.

ಮೈತ್ರೇಯೀ–ಅರ್ಥವಾಯಿತು ಭಗವನ್ !

ಯಾಜ್ಞವಲ್ಕ್ಯ ಮಹರ್ಷಿ–ಸರಿ, ಮುಂದಿನ ಮಂತ್ರವನ್ನು ಹೇಳು.

ಮೈತ್ರೇಯೀ–ಮೃತ್ಯೋರ್ಮಾ ಅಮೃತಂಗಮಯ.

ಯಾಜ್ಞವಲ್ಕ್ಯ ಮಹರ್ಷಿ—ಕೇಳು, ದೇವಿ. ನನ್ನನ್ನು ಮೃತ್ಯುವಿನಿಂದ ಅಮೃತತ್ವಕ್ಕೆ ಕರೆದೊಯ್ಯು ಎಂಬುದು ಇದರ ಭಾವಾರ್ಥ. ಇದನ್ನು ನೀನು ಅಕ್ಷರಶಃ ಬಲ್ಲೆ. ಇದರ ವಿವರಣೆಯನ್ನು ಕೇಳು, ಎಲ್ಲರೂ ತನ್ನನ್ನು ಮೃತ್ಯುವು ನುಂಗುವುದೆಂದೇ ತಿಳಿದು ಭೀತಭಾವನೆ ಹೊಂದಿರುವರು....ನಾವೇ ಅದನ್ನು ನುಂಗುವುದಾದರೆ ಎಲ್ಲಿಯ ಭಯ ?

ಮೈತ್ರೇಯೀ—ಅರ್ಥವಾಗಲಿಲ್ಲ, ಭಗವನ್ !

ಯಾಜ್ಞವಲ್ಕ್ಯ ಮಹರ್ಷಿ—ಈ ಶರೀರವು ನೀನೇ ?

ಮೈತ್ರೇಯೀ—ಶರೀರವು ನಾನಲ್ಲ, ದೇವ !

ಯಾಜ್ಞವಲ್ಕ್ಯ ಮಹರ್ಷಿ—ಶ್ವಾಸವು ನೀನೇ ?

ಮೈತ್ರೇಯೀ—ಶ್ವಾಸವು ನಾನಲ್ಲ, ದೇವ !

ಯಾಜ್ಞವಲ್ಕ್ಯ ಮಹರ್ಷಿ—ನಿದ್ದೆಯಲ್ಲಿ—ಸಮಾಧಿಯಲ್ಲಿ ನಿನ್ನನ್ನು ನುಂಗುವ ವಸ್ತುವು ಯಾವುದು ? ಯೋಚಿಸಿ ಹೇಳು, ಮೈತ್ರೇಯೀ, ಅದರ ಬಗೆಗೆ ನಿನಗೇನೆನಿಸುತ್ತದೆ ?

ಮೈತ್ರೇಯೀ—ಎಚ್ಚೆತ್ತಮೇಲೆ ಯಾವುದೋ ಒಂದು ಗಂಭೀರ ವಸ್ತುವಿನಿಂದ ಬಿಡುಗಡೆ ಹೊಂದಿದುದರ ಅರಿವು ಮೂಡುತ್ತದೆ. ಅಂದರೆ ಗಂಭೀರ ವಸ್ತುವೊಂದು ನಮ್ಮನ್ನು ನುಂಗಿತ್ತು ಎಂಬುದು ಬದ್ಧ.

ಯಾಜ್ಞವಲ್ಕ್ಯ ಮಹರ್ಷಿ—ಕೇಳು ಯೋಗಿನಿ. ನಿನಗೆ ಜಾಗೃತಿ—ಸ್ವಪ್ನ ಸುಷುಪ್ತಿ—ಸಮಾಧಿ ಇವುಗಳು ಕರತಲಾಮಲಕ. ನಿದ್ದೆ ಆವರಿಸಿದಾಗ ಯಾವುದೋ ಗಂಭೀರ ವಸ್ತು ನಮ್ಮನ್ನು ನುಂಗಿದಂತೆ ಜಗತ್ತು ನಮ್ಮ ಪಾಲಿಗೆ ಇಲ್ಲವಾಗುತ್ತದೆ. ಅಲ್ಲಿ ನಾಮ—ರೂಪ—ಕ್ರಿಯಾ ಇವು ಯಾವುವೂ ಇಲ್ಲ. ನಾನು ಎಂಬ ಅಹಂ ಇಲ್ಲವೇ ಇಲ್ಲ. ಈಗ ಹೇಳು, ಆಗಣ ನಿನ್ನ ಅನುಭವ.... ?

ಮೈತ್ರೇಯೀ—ಆನಂದ ಸುಖಾನುಭವ....

ಯಾಜ್ಞವಲ್ಕ್ಯ ಮಹರ್ಷಿ–ಸರಿ, ಆ ಆನಂದ ಸುಖಾನುಭವದಿಂದ ನಾನು ಎಂಬ ತಿಳಿವಳಿಕೆಗೆ ಏನು ಅರ್ಥ ?

ಮೈತ್ರೇಯೀ–ಆನಂದಪೂತ ಮನಸ್ಸೇ ನಾನು ಎಂಬ ವಿಶ್ವಾಸ.

ಯಾಜ್ಞವಲ್ಕ್ಯಮಹರ್ಷಿ–ಸಮಾಧಿಯಲ್ಲಿ ?

ಮೈತ್ರೇಯೀ–ನುಂಗು ಎಂಬುದರ ಕರ್ತೃ ನಾನೇ. ಇಡೀ ಬ್ರಹ್ಮಾಂಡವನ್ನೇ ನುಂಗಿದ ಆನಂದಾನುಭವ. ಸುಖ–ದುಃಖಗಳ ಸೋಂಕು ಇಲ್ಲವೇ ಇಲ್ಲ. ನಾನು ಮತ್ತು ನನ್ನ ಬ್ರಹ್ಮಾನಂದ ಮಾತ್ರವೇ ಅಸ್ತಿತ್ವದಲ್ಲಿ.

ಯಾಜ್ಞವಲ್ಕ್ಯ ಮಹರ್ಷಿ–ಆ ನಾನು ಯಾರು ಎಂದು ಪರ್ಯಾಲೋಚಿಸಿದರೆ ಕಂಡುಬರುವ ಮೊತ್ತ ಆತ್ಮ ಅಥವಾ ಪ್ರಾಣಾತ್ಮ.

ಮೈತ್ರೇಯೀ–ತಿಳಿಯಿತು, ಭಗವನ್.

ಯಾಜ್ಞವಲ್ಕ್ಯ ಮಹರ್ಷಿ–ಈ ಮಂತ್ರದ ಆದೇಶ ಇಷ್ಟೆ. ಮೃತ್ಯುವಿನ ಗಡಿಯನ್ನು ದಾಟಿ ಅಮೃತತ್ವಕ್ಕೆ ಹೆಜ್ಜೆ ಇಡು ಎಂದು. ಮೃತ್ಯುವನ್ನು ದಾಟಿದಮೇಲೆ ಎಂದೆಂದಿಗೂ ಅಮೃತತ್ವವೇ. ಈ ಮಂತ್ರದಲ್ಲಿ ಎಂತಹ ಸತ್ವವಡಗಿದೆ ಯೋಚಿಸಿ ನೋಡು.

ಈ ಮಂತ್ರಾರ್ಥ ಬರಿಯ ಜೊಳ್ಳು. ಯಾರಿಂದಲಾದರೂ ಭಯಂಕರ ಮೃತ್ಯುವನ್ನು ದಾಟಿ ಹೋಗಲು ಸಾಧ್ಯವೇ, ಎಂಬ ಭಾವವು ಎಲ್ಲರಿಗೂ. ಎಂಥೆಂಥಹವರೂ ಮುಗ್ಗರಿಸುವುದು ಇಲ್ಲಿಯೆ. ಬೀಜವು ಬೆಳೆಯಲು ಫಲವೇ ಸಾಧನವಾದರೂ ಬೀಜವು ಬಲಿತಂತೆಲ್ಲಾ ಫಲವು ಸಾಯುತ್ತ ಹೋಗುವುದು. ಹಾಗೆಯೇ ಯಾವುದೊಂದು ಬಲಿತು ಹಣ್ಣಾದಾಗ ಅಂತಿಮ ಘಟ್ಟವನ್ನುಮುಟ್ಟುವುದು ಪ್ರಕೃತಿ ನಿಯಮ. ದೇಹಾತ್ಮಗಳ ವಿಚಾರದಲ್ಲಿಯೂ ಹಾಗೆಯೇ ಆತ್ಮಜ್ಯೋತಿಯು ಸ್ವಯಂ ಪ್ರಕಾಶಿತ ವಸ್ತು. ಅದು ಜೀರ್ಣವಾಗುವುದೂ ಇಲ್ಲ; ಮೃತ್ಯುವಶವಾಗುವುದೂ ಇಲ್ಲ; ಅದಕ್ಕೆ ಯಾವ ಮೂಲವೂ ಇಲ್ಲ. ಅದೇ ಸರ್ವಮೂಲವಾದುದು. ಮಂತ್ರದಲ್ಲಿ ಉದ್ದೇಶಿಸಿರುವ ಅಮೃತತ್ವತವೂ ಅದೇ. ಮೃತ್ಯುವಿನ ಗಡಿಯನ್ನು ದಾಟುವುದೆಂದರೆ

ಅಮೃತದ ಆಸ್ವಾದನವನ್ನು ಕಂಡುಕೊಳ್ಳುವುದು. ಹಾಗೆ ಅಮೃತತ್ವವನ್ನು ಪಡೆದುಕೊಳ್ಳುವುದೆಂದರೆ ಚಕ್ಷುಸ್ ಅಂತರ್ಮುಖವಾದರೆ ಮಾತ್ರಸಾಧ್ಯ. ವಿಷಯ ವಸ್ತುಗಳ ಮಾರ್ಗವನ್ನು ಬಿಟ್ಟರೆ ಜನನ ಮರಣದಿಂದ ಪಾರಾಗಿ ಅಮೃತತ್ವವನ್ನು ಪಡೆಯಬಹುದು. ವಿಷಯ ವಸ್ತುಗಳನ್ನು ಸರ್ವತ್ರ ವರ್ಜಿಸು ಎನ್ನಲು ಕಾರಣ ಒಮ್ಮೆ ನಾವು ಸ್ವಲ್ಪ ಅನುಭವಿಸಿದರೂ ಅದರ ಗುಲಾಮರಾಗಿ ಬಿಡುವುದು ಖಂಡಿತ. ಅದಕ್ಕೆ ಸಂಬಂಧಿಸಿದ ಸಂಸ್ಕಾರ ಕ್ಷಣಕ್ಷಣಕ್ಕೂ ವೃದ್ಧಿಸುತ್ತ ನಮ್ಮನ್ನು ಅಗಾಧವಾದ ಆಳಕ್ಕೆ ಮುಳುಗಿಸುತ್ತಲೇ ಇರುತ್ತದೆ. ಅದರಿಂದ ದೊರೆಯುವ ಕ್ಷಣಿಕ ಸುಖಕ್ಕಾಗಿ ಬೇಕಾದಷ್ಟು ದುಃಖವನ್ನು ಅನುಭವಿಸಲು ಸಿದ್ಧರಾಗುತ್ತೇವೆ. ಆದ್ದರಿಂದ ಹೆಜ್ಜೆ ಮುಂದಿಡುವ ಮುನ್ನ ವಿಚಾರ ವಿಮರ್ಶೆಮಾಡಿ ಸುಖ-ದುಃಖ, ಜನನ-ಮರಣಗಳ ವೈತರಣಿಯನ್ನು ದಾಟಿ ಅಮೃತತ್ವದ ಮಾರ್ಗವನ್ನು ಹಿಡಿಯುವವನೇ ಪ್ರಾಜ್ಞ. ಇಂದ್ರಿಯಗಳಿಗೆ ವಿಷಯ ವಸ್ತುಗಳ ವಾಸನೆಯನ್ನು ಹಿಡಿದು ಮುನ್ನುಗ್ಗುವುದು ಸ್ವಾಭಾವಿಕವಾದ್ದರಿಂದ ಅವುಗಳ ಮೇಲಿನ ಹತೋಟಿ ಅಂಕುಶದಂತಿರಬೇಕು. ಎಲ್ಲರ ಹೃದಯಾಂತರಾಳದಲ್ಲಿಯೂ ಪರಮಾತ್ಮನು ನೆಲಸಿರುವನು. ಮೊದಲು ಅವನು ಅನಂತರ ನಾನು ಎನಿಸಿಕೊಳ್ಳುವ ಈ ಜೀವಾತ್ಮ. ಅದರ ಮುಂದೆ ಇರುವ ಈ ದೃಶ್ಯ ಪ್ರಪಂಚ. ನಾವು ಮುಮ್ಮೊಗವಾಗಿ ದೃಶ್ಯಪ್ರಪಂಚವನ್ನು ನೋಡುವ ಬದಲು ಹಿಮ್ಮೊಗವಾಗಿ ನೋಡುತ್ತ ಆ ಪರಮಾತ್ಮನಲ್ಲಿ ಈ ಜೀವಾತ್ಮನನ್ನು ಐಕ್ಯಗೊಳಿಸುವುದೇ ಅಮೃತತ್ವ. ಅದೇ ಮಾನಸಿಕವಾದ ಮತ್ತು ಬೌದ್ಧಿಕವಾದ ಪ್ರಾಜ್ಞತೆ.

ಮೈತ್ರೇಯೀ—ಈಗ ನನಗೆ ಸ್ಪಷ್ಟವಾಗಿ ಹೊಳೆಯುತ್ತಿರುವುದು ಅದೇ, ಅಮೃತತ್ವ ಅಥವಾ ಆತ್ಮಜ್ಯೋತಿ. ಜರಾಮೃತ್ಯುಗಳನ್ನು ದಾಟುವುದೆಂದರೆ, ಅಮೃತತ್ವಸಾಧನವಾದ ವೈರಾಗ್ಯಜೀವನ ಅಥವಾ ನಿಷ್ಕಾಮ ಕರ್ಮವನ್ನು ಕೈಗೊಳ್ಳುವುದು.

ಯಾಜ್ಞವಲ್ಕ್ಯ ಮಹರ್ಷಿ ಪ್ರಸನ್ನಚಿತ್ತನಾಗಿ—ಸರಿಯಾಗಿ ಹೇಳಿದೆ.

ಮೈತ್ರೇಯೀ—ದೇವಾ, ಇನ್ನೊಂದು ಪ್ರಶ್ನೆ.

ಯಾಜ್ಞವಲ್ಕ್ಯ ಮಹರ್ಷಿ–ಏನು ಶುಭೆ ?

ಮೈತ್ರೇಯೀ–ನೀವು ಪ್ರವಚನ ಮಾಡುವಾಗಲೆಲ್ಲಾ ಈ ವಿಶ್ವಪ್ರಪಂಚ ನ್ನು ಎಂದೂ ಬೃಹತ್ತಾಗಿ ಗಣಿಸಿದಂತೆ ತೋರಲಿಲ್ಲ. ಈ ವಿಚಾರದಲ್ಲಿ ನ್ನ ಅಭಿಪ್ರಾಯವೇನು ?

ಯಾಜ್ಞವಲ್ಕ್ಯ ಮಹರ್ಷಿಯು ನಸುನಕ್ಕು–ಅದರ ರೀತಿಯು ಹೀಗೆ, ಳ ಸ್ವಲ್ಪದರಲ್ಲೇ ಹೇಳಿ ಮುಗಿಸಬಹುದು. ನಾನು ಈ ಜಗತ್ತಿನಿಂದ ತ್ಯೇಕವಾದ ವಸ್ತು ಎಂದು ತಿಳಿದುಕೊಂಡರೆ ಅದು ದೊಡ್ಡದೆನಿಸುವುದು ಮಂಜಸ ; ಇಲ್ಲದಿದ್ದಲ್ಲಿ....?

ಮೈತ್ರೇಯಿ–ಇದು ಸ್ವಲ್ಪ ಯೋಚಿಸಬೇಕಾದ ವಿಚಾರ.

ಯಾಜ್ಞವಲ್ಕ್ಯ ಮಹರ್ಷಿ–ನಾವು ಜಗತ್ತಿನ ಅಂಗವಾದರೆ ನಾನು ಬುದು ಗಣನೆಗೆ ಬರುವುದೇ ಇಲ್ಲ.

ಮೈತ್ರೇಯೀ–ವಾಸ್ತವ್ಯ, ಉಪಾಸನೆಗೆ ತಕ್ಕಂತಹ ಫಲ.

ಯಾಜ್ಞವಲ್ಕ್ಯ ಮಹರ್ಷಿ–ಹೌದು, ಇದು ಸರ್ವತ್ರ ತಿಳಿದುಕೊಂಡಿರ ಕಾದ ಅಂಶ.

ಆ ಮುಹೂರ್ತದಲ್ಲಿ ಆನಂದಾಭಿಶೀಲತೆಯಿಂದ ತಲೆದೂಗುವನು ಯಾಜ್ಞವಲ್ಕ್ಯ ಮಹರ್ಷಿ.

ಉಚಾ್ಛ್ವಸ ೧

೧

ಯಾಜ್ಞವಲ್ಕ್ಯ ಮಹರ್ಷಿಯ ದಿನಚರಿ ಯಥಾಪ್ರಕಾರ ಕ್ರಮ
ವತ್ತಾಗಿ ಮುಗಿದಾಗಲೇ ಕಾತ್ಯಾಯಿನಿಯು ಕೈಸಾಲೆಯನ್ನು ಪ್ರವೇಶಿ
ದಳು, ಮೈಯಲ್ಲಿ ಲವಲವಿಕೆಯಿತ್ತು ; ಮನದಲ್ಲಿ ಉತ್ಸಾಹವಿತ್ತು.

ಯಾಜ್ಞವಲ್ಕ್ಯ ಮಹರ್ಷಿ–ದೇವಿ, ನಿನಗೆ ಯಾವ ಮಂತ್ರವನ್ನು
ಉಪದೇಶಿಸಲಿ ?

ಕಾತ್ಯಾಯಿನಿ–ನೀವು ಯಾವುದನ್ನು ಸಂಭಾವಿಸುವಿರೋ ಅದನ್ನೇ

ಯಾಜ್ಞವಲ್ಕ್ಯ ಮಹರ್ಷಿ–ಕೇಳು, ವೇದಾಂತವನ್ನು ಮನನಮಾಡುವ
ದರಿಂದ, ಕೇಳುವುದರಿಂದ ತಿಳಿದುಕೊಳ್ಳುವುದರಿಂದ ನಮಗೆ ದೊರಕುವ
ಅತ್ಯಂತ ಸಾರಯುಕ್ತವಾದ ವಸ್ತುವೇ ಪ್ರಣವ ಅಥವಾ ಓಂಕಾರ. ಇದೇ
ಎಲ್ಲಾ ಮಂತ್ರಕ್ಕೂ ಮೂಲ ಅಥವಾ ತಾಯಿ. ಇದರಿಂದ ಉಳಿದವುಗಳೆಲ್ಲ
ಇದರಿಂದಲೇ ಸಗುಣಬ್ರಹ್ಮನಿಗೆ ಸೇತು ; ಇದರಿಂದಲೇ ನಾಮ-ರೂಪಗಳು
ಇದರಿಂದಲೇ ತಪಸ್ಸು ; ಇದರಿಂದಲೇ ಸಾಧನೆ.

ಕಾತ್ಯಾಯಿನೀ, ಓಂಕಾರದಲ್ಲಿ ನೆಲಸಿರುವುದು ಬ್ರಹ್ಮ. ಅವನು ಸರ್ವ

ವ್ಯಾಪಿಯೂ ಹೌದು ; ಸರ್ವ ಸಾಕ್ಷಿಯೂ ಹೌದು. ಅವನು ಎಲ್ಲರ ಹೃದಯಾಂತರಾಳದಲ್ಲಿ ನೆಲೆಸಿರುವನು. ಸಾಕ್ಷಾತ್ಕರಿಸಬೇಕಾದರೆ ನಮ್ಮಲ್ಲಿಯ ಅಡೆತಡೆಗಳನ್ನೆಲ್ಲಾ ಮೊದಲು ಕಿತ್ತೊಗೆಯಬೇಕು. ಅದಕ್ಕೆ ಅತ್ಯಂತ ದೃಢ ಪ್ರಯತ್ನ ಮತ್ತು ದೃಢ ಮನಸ್ಸುಗಳ ಧ್ರುವೀಕರಣ ಮಾಡಿಕೊಳ್ಳಬೇಕು. ಬುದ್ಧಿಶಕ್ತಿ ಹರಿತವಾಗಿಯೂ ಪರಿಶುದ್ಧವಾಗಿಯೂ ಇರಬೇಕು. ಅಂತಃಪ್ರಜ್ಞೆಯಲ್ಲಿ ಸೂಕ್ಷ್ಮತೆಯು ಬಲಿತು ಮನೋವ್ಯಾಪಿಯಾಗಬೇಕು. ಇಂತಹ ವಿಚಾರಪ್ರಜ್ಞೆ ಅರಳಿದರೆ ಪರಬ್ರಹ್ಮತತ್ವವನ್ನು ಕೂಲಂಕಷವಾಗಿ ಅರಿತುಕೊಳ್ಳಬಹುದು. ಹಾಗೆ ಯಾವ ದೃಢಪ್ರಯತ್ನವನ್ನೂ ಮಾಡದೆಯೇ ನಮಗಿರುವ ಅಡೆತಡೆಗಳನ್ನೆಲ್ಲಾ ನಿವಾರಿಸು ಎಂದು ಪ್ರಾರ್ಥಿಸುವುದರಿಂದ ಏನೂ ಆಗುದಿವುಲ್ಲ. ತಾನು ಮಾಡುವುದನ್ನು ಮಾಡಿಯೂ ಸಹ ಯಶಸ್ವಿಯಾಗಬೇಕಾದರೆ ಭಗವಂತನ ಕೃಪೆ ಇರಬೇಕು ಎಂಬುದನ್ನು ಮರೆಯಲೂ ಬಾರದು.

ಕೇಳು, ಶುಭೆ ! ಬುದ್ಧಿಶಕ್ತಿ ಹೇಗೆ ಹರಿತವಾಗಿರಬೇಕೋ ಹಾಗೆಯೇ ಶರೀರವು ಆರೋಗ್ಯವಾಗಿಯೂ ಬಲವಾಗಿಯೂ ಇರಬೇಕು. ದಿನ ಬೆಳಗಾದರೆ ರೋಗ ರುಜಿನಗಳು ಕಾಡುವುದಾದರೆ ಯಾವ ಸಾಧನೆ ಮಾಡುವುದಕ್ಕೂ ಆಗುವುದಿಲ್ಲ. ಅಧ್ಯಯನ-ಧ್ಯಾನ-ತಪಸ್ಸು ಇವುಗಳಿಗೆ ಎಳ್ಳು ನೀರು ಬಿಟ್ಟು ರೋಗಬಾಧೆಯನ್ನು ಕುರಿತು ಚಿಂತಿಸುವುದೇ ಆಗುತ್ತದೆ. ಆದ್ದರಿಂದ ದೇಹಾರೋಗ್ಯವು ಮಾನಸಿಕ ಆರೋಗ್ಯದಷ್ಟೇ ಪ್ರಾಮುಖ್ಯವಾದುದು. ಆದಕಾರಣವೇ ನಾಯಮಾತ್ಮಾ ಬಲಹೀನೇನ ಲಭ್ಯಃ ಎನ್ನುತ್ತದೆ ವೇದಾಂತ.

ಕಾತ್ಯಾಯಿನಿ, ಬುದ್ಧಿಶಕ್ತಿಯು ಹೇಗೆ ಪರಿಶುದ್ಧವಾಗಿಯೂ ಹರಿತವಾಗಿಯೂ ಇರಬೇಕೋ ಹಾಗೆಯೇ ನಾಲಿಗೆಯೂ ಸಹ. ಅದರಿಂದ ಒಳ್ಳೆಯ ಮಾತುಗಳೇ ಹುಟ್ಟಬೇಕು ; ಅಂದರೆ ಕೇಳುವವರ ಕಿವಿಗಳು ತಣಿಯುವಂತಿರಬೇಕು ; ಇತರರ ಸಂಶಯ ಕಳೆಯಬೇಕು ; ದುಃಖ ತಗ್ಗಬೇಕು ; ಭರವಸೆ ಹುಟ್ಟಬೇಕು ; ತಿಳಿವಳಿಕೆ ಮೂಡಬೇಕು. ಅಂಥ ಸವಿ ಮಾತುಗಳು ನಾಲಿಗೆಗೆ ಭೂಷಣವಾದುವು. ಮಾತಿನಿಂದಲೇ ವ್ಯವಹಾರ ; ಮಾತಿನಿಂದಲೇ ಶ್ರೀ

ಯಸ್ಸು. ಮಾತಿನಿಂದಲೇ ತಿಳಿವಳಿಕೆ; ಮಾತಿನಿಂದಲೇ ವಿದ್ಯೆ-ಬುದ್ಧಿ;
ನಿಂದಲೇ ವಿಚಾರ ವಿನಿಮಯ ; ಮಾತೇ ಬ್ರಹ್ಮ. ಶುದ್ಧವಾಗಿ ವಿನ
ರ್ಶಕವಾಗಿ ಮಾತನಾಡುವುದು ಒಂದು ಕಲೆ. ಅದನ್ನು ಪ್ರಯತ್ನ
ಕವಾಗಿ ಸಂಪಾದಿಸಬೇಕು. ಅದು ಜನ್ಮಾಂತರ ಯೋಗದಿಂದ ಬರು
ಕೇವಲ ಕೆಲವರಿಗೆ ಮಾತ್ರ. ನಮ್ಮ ಚಿತ್ತ ಶುದ್ಧಿ ಎಷ್ಟಿದೆಯೋ, ಜೀವನ
ಎಷ್ಟಿದೆಯೋ ಅಷ್ಟೇ ಮಾತು ಶುದ್ಧವಾಗಿರುತ್ತದೆ ಎಂಬುದು ಶತಸಿ
ನಾವು ಏನನ್ನು ಉಣ್ಣುತ್ತೇವೋ ಅದನ್ನೇ ತೇಗುವುದು ಸಹಜ.

ಕೇಳು ಶುಭೆ, ನುಡಿಯಂತೆಯೇ ಶ್ರವಣವೂ ಶುದ್ಧವಾಗಿರಬೆ
ಯಾವುದು ಶ್ರವಣ ಯೋಗ್ಯವೋ ಅದನ್ನು ಮಾತ್ರ ಶ್ರವಣ ಮಾಡಬೆ
ಪೌರಾಣಿಕ-ವೇದಾಂತಿಕ-ಆಧ್ಯಾತ್ಮಿಕ ಇಂತಿಂಥ ಮಹೋನ್ನತ ವಿ
ಗಳನ್ನು ನಾವು ಸ್ವತಃ ತಿಳಿದುಕೊಳ್ಳಲಾರೆವು. ತಿಳಿವಳಿಕೆ ಇಲ್ಲದೆ ಉತ್ತ
ಸಂಸ್ಕಾರ ಪಡೆದುಕೊಳ್ಳಲಾಗುವುದಿಲ್ಲ. ಕೇಳಿ ತಿಳಿದ ವಿಚಾರಗಳು ಎ
ಇಂದ್ರಿಯಗಳಿಗೆಲ್ಲ ವಿಕೇಂದ್ರೀಕರಣವಾಗುವುದರಿಂದ ಶ್ರವಣಶು
ಪ್ರಾಮುಖ್ಯತೆ ಕೊಡಬೇಕು. ಶ್ರವಣಶುದ್ಧಿಯಿಂದ ಇಂದ್ರಿಯಗಳ ದ್ಧ
ಕರಣವಾಗಲು ಅತ್ಯಂತ ಸಹಕಾರಿ.

ಕಾತ್ಯಾಯಿನಿ, ಈ ಶರೀರ ಎಂಬುದು ಒಂದು ದಿವ್ಯವಾದ ಬ್ರ
ಕೋಶ. ಇದರ ಅಂತರ್ಯದಲ್ಲಿ ಬ್ರಹ್ಮ ಸುಪ್ತವಾಗಿರುತ್ತಾನೆ. ನ
ಖಡ್ಗವನ್ನು ಒರೆಯಲ್ಲಿ ಹುದುಗಿಸಿಟ್ಟಂತೆ. ಖಡ್ಗವನ್ನು ಸೆಳೆದರೆ ಮ
ಅದು ಹೊರಬರುತ್ತದೆ. ಹಾಗೆಯೇ ನಾವು ಓಂಕಾರೋಪಾಸನೆ ಮಾಡಿ
ಬ್ರಹ್ಮಖಡ್ಗದ ಸೆಳವು ಮೂಡಬೇಕಾದರೆ. ಉಪಾಸನೆಯಿಂದ ಅಂತ
ದಲ್ಲಿ ಅಂತಃಶಕ್ತಿ ಜಾಗ್ರತವಾಗಿ ಚಿಗುರೊಡೆಯುತ್ತದೆ. ಅಂದರೆ ಜೀ
ಶುದ್ಧಿಗೆ ಅದೇ ನಿರ್ಮಲವಾದ ತಳಹದಿ.

ಶುಭೆ, ಪರಬ್ರಹ್ಮವಸ್ತು ಸರ್ವವ್ಯಾಪಿಯಾದರೂ ಅದನ್ನು ಕಾಣದ
ಮಾಡಿರುವುದು ಲೌಕಿಕ ವಾಸನೆ. ಅಂದರೆ ಅದರ ಮೇಲೆ ಸ್ವತಃ ನಾ
ಮುಸುಗನ್ನು ಹಾಕಿ ಮುಚ್ಚಿಟ್ಟಿದ್ದೇವೆ ಅಜ್ಞಾನದ ಮೋಡಿಯಿಂ

ಅವನನ್ನು ಅರ್ಥಾತ್ ಕಾಣಬೇಕೆಂದರೆ ನಮ್ಮ ಲೌಕಿಕ ಜ್ಞಾನದ ದಟ್ಟ ತೆರೆ ಸರಿಯಬೇಕು. ಅಂದರೆ ಕೇವಲ ವೈಷಯಿಕವಾದ ಕೀಳರಿವಿನ ದೃಷ್ಟಿ ಹರಿದರೆ ಮನಃಕುಂಡದ ಪಾಚಿ ಸರಿದು ಪರಬ್ರಹ್ಮವಸ್ತು ವ್ಯಕ್ತ ವಾಗುತ್ತದೆ.

ಕಾತ್ಯಾಯಿನೀ–ತಿಳಿಯಿತು ಭಗವನ್.

ಯಾಜ್ಞವಲ್ಕ್ಯ ಮಹರ್ಷಿ–ಈಗ ಕೇಳು, ಪರಬ್ರಹ್ಮನನ್ನು ಉಪಾಸನೆ ಮಾಡುವುದು ಬಾಹ್ಯಾಕಾಶದಲ್ಲಿ ಅಲ್ಲ, ಹೃದಯಾಕಾಶದಲ್ಲಿ. ಪರಬ್ರಹ್ಮ ವಾಸಿಸುವುದು ಇಲ್ಲೇ. ಅವನು ಮನೋಮಯನು, ಅವನು ಅಮೃತನು, ಅವನು ಜರಾಮರಣರಹಿತನು, ಅವನು ಹಿರಣ್ಮಯನು. ಅಂದರೆ ಅವನು ತನ್ನ ಪ್ರಭೆಯನ್ನು ನಮ್ಮ ಮನಸ್ಸು ಬುದ್ಧಿ ಪ್ರಾಣ ಇವುಗಳ ಮೇಲೆ ಪ್ರತಿಬಿಂಬಿಸಿ ಮೆರುಗನ್ನು ನೀಡುವನು. ಕಾತ್ಯಾಯಿನಿ, ಯಾರು ಮುಮುಕ್ಷುವೊ ಯಾರು ಸರ್ವದಾ ಬ್ರಹ್ಮಜ್ಞಾನಕ್ಕಾಗಿ ಹಂಬಲಿಸುವರೋ ಅವರು ಯೋಗಾಭ್ಯಾಸದ ಬಲದಿಂದ ಅಡೆತಡೆಗಳನ್ನು ಕಡಿದುಕೊಂಡು ಪರಬ್ರಹ್ಮನಲ್ಲಿ ಒಂದಾಗುವರು. ಮುಕ್ಕಾಲು ಮೂರುವೀಸೆ ಮಂದಿ ಬುದ್ಧಿಜೀವಿಗಳಾಗಿ ವೈಷಯಿಕ ವಿಷಯಗಳಲ್ಲೇ ಮುಳುಗಿ ಪರಬ್ರಹ್ಮನನ್ನು ಸಂಪೂರ್ಣವಾಗಿ ಮರೆತುಬಿಡುತ್ತಾರೆ. ಯೋಗಿಯಾದರೋ ಮನಸ್ಸನ್ನು ಸಂಪೂರ್ಣ ಪಳಗಿಸಿ ಅತೀಂದ್ರಿಯ ಪ್ರಜ್ಞೆಯನ್ನು ಬೆಳೆಸಿಕೊಂಡು ಈ ಸ್ಥೂಲ ಸೂಕ್ಷ್ಮ ದೇಹದ ಅಭಿಮಾನವನ್ನು ತೊರೆದು ಪರಬ್ರಹ್ಮನಲ್ಲಿ ವಿಲೀನವಾಗುವನು. ಆಗ ಅವನ ಅಲ್ಪತ್ವ ಅಳಿದು ಭೂಮತ್ವ ಉಂಟಾಗು ವುದು. ಅಂದರೆ ಜಲಬಿಂದುವೊಂದು ಸಾಗರದಲ್ಲಿ ಬಿದ್ದು ಸಾಗರವೇ ಆಗುವಂತೆ. ಅಲ್ಪತೆ ಅಳಿಯಿತೆಂದರೆ ಭೂಮತ್ವ ತಾನೇತಾನಾಗಿ ಬರು ತ್ತದೆ. ಅಂದರೆ ಅವನು ಇಂದ್ರಿಯಗಳ ದಾಸನಲ್ಲ. ಅಂಕುಶ ಹಿಡಿದ ಯಜಮಾನ. ಅವನ ಆಜ್ಞೆಯಂತೆಯೇ ಇಂದ್ರಿಯಗಳ ವ್ಯಾಪಾರ. ಸರ್ವತ್ರ ಸದಾ ಕರ್ಮೇಂದ್ರಿಯ ಜ್ಞಾನೇಂದ್ರಿಯಗಳು ಅವನ ಹತೋಟಿ ಯಲ್ಲಿರುವುದರಿಂದ ಅವನು ಎಲ್ಲಿಯೂ ಯಾವ ಕಾರಣಕ್ಕೂ ಅಂಜುವ ಪ್ರಮೇಯವಿಲ್ಲ. ಅವನು ವಿಜ್ಞಾನಕ್ಕೆ ಅಧಿಪತಿ. ತಪಸ್ಸಿಗೆ ಕರ್ತೃ.

ಕಾತ್ಯಾಯಿನೀ, ಕೇಳು. ಬ್ರಹ್ಮಜ್ಞಾನಿಯು ಯಾವಾಗ ತನ್ನ ಶರೀರವನ್ನು ಅತಿಕ್ರಮಿಸುವನೋ ಆಗ ಅವನ ಶರೀರವೇ ಸೂಕ್ಷ್ಮವಾದ ಆಕಾಶವಾಗುತ್ತದೆ; ಅಂದರೆ ಅವನು ಆಕಾಶದಂತೆಯೇ ಸರ್ವವ್ಯಾಪಿಯಾಗುವನು. ಈ ವಿಶ್ವಜಗತ್ತಿನಲ್ಲಿ ಬ್ರಹ್ಮ ಒಂದೇ ಪರಮ ಸತ್ಯ. ಉಳಿದವುಗಳೆಲ್ಲಾ ಮಿಥ್ಯ. ಉಪಾಸಕನು ನಿಜವಾದ ಸತ್ಯೋಪಾಸನೆಯಲ್ಲಿ ನೆಲೆನಿಂತು ಇಂದ್ರಿಯಗಳಿಗೆ ಅತೀತವಾದ ಬ್ರಹ್ಮಜ್ಞಾನವನ್ನು ಪಡೆದುಕೊಳ್ಳುವನು. ಅವನು ಬಾಹ್ಯಾಡಂಬರಗಳಿಗೂ ಬಾಹ್ಯ ವೇದನೆಗಳಿಗೂ ದೂರನಾಗಿ ಅನಂತ ಶಾಂತಿಯನ್ನು ಹೊಂದುತ್ತಾನೆ. ದೃಶ್ಯ ಪ್ರಪಂಚದಲ್ಲಿ ಆವ ಬಗೆಯ ಮಹಾ ಪ್ರಳಯವೇ ಆಗಲೀ ಅಲ್ಲೋಲ ಕಲ್ಲೋಲವೇ ಆಗಲೀ ಅವು ಅವನ ಮೇಲೆ ಯಾವ ಪರಿಣಾಮವನ್ನೂ ಉಂಟುಮಾಡುವುದಿಲ್ಲ. ಅವನು ಹೃದಯಾಕಾಶದ ಪರಬ್ರಹ್ಮನನ್ನೂ ಬಾಹ್ಯಾಕಾಶದ ಪರಬ್ರಹ್ಮನನ್ನೂ ಒಂದಾಗಿ ಅರಿತವನು. ಅಂದರೆ ಅವನು ನಿಶ್ಚಲ. ಅವನು ಪ್ರಬುದ್ಧ. ಅವನು ಬ್ರಹ್ಮಜ್ಞಾನಿ.

ಕಾತ್ಯಾಯಿನೀ ಇನ್ನೂ ಕೇಳು, ನಾವು ಜೀವನೀಯ ಯಾವ ಯಾವ ಕಾರ್ಯದಲ್ಲಿ ನಿರತರಾದರೂ ಎರಡು ಅಂಶಗಳನ್ನು ಸರ್ವತ್ರ ಸದಾ ಗಮನದಲ್ಲಿಡಬೇಕು. ಒಂದು ಸ್ವಾಧ್ಯಾಯ; ಇನ್ನೊಂದು ಪ್ರವಚನ. ಮೊದಲನೆಯದು ಸ್ವತಃ ವೇದಾಧ್ಯಯನ ಮಾಡುವುದು ಎಂದಾದರೆ ಎರಡನೆಯದು ಕಲಿತುದನ್ನು ಇತರರಿಗೂ ಹೇಳಿಕೊಡುವುದು ಎಂದರ್ಥ. ಇವೆರಡೂ ಜೀವನದಲ್ಲಿ ಪ್ರತಿಯೊಬ್ಬರಿಗೂ ಅತೀ ಪ್ರಾಮುಖ್ಯವಾದ ಅಂಶ. ಇದನ್ನು ಪ್ರತಿಯೊಬ್ಬರೂ ಮನಗೊಂಡರೆ ಜ್ಞಾನವು ಎಂದೂ ನಷ್ಟವಾಗುವುದಿಲ್ಲ. ಕಾತ್ಯಾಯಿನೀ, ಕಲಿಕೆ ಎಂಬುದು ಅಲ್ಪಕಾಲದ ವಿಚಾರವಲ್ಲ; ಜೀವನ ಪರ್ಯಂತ ಕಲಿತರೂ ವಿಜ್ಞಾನ ಮುಗಿಯುವುದಿಲ್ಲ. ಕಲಿತಷ್ಟೂ ಸಾಲದು; ಮತ್ತೂ ಮತ್ತೂ ಕಲಿಯುತ್ತಲೇ ಇರಬೇಕು. ಜ್ಞಾನಕ್ಕೆ ಎಲ್ಲೆ ಎಂಬುದಿಲ್ಲ. ನಾನು ಎಲ್ಲವನ್ನೂ ಕಲಿತುಕೊಂಡೆ ಎಂದು ಯಾರೂ ಧೈರ್ಯವಾಗಿ ಹೇಳಲಾರರು. ಕಲಿತಷ್ಟೂ ಇರುತ್ತದೆ ವಿದ್ಯಾರ್ಜನೆ. ಉಪನಿಷತ್ತಿನಲ್ಲಿಅಧ್ಯಯನ ನಡೆಸಿದಷ್ಟೂ ಹೊಸ ಹೊಸ ಭಾವನೆಗಳು ಕಾಣಿಸುತ್ತವೆಯೇ ಹೊರತು

ಹಳತಾಗುವುದಿಲ್ಲ. ವೇದಾಂತ ವಿದ್ಯೆ ಒಬ್ಬರಿಂದ ಒಬ್ಬರಿಗೆ ಅನೂಚಾನ ವಾಗಿ ಹರಿಯುತ್ತಿದ್ದರೇನೇ ಸಂವೃದ್ಧಿ. ವೇದಾಂತವನ್ನು ಮತ್ತೆ ಮತ್ತೆ ಮೇಲಿಂದ ಮೇಲೆ ಚರ್ವಿತಚರ್ವಣಗೊಳಿಸುವುದರಿಂದ ಆದ್ಯಂತವಾಗಿ ಮತ್ತು ಕೂಲಂಕಶವಾಗಿ ಅರಿತುಕೊಳ್ಳುವುದಕ್ಕೆ ಒಳ್ಳೆಯ ಅವಕಾಶವು ದೊರೆಯುತ್ತದೆ. ಯಾರಾದರೂ ವಿಚಾರಶೀಲರು ವೇದಾಂತವನ್ನು ಕುರಿತು ಯಾವ ಪ್ರಶ್ನೆಯನ್ನು ಹಾಕಿದರೂ ತಟ್ಟನೆ ಉತ್ತರಿಸುವಷ್ಟು ಸಿದ್ಧತೆ ನಮ್ಮಲ್ಲಿರಬೇಕು. ಅಂದರೆ ಏನನ್ನಾದರೂ ಹೇಳಿಬಿಡುವುದು ಎಂದರ್ಥವಲ್ಲ. ತಿಳಿದುದನ್ನು ಒರೆಗೆ ಹಚ್ಚಿ ಸಂಸ್ಕರಿಸಿ ಹೇಳುವಷ್ಟು ಬುದ್ಧಿವಂತಿಕೆ ನಮ್ಮಲ್ಲಿರಬೇಕು. ಶಿಷ್ಯಗಣರು ಸರಿಯಾಗಿ ತಿಳಿದುಕೊಂಡ ರೆಂದರೆ ನಮಗೂ ಸರಿಯಾಗಿ ತಿಳಿದಿದೆ ಎಂದರ್ಥ. ಶಿಷ್ಯರ ಆರ್ಜನೆಯೇ ಅದಕ್ಕೆ ಸರಿಯಾದ ಸಾಕ್ಷಿ.

ಕಾತ್ಯಾಯಿನೀ, ಯಾರೇ ಆದರೂ ಸರ್ವತ್ರ ಸದಾ ವೇದಾಂತ ಜೀವನದಲ್ಲಿಯೇ ಮುಳುಗಿರುವುದು ಬಹಳ ಮಟ್ಟಿಗೆ ಸಾಧ್ಯವಿಲ್ಲ. ಸ್ವಂತಿಕ ವಾದ ಕೆಲಸ ಕಾರ್ಯಗಳು ಎಲ್ಲರಿಗೂ ಇದ್ದೇ ಇರುತ್ತವೆ; ಅವನ್ನು ತಮ್ಮ ಕೈಲಿ ಸಾಧ್ಯವಾದಷ್ಟು ಮಾಡಿಕೊಳ್ಳದೆ ಹೋದರೆ ಹೊಟ್ಟೆಬಟ್ಟೆಗೆ ಗತಿ ಯಿಲ್ಲದೆ ಹೋಗುತ್ತದೆ. ಹಾಗೆ ಸರ್ವಸ್ವವನ್ನೂ ತೊರೆದು ಸದಾಕಾಲವೂ ವೇದಾಂತವನ್ನೇ ಮರೆಹೋಗುತ್ತೇವೆ ಎನ್ನುವವರು ಕೇವಲ ಕೆಲವೇ ಮಂದಿ; ಅಂತಹವರಿಗೆ ಕೌಟುಂಬಿಕವಾದ ಯಾವ ಯೋಚನೆಯೂ ಇರು ವುದಿಲ್ಲ. ಒಂದು ವೇಳೆ ಇದ್ದರೂ ಅದರ ಹೊಣೆಯನ್ನು ಸರ್ವತ್ರ ಸದಾ ಹೊರುವವರು ಇನ್ನಾರಾದರೂ ಇರುತ್ತಾರೆ ಆದರೂ, ಗೃಹಸ್ಥರು ತಮ್ಮ ಕೆಲಸದೊಂದಿಗೆ ಮತ್ತು ಕೌಟುಂಬಿಕ ಹೊಣೆಗಾರಿಕೆಯೊಂದಿಗೆ ದೃಢ ಮನಸ್ಸು ಮಾಡಿದರೆ ಅಧ್ಯಯನ–ಪ್ರವಚನ ಎರಡನ್ನೂ ಗಂಭೀರವಾಗಿ ನಿರ್ವಹಿಸುವುದು ಸಾಧ್ಯ.

ದೇವೀ, ಯಾವುದು ಅಸತ್ಯ ಎಂಬುದಾಗಿ ಮನಗಾಣುತ್ತೇವೋ ಅದನ್ನು ಖಂಡಿತ ನುಡಿಯಬಾರದು. ಅದರಿಂದ ಎಂತಹ ಕಠಿಣ ಪ್ರಸಂಗಕ್ಕೆ ಈಡಾದರೂ ಸರಿಯೆ, ಅನೃತವನ್ನು ನುಡಿಯಲೇಬಾರದು. ಒಮ್ಮೆ

ಒಂದು ಸಲ ಒಂದು ಸುಳ್ಳನ್ನು ಹೇಳಿದರೆ ಅಥವಾ ಸುಳ್ಳನ್ನು ಹೇಳಬೇಕಾದರೆ, ಅದರಿಂದ ಬಿಡಿಸಿಕೊಳ್ಳುವುದಕ್ಕೆ ಸುಳ್ಳಿನ ಕಂತೆಯನ್ನೇ ಕಟ್ಟಬೇಕಾಗುತ್ತದೆ. ಆದ್ದರಿಂದ ಅಂತಹ ಪ್ರಸಂಗಕ್ಕೆ ಅವಕಾಶ ಕೊಡಲೇಬಾರದು. ಗುತ್ತದೆ. ಒಂದು ಪಕ್ಷ ಸತ್ಯ ಹೇಳುವುದರಲ್ಲಿ ಕಹಿ ಪ್ರಸಂಗ ಉಂಟಾದರೂ ಆ ಕಹಿಭಾವನೆ ಶಾಶ್ವತವಲ್ಲ. ಜೀವನಕ್ಕೆ ಸತ್ಯವೇ ತಳಹದಿ. ಸತ್ಯಕ್ಕೆ ಎಂದಿದ್ದರೂ ಜಯ ಲಭಿಸುವುದರಿಂದ ಕಳವಳ ಪಡುವುದಾಗಲೀ ಪರಿತಪಿಸುವುದಾಗಲೀ ಬೇಕಿಲ್ಲ. ಸತ್ಯ ಎಂದಿದ್ದರೂ ಸತ್ಯವೇ. ಮಿಥ್ಯ ಎಂದಿದ್ದರೂ ಮಿಥ್ಯವೇ.

ಕಾತ್ಯಾಯಿನೀ, ನಾವು ಶಮದಮಗಳಿಗೆ ಅತೀ ಹೆಚ್ಚಿನ ಪ್ರಾಶಸ್ತ್ಯ ಕೊಡಬೇಕು. ಶಮ ಎಂಬುದು ನಮ್ಮ ಮನಸ್ಸನ್ನು ಸಂಪೂರ್ಣ ಗೆಲ್ಲುವುದು. ಇಂದ್ರಿಯಗಳನ್ನು ಹದಗೊಳಿಸಿದ್ದು, ಮನಸ್ಸನ್ನು ಎಲ್ಲೆಂದರಲ್ಲಿಗೆ ಹರಿಯಬಿಟ್ಟರೆ ಏನು ಸಾಧಿಸಿದ ಹಾಗಾಯಿತು ? ಮನಸ್ಸು ಎಂಬುದು ಒಂದು ತುಂಟ ಕುದುರೆ. ಅದನ್ನು ಎಷ್ಟು ಹದಗೊಳಿಸಿದರೂ ಸಾಲದು. ಅಂದಮೇಲೆ ಸರ್ವತ್ರ ಸದಾ ಮನಸ್ಸಿನ ಮೇಲೆ ಪವಿತ್ರ ಚಿಂತನೆಗಳ ಹೇರನ್ನು ಹೇರಿಯೇ ಇರಬೇಕು. ಅದಕ್ಕೆ ಅತ್ತಿತ್ತ ಹರಿದಾಡಲು ಬಿಡುವೆಂಬುದು ಲವಲೇಶವೂ ಇರಬಾರದು. ಅಂದರೆ ಮಾತ್ರ ಮನಸ್ಸು ಹತೋಟಿಯಲ್ಲಿರುತ್ತದೆ.

ಕಾತ್ಯಾಯಿನೀ, ದಮ ಎಂದರೆ ಇಂದ್ರಿಯಗಳ ನಿಗ್ರಹ. ಅಂದರೆ ನಮ್ಮಲ್ಲಿ ಮೂಡುವ ಕೋಪತಾಪಾದಿ ವಿಪರೀತಗಳನ್ನು ಹೇಗಿದ್ದರೆ ಹಾಗೆಯೇ ವ್ಯಕ್ತಪಡಿಸಿದರೆ ನಮಗೂ ಮೃಗಗಳಿಗೂ ಏನೇನೂ ವ್ಯತ್ಯಾಸವಿಲ್ಲದೆ ಹೋಗುತ್ತದೆ. ಅವು ಮುಮ್ಮಲ ಮೂಡಿದಾಗ ತಕ್ಷಣವೇ ಅವುಗಳಿಂದ ಮುಂಪರಿಣಾಮವೇನು ಎಂಬುದರ ಕಡೆಗೆ ನಮ್ಮ ಗಮನವನ್ನು ಹರಿಸಿ ವಿಮರ್ಶೆ ಮಾಡಿದನಂತರ ಹೊರಗೆ ಹರಿಯ ಬಿಡಬೇಕು. ಅಥವಾ ಅಲ್ಲೇ ದಮನಗೈಯಬೇಕು. ಅಂದರೆ ಯಾವುದು ಸೂಕ್ತವೋ ಅದಕ್ಕೆ ಪ್ರಾಧಾನ್ಯ. ನಮ್ಮ ಯಜಮಾನಿಕೆ ಸರಿಯಾಗಿಲ್ಲದಿದ್ದರೆ ಅವೇ ನಮ್ಮ

ಬಾಜನಮಾನಗಳಾಗುತ್ತವೆ. ಆದ್ದರಿಂದ ಇಂದ್ರಿಯಗಳು ನಮ್ಮನ್ನು ಆಳಲು ಅವಕಾಶ ಕೊಡಬಾರದು.

ಶುಭೆ ಮಂಗಳಾಂಗಿ. ಜೀವನಧರ್ಮದಲ್ಲಿ ನಾವು ಸಲ್ಲಿಸಲೇಬೇಕಾದ ಋಣ ಪಂಚಕಗಳಿವೆ. ಅವನ್ನು ಋತ ಎನ್ನುವರು. ಯಾರೊಬ್ಬರೂ ಜೀವನಮಾರ್ಗವನ್ನು ಋತದ ಮೂಲಕವೇ ಕೈಗೊಳ್ಳಬೇಕು. ಮೊದಲ ನೆಯದಾಗಿ ವ್ಯಕ್ತಿಯು ಜೀವನಧರ್ಮಕ್ಕನುಗುಣವಾಗಿ ಯಾವ ಯಾವ ಕರ್ತವ್ಯಗಳಿವೆಯೋ ಅವನ್ನು ಕ್ರಮಶಃ ಮಾಡಬೇಕು. ಸಮಷ್ಟಿಯು ಸಮಾಜದ ಪುಷ್ಟೀಕರಣ ವ್ಯಷ್ಟಿಗಳ ಸತ್‌ಪ್ರವೃತ್ತಿಯಿಂದ. ನಾವು ಕೊಡ ಬೇಕಾಗಿರುವುದನ್ನೂ ಮಾಡಬೇಕಾಗಿರುವುದನ್ನೂ ಮೊದಲು ಮುಗಿಸ ಬೇಕು. ನಾವು ಪಡೆಯಬೇಕಾಗಿರುವುದು ಕನಿಷ್ಠ. ನಮ್ಮ ಕೊಡುಗೆ ಯನ್ನು ಸರಿಯಾಗಿ ಕೊಡುತ್ತಿದ್ದೇವೆಯೋ ಎಂಬುದನ್ನು ನಿತ್ಯವೂ ಪ್ರಶ್ನಿಸಿ ಕೊಂಡರೇನೇ ಅದರ ಸತ್ಯಾಂಶದರಿವು. ಪ್ರತಿಯೊಬ್ಬರಿಗೂ ಜೀವನಧರ್ಮ ದಲ್ಲಿ ಪಂಚ ಋಣಗಳಿವೆ ಎಂದು ಆಗಲೇ ಹೇಳಿದೆ. ಇದರಲ್ಲಿ ಮೊದಲ ನೆಯದು ಬ್ರಹ್ಮನಿಗೆ ಸಲ್ಲಿಸಬೇಕಾದ ಋಣ. ಅದನ್ನು ಪ್ರತಿನಿತ್ಯವೂ ಪ್ರಾರ್ಥನೆ-ಧ್ಯಾನ-ಪೂಜೆ ಇವುಗಳ ಮೂಲಕ ಸಲ್ಲಿಸತಕ್ಕದ್ದು. ಎರಡನೆಯ ಋಣ ಮುನಿಜನಗಳಿಗೆ ಸಲ್ಲತಕ್ಕದ್ದು. ಅದು ಅವರು ನಮಗೋಸ್ಕರ ಬಿಟ್ಟುಹೋಗಿರುವ ಜ್ಞಾನರಾಶಿಗಾಗಿ. ಅದನ್ನು ತಿಳಿದು ಮನನ ಮಾಡಿ ಅರಿತುಕೊಳ್ಳುವುದರಿಂದ ಅವರಿಗೆ ಸಲ್ಲುತ್ತದೆ. ಅದರ ಪ್ರಕಾರವಾದ ನಮ್ಮ ನಡವಳಿಕೆಯಿಂದ ಮುನಿಜನರ ಋಣ ಪೂರ್ತಿಯಾಗಿ ಪೂರೈಕೆಯಾಗುವುದು. ಮೂರನೆಯದು ಪಿತೃಋಣ. ನಮ್ಮನಮ್ಮ ಮಾತಾಪಿತೃಗಳಿಗೆ ಸಂತೃಪ್ತಿ ಮಾಡುವಂತಹ ನಮ್ಮ ಸೇವೆಯನ್ನು ಸಲ್ಲಿಸುವುದು. ನಾಲ್ಕನೆಯ ಋಣ ಸಮಾಜಕ್ಕೆ ಸಂಬಂಧಿಸಿದ್ದು. ಅಲ್ಲಿಯೂ ಸಹ ನಮ್ಮ ಕೈಲಾದಸೇವೆ ಸಲ್ಲಿಸಲೇಬೇಕು; ಶ್ರಮದಾನ ಜ್ಞಾನದಾನ ಮತ್ತು ಸಂಸ್ಕೃತಿದಾನ ಈ ಪ್ರಕಾರವಾಗಿ. ಐದನೆಯದು ತಿರ್ಯಕ್ ಜೀವಿಗಳಿಗೆ ನಾವು ಸಲ್ಲಿಸಬೇ ಕಾದ ಋಣ. ಅವುಗಳ ದುಡಿಮೆಯಲ್ಲಿಯೇ ನಮ್ಮ ಜೀವನ ನೆಮ್ಮದಿ ಯಿಂದ ನಡೆಯಬೇಕಾದರೆ. ಅಂತಲೇ ನಾವು ಅವುಗಳನ್ನು ಪ್ರೀತಿಯಿಂದ-

ನಲ್ಮೆಯಿಂದ ಸಂಬಾಳಿಸಿಕೊಳ್ಳಬೇಕು. ಮೇವು ನೀರುಗಳನ್ನು ಕಾ
ಕಾಲಕ್ಕೆ ಸರಿಯಾಗಿ ನೋಡಿಕೊಳ್ಳಬೇಕು. ಇವೇ ಋಣ ಪಂಚಕಗಳು.

ಕಾತ್ಯಾಯಿನೀ, ಕೇಳು. ಅಗ್ನಿಹೋತ್ರ ಎಂದರೆ ಕಾಲಾನುಕಾ
ದಿಂದಲೂ ಯಾವ ಅಗ್ನಿಯನ್ನು ರಕ್ಷಿಸಿಕೊಂಡು ಬರುತ್ತಿರುವೆವೋ ಅದ
ಅಗ್ನಿಯು ನಂದದಂತೆ ಎಂದೆಂದಿಗೂ ಉರಿಯುತ್ತಿರುವಂತೆ ನೋಡಿಕೊಳ
ತ್ತಿರುವುದೇ ಅಗ್ನಿಹೋತ್ರ. ನಿನ್ನಲ್ಲಿಗೆ ಎಷ್ಟೋ ಮಂದಿ ಅಗ್ನಿಗಾಗಿ ಬ
ಗಾಗುತ್ತಲೇ ಬರುತ್ತಿರುತ್ತಾರೆ. ಅಗ್ನಿಯಿಲ್ಲದೆ ಬದುಕು ಸಾಗುವುದಿಲ್ಲ
ಅತಿಥಿ ಅಭ್ಯಾಗತರನ್ನು ಆದರಿಸಲೂ ಆಗುವುದಿಲ್ಲ. ಆದ್ದರಿಂದಲೇ ಸಾರ್ವ
ದ್ಧಾರವಾಗಿ ಅಗ್ನಿಯು ರಕ್ಷಿತವಾಗಿದೆ. ಅದು ಮುಂದೆಯೂ ಆಗಬೇಕು
ಅತಿಥಿ ಸತ್ಕಾರದಿಂದ ಗಾರ್ಹಸ್ಥ್ಯಧರ್ಮ ಬೆಳಗುತ್ತದೆ; ವ್ಯಷ್ಟಿಯು
ವಿಶಾಲದೃಷ್ಟಿ ಮೂಡುತ್ತದೆ ಮತ್ತು ಪುಣ್ಯ ಸಂಪಾದನೆಯೂ ಆಗುತ್ತದೆ.

ಕಾತ್ಯಾಯಿನಿ, ನಾವು ಮಾತಿನ ಮಧ್ಯೆ ಮತ್ತು ಕೆಲಸದ ಮಧ
ಸ್ವಾಧ್ಯಾಯ-ಪ್ರವಚನ ಇವುಗಳನ್ನು ತಪ್ಪದೆ ನಡೆಸಿಕೊಳ್ಳುವುದನ
ಮರೆಯಬಾರದು. ಅಲ್ಪ ಸಮಯ ದೊರೆತರೂ ಅದನ್ನು ಇದಕ್ಕಾಗಿ ಬಳ
ಕೊಳ್ಳಲೇಬೇಕು. ಅಂತರ್ಯಾಮಿಯಾದ ಬ್ರಹ್ಮವಸ್ತುವನ್ನು ಆರಾಧಿಸಲ
ಅದಕ್ಕಾಗಿ ಮೀಸಲಾದ ಸಮಯವೇ ಬೇಕು ಎಂಬುದೇನಿಲ್ಲ. ಕಾಯ
ನಿಮಗ್ನತೆಯಲ್ಲಿ ಧ್ಯಾನನಿಮಗ್ನರಾದರೆ ಅದೇ ತಪಸ್ಸು. ಸತ್ಯಧರ್ಮ
ಸ್ವಾಧ್ಯಾಯ–ಪ್ರವಚನ ಇವು ಜೀವನವೃಕ್ಷದ ಮಹಾ ಬೇರುಗಳು. ಉಳಿದ
ದೆಲ್ಲ ರೆಂಬೆಕೊಂಬೆಗಳಂತೆ ಅನಂತರ ಬರುವುವು. ವೃಕ್ಷದ ಬೇರಿಗೆ ಆರ್ದ್ರ
ದೊರಕಿದಷ್ಟೂ ರೆಂಬೆಕೊಂಬೆಗಳು ಹುಲುಸಾಗಿ ಚಿಗುರುತ್ತವೆ. ಆದ್ದರಿಂ
ನಾವು ಈ ಜೀವನವೃಕ್ಷದ ಬೇರುಗಳಾದ ಸತ್ಯಧರ್ಮ–ಸ್ವಾಧ್ಯಾಯ
ಪ್ರವಚನ ಇವುಗಳಿಗೆ ಹುಲುಸಾದ ಆರೈಕೆ ಮಾಡಬೇಕು. ಅದರಿಂದ ನಮ
ಜೀವನ ಸಂವೃದ್ಧಿ ಮತ್ತು ಬೌದ್ಧಿಕ ಸಂವೃದ್ಧಿ ಎರಡೂ ಉಂಟಾಗುತ್ತವೆ

ಕಾತ್ಯಾಯಿನೀ, ಕೇಳು, ಸಾಮಾನ್ಯವಾದ ಸಣ್ಣ ಬೀಜದಲ್ಲಿ ಮಹ
ವೃಕ್ಷವೊಂದು ಸುಪ್ತಾವಸ್ಥೆಯಲ್ಲಿರುತ್ತದೆ. ಅದಕ್ಕೆ ಯಾವಾಗ ಮಣ್ಣ

ನೀರುಗಳ ಸಂಪರ್ಕವೊದಗುವುದೋ ಆಗ ಮೊಳಕೆಯೊಡೆದು ಸುತ್ತ ಮುತ್ತಲಿನ ಸಾರಾಸಾರಗಳನ್ನು ಹೀರಿಕೊಂಡು ಬೆಳೆಯುತ್ತ, ಕಾಲಕ್ರಮೇಣ ಹೆಮ್ಮರವಾಗಿ ಮೇಲೆದ್ದು ಗಗನಚುಂಬಿ ಎನಿಸಿಕೊಳ್ಳುತ್ತದೆ. ನೋಡಿದರೆ ಬೀಜ ಬಲು ಸಣ್ಣದು. ಅದರಿಂದ ಹುಟ್ಟುವ ಮರವಾದರೋ ವಿಸ್ತಾರವಾದ ಭೂಮಿಯನ್ನು ಆವರಿಸುತ್ತದೆ. ಹಾಗೆಯೇ ಯಾರು ಬ್ರಹ್ಮ ಸಾಕ್ಷಾತ್ಕಾರ ಪಡೆದಿರುವನೋ ಅವನು ಮಹಾ ವೃಕ್ಷದಂತೆ ಉನ್ನತೋನ್ನತ. ಅಜ್ಞಾನಿಗಳಾದವರು ಮುಳ್ಳು ಕಂಟಿಗಳಂತೆ ತಳದಲ್ಲೇ ತಾರಾಡುತ್ತಿರುತ್ತಾರೆ. ಅಜ್ಞಾನಿಗೆ ಕಾಣುವುದಕ್ಕಿಂತ ಹೆಚ್ಚಿನದು ಶಿಖರಾಗ್ರದಲ್ಲಿರುವ ಕಣ್ಣುಗಳಿಗೆ ಕಾಣಿಸುವುದು ಸಹಜ. ಅವನು ಸಾಧಾರಣವಾಗಿ ಯಾವುದರಿಂದಲೂ ಬಾಧಿತವಾಗುವುದಿಲ್ಲ. ಅವನ ಸತ್ಕೀರ್ತಿಯ ಪರಿಮಳ ತಾನಾಗಿಯೇ ಹರಡುತ್ತದೆ, ದೀಪದ ಕಾಂತಿ ಸುತ್ತಲೂ ಹರಡುವಂತೆ. ಹಾಗೆಯೇ ಸಮಾಜದಲ್ಲಿ ಅವನ ಪ್ರಭಾವ ಎಲ್ಲರ ಮೇಲೂ ಪರಿಣಮಿಸುವುದು ಸಹ ಅವನಿಗೆ ತಿಳಿಯದಂತೆಯೇ ನಡೆಯುತ್ತದೆ ಎಂದು ದೃಢವಾಗಿ ಹೇಳಬಹುದು.

ಕಾತ್ಯಾಯಿನೀ, ನಾನು ಎಂಬ ವ್ಯಷ್ಟಿಯ ಸೃಷ್ಟಿಗೆ ಕಾರಣಕರ್ತೃ ಪರಬ್ರಹ್ಮ ನನ್ನ ಸ್ಥಿತಿಗತಿಗೂ ಸಹ ಅವನೇ ಕಾರಣ. ಇಬ್ಬನಿಯ ಹನಿಗಳ ಮೇಲೆ ಸೂರ್ಯ ಕಾಂತಿ ಬಿದ್ದಾಗ ಅವು ಮಿಣಮಿಣನೆ ಪ್ರತಿಬಿಂಬಿಸುತ್ತವೆ. ಅದಕ್ಕೆ ಕಾರಣಕರ್ತೃ ಸೂರ್ಯ. ಅದರಂತೆಯೇ ನನ್ನ ಇರುವಿಕೆಗೆ ಪರಬ್ರಹ್ಮ ಕಾರಣ. ಅವನು ಹೇಗೆ ಬ್ರಹ್ಮಾನಂದ ಸ್ವರೂಪನೋ ಹಾಗೆಯೇ ನನ್ನ ಭಾವನೆಯೂ ಕೂಡ. ಹೇಗೆಂದರೆ ನಾನು ಅವನಿಂದ ಆದವನು ಅಂದರೆ ಇಲ್ಲಿ ಕಾರಣಗಳ ಅನುಬಂಧ ಚೆನ್ನಾಗಿ ತಿಳಿಯುವುದು. ಆದರೆ, ಅದು ಸಾಮಾನ್ಯನಿಗೆ ತಿಳಿ-ಯದಿರುವ ಕಾರಣ ಬುದ್ಧಿಯ ಮೇಲೆ ಅಜ್ಞಾನದ ಬೂದಿ ಮುಚ್ಚಿರುವುದರಿಂದ. ಯಾವಾಗ ಆ ಅಜ್ಞಾನದ ತೆರೆ ಹರಿಯುವುದೋ ಆಗ ಅದರ ನೈಜಸ್ವರೂಪ ಸ್ಪಷ್ಟವಾಗಿ ಕಣ್ಗೊಳಿಸುವುದು.

ದೇವಿ, ಇನ್ನೂ ಕೇಳು. ಸೂರ್ಯನನ್ನು ತಿಳಿದಿದ್ದೀಯಷ್ಟೆ? ಅವನು ಹಿರಣ್ಯಗರ್ಭ. ಅವನಲ್ಲಿ ಆತ್ಮತತ್ತ್ವವೂ ಅಡಗಿದೆ. ಅವನು ನಿರ್ಗುಣವೂ ನಿರಾಕಾರವೂ ಆದ ಬ್ರಹ್ಮವಸ್ತುವಿನ ಸಾಕಾರ ಸ್ವರೂಪ. ಅವನು ಪರಬ್ರಹ್ಮನಿಂದ

ಬಂದವನಾದ್ದರಿಂದ ಆತ್ಮಬ್ರಹ್ಮ ಸ್ವರೂಪನೂ ಹೌದು. ಅವನಂತೆಯೆ ನಾನೂ ಸಹ ಆತ್ಮಬ್ರಹ್ಮ ಸ್ವರೂಪನಾಗಿರುವೆನು. ಯಾವುದು ಅವನಲ್ಲಿ ಯೋ ಅದು ನನ್ನಲ್ಲಿಯೂ ಇರಲೇಬೇಕು. ದೊಡ್ಡವಸ್ತು ದೊಡ್ಡ ಪ್ರತಿಬಿಂ ಹೊಂದಿದ್ದರೆ ಚಿಕ್ಕದು ಚಿಕ್ಕ ಪ್ರತಿಬಿಂಬ ಹೊಂದುವುದು. ನಾನು ಶರೀರವಲ್ಲ ಮನಸ್ಸೂ ಅಲ್ಲ; ಇಂದ್ರಿಯಗಳೂ ಅಲ್ಲ; ಬುದ್ಧಿಯೂ ಅಲ್ಲ; ತೇಜಸ್ಸಿನಿಂ ಕೂಡಿದ ಆತ್ಮವಾಗಿರುವೆ. ಅದು ನಮ್ಮ ಸಂಭಾಷಣೆಯ ಹಿಂ ಕಾಂತಿಯುತವಾಗಿದೆ. ಯಾವಾಗ ಆತ್ಮಜ್ಞಾನ ಪಡೆಯುತ್ತೇವೊ ಅದು ನಮ್ಮ ಮನಸ್ಸು-ಇಂದ್ರಿಯ ಇವುಗಳಲ್ಲೆಲ್ಲಾ ಶುದ್ಧ ತೇಜಸ್ಸಿನಿಂ ಬೆಳಗುತ್ತಿರುತ್ತದೆ. ಅದನ್ನೇ ಬ್ರಹ್ಮತೇಜಸ್ಸು ಎನ್ನುವುದು. ಅದು ಅಲೌಕಿಕವಾದ ತೇಜಸ್ಸು. ಅದನ್ನು ಬ್ರಹ್ಮಜ್ಞಾನಿಯು ಸದಾ ಕಾಲವೂ ಹೊಂದಿರುತ್ತಾನೆ. ಬ್ರಹ್ಮಜ್ಞಾನಿಯಲ್ಲಿ ಮೇಧಾಸಂಪನ್ನತೆ ತುಂಬಿರುತ್ತದೆ, ಬಿಂದಿಗೆಯಲ್ಲಿ ತುಂಬಿದ ನೀರಿನಂತೆ. ಅವನ ಬುದ್ಧಿ ಬಲು ತೀಕ್ಷ್ಣವಾದುದರಿಂದ ಎಲ್ಲವನ್ನೂ ಕ್ಷಣಕಾಲದಲ್ಲಿ ಗ್ರಹಿಸಬಲ್ಲ. ಅವನು ಮರಣದ ದ್ವಂದ್ವಕ್ಕೆ ನಿಲುಕುವವನಲ್ಲ. ದೈಹಿಕ ಸಂಬಂಧವನ್ನು ಕಡಿ ದುಕೊಂಡು ಆತ್ಮತತ್ತ್ವದಲ್ಲಿ ವಿಲೀನನಾದವನು. ಅವನು ದೇಶ ಕಾಲ-ನಿಮಿ ತ್ತಗಳನ್ನು ದಾಟಿದವನು. ಅವನಿಗೆ ಅನ್ಯಾಯದ ಗೋಜಿಲ್ಲ. ಅವನು ಯಾವ ಕಟ್ಟುನಿಟ್ಟಿಗೂ ಒಳಗಾಗನು. ಕಾತ್ಯಾಯಿನೀ, ಇದು ಬರೀ ಬಾಯಿಯ ಮಾತಲ್ಲ ಅಥವಾ ಬರೀ ಊಹೆಯೂ ಅಲ್ಲ. ಇವನ್ನೆಲ್ಲ ಸ್ವತಃ ಅನುಭವಿಸಿ ವಿಷದೀಕರಿಸುತ್ತಿರುವೆ. ದೇವೀ, ನಿನಗೆ ಇದೆಲ್ಲಾ ತಿಳಿಯಿತೋ ತಿಳಿಯ ಲಿಲ್ಲವೋ ಮನದಲ್ಲಿ ಏನಾದರೂ ಸಂಶಯವಿದ್ದರೆ ಹೇಳು. ಇನ್ನೂ ವಿವರಿಸ ಬಲ್ಲೆ.

ಕಾತ್ಯಾಯಿನಿಯು ಅತ್ಯಂತ ಸಂತೋಷ-ನಲ್ಮೆ-ಭಕ್ತಿ-ಗೌರವಗಳಿಂದ ತುಂಬಿ ಭಾವಾವಿಷ್ಟಳಾಗಿ ಮುಕ್ತಕಂಠದಿಂದ ನುಡಿದಳು-ಭಗವನ್, ನನ್ನ ತಿಳಿವಳಿಕೆ ಹೇಗೂ ಇಂದಿಗೆ ತುಂಬಿ ಬರಲಿಲ್ಲ. ನಿಮ್ಮನ್ನು ಸದಾಕಾಲವೂ ಕೇಳಿಯೇ ತಿಳಿದು ಕೊಳ್ಳಬೇಕು.

ಆ ವೇಳೆಗೆ ಅಲ್ಲಿಗೆ ಆಗಮಿಸಿದ ಮೈತ್ರೇಯಿಯು ತಲೆಬಾಗಿಲಲ್ಲಿ ಹಣಿಕಿ-ಒಳಗೆ ಬರಬಹುದೇ ?

ಯಾಜ್ಞವಲ್ಕ್ಯ ಮಹರ್ಷಿ-ಬಾ, ದೇವೀ. ಸೂಕ್ತ ಸಮಯದಲ್ಲಿಯೇ

ಬಂದಿರುವೆ. ಈಗ ನಮಗೆ ನಿನ್ನ ಅವಶ್ಯಕತೆಯೂ ಇತ್ತು. ಹೀಗೆ ಕರೆಯಿಸಿ ಕೊಳ್ಳದೆಯೇ ಬಂದದ್ದು ತುಂಬಾ ಸಂತೋಷ.

ಆ ಮಾತುಗಳು ಸಮಾಧಾನ-ಸಂತೃಪ್ತಿಗಳಿಂದ ಗಂಭೀರವಾಣಿಯಲ್ಲಿ ಹೊರ ಬಿದ್ದಾಗ ಮೈತ್ರೇಯಿಯು ಸಂತಸಪರವಶಳಾದರೂ ಮರುಕ್ಷಣದಲ್ಲೇ ಸಾವಧಾನದಿಂದ ಉತ್ತರಿಸಿದಳು–ಈಗಲೇ ನನ್ನ ಅವಶ್ಯಕತೆಯಿದ್ದುದು ನನ್ನ ಪುಣ್ಯಯೋಗವೇ ಇರಬಹುದು.

ಕಾತ್ಯಾಯಿನಿ–ಆಗ ನೀನು ಬಂದಿದ್ದರೆ ಒಳ್ಳೆಯದಿತ್ತು. ಇಂದಿನ ಪ್ರವಚನ ನೀನಿಲ್ಲದೆ ಕಳೆಕಟ್ಟಲಿಲ್ಲ. ಈಗಲಾದರೂ ಬಂದೆಯಲ್ಲ, ಹೀಗೆಯೇ ಬಾ; ಕುಳಿತುಕೊ.

ವಾಕ್ಸರಣಿ ಹೃದಯದಾಳದಿಂದ ಮೃದು ಮಧುರವಾಗಿ ಹರಿದು ಬಂದಾಗ ಪ್ರತಿನುಡಿಯುವಷ್ಟು ವಿರಾಮವೂ ದೊರೆಯಲಿಲ್ಲ ಮೈತ್ರೇಯಿಗೆ. ಬರೀ ಎಳೆ ನಗವಿನಲ್ಲಿ ತನ್ನ ಆತ್ಮಾನಂದವನ್ನೆಲ್ಲಾ ಹೊರಹಾಕಿ, ಕಾತ್ಯಾಯಿನಿಯ ಬಳಿಯಲ್ಲಿ ದರ್ಭೆಯ ಹಾಸಿನ ಮೇಲೆ ಕುಳಿತುಕೊಂಡಳು. ಅರೆಯರಳಿದ ಮಂದಾರ ಕುಸುಮದಂತೆ ಮುಖಬಿಂಬ ಅರಳಿತ್ತು.

ಯಾಜ್ಞವಲ್ಕ್ಯ ಮಹರ್ಷಿಯು ಕೈಬೆರಳಿನಲ್ಲಿ ಜಪಸರವನ್ನು ತಿರುಗಿಸುತ್ತ ತನ್ನ ಉದ್ದೇಶವನ್ನುಹೃತ್ಪೂರ್ವಕವಾಗಿ ಈ ರೀತಿ ಮುಂದಿಟ್ಟ–ಮೈತ್ರೇಯೀ, ನಾನು ಗಾರ್ಹಸ್ಥ್ಯಾಶ್ರಮವನ್ನು ತ್ಯಜಿಸುವ ಯೋಚನೆಯಲ್ಲಿರುವೆ. ಇನ್ನು ಒಂದೆರಡು ವಾರಗಳಲ್ಲಿ ಹಿಮಾಲಯಕ್ಕೆ ಹೋಗಿ ದೀರ್ಘ ತಪಸ್ಸನ್ನು ಕೈಗೊಳ್ಳಲಿರುವುದರಿಂದ ನನ್ನ ದ್ರವ್ಯವನ್ನು ನಿನಗೂ ಕಾತ್ಯಾಯಿನಿಗೂ ಹಂಚಿಬಿಡುವ ಅಪೇಕ್ಷೆಯುಂಟು.

ಮೈತ್ರೇಯಿಯು ಒಂದು ಘಳಿಗೆ ಯೋಚಿಸಿ ಮಿಂಚಿನಂತೆ ಪ್ರಶ್ನಿಸಿದಳು–ಸ್ವಾಮೀ, ಈ ಧನಕನಕ ಪರಿಪೂರ್ಣವಾದ ಪೃಥ್ವಿಯಿಂದ ನಾನು ಅಮೃತಳಾಗುವೆನೆ ?

ಯಾಜ್ಞವಲ್ಕ್ಯ ಮಹರ್ಷಿಯು ಆ ಪ್ರಶ್ನೆಯಿಂದ ಲವಲೇಶವೂ ವಿಚಲಿತ

ಸಾಗದೆ ಶ್ರೀಮದ್ಗಾಂಭೀರ್ಯದಿಂದ ತಲೆಯಾಡಿಸುತ್ತ–ಇಲ್ಲ,ಅದು ಎಂದಿಗೂ ಸಾಧ್ಯವಿಲ್ಲ. ನೀನು ಅದರಿಂದ ಆತ್ಮಸುಖಿಯಾಗಲಾರೆ.

ಮೈತ್ರೇಯಿೀ–ಅಂದಮೇಲೆ ನನಗೆ ದ್ರವ್ಯದಿಂದೇನು ಫಲ ಭಗವನ್?

ಯಾಜ್ಞವಲ್ಕ್ಯಮಹರ್ಷಿ–ನೀನು ದ್ರವ್ಯಸಾಧ್ಯವಾದ ಕರ್ಮವನ್ನು ತಿರಸ್ಕರಿಸಿದ್ದು ಸಂತೋಷವೇ. ದೇವೀ, ಅಮೃತತ್ತ್ವ ಸಾಧನವಾದ ಆತ್ಮಜ್ಞಾನವನ್ನುತಿಳಿದುಕೊಳ್ಳುವುದರಲ್ಲಿಯೇ ನೀನು ಏಕಾಗ್ರತೆಯನ್ನು ಬೆಳಸಿಕೊ. ಅದೇ ನಿನಗೆ ಸರ್ವೋತ್ಕೃಷ್ಟವಾದ ಸೋಪಾನ ಆತ್ಮಬ್ರಹ್ಮಜ್ಞಾನ ಪೀಠಕ್ಕೆ.

ಮೈತ್ರೇಯಿಯು ಅತ್ಯಂತ ಶ್ರದ್ಧಾಭಕ್ತಿಯಿಂದ–ಅಪ್ಪಣೆ ಭಗವನ್!

ಯಾಜ್ಞವಲ್ಕ್ಯಮಹರ್ಷಿ–ನೀನು ಎಲ್ಲಿಯವರೆಗೆ ಉಸಿರಾಡುವೆಯೋ ಅಲ್ಲಿಯವರೆಗೆ ಸಾಧನೆಯನ್ನು ಮುಂದುವರಿಸು. ಯಾರು ಎಷ್ಟು ಸಾಧನೆ ಮಾಡಿದರೂ ಅಲ್ಪವೇ. ವ್ಯಕ್ತಿಗೆ ಸ್ವಾಧ್ಯಾಯ-ಪ್ರವಚನಗಳು ಊಟ-ನಿದ್ರೆಗಳಷ್ಟೇ ಅತ್ಯಾವಶ್ಯಕ. ಮಂಗಳಾಂಗಿ, ನಮ್ಮ ಪೂರ್ವಿಕ ಋಷಿವರ್ಯರು ಬಿಟ್ಟುಹೋಗಿರುವ ಅತುಲವಾದ ಜ್ಞಾನಾಮೃತವನ್ನು ಪ್ರತಿನಿತ್ಯವೂ ಪಾನ ಮಾಡುತ್ತಲೇ ಇರಬೇಕು. ಪಾರಾಯಣ–ಪ್ರವಚನ ಎರಡೂ ನಿನ್ನ ಮುಂದಿನ ಮಾರ್ಗ ಯೋಗಕ್ಕೆ ಸಪೂರ್ಣ ಬೆಳಕು ನೀಡುತ್ತದೆ ಅದರಿಂದ ನಿನ್ನ ಮನೋವಿಕಾಸವೂ, ಆತ್ಮ ವಿಕಾಸವೂ ಒಂದೇ ನಿಟ್ಟಿನಲ್ಲಿ ಕೂಡಿ ಬರುತ್ತವೆ. ಅದೇ ನಿನ್ನ ವಾಙ್ಮಯಕ್ಕೆ-ಆತ್ಮ ದರ್ಶನಕ್ಕೆ ಸ್ಫೂರ್ತಿ ನೀಡುತ್ತದೆ.

ಮೈತ್ರೇಯಿೀ–ತಿಳಿಯಿತು ಭಗವನ್!

ಕಾತ್ಯಾಯಿನಿ–ತಿಳಿಯಿತು, ತಿಳಿಯಿತು.

ಉಚ್ಛ್ವಾಸ ೧೧

ತಿರೆಯಮೇಲೆ ಅಗ್ನಿ ಸ್ಫುಲ್ಲಿಂಗಗಳನ್ನು ಉಗುಳುವಂತಹ ಉಷ್ಣೋಷ್ಣ ಭರಿತ ವಾತಾವರಣ.

ವಸಂತಪ್ರಭುವಿನ ಸಾಮ್ರಾಜ್ಯದಲ್ಲಿ ಜೀವಜಗತ್ ಉದ್ಭ್ರಾಂತಗೊಳ್ಳುವಂತಹ ವಿಪರೀತ ಪರಿಸ್ಥಿತಿ ಉಷ್ಣಾತಿರೇಕದಿಂದಾಗಿ.

ಗಿಡುಮರಬಳ್ಳಿಗಳಲ್ಲಿ ಎಲೆಗಳು ಪುಷ್ಪಗಳು ಪುಷ್ಪದಳ ಮತ್ತು ಪುಷ್ಪರೇಣುಗಳು ಹಣ್ಣಾಗಿ ಉದುರಿ ವನಭೂಮಿಯ ತುಂಬೆಲ್ಲಾ ಹರಡಿ, ಬಿಸಿಲಝಳಕ್ಕೆ ರಕ್ಷೆ ನೀಡುವಂತೆ ಭಾಸವಾಗುತ್ತದೆ ಶೇಷಾವಶೇಷಗಳ ಸಾಲಂಕೃತ ವೈಖರಿಯಿಂದ. ಮಂದಮಂದಾನಿಲ ಸಹ ಉಷಿತೋಷಿತ ಬಿಜ್ಜಣಿಗೆಯಿಂದಲೇ ಬಿಜ್ಜಣವಿಕ್ಕುತ್ತಾನೆ ದಿಸೆಯಿಂದ ದಿಸೆಯುವರೆಗೆ. ಎಷ್ಟೋ ಸಣ್ಣಪುಟ್ಟ ಕೆರೆತೊರೆಗಳು ಬತ್ತಿಹೋಗಿ, ನದನದಿಗಳು ಕ್ಷೀಣಿಸುವಂತಹ ಸುಡುಬೇಸಗೆ. ಮುಂಗಾರು ಮಳೆಯ ಸೂಚಕವಾಗಿ ವ್ಯೋಮರಂಗವನ್ನು ಆವರಿಸಿದ ಬೃಹದ್ ಕಾದಂಬಿನಿಗಳ ಮೇಳದಿಂದ ಉಷ್ಣರಶ್ಮಿಗಳಿಗೆ ಆಗಾಗ ಅಲ್ಪಸ್ವಲ್ಪ ತಡೆ ಎನ್ನಬಹುದು.

ವಾತಾವರಣದ ತೀಕ್ಷ್ಣತೆ ಎಷ್ಟಿದ್ದರೂ ಅದು ಆಶ್ರಮದ ತನಕ ಮುಟ್ಟುವುದು ಅಪರೂಪವೇ. ಕಾಲದ ಏರಿಳಿತಗಳಾಗಲೀ ಜೀವನದ ಏರಿಳಿತಗಳಾಗಲೀ ಗಮನಕ್ಕೆ ಬಾರದಷ್ಟು ದೂರ. ಎಂದಿನಂತೆಯೇ ಆರಂಭವಾದ ದಿನಚರಿಯಲ್ಲಿ ಯಾವ ಉದ್ವೇಗವೂ ಇರದೆ ಪ್ರಶಾಂತಿಯಿಂದ ಆಶ್ರಮದ ಪ್ರಾಂಗಣದಂಚಿನ ಅಶೋಕವೃಕ್ಷಗಳ ಮಧ್ಯೆ ಧ್ಯಾನಭಂಗಿಯಲ್ಲಿ ಮಂಡಿಸಿದ್ದಾನೆ ಯಾಜ್ಞವಲ್ಕ್ಯ ಮಹರ್ಷಿ. ನಿಶ್ಚಲವಾದ ಅಂಗಭಂಗಿಯಲ್ಲಿ ಶಾಂತಿ–ಸೌಮನಸ್ಯಗಳ ಕಾಂತಿಲಹರಿಗಳು ಹೊಮ್ಮಿ ಸುತ್ತಲೂ ತರಂಗಿತ ವಾಗುತಿದ್ದುವು ದಿವ್ಯ ಪ್ರಭಾಳೆಯನ್ನು ಹೊಂದಿಸಿದಂತೆ. ತೇಜಃಪುಂಜ ವಾದ ಮುಖಬಿಂಬದಲ್ಲಿ ಒಮ್ಮೆ ಗಂಭೀರತೆ, ಇನ್ನೊಮ್ಮೆ ಸರಳತೆ, ಮಗ ದೊಮ್ಮೆ ಭಾವೋತ್ಕರ್ಷತೆಯಿಂದ ಉಕ್ಕಿಬರುವ ಉಜ್ವಲ ಭಾವಶ್ರೀ— ಯಾವುದನ್ನು ಶಾಸ್ತ್ರಕೋವಿದರು 'ದರ್ಶನ' ಎಂದು ಬಣ್ಣಿಸುವರೋ ಅಂತಹ ಅಮೂಲ್ಯವಾದ ಭಾವಶ್ರೀ—ಬೆಳಗುವುದು. ಪ್ರತಿಯೊಂದು ಉಚ್ಛ್ವಾಸ–ನಿಶ್ವಾಸಗಳಲ್ಲೂ ಆತ್ಮಿಕ–ಪ್ರಾಕೃತಿಕಗಳ ಸ್ವಚ್ಛಂದ ಅನು ಬಂಧ ಕಂಡುಬರುತ್ತದೆ. ಮೇಲಾಗಿ, ಪ್ರಾತಃಕಾಲೀನ ವಾತಾವರಣ ಕ್ಕನುಗುಣವಾದ ವಿಚಿತ್ರ ಗರಿಮೆಯ ಅಭಿನಿವೇಶನ ಸರ್ವಪ್ರಕಾರ ವಾಗಿಯೂ ಸುವ್ಯಕ್ತ.

ಬಾನ್‌ಬಿತ್ತಿಯನ್ನು ಉಜ್ವಲ ರವಿ ಏರುತಿದ್ದಾಗಲೇ ಗೆಳೆಯರಾದ ದೇವರಾತ, ಕಾತ್ಯಾಯನರು ಅನಿರೀಕ್ಷಿತವಾಗಿ ಆಗಮಿಸಿ ಪ್ರಾಂಗಣಕ್ಕೆ ಪದಾ ರ್ಪಣೆ ಮಾಡುವ ಮುನ್ನ ಮಹರ್ಷಿಯನ್ನು ಅಶೋಕವೃಕ್ಷಗಳ ತೋಪಿನಲ್ಲಿ ಕಂಡು ನಗುಮುಖದಿಂದ ಅತ್ತಲೇ ಹೆಜ್ಜೆ ಇಟ್ಟರು. ಯಾಜ್ಞವಲ್ಕ್ಯ ಮಹರ್ಷಿಯೂ ಪ್ರಸನ್ನ ಭಾವದಿಂದ–ಬರಬಹುದು, ಅಗತ್ಯವಾಗಿ ಬರ ಬಹುದು.

ದೇವರಾತ–ಕೈಗಳನ್ನು ಜೋಡಿಸಿ–ನಮಸ್ತೇಸ್ತು ಭಗವನ್ !

ಕಾತ್ಯಾಯನ ಸಂಪ್ರೀತ ಭಾವದಿಂದ–ನಮಸ್ತೇ ಗುರುವರ್ಯ !

ಯಾಜ್ಞವಲ್ಕ್ಯ ಮಹರ್ಷಿಯು ಸ್ನೇಹಾನುರಾಗದಿಂದ–ನಮಸ್ತೇ ! ಹೀಗೆ ಬನ್ನಿ. ನಿಮ್ಮಿಬ್ಬರನ್ನು ನೋಡದೆಯೂ ಬಹಳ ದಿನಗಳಾಗಿದ್ದುವು. ನಮ್ಮನಮ್ಮ ಆಂತರಿಕ ಅನುರಾಗವೇ ಪರಸ್ಪರ ಭೇಟಿ ಮಾಡಿಸುತ್ತಿರುತ್ತದೆ, ಹೀಗೆ ನಾವು ಬಯಸಿದಾಗಲೆಲ್ಲ. ಇದು ನಿಜಕ್ಕೂ ವಿಶ್ವಸನೀಯವಾದುದು ಎಂದೇ ಹೇಳಬೇಕು.

ಆ ಮಾತನ್ನು ಅನುಮೋದಿಸುವಂತೆ ತಲೆದೂಗಿ ಸನಿಹದಲ್ಲಿ ಕುಳಿತುಕೊಂಡರು ಗೆಳೆಯರಿಬ್ಬರೂ. ಪರಸ್ಪರ ಸಂದರ್ಶನ ಲಾಭದಿಂದ ಹೃತ್ ಕಮಲಗಳು ಅರಳಿ ಹೂವಾಗಿದ್ದುವು ಮನಃಕರಂಡದಲ್ಲಿ ಆತ್ಮಾನುರಾಗ ತುಂಬಿ ಉಕ್ಕುತಿತ್ತು.

ಯಾಜ್ಞವಲ್ಕ್ಯ ಮಹರ್ಷಿ–ನನಗೆ ನಿಮ್ಮನ್ನು ನೋಡುವ ಅಭಿಲಾಷೆಯಿತ್ತು ಮನದಲ್ಲಿ. ನಿಮ್ಮಲ್ಲಿಗೆ ಹೋಗುವ ಯೋಚನೆಯನ್ನು ಸಹ ಹೊಂದಿದ್ದೆ. ಅದಕ್ಕೆ ಸರಿಯಾಗಿ ನೀವೇ ಬಂದಿದ್ದೀರಿ. ಇದು ಹೇಗಿದೆ ನೋಡಿ !

ಕಾತ್ಯಾಯನ ಆಶ್ಚರ್ಯಭಾವದಿಂದ–ಓ, ಹಾಗೋ ? ಬಹುಶಃ ಅದಕ್ಕೆಂದೇ ನಿಮ್ಮನ್ನು ನೋಡುವ ಅಭಿಲಾಷೆ ನಮಗುಂಟಾಗಿದೆ. ನಾವು ಹೊರಟು ಬಂದಿದ್ದೇವೆ !

ದೇವರಾತ–ಸರಿಯಾದ ಮಾತು. ಪ್ರಾಯೇಣ, ಅತೀಂದ್ರಿಯ ಪ್ರಜ್ಞೆಯ ಸೂಚನೆ ಇರಬಹುದು.

ಯಾಜ್ಞವಲ್ಕ್ಯ ಮಹರ್ಷಿ–ನಿಜ, ನಿಜ. ನಾನು ನಿಮ್ಮನ್ನು ಬಯಸಿದ್ದು ಹೀಗೆ…ನಾನು ಶೀಘ್ರದಲ್ಲಿಯೇ ಹಿಮಾಲಯದತ್ತ ಹೊರಡಲಿರುವೆ. ಇದನ್ನು ನಿಮಗೆ ತಿಳಿಸುವ ಉದ್ದೇಶವಿತ್ತು ನನಗೆ.

ಕಾತ್ಯಾಯನ–ಓಹೋ, ಯಾವಾಗಿನಿಂದ ಈ ಚಿಂತನೆ ?

ದೇವರಾತ–ನೀನು ಈ ವಿಚಾರವನ್ನು ಹಿಂದೆಯೂ ಒಮ್ಮೆ ವ್ಯಕ್ತಪಡಿಸಿದ್ದುಂಟು.

ಯಾಜ್ಞವಲ್ಕ್ಯ ಮಹರ್ಷಿ–ಅಹುದು. ಆಗ ಅದಿನ್ನೂ ನಿಶ್ಚಿತವಾಗಿರಲಿಲ್ಲ; ಸುಮ್ಮನೆ ಸೂಚಿಸಿದ್ದೆ ಅಷ್ಟೆ.

ದೇವರಾತ–ಎಷ್ಟುಕಾಲ ಅಲ್ಲಿರುವ ಯೋಚನೆ ?

ಯಾಜ್ಞವಲ್ಕ್ಯ ಮಹರ್ಷಿ–ಪ್ರಾಯಶಃ ಜೀವಾವಧಿ.

ಕಾತ್ಯಾಯನ–ಇದು ದೃಢ ನಿರ್ಧಾರವೇ ?

ಯಾಜ್ಞವಲ್ಕ್ಯ ಮಹರ್ಷಿ- ಹೌದು.

ಕಾತ್ಯಾಯನ–ಹಾಗಾದರೆ ಮತ್ತೆ ಸಂದರ್ಶನವಿಲ್ಲ....?

ಯಾಜ್ಞವಲ್ಕ್ಯ ಮಹರ್ಷಿ–ಅಂತಹ ಪ್ರಸಂಗ ಬರಬಾರದು. ನೀವಿಬ್ಬರೂ ಹೊರಟುಬಿಡಿ; ಎಲ್ಲರೂ ಕೂಡಿಯೇ ಇರೋಣ.

ಮೂವರ ಮುಖದಲ್ಲೂ ಮಂದಹಾಸ ಮೂಡುವುದು.

ದೇವರಾತ–ಹಾಗಾದರೆ ಒಳ್ಳೆಯದೆ....

ಕಾತ್ಯಾಯನನು ನಿಸ್ಪಂದ ನಿಮೀಲಿತ ನಯನಗಳಲ್ಲಿ ಹೃದಯದಾಹೀನೇಹವನ್ನು ಸೂಸಿ–ಹೌದಪ್ಪಾ ! ಶಿಷ್ಯರಿಗೆ ಗುರುವೇ ಆಧಾರ.

ಯಾಜ್ಞವಲ್ಕ್ಯ ಮಹರ್ಷಿಯು ಅಧರಗಳಲ್ಲಿ ಮಂದಹಾಸವನ್ನು ಹರಿಸಿ–ಅಷ್ಟಕ್ಕಿನ್ನೂ ನಿಮ್ಮಗಳ ಮನಸ್ಸು ಪಕ್ವವಾಗಲಿಲ್ಲ; ಬರೀ ಮಾತು ವ್ಯರ್ಥ.

ದೇವರಾತ ನಿಸ್ಸಂಕೋಚ ಭಾವದಿಂದ–ಮನಸ್ಸು ಮಾತ್ರವಲ್ಲ; ಕಾಲವೂ ಪಕ್ವವಾಗಲಿಲ್ಲ.

ಯಾಜ್ಞವಲ್ಕ್ಯ ಮಹರ್ಷಿ–ಮುಮುಕ್ಷುಗಳಿಗೆ ಕಾಲಪಕ್ವತೆಯ ವಿಚಾರ ಅಷ್ಟೇನೂ ಮಹತ್ವದ ವಿಷಯವಲ್ಲ.

ಕಾತ್ಯಾಯನ ಗಂಭೀರ ಭಾವದಿಂದ–ದೇವರಾತ, ನಾವು ಈಗ ಕಾಲ ಪಕ್ವತೆಗಾಗಿ ಕಾಯುವ ಅಗತ್ಯವಿಲ್ಲ. ಮನಸ್ಸು ಪಕ್ವವಾದರೆ ಸಾಕು. ಅದರಿಂದ ನಮಗೆ ನೆಮ್ಮದಿಯೂ ಇದೆ, ಉಜ್ವಲ ಭವಿಷ್ಯವೂ ಇದೆ, ಅಂತಿಮವಾಗಿ ಶಾಂತಿಯೂ ಇರುತ್ತದೆ.

ದೇವರಾತ–ಅಯ್ಯಾ ಮಿತ್ರ ! ಈ ವಿಚಾರದಲ್ಲಿ ನಮಗೆ ನಿನ್ನ ಸಲಹೆ ಯೇನು ?

ಯಾಜ್ಞವಲ್ಕ್ಯ ಮಹರ್ಷಿಯು ಸಂಪ್ರೀತನಾಗಿ ಪ್ರಸನ್ನ ಮುಖ ದಿಂದ–ನೀವು ಯಾವೊಂದು ಕೆಲಸವನ್ನು ಸಾಧಿಸುವುದಕ್ಕೆ ಬರೀ ಶಾರೀರಿಕ ಬಲವನ್ನು ಪಡೆದುಕೊಂಡರೆ ಏನೇನೂ ಸಾಲದು. ಮುಖ್ಯವಾಗಿ ಅದಕ್ಕೆ ತಕ್ಕಂತೆ ಮನೋಬಲವೂ ಇರಬೇಕು. ಮನೋಬಲ ಯಾರಿಗೂ ಸುಮ್ಮನೆ ಬರುವುದಿಲ್ಲ. ಅದಕ್ಕಾಗಿ ತಪಸ್ಸು ಮಾಡಬೇಕು. ತಪಸ್ಸಿನಿಂದಲೇ ಮನೋಬಲವನ್ನು ದೃಢಪಡಿಸಿಕೊಳ್ಳಬೇಕಾದರೆ. ಮನಸ್ಸು ದೃಢವಾಗ ಇದ್ದರೆ ಯಾವ ಕೆಲಸವೂ ಕೈಗೂಡದು.

ದೇವರಾತ ಸಂತೃಪ್ತಭಾವದಿಂದ–ತಪಸ್ಸನ್ನು ಕೈಗೂಡಿಸಿಕೊಳ್ಳುವ ವಿಧಾನವನ್ನು ಸುಲಭದಲ್ಲಿ ತಿಳಿಸಿ ಉಪಕರಿಸು.

ಯಾಜ್ಞವಲ್ಕ್ಯ ಮಹರ್ಷಿ–ತಪಸ್ಸು ಒಂದು ಸುದೀರ್ಘವಾದ ಆಲೋ ಚನೆ. ಒಮ್ಮೆ ಆಲೋಚನೆಗೆ ತೊಡಗಿದರೆ ಅದನ್ನು ಕಡಿಯುವ ಸಂಭವ ಬರಬಾರದು. ಆಲೋಚನೆಯಿಂದಲೇ ವಸ್ತುನಿಷ್ಠವಾದ ವಿಷಯಗಳು ಕರತಲಾಮಲಕವಾಗಬೇಕಾದರೆ. ಯಾವುದೇ ನಿರ್ದಿಷ್ಟ ಕೆಲಸದ ಹಿಂದೆ ಎಷ್ಟು ದೊಡ್ಡ ತಪಸ್ಸಿದೆಯೋ ಅಷ್ಟು ಸಾರ್ಥಕತೆ ಇರುತ್ತದೆ. ಹಿಡಿದ ಕೆಲಸಕ್ಕೆ ತಪಸ್ಯೆಯೇ ಆಧಾರ. ಮನೋಬಲವಿಲ್ಲದಿದ್ದರೆ ತಪಸ್ಸಾಧನೆ ಸಾಧ್ಯವೇ ಇಲ್ಲ. ಆಲೋಚನೆ ಶಿಥಿಲವಾಗಿ ತಪಸ್ಸೆ ಕೆಡುತ್ತದೆ. ಆದ್ದರಿಂದ ಮನಃಸ್ಥೈರ್ಯವನ್ನು ಪಡೆದುಕೊಳ್ಳುವುದಕ್ಕಾಗಿ ಮಾಡುವ ಪ್ರಥಮ ಹಂತದ ತಪಸ್ಯೆಯೇ ನಿಜವಾದ ತಪಸ್ಸು. ಒಮ್ಮೆ ಮನಃಸ್ಥೈರ್ಯವಮೂಡಿ ದಂದರೆ ತಪಸ್ಸು ದೃಢವಾಗಿ ಅದೇ ಮುಂದುವರಿಯುತ್ತದೆ. ಆಂತರಂಗಿಕ ರಹಸ್ಯವನ್ನು ಪಡೆಯುವುದಕ್ಕಾಗಲೀ ಬಾಹ್ಯ ಜಗತ್ತಿನ ರಹಸ್ಯವನ್ನು ಪಡೆ ಯುವುದಕ್ಕಾಗಲೀ ದೃಢವಾದ ಮನಸ್ಸು ಮುಖ್ಯ. ಇದು ಮಂತ್ರ ದ್ರಷ್ಟ ರಾದ ಮುನಿಋಷಿಗಳಿಗೆ ಸರ್ವತ್ರ ಸಾಮಾನ್ಯ ವಿಚಾರ ಎಂದರೂ ಎಲ್ಲರ ಪ್ರಯತ್ನಕ್ಕೂ ನಿಲುಕುವಂತಾದ್ದು.

ಕಾತ್ಯಾಯನ–ಸಾಧು! ಸಾಧು!

ದೇವರಾತ–ನಮಗೆ ನಿನ್ನ ಸಂದೇಶವೇನು ?

ಯಾಜ್ಞವಲ್ಕ್ಯ ಮಹರ್ಷಿ–ನಾನು ನಿಮಗೆ ನನ್ನಸಂದೇಶ ನೀಡುವುದಾದರೆ ಹೀಗೆ–ಮನುಷ್ಯ ಸಾಯುವುದರಿಂದ ದುಃಖವಿಲ್ಲ; ಮನುಷ್ಯತ್ವ ಸಾಯಬಾರದು.

ಕಾತ್ಯಾಯನ–ಅದನ್ನು ನಿಗೂಢವಾಗಿ ಹೇಳುವುದಕ್ಕಿಂತ ವಿವರಿಸುವುದು ಒಳ್ಳೆಯದು.

ದೇವರಾತ–ಈಗ ನೀನು ಹೇಗೂ ಬಿಡುವಾಗಿದ್ದಿ, ಎರಡು ಮಾತು ವಿವರಿಸಿದರೆ ಉತ್ತಮ.

ಕಾತ್ಯಾಯನ–ಬರೀ ಬಿಡುವಾಗಿದ್ದರೆ ಸಾಲದು ಆಶ್ವಸ್ತನಾಗಿಯೂ ಇರಬೇಕು.

ಯಾಜ್ಞವಲ್ಕ್ಯಮಹರ್ಷಿಯು ಸಸ್ನೇಹಪೂರ್ವಕವಾದ ಪ್ರಸನ್ನತಾಭಾವದಿಂದ–ಅದೇನೂ ವಿಶೇಷವಲ್ಲ. ಗೆಳೆಯರಿಗೆ ಪ್ರವಚನ ಮಾಡುವುದೆಂದರೆ ಮೈಮನಗಳಲ್ಲಿ ತಂತಾನೆ ಹೊಸ ಹುರುಪು ಮೂಡುತ್ತದೆ.

ದೇವರಾತ–ಅಂದಮೇಲೆ ನಮಗೆ ನಿಶ್ಚಿಂತೆ; ನೀನು ಹೇಳಿದಷ್ಟನ್ನೂ ಕೇಳುತ್ತೇವೆ.

ಯಾಜ್ಞವಲ್ಕ್ಯ ಮಹರ್ಷಿ–ಮಾನವ ಜೀವನದಲ್ಲಿ ಶ್ರದ್ಧೆ ಎಂಬುದು ಮುಖ್ಯ. ಜೀವನದಲ್ಲಿ ಶ್ರದ್ಧೆಯಿದ್ದರೇನೇ ಆದರ್ಶಕ್ಕೆ ದಾರಿ. ಆದರ್ಶದಲ್ಲಿ ನಂಬಿಕೆ ಯಿಟ್ಟಿರುವವರೆಗೆ ಧರ್ಮ–ಕರ್ಮ ಆಧ್ಯಾತ್ಮಿಕ–ಬ್ರಹ್ಮಜ್ಞಾನ ಇವುಗಳಲ್ಲಿ ಸರ್ವಾರ್ಥಸಿದ್ಧಿಯಾಗಬೇಕಾದರೆ ಶ್ರದ್ಧೆಯಿಂದಲೇ. ಒಬ್ಬೊಬ್ಬರಿಗೆ ಒಂದೊಂದು ವಿಧವಾದ ಆದರ್ಶದಲ್ಲಿ ಶ್ರದ್ಧೆ. ಯಾವೊಂದು ಆದರ್ಶಕ್ಕೂ ಶ್ರದ್ಧೆಯಿಲ್ಲದೆ ಹೋದರೆ ಗುರಿಮುಟ್ಟಲಾಗುವುದಿಲ್ಲ. ಮಾನವ ಎಂದರೆ ಶ್ರದ್ಧಾವಂತ ಎನ್ನುವುದು ಸಹಜ. ಶ್ರದ್ಧೆಯಿಲ್ಲದ ಮನುಷ್ಯನೇ ಇಲ್ಲ. ಯಾವೊಂದನ್ನು ನಂಬದ ನಾಸ್ತಿಕನಿಗೂ ಜಡವಾದದಲ್ಲಿ ಶ್ರದ್ಧೆ ಇರುತ್ತದೆ;

ಸೋಮಾರಿಗೆ ಸೋಮಾರಿತನದಲ್ಲೇ ಶ್ರದ್ಧೆಯಿರುವುದು ಹೇಗೊ ಹಾಗೇ. ಅಂದರೆ ಶ್ರದ್ಧೆಯಿಂದಲೇ ಜೀವನಾದರ್ಶ. ಯಾರೊಬ್ಬರೂ ಶ್ರದ್ಧೆಯನ್ನು ಬೆಳೆಸಿಕೊಂಡೇ ಪ್ರಬುದ್ಧರಾಗಬೇಕು. ಆದರ್ಶವಿಲ್ಲದೆ ಪ್ರಬುದ್ಧತೆಯಿಲ್ಲ.

ದೇವರಾತ–ನಾವು ಧನ್ಯರಾದೆವು. ನಿನ್ನ ಪ್ರವಚನವನ್ನು ದಯವಿಟ್ಟು ಮುಂದುವರಿಸು.

ಕಾತ್ಯಾಯನನು ಸಸ್ನೇಹ ಭಾವದಿಂದ ನುಡಿಯನ್ನುಹೊರಹಾಕುವನು–ಹೌದು, ನಿನ್ನ ವ್ಯಾಖ್ಯಾನ ಸಂತೃಪ್ತಿ ಮೂಡಿಸಿತು.

ಯಾಜ್ಞವಲ್ಕ್ಯ ಮಹರ್ಷಿ–ದೇವರಾತ, ಕೇಳು! ನೀನಾಗಲೇ ನಾವು ಧನ್ಯರು ಎಂದುಬಿಟ್ಟೆ. ನಾವು ಖಂಡಿತ ಆ ಧನ್ಯತೆಯನ್ನು ಪಡೆದುಕೊಳ್ಳಬೇಕಾದರೆ ಜೀವನಯಜ್ಞದಲ್ಲಿ ಪ್ರಪ್ರಥಮವಾಗಿ ಕೈಕೊಳ್ಳಬೇಕಾದುದು ದೇವಪಿತೃಗಳಕಾರ್ಯ. ಅದನ್ನು ತಪ್ಪದೆ ಕೈಕೊಳ್ಳುವುದು ಪ್ರತಿಯೊಬ್ಬರ ಕರ್ತವ್ಯವೂ ಹೌದು. ದೇವಪಿತೃವು ನಮ್ಮ ಆತ್ಮವಿಕಾಸಕ್ಕೆ–ಮನೋವಿಕಾಸಕ್ಕೆ ಏನೆಲ್ಲಬೇಕೋ ಅದನ್ನು ಅಣಿಮಾಡಿಯೇ ನಮ್ಮನ್ನು ಕಳುಹಿಸಿದ್ದಾನೆ ಈ ಭೂಲೋಕಕ್ಕೆ. ಘನವಾದ ಮನುಷ್ಯತ್ವವನ್ನು ನೀಡಿ ಘನವಾದ ಪ್ರಪಂಚಕ್ಕೆ ಕಳುಹಿಸಿಕೊಟ್ಟಿರುವುದು ಸಾಮಾನ್ಯ ಉಪಕಾರವಲ್ಲ. ನಾವು ದಿನಚರಿಯನ್ನು ಆರಂಭಿಸುವ ಮುನ್ನ ಪ್ರತಿನಿತ್ಯವೂ ಅವನನ್ನು ಧ್ಯಾನಿಸಿದನಂತರವೇ ನಮ್ಮ ಇತರ ಕೆಲಸವನ್ನು ಆರಂಭಿಸಬೇಕು. ಅದು ನಿಮಗೂ ತಿಳಿದಿದೆ. ಆದರೆ, ನನ್ನ ಸಂದೇಶ ಆರಂಭವಾಗುವುದೇ ಇಲ್ಲಿಂದ. ನಾನು ದೇವಪಿತೃವನ್ನು ನೆನೆಯದೆ ನನ್ನ ಪ್ರವಚನವನ್ನು ಆರಂಭಿಸಲಾರೆ ಎಂಬುದು ನಿಮಗೆ ಗೊತ್ತು. ಈ ಬೃಹತ್ ಪ್ರಪಂಚದಲ್ಲಿ ಅವನೊಬ್ಬನೇ ನಮ್ಮನ್ನು ಕೈಹಿಡಿದು ನೇರ ಹಾದಿಯಲ್ಲಿ ನಡೆಸಬೇಕಾದರೆ. ಜನ ಸಹಾಯಕ್ಕೆ ಇತಿಮಿತಿಯದೆ. ಆದರೆ, ಭಗವಾನ್ ಬ್ರಹ್ಮನ ಸಹಾಯಕ್ಕೆ ಯಾವ ಇತಿಮಿತಿಯೂ ಇರವುದಿಲ್ಲ. ಅವನೊಂದಿಗೆ ಸರ್ವತ್ರ ಸದಾ ಮಾನಸಿಕ ಸಂಬಂಧವನ್ನು ಕಲ್ಪಿಸಿಕೊಂಡು ಅವನ ಅಂತಃಶಕ್ತಿಯ ಕಿರಣಗಳಿಂದ ಉತ್ತೇಜಿತ

ರಾಗಬೇಕು. ಅಂತಹ ಉತ್ತೇಜನೆ ಇನ್ನಾರಿಂದಲೂ ದೊರೆಯುವುದಿಲ್ಲ, ಎಂಬುದನ್ನು ಇಬ್ಬರೂ ಬಲ್ಲಿರಿ.

ಎರಡನೆಯದಾಗಿ ಪಿತೃವರ್ಗ. ನಮ್ಮ ಜನನದಿಂದ ಮೊದಲ್ಗೊಂಡು ಪ್ರವರ್ಧಮಾನದವರೆಗೆ ತಮ್ಮ ಶಕ್ತಿಯೆಲ್ಲವನ್ನೂ ನಮಗಾಗಿ ಧಾರೆಯೆರೆದ ಮಹಾ ತ್ಯಾಗಿಗಳು; ಅನಂತರ ತಮ್ಮ ಸರ್ವಸ್ವವನ್ನೂ ನಮಗಾಗಿಯೇ ಮೀಸಲಿಡುವ ಧರ್ಮಜೀವಿಗಳು. ವಿದ್ಯೆ–ಬುದ್ಧಿ–ಧನ–ಧಾನ್ಯ–ಆರೋಗ್ಯ ಹೀಗೆ ಎಷ್ಟು ಸಾಧ್ಯವೋ ಅಷ್ಟೂ ನಮಗೆ ಕೈಗೂಡಿಸಿ ಕೊಡುವ ಶ್ರಮದಾತರು. ಅಷ್ಟೆಲ್ಲಾ ಮಾಡಿಯೂ ಮಕ್ಕಳು ಕೆಟ್ಟರೆ ಅಪಾರ ಕ್ಷಮೆಯೂ ಇರುತ್ತದೆ. ಅಂತಹವರ ಸೇವೆಯನ್ನು ಮನಮುಟ್ಟಿ ಮಾಡುತ್ತ ಅವರ ಮನಸ್ಸು ನೋಯದಂತೆ ನೋಡಿಕೊಳ್ಳುವುದು ಮಕ್ಕಳಾದವರ ಕರ್ತವ್ಯ ಅವರು ಬದುಕಿಲ್ಲವಾದರೆ ಅವರ ಆತ್ಮಶಾಂತಿಗಾಗಿ ಪ್ರಾರ್ಥನೆಯನ್ನೂ, ಅವರ ಹೆಸರಿನಲ್ಲಿ ದಾನಧರ್ಮಗಳನ್ನೂ ಮಾಡಿ ಅದರ ಪುಣ್ಯ ಫಲಗಳನ್ನು ಅವರಿಗೆ ಸಮರ್ಪಣೆ ಮಾಡಿ ಅವರ ಆತ್ಮಶಾಂತಿಯನ್ನು ಕೋರಬೇಕು.

ಗೆಳೆಯರೇ ಕೇಳಿ, ಇದುವರೆಗೆ ಸರ್ವವ್ಯಾಪಿಯಾದ ಭಗವಂತ ಕಣ್ಣಿಗೆ ಎಂದೂ ಕಾಣಿಸಲಿಲ್ಲ. ಮುಂದೆಯೂ ಸಹ ಕಾಣಿಸದೆ ಹೋಗಬಹುದು. ಆತನ ಪ್ರತಿನಿಧಿಯಾದ ತಾಯಿಯು ಪ್ರತಿನಿತ್ಯವೂ ನಮ್ಮ ಎದರಿಗೇ ಇರುತ್ತಾಳೆ. ಅವಳ ಶಕ್ತಿ ಸರ್ವಸ್ವವೂ ನಮ್ಮಿಂದಾಗಿಯೇ ಸೂರೆಯಾಗಿದೆ. ಮನೆಮನೆಯಲ್ಲೂ ನಾವು ತೀರ ಸೊರಗಿದ ತಾಯಂದಿರನ್ನು ನೋಡುತ್ತಿರುತ್ತೇವೆ. ಮಗುವು ತಾಯಿಯ ಹೃದಯದ್ವಾರ ತ್ಯಾಗ ಪ್ರೇಮಗಳ ಆಳವನ್ನು ಕಂಡುಕೊಳ್ಳುತ್ತದೆ. ಅದಕ್ಕನುಗುಣವಾದ ಪ್ರೀತಿ ಗೌರವಗಳನ್ನು ಅವಳಿಗೆ ಅರ್ಪಿಸುವುದರಲ್ಲಿ ಪರಮಾತ್ಮನ ಅಂಶವನ್ನು ಕಾಣಬೇಕು. ಯಾವ ರೀತಿಯಿಂದಲೂ ನಮ್ಮಿಂದ ಅವಳಿಗೆ ಗೋಳು ತಟ್ಟಬಾರದು. ಅವಳು ಪೂಜ್ಯೆ; ಅವಳು ಮಾನ್ಯೆ; ಅವಳು ಮಾತೆ. ಅವಳಿಂದಲೇ ಜನ್ಮ; ಅವಳಿಂದಲೇ ಬೆಳಕು.

ಕಾತ್ಯಾಯನ ಕೇಳು, ಭಾರತ ಸಂಸ್ಕೃತಿಯಲ್ಲಿ ಮೂಡಿದ ನೀತಿಸಾರ ಪುರಾತನವಾದರೂ ನಿತ್ಯವಾದುದು. ಜೀವನೋಪಯುಕ್ತವೂ ಪರತ್ರ್ವತ್ವವೂ ಆದುದು. ಅದನ್ನು ಯಾರೂ ಯಾವ ಕಾರಣಕ್ಕೂ ಅಲ್ಲಗಳೆಯುವಂತಿಲ್ಲ. ದಾನ-ಧರ್ಮ, ಸತ್ಯ-ಪ್ರೇಮ ಇವು ಮಾನವೀಯತೆಯ ನಿಜವಾದ ಕುರುಹು. ಇವುಗಳಿಲ್ಲದ ಬದುಕು ಇಲ್ಲದಿರುವುದೇ ಲೇಸು. ಅದಕ್ಕೆಂತಲೇ ಆಗ ಹೇಳಿದ್ದು-ಮನುಷ್ಯ ಸತ್ತರೆ ದುಃಖವಿಲ್ಲಃ ಮನುಷ್ಯತ್ವ ಸತ್ತರೆ ಬಹಳ ದುಃಖ ವಾಗುತ್ತದೆ ಎಂದು. ಮೊದಲನೆಯದಾಗಿ, ಮನುಷ್ಯಜನ್ಮವೆತ್ತಿದವನ ಕರ್ತವ್ಯವೇನು ಎಂಬುದರ ಅರಿವು ಮೂಡಿದರೆ ಸಾಕು: ಅನಂತರ ತಾನೇ ತಾನಾಗಿ ಬೆಳಗುತ್ತದೆ ಮನುಷ್ಯತ್ವ. ಅಂದರೆ ಸಮಾಜಕ್ಕೆ, ಲೋಕಕ್ಕೆ ನಾವು ಹೇಗೆ ಬದುಕಿದ್ದೇವೆ ಎಂಬುದನ್ನು ತೋರುವಂತಿರಬೇಕು ನಮ್ಮ ಬದುಕು. ನಮ್ಮಲ್ಲಿ ಮನುಷ್ಯತ್ವ ಇಲ್ಲವಾದರೆ ಮನುಷ್ಯನಾಗಿ ಹುಟ್ಟಿಯೂ ಪ್ರಯೋಜನವಿಲ್ಲ. ಅದಕ್ಕೆಂದೇ ಪೂರ್ವಿಕ ಮುನಿಜನರು ಶಾಸ್ತ್ರ-ವ್ಯವ ಹಾರಗಳು, ಜಪ-ತಪ-ಧ್ಯಾನಗಳು ಹೀಗೆ ಒಂದಲ್ಲ, ಎರಡಲ್ಲ ನೂರಾರು ವಿಚಾರಗಳ ಸರಮಾಲೆಯನ್ನೇ ನಮಗಾಗಿ ಬಿಟ್ಟು ಹೋಗಿದ್ದಾರೆ. ಅವರಿಗೆ ನಾವೆಷ್ಟು ಕೃತಜ್ಞರಾಗಿದ್ದರೂ ಅಲ್ಪವೇ.

ಇನ್ನೂ ಕೇಳಿ, ಯಾವ ಕರ್ಮ ಸಮಾಜಕ್ಕೆ ಆರೋಗ್ಯವೋ ಯಾವುದು ಅನಿಂದಿತವೋ ಅದನ್ನು ಮಾಡುವುದರಲ್ಲಿ ಮುಂದೆ ನಿಲ್ಲಬೇಕು. ಏಕೆಂದರೆ ನಮ್ಮಹಿತವು ಪರಹಿತವಾದೀತೆಂದು ಹೇಳುವಂತಿಲ್ಲ. ಅದಕ್ಕೆಂದೇ ಸಮಾಜದಲ್ಲಿ ಯಾವುದು ಅನಿಂದಿತವೋ ಅದನ್ನು ಮಾಡು ಎಂದದ್ದು ; ನಮಗೆ ಪ್ರಿಯವಾ ದುದು ಇನ್ನೊಬ್ಬರಿಗೆ ಅಪ್ರಿಯವಾಗಬಹುದು. ಯಾವಾಗಲೂ ಬಹುಜನ ಹಿತ,ಬಹುಜನ ಸುಖ ಸ್ವಹಿತಕ್ಕಿಂತ ಮುಖ್ಯ ಎಂಬುದನ್ನು ಹೆಜ್ಜೆ ಹೆಜ್ಜೆಗೂ ಗಮನದಲ್ಲಿಡಬೇಕು. ಇನ್ನು, ಗುರುವನ್ನು ಆರಿಸವಾಗಲೂ, ಅನುಸರಿಸುವಾ ಗಲೂ ಎಚ್ಚರಿರಬೇಕು. ಕೆಲವೊಮ್ಮೆ ಮಹಾಗುರುವಿನಲ್ಲೂ ಲೋಪ ದೋಷಗಳು, ಅವಗುಣಗಳು ಇದ್ದಿರಲೂಬಹುದು. ಅಂತಹ ಸಂದರ್ಭದಲ್ಲಿ ಒಳ್ಳೆಯದನ್ನು ಆರಿಸಿಕೊಂಡು ಅವಗುಣಗಳನ್ನು ಬಿಟ್ಟುಬಿಡಬೇಕು. ಯಾವ ಗುರುವೂ ನಮ್ಮಲ್ಲಿ ಲೋಪದೋಷಗಳು ಇಲ್ಲವೇ ಇಲ್ಲ ಎಂದು ಎದೆಮುಟ್ಟಿ

ಹೇಳಿಕೊಳ್ಳಲಾರ. ಒಂದು ತೋಟದಲ್ಲಿ ಮಾವೂ ಇರುತ್ತದೆ, ಬೇವೂ ಇರುತ್ತದೆ. ನಾವು ಬೇವನ್ನು ತಿಂದು ಮಾವನ್ನು ಹಳಿಯಬಾರದು.

ಇನ್ನು, ಸಾಮಾಜಿಕ ವಲಯದಲ್ಲಿ ಮುಳ್ಳುಕಂಟಿಗಳಂತೆ ಹುಟ್ಟಿ ಬೆಳೆದು ಸಮಾಜ ಕಂಟಕರಾಗಿ ಇರುವವರನ್ನೂ ಗಮನದಲ್ಲಿಟ್ಟುಕೊಳ್ಳಬೇಕು. ಅವರನ್ನು ಕಟುವಾಗಿ ಟೀಕಿಸುವುದಾಗಲೀ, ಅಲಕ್ಷ್ಯದಿಂದ ಕಾಣುವುದಾಗಲೀ, ಅಗೌರವದಿಂದ ತಿರಸ್ಕಾರಮಾಡುವುದಾಗಲೀ ಏನೇನೂ ಒಳ್ಳೆಯದಲ್ಲ. ಅವರನ್ನು ಒಂದಲ್ಲ ಒಂದು ರೀತಿಯಿಂದ ಸನ್ಮಾರ್ಗಕ್ಕೆ ಪರಿವರ್ತನೆಗೊಳಿಸುವುದರಲ್ಲಿ ಸಾರ್ಥಕ್ಯವಿದೆ. ನೀಚತ್ವ ಅವರವರ ಜನ್ಮ ಯೋಗವನ್ನು ಅವಲಂಭಿಸಿದರೂ ಅದು ಸಂದರ್ಭೋಚಿತವೂ ಆಗಿರುತ್ತದೆ. ಅವರನ್ನು ಅಲಕ್ಷಿಸುವುದಕಿಂತ ಲಕ್ಷಿಸುವುದರಲ್ಲಿಯೇ ನಿಜವಾದ-ಅತ್ಯಂತ ಅಮೂಲ್ಯವಾದ ಶ್ರೇಯಸ್ಸಿದೆ.

ಕೇಳಿ, ಯಾವ ಸಂದರ್ಭದಲ್ಲೇ ಆಗಲಿ ಶ್ರುತಿ-ಸಂಹಿತೆಗಳ ವಿಚಾರದಲ್ಲಿ ಏನಾದರೂ ಅನುಮಾನ ಬಂದಲ್ಲಿ ಅದನ್ನು ಕೇಳಿ ತಿಳಿದು ಸಂಶಯ ನಿವಾರಣೆ ಮಾಡಿಕೊಳ್ಳದೇ ಹೋದರೆ ಮನಸ್ಸಿಗೆ ಸಂತೃಪ್ತಿ ಮೂಡುವುದಿಲ್ಲ; ಅಂದರೆ ಕಲಿಕೆಯ ಆಶಾಪ್ರವೃತ್ತಿ ಶಿಥಿಲವಾಗುತ್ತದೆ; ನಂಬುಗೆ ಗೆಡುತ್ತದೆ. ಆದ್ದರಿಂದ ಕರ್ಮ ಕುಶಲಿಗಳಾಗಬೇಕಾದರೆ, ಮಾನಸಿಕ ಪ್ರಬುದ್ಧತೆ ಬಲಿಯಬೇಕಾದರೆ ಸಂಶಯ ನಿವಾರಣೆಯಾಗಲೇ ಬೇಕು. ಇಲ್ಲವಾದಲ್ಲಿ ವ್ಯರ್ಥ ಶ್ರಮ; ವ್ಯರ್ಥ ಜೀವನ; ಒಂದುವೇಳೆ ಅದರಿಂದ ನಿರ್ಲಿಪ್ತತೆ ಬೆಳೆದರೂ ಮಾನಸಿಕ ಆರೋಗ್ಯ ಮೂಡುವುದಿಲ್ಲ. ಆದ್ದರಿಂದ ಪ್ರತಿಯೊಂದು ಜಟಿಲತೆಯನ್ನು ಬಿಡಿಸುವುದರಲ್ಲಿಯೇ ತಥ್ಯವು ಹೊಳೆಯಬೇಕಾದರೆ. ಅಂದಮೇಲೆ ತಥ್ಯಾತಥ್ಯಗಳ ಪರಿಶೀಲನೆ ನಡೆಸುವುದು ಸೂಕ್ತ.

ಗೆಳೆಯರೇ, ವಿಧಿ ಎಂದರೆ ನಿಯಮ. ನಮ್ಮ ಪೂರ್ವಿಕರು ನಮಗೆ ತೋರಿ ಕೊಟ್ಟ ಮಾರ್ಗ; ಅವರ ನಿಯಮಿತ ನಡವಳಿಕೆಯ ಮೂಲಕ.

ಎಷ್ಟೇ ಕಷ್ಟ ನಷ್ಟಗಳಿಗೊಳಪಟ್ಟರೂ ಸತ್ಯಕ್ಕೆ ಜಯ ಎಂಬುದನ್ನು ಸ್ವಂತ ನಡವಳಿಕೆಯಲ್ಲಿ ತೋರಿದ್ದು ಮಾತ್ರವಲ್ಲ; "ಸತ್ಯಮೇವ ಜಯತೆ ನಾನೃತಂ" ಎಂದು ಕೂಗಿ ಹೇಳಿಯೂ ಹೋಗಿದ್ದಾರೆ. ಅದೇ ಪ್ರಕಾರವಾಗಿ ಅನೇಕಾನೇಕ ಮಂದಿ ಅದೇ ಮಾರ್ಗಯೋಗದಲ್ಲಿ ಗುರಿಮುಟ್ಟಿ ಜ್ಞಾನದೈಸಿರಿಯನ್ನು ಪಡೆದುಕೊಂಡಿರುವುದನ್ನೂ ಕಂಡಿದ್ದೇವೆ. ಆದ್ದರಿಂದ ಆ ಹಾದಿಯಲ್ಲಿ ನಿರ್ಭಯದಿಂದ ಪಯಣಿಸಬಹುದು. ಹೇಗೋ ಏನೋ ಇದೊಂದು ತಪ್ಪುದಾರಿ ಇದ್ದಿರಬಹುದು ಎಂಬ ಅಪನಂಬಿಕೆಯಲ್ಲಿ ಮುನ್ನಡೆಯನ್ನು ಕೆಡಿಸಿಕೊಳ್ಳಬಾರದು. ಅವರು ನಮ್ಮ ಒಳಿತಕ್ಕಾಗಿ, ಅಂದರೆ ತಮ್ಮ ಮುಂದಿನ ಪೀಳಿಗೆಯ ಉದ್ಧಾರಕ್ಕಾಗಿ ತಮ್ಮ ಸ್ವಾನುಭವವನ್ನು ಸಾರಿ ಹೇಳಿರುವರು. ಅದರಿಂದ ಅವರಿಗೆ ಸ್ವಲಾಭದ ಗುರಿಯೇನೂ ಇರಲಿಲ್ಲ; ಮುಂದಿನ ಪೀಳಿಗೆಯ ಹಿತ ಮತ್ತು ಭಾರತವರ್ಷದ ಹಿತ ಇಷ್ಟುಮಾತ್ರವೇ ಇದ್ದದ್ದು. ಅಂದರೆ ಇದೇ ಭಾರತೀಯ ಸಂಸ್ಕೃತಿ. ಇದೇ ಅಧ್ಯಾತ್ಮಿಕ ಧರ್ಮ. ಇದೇ ವೇದರಹಸ್ಯ. ಇದೇ ಈಶ್ವರಾಜ್ಞೆ. ಆದ್ದರಿಂದ ಗುರು ಹಿರಿಯರು ತೋರಿಕೊಟ್ಟ ನಿಯಮಬದ್ಧ ಮಾರ್ಗವೇ ನಮ್ಮ ಸರ್ವಾಂಗೀಣ ಪ್ರಗತಿಗೆ ಯುಕ್ತವಾದುದು. ಅದು ಸಂಕಟ–ದುಃಖ ದೂರವೂ ಹೌದು. ಮಾನವತೆಯ ಪ್ರತೀಕವೂ ಹೌದು.

ಗೆಳೆಯರೇ, ಬ್ರಹ್ಮವಸ್ತುವನ್ನು ತಿಳಿದವನು ಬ್ರಹ್ಮವಸ್ತುವನ್ನೇ ಹೊಂದುತ್ತಾನೆ. ನಾವು ಯಾವಾಗ ಅವನನ್ನು ಬೌದ್ಧಿಕವಾಗಿ, ಮಾನಸಿಕವಾಗಿ, ಆಂತರಂಗಿಕವಾಗಿ ಅರಿತುಕೊಳ್ಳುತ್ತಾ ಹೋಗುತ್ತೇವೋ ಆಗ ಹೆಜ್ಜೆ ಹೆಜ್ಜೆಗೂ ನಾವು ಬ್ರಹ್ಮತತ್ತ್ವವನ್ನೇ ಪಡೆಯುತ್ತ ಭೂಮವಾಗುತ್ತೇವೆ. ದೇಹೇಂದ್ರಿಯಗಳ ಬಂಧವನ್ನು ಕಳೆದು ಅವುಗಳ ಉಪಾಧಿಯಲ್ಲಿ ಸಿಕ್ಕಿ ನರಳುವ ಅಭಿಯೋಗ ಅಲ್ಲಿಗೆ ಕಳೆಯುತ್ತದೆ. ಬ್ರಹ್ಮಜ್ಞಾನದಷ್ಟು ಪವಿತ್ರ ಭಾವ ಇನ್ನೊಂದಿಲ್ಲ. ಯಾವಾಗ ಅನುಭವ ಪಕ್ವವಾಗುವುದೋ ಆಗ ಪಾಪಮೂಲವಾದ ಅಜ್ಞಾನವು ಒಂದೇಸಲ ವಿನಾಶಹೊಂದಿ ಮಾನವತೆಯ ದೈವೀಕರಣವಾಗುತ್ತದೆ. ಅದನ್ನು ಸರ್ವತ್ರ ಸಾಧಿಸುವುದೇ ಜೀವನ ರಹಸ್ಯ ಮತ್ತು ನಿರ್ಮಲ ಬದುಕಿನ ರಹಸ್ಯ.

ಸತ್ಯವನ್ನು ಆರಾಧಿಸುವವರು ಅದನ್ನು ಭಗವಂತ ಎನ್ನುತ್ತಾರೆ. ದ್ರವ್ಯ ಎನ್ನುತ್ತಾರೆ. ತಾಯಿತಂದೆ ಎನ್ನುತ್ತಾರೆ. ಬ್ರಹ್ಮವಸ್ತುವಿನಷ್ಟೇ ಸತ್ಯವು ಪವಿತ್ರವಾದುದು. ಬ್ರಹ್ಮವಸ್ತುವಿನಷ್ಟೇ ಶಾಶ್ವತವಾದುದೂ ಸಹ. ಪ್ರಪಂಚದಲ್ಲಿ ಯಾವು ಯಾವುದೋ ಬದಲಾವಣೆಯಾಗುತ್ತಿರುತ್ತದೆ. ಏರುಪೇರುಗಳಾಗುತ್ತಿರುತ್ತವೆ. ಆದರೆ, ಸತ್ಯದ ವಿಚಾರ ಹಾಗಲ್ಲ. ಅದಕ್ಕೆ ಶಾಶ್ವತವಾದ ಹಿನ್ನಲೆಯಿದೆ. ಶಾಶ್ವತವಾದ ಆಧಾರವೂ ಇದೆ. ಅಂತಲೇ ಅದು ಶಾಶ್ವತವಾದ ಸತ್ಯಬ್ರಹ್ಮ. ಹೀಗೆಯೇ ಯುಗಯುಗಾಂತರದಿಂದಲೂ ನಡೆದುಬಂದಿದೆ. ಮುಂದೆ ಕಾಲಾನುಕಾಲಕ್ಕೂ ಮುನ್ನಡೆ ಇರುತ್ತದೆ.

ನಾವು ಯಾವುದನ್ನು ಕಾಲ-ದೇಶ ಎನ್ನುತ್ತೇವೋ ಅದರಲ್ಲಿ ತ್ರಿಲೋಕವೂ ಇದೆ. ಭೂತ-ವರ್ತಮಾನ-ಭವಿಷ್ಯಗಳೂ ಇವೆ. ಈ ಕಾಲ-ದೇಶಗಳ ಅರ್ಥವೇನು ? ಅದು ಎಲ್ಲಿಂದ ಬಂತು ? ಎಂದರೆ ಈ ಆರೋಪ ಬಂದಿರುವುದೇ ಸತ್ಯದಿಂದ. ಇಲ್ಲಿ ಜೀವನ ಸತ್ಯ-ವ್ಯವಹಾರ ಸತ್ಯಗಳ ತುಲನೆಯೇ ಕಾಲ-ದೇಶ. ಯಾವಾಗ ಕಾಲ-ದೇಶ-ನಿಮಿತ್ತಗಳೆಂಬ ಆರೋಪವನ್ನು ನಾವು ಮಾಡುತ್ತೇವೋ ಅದರಲ್ಲಿ ಕಾಲಕಾಲಕ್ಕೂ ತೀವ್ರ ಬದಲಾವಣೆಗಳು ಕಾಣುತ್ತವೆ. ಈ ಎಲ್ಲವುಗಳ ಹಿಂದೆ ಇರುವುದೊಂದೇ ಶಾಶ್ವತವಾದ ಪರಮೋತ್ಕೃಷ್ಟವಾದ ಸತ್ಯ. ಅದೇ ಪರಬ್ರಹ್ಮ. ಅದೇ ಭಗವಂತ. ಅದೇ ದ್ರವ್ಯ. ಅದೇ ತಾಯಿತಂದೆ. ಅದೇ ಅವಿನಾಶಿ. ಅದನ್ನು ನಾವು ಯಾವತ್ತೂ ಅನುಮಾನಿಸುವಂತಿಲ್ಲ. ಆದರ ಮೇಲೆಯೇ ನಿಂತು ಅದನ್ನು ಅನುಮಾನಿಸುವುದು ಸಾಧ್ಯವೂ ಇಲ್ಲ. ಅದರಿಂದ ನಮಗೇ ನಾಚಿಗೆಗೇಡು. ಅದುವೇ ನಮ್ಮನ್ನು ಸರ್ವತ್ರ ಕಾಪಾಡಬೇಕಾದರೆ. ಅದುವೇ ನಮಗೆ ಪರಮಪೂಜ್ಯತೆಯನ್ನು ಸಂಪಾದಿಸಿಕೊಡಬೇಕಾದರೆ.

ಗೆಳೆಯರೇ, ಜ್ಞಾನದ ವಿಚಾರ ತೆಗೆದುಕೊಂಡರೂ ಹಾಗೆಯೇ. ಅದರ ವಿಶೇಷವೇ ಜ್ಞಾನ. ಅದರ ಸ್ವರೂಪವೇ ಜ್ಞಾನ. ಅದಕ್ಕೊಂದು ಬೇರೆ ವ್ಯಕ್ತಿತ್ವವಿಲ್ಲ. ಅದಕ್ಕಾಗಿ ಅದು ಜ್ಞಾನವನ್ನು ಬೇರೆ ಸಂಪಾದಿಸ

ಬೇಕಾಗಿಲ್ಲ. ರವಿ ಹೇಗೆ ಕಿರಣವನ್ನು ಸಂಪಾದಿಸಬೇಕಿಲ್ಲವೋ ಹಾಗೆ, ಮಲ್ಲಿಗೆ ಹೇಗೆ ಪರಿಮಳವನ್ನು ಹುಡುಕಬೇಕಾಗಿಲ್ಲವೋ ಹಾಗೇ ಕ್ಷೀರವು ಹೇಗೆ ಧವಳವರ್ಣಕ್ಕಾಗಿ ಅರಸಬೇಕಾಗಿಲ್ಲವೋ ಹಾಗೆ ಜ್ಞಾನದ ಸ್ವರೂಪವೇ ಜ್ಞಾನವಾದ್ದರಿಂದ ಅದು ಸಮಸ್ತವನ್ನೂ ತಾನೇ ತೂಗಿ ನೋಡಬಲ್ಲದು. ಅದೇ ಆಧಾರ ಜಗತ್ ಸೃಷ್ಟಿಗೆ. ಅದರ ಬಲದಿಂದಲೇ ಜಗತ್ತು ಇನ್ನೂ ಉಸಿರಾಡುತ್ತಿದೆ. ಮುಂದೆಯೂ ಉಸಿರಾಡುತ್ತದೆ.

ಗೆಳೆಯರೇ, ಇನ್ನು ಅನಂತದ ವಿಚಾರ ಕೇಳಿ. ಅನಂತನಿಗೆ ಆದಿ–ಅಂತ್ಯಗಳಿಲ್ಲ ಅವನಿಲ್ಲದ ತಾಣವಿಲ್ಲ. ಆವನಿಲ್ಲದ ವಸ್ತುವಿಲ್ಲ. ಅವನೇ ಸಮಸ್ತ ಅವನೇ ಸರ್ವಸ್ವ. ನಾವು ಯಾರನ್ನು ಅನಂತ ಎಂದು ಕರೆಯುತ್ತೇವೋ ಅವನೇ ಬ್ರಹ್ಮ. ಅವನೇ ಪರಬ್ರಹ್ಮ. ಅವನೇ ಜಗತ್ತಿಗೆಲ್ಲಾ ಒಡೆಯ. ಅವನು ಒಬ್ಬನೇ. ಅವನು ಏಕಮೇವಾ ದ್ವಿತೀಯ. ಅಂದಮೇಲೆ ಸಮಸ್ತ ಜೀವರಾಶಿಗಳೆಲ್ಲಾ ಅನಂತವೇ ಎಂಬ ಪ್ರಶ್ನೆ ಇಲ್ಲಿ ಏಳುವುದು ಸಹಜ. ಅದನ್ನು ಆಳವಾಗಿ ಯೋಚಿಸಿ ನೋಡಿದರೆ ಪರಮ ಸತ್ಯದ ದೃಷ್ಟಿಯಿಂದ ಎಲ್ಲವೂ ಬ್ರಹ್ಮವೇ ಎಂಬ ಚಿರಂತನ ಸತ್ಯ ವ್ಯಕ್ತವಾಗುತ್ತದೆ. ನಾಮ–ರೂಪಗಳ ದೃಷ್ಟಿಯಿಂದ ಹಲವಾಗಿ ಕಂಡರೂ ಅನಂತವು ಅನಂತವೇ. ನಾವು ಕಾಲ–ದೇಶ–ನಿಮಿತ್ತಗಳ ಪ್ರಾಕಾರದಲ್ಲಿರುವುದರಿಂದಲೇ ದೃಷ್ಟಿಯಲ್ಲಿ ಪರಿಭೇದ. ಸಮ್ಯಕ್ ದೃಷ್ಟಿಯಿಂದ ನೋಡಿದರೆ ಸಮಸ್ತ ಜೀವರಾಶಿಗಳೂ ಅನಂತವೇ. ಬಾಹ್ಯಾಕಾಶವನ್ನು ನೋಡಿದರೆ ಅದರ ನಿರ್ಣಯ ತಾನಾಗಿ ಆಗುತ್ತದೆ. ನೀರಿನಲ್ಲಿ ಕಾಣುವ ಪ್ರತಿಬಿಂಬವನ್ನು ನಾನು ಎಂದು ಭಾವಿಸಿದರೆ ಅದು ಭ್ರಮೆಯೇ ಹೊರತು ತಥ್ಯವಲ್ಲ. ಆ ಪ್ರತಿಬಿಂಬಕ್ಕೆ ಕಾರಣ ಮೇಲಿರುವ ಸೂರ್ಯ. ನೀರಿನ ಮಧ್ಯವರ್ತಿಯಿಂದ ನೋಡಿದಾಗ ಕಾಣಿಸುತ್ತದೆ ಪ್ರತಿಬಿಂಬ. ಆದರೆ, ನಿಜವಾಗಿಯೂ ಸತ್ಯ ಬದಲಾಗುವುದಿಲ್ಲ. ಆ ಭಾವನೆಗೆ ಕಾರಣ ನೀರಿನ ಮಧ್ಯವರ್ತಿಯೇ. ನಮ್ಮಿಮ್ಮದೇಹವೆಂಬ ಘಟವನ್ನು ಒಗೆದರೆ ನಾವು ಸಹ ಅನಂತದಲ್ಲಿ ವಿಲೀನವಾಗುವುದು ನಿಯಮಬದ್ಧ. ನಾವು ಘಟದಲ್ಲಿದ್ದಾಗಲೂ ಆಕಾಶವೇನೂ ಬೇರೆಯಾಗಿರಲಿಲ್ಲ. ಆದರೆ, ಬೇರೆ ಎಂಬ ಪ್ರತ್ಯೇಕಭಾವನೆ ನಮ್ಮಲ್ಲಿತ್ತು ಅಷ್ಟೆ.

ನಾವು ವ್ಯೋಮದಲ್ಲಿ ಲೀನವಾದರೂ ನಮ್ಮ ಅಂತರಂಗ ನಮ್ಮ ವ್ಯಕ್ತಿತ್ವದ ತಳಹದಿ. ಆ ವ್ಯಕ್ತಿತ್ವವನ್ನು ದಾಟಿ ಹೋದರೆ ಬ್ರಹ್ಮ. ಅವನೇ ನಾನು. ನಾನೇ ಅವನು. ನನ್ನಲ್ಲೇ ಅವನ ನಿವಾಸ. ಅಲೆ ಸಾಗರದಲ್ಲಿದ್ದರೂ ಸಾಗರವೇ ಅಲೆಯಂತೆ ಕಾಣಿಸುತ್ತದೆ. ಅದರಂತೆಯೇ ನಾನೆಂಬ ಅಲೆಯಲ್ಲಿ ನಿತ್ಯಸತ್ಯವಾಗಿರುವುದು ಬ್ರಹ್ಮನೇ. ನಾವು ಎಂದಿಗೂ ಅಲೆಯನ್ನು ಸಾಗರದಿಂದ ಬೇರ್ಪಡಿಸಲಾಗುವುದಿಲ್ಲ. ಅಂತೆಯೇ ಸತ್ಯವನ್ನು ಅರಿತವನು ಸರ್ವಜ್ಞನೇ ಆಗಿರುತ್ತಾನೆ. ಇಲ್ಲಿ ಸರ್ವಜ್ಞ ಎಂದ ಮಾತ್ರಕ್ಕೆ ಸಕಲ ವಿಜ್ಞಾನಗಳ ಅಧಿಪತಿ ಎಂದರ್ಥವಲ್ಲ. ಎಲ್ಲಾ ಶಾಸ್ತ್ರಗಳಿಗೂ ಮೂಲವಸ್ತುವಾದ ಬ್ರಹ್ಮನನ್ನು ಅರಿತವನು ಎಂದರ್ಥ. ಅಥವಾ ಬ್ರಹ್ಮಜ್ಞ ಎನ್ನಬಹುದು. ಎಲ್ಲಾ ತತ್ವಗಳ ಹಿಂದೆ ನಿತ್ಯಸತ್ಯವಾಗಿರುವುದು ಒಂದೇ ವಸ್ತು. ಇದು ಅದಲ್ಲ ಎಂದು ಭಾವಿಸುವವನು ಅಥವಾ ವಾದಿಸುವವನು ಅಜ್ಞಾನಿ ಅಥವಾ ಅಲ್ಪಜ್ಞಾನಿ.

ಅನಂತ ಕಾಮಿಯಲ್ಲದಿದ್ದರೂ ಅವನಲ್ಲಿಗೆ ಕಾಮುಕಾಮುಗಳ ನದಿಯೇ ಹರಿದು ಬರುತ್ತದೆ, ಸಮುದ್ರದೆಡೆಗೆ ಎಲ್ಲಾ ನದಿಗಳೂ ಹರಿದು ಬರುವಂತೆ. ಜನ ಯಾವುದಕ್ಕೆ ಘೀಳಿಡುವರೋ ಅಂತಹ ಐಶ್ವರ್ಯ ಕೀರ್ತಿ ಮುಂತಾದವು ತಾನಾಗಿಯೇ ಹರಿದು ಬರುತ್ತಿದ್ದರೆ ಅವನು ಅದನ್ನು ಲವಲೇಶವೂ ಲಕ್ಷಿಸುವವನಲ್ಲ. ಎಲ್ಲಾ ನದಿಗಳನ್ನೂ ತನ್ನಂತರಂಗದಲ್ಲಿ ತುಂಬಿಕೊಂಡರೂ ಸಾಗರ ತುಂಬಿ ಎಂದಾದರೂ ಕೋಡಿ ಹರಿಯುತ್ತದೆಯೇ. ಸಮಸ್ತವೂ ಬ್ರಹ್ಮಮಯವೇ ಆಗಿರುವಾಗ ಬ್ರಹ್ಮನಿಗೆಲ್ಲಿಯ ಆಶೆ–ಆಕಾಂಕ್ಷೆ? "ಸರ್ವಂ ಬ್ರಹ್ಮಮಯಂ" ಎಂದ ಮೇಲೆ ಎಲ್ಲಿಯ ಪರಿಭೇದ?

ದೇವರಾತ–ನಾನು ಯಾವ ವಿಚಾರವನ್ನು ಅರಿತುಕೊಳ್ಳಲು ಉತ್ಸುಕನಾಗಿದ್ದೆನೋ, ಅದೇ ವಿಚಾರಗಳ ಸುರಿಮಳೆಯಾಗಿದೆ. ಅದು ನನ್ನ ಅದೃಷ್ಟ.

ಕಾತ್ಯಾಯನ–ತುಂಬ ಸರಳವಾದ ಪ್ರವಚನ.

ಆ ವೇಳೆಗೆ ದೌವಾರಿಕನೊಬ್ಬನು ಅಲ್ಲಿಗೆ ಆಗಮಿಸಿ ಮೂವರಿಗೂ

ಉದ್ದಂಡ ನಮಸ್ಕಾರ ಮಾಡಿ ತಲೆಬಾಗಿ ಕೈಮುಗಿದುಕೊಂಡು ನಿಲ್ಲುತ್ತಾನೆ, ಅತ್ಯಂತ ವಿನಮ್ರತೆ-ಭಯ-ಭಕ್ತಿಗಳ ವಶೀಭೂತನಾಗಿ.

ಯಾಜ್ಞವಲ್ಕ್ಯ ಮಹರ್ಷಿ-ಯಾರಯ್ಯಾ ನೀನು ? ಎಲ್ಲಿಂದ ಬಂದೆ ?

ದೌವಾರಿಕ-ನಾನು ಮಿಥಿಲಾಪುರದಿಂದ ಬಂದಿರುವೆ. ರಾಜಾಧಿರಾಜರಾದ ಜನಕ ಮಹಾರಾಜರಿಂದ ತಮ್ಮ ಕಡೆಗೆ ನಿರೂಪವೊಂದನ್ನು ತಂದಿರುವೆ. ಅಪ್ಪಣೆಯಾದರೆ ತಿಳಿಸುವೆ.

ಯಾಜ್ಞವಲ್ಕ್ಯ ಮಹರ್ಷಿ-ಹೇಳಯ್ಯಾ, ಹೇಳು.

ದೌವಾರಿಕ-ಮಹಾರಾಜರು ಯಜ್ಞದೀಕ್ಷೆಯನ್ನು ಕೈಗೊಂಡಿದ್ದಾರೆ. ನಿಮ್ಮೆಲ್ಲರಿಗೂ ಹೃತ್ಪೂರ್ವಕವಾದ ಆಹ್ವಾನವನ್ನು ಈ ಮಂತ್ರಾಕ್ಷತೆಯ ಮೂಲಕ ಕಳುಹಿಸಿಕೊಟ್ಟಿದ್ದಾರೆ, ದೇವರೂ !

ರಜತಕರಂಡದಲ್ಲಿದ್ದ ಮಂತ್ರಾಕ್ಷತೆಯನ್ನು ವಿನಯಪೂರ್ವಕವಾಗಿ ಅವರ ಮುಂದೆ ಹಿಡಿಯುವನು. ಅವರು ಮೂವರೂ ತೆಗೆದುಕೊಂಡ ನಂತರ ಅತ್ಯಂತ ವಿನಮ್ರತೆಯಿಂದ ತಲೆಬಾಗಿ-ತಾವೆಲ್ಲರೂ ಕೃಪೆಯಿಟ್ಟು ಆಗಮಿಸಿ ಯಜ್ಞಕಾರ್ಯವನ್ನು ನಡೆಸಿಕೊಡಬೇಕು, ಎಂದು ಕೇಳಿಕೊಳ್ಳುತ್ತೇನೆ.

ಯಾಜ್ಞವಲ್ಕ್ಯ ಮಹರ್ಷಿ-ಆಯಿತು, ಆಯಿತು.

ದೌವಾರಿಕನು ದೇವರಾತನ ಕಡೆಗೆ ತಿರುಗಿ-ತಾವೂ ಸಹ ತಪ್ಪದೆ ದಯಮಾಡಿಸಬೇಕು ಸ್ವಾಮಿ.

ದೇವರಾತ-ಆಗಬಹುದು, ಏನೂ ಅಭ್ಯಂತರವಿಲ್ಲ.

ದೌವಾರಿಕನು ಕಾತ್ಯಾಯನನ ಕಡೆಗೆ ತಿರುಗಿ-ತಾವೂ ಸಹ ಬರಬೇಕು ಸ್ವಾಮಿ.

ಕಾತ್ಯಾಯನ-ಆಯಿತಪ್ಪ, ಬಂದೇ ಬರುತ್ತೇವೆ.

ದೌವಾರಿಕನು ಕೊನೆಯದಾಗಿ ಮತ್ತೆ ಯಾಜ್ಞವಲ್ಕ್ಯ ಮಹರ್ಷಿಯ ಕಡೆ ತಿರುಗಿ ಕೈಮುಗಿದುಕೊಂಡು—ಮಹಾ ಸ್ವಾಮಿ, ಕೃಪೆಮಾಡಿ ನನಗೆ ಅಪ್ಪಣೆಯಾಗಬೇಕು.

ಯಾಜ್ಞವಲ್ಕ್ಯ ಮಹರ್ಷಿ—ತಥಾಸ್ತು.

ಉಚ್ಛ್ವಾಸ ೧೨

○

ಮಿಥಿಲಾ ನಗರಿಯ ಹೊರವಲಯದಲ್ಲಿ ಗಂಗಾನದೀ ತೀರದ ವಿಶಾಲವಾದ ತಾಣದಲ್ಲಿ ತಳಿರು ತೋರಣಗಳಿಂದ ಮತ್ತು ಫಲಪುಷ್ಪಾದಿಗಳಿಂದ ಸುಂದರವಾಗಿ ಅಲಂಕೃತವಾದ ಮಹಾಯಜ್ಞಶಾಲೆ. ಅದರಮಧ್ಯೆ, ಯಜ್ಞೋಚಿತವಾದ ಅಗ್ನಿ ಕುಂಡದಲ್ಲಿ ಕೆನ್ನಾಲಿಗೆಗಳನ್ನು ಚಾಚುತ್ತ ಉರಿಯುತ್ತಿರುವ ಅಗ್ನಿಜ್ವಾಲೆ. ಅಲ್ಲೇ ಬಳಿಯಲ್ಲಿ ಕುಕ್ಕೆ-ಬುಟ್ಟಿಗಳಲ್ಲಿ, ತಟ್ಟೆ ಹರಿವಾಣಗಳಲ್ಲಿ, ಕರಂಡ-ಬಿಂದಿಗೆಗಳಲ್ಲಿ ಸಂಗ್ರಹೀತವಾದ ವಿವಿಧ ಪ್ರಕಾರಗಳ ಮಂಗಳ ದ್ರವ್ಯಗಳು, ಪೂಜಾಸಾಮಗ್ರಿಗಳು, ಫಲಪುಷ್ಪಗಳು, ಎಣ್ಣೆ ತುಪ್ಪ ಮೊದಲಾದ ತೈಲಗಳು, ನವನೀತ–ದಧಿ–ಕ್ಷೀರಗಳು, ದರ್ಭೆ–ಸಮಿತ್ತುಗಳು, ಗುಗ್ಗುಳ-ಸಾಂಬ್ರಾಣಿಗಳು ಹೀಗೆ ನಾನಾ ಬಗೆಯ ವಸ್ತುಗಳು ಕಣ್ಗೊಳಿಸುತ್ತವೆ.

ದೇಶವಿದೇಶಗಳ ಮಹಾ ವಿದ್ವನ್ಮಣಿಗಳಾದ ವೇದಾಂತಿಗಳು ಮುನಿಪುಂಗವರು ಮಹಾಮಹರ್ಷಿಗಳು, ಬ್ರಾಹ್ಮಣರು, ಅತಿಥಿಅಭ್ಯಾಗತರು ಪುರನಿವಾಸಿಗಳು ಸಂಭ್ರಮ ಸಡಗರಗಳಿಂದ ಸಮಾಹಿತವಾದ ಬೃಹತ್ ಸಭೆಯಲ್ಲಿ ಕ್ರೋಢೀಕೃತವಾದ ಶ್ರದ್ಧೆ-ಭಕ್ತಿ, ಶಾಂತಿ-ಸಮಾಧಾನಗಳು

ಘನೀಭೂತವಾಗಿದ್ದುದೊಂದು ವಿಶೇಷವೇ. ಯಜ್ಞವೇದಿಕೆಯ ಸುತ್ತೂ ನಾಲ್ದೆಸೆಗಳ ಮುಂದುಗಡೆಸಾಲಿನಲ್ಲಿ ಒಂದೆಡೆಯಲ್ಲಿ ಮಹಾ ವಿದ್ವನ್ಮಣಿಗಳಾದ ಮುನಿಋಷಿಗಳ ವೃಂದ, ಇನ್ನೊಂದೆಡೆಯಲ್ಲಿ ಅತಿಥಿ ಅಭ್ಯಾಗತರು, ಮತ್ತೊಂದೆಡೆಯಲ್ಲಿ ರಾಜಕಾರಿಣಿಗಳು ಮತ್ತು ಪುರ ಪ್ರಮುಖರು, ಮಗದೊಂದೆಡೆಯಲ್ಲಿ ಜನಕ ಚಕ್ರವರ್ತಿ ಮತ್ತು ಕುಟುಂಬವರ್ಗದವರು, ಹಿಂಬದಿಯಲ್ಲಿ ಪುರಜನರು ಮತ್ತು ಪುರನಿವಾಸಿನಿಯರು ಹೀಗೆ ವರ್ಗ ವಿಭೇದವಿದ್ದು ಭಾಗಭಾಗದಲ್ಲೂ ಕಿಕ್ಕಿರಿ ತುಂಬಿದ ಜನತೆಯೇ ಸಾಕ್ಷಿಯಜ್ಞದ ವಿಸ್ತಾರಕ್ಕೆ. ಸುಗಂಧ ದ್ರವ್ಯಗಳ ಗಂಧ, ಸುಗಂಧ ಪುಷ್ಪಗಳ ಗಂಧ ವಾತಾ ವರಣದಲ್ಲಿ ವ್ಯಾಪಿಸಿ ಅಂತಃಸ್ಥಲವನ್ನು ಸುಖಸ್ಪರ್ಶಮಾಡಿ ಮನಃ ಪ್ರಾಣಗಳಿಗೆ ಪುಟವಿಡುತಿತ್ತು ತಾನೇತಾನಾಗಿ. ಪುಣ್ಯವಾಹಿನಿ ಗಂಗಾ ನದೀ ಧಾರೆಯ ಕಲಕಲರವದ ಶ್ರುತಿಯ ಹಿಮ್ಮೇಳದಲ್ಲಿ ಹೊಮ್ಮುವ ಅಖಂಡ ಮಂತ್ರಘೋಷಧಾರೆಯ ರಾಗರವದೊಂದಿಗೆ ಧ್ವನಿಗೂಡುವ ಪಕ್ಷಿಜಗತ್ತಿನ ಸುಪ್ರಭಾತದ ಮಂಗಳಧಾರೆಯೂ ಮನ ಮೋಹಕ.

ಸನ್ಮಂಗಳ ಮುಹೂರ್ತ ಸಾರಿಬರುತ್ತಲೂ ಜನಕ ಚಕ್ರವರ್ತಿ ಕೈಮುಗಿದು ಕೊಂಡು ಯಜ್ಞಶಾಲೆಯನ್ನು ಪ್ರವೇಶಿಸುತ್ತಾನೆ. ಒಡನೆಯೇ ಎಲ್ಲರೂ ಗೌರವ ಪೂರ್ವಕವಾಗಿ ಎದ್ದುನಿಂತು ತಲೆಬಾಗಿ ನಮಸ್ಕರಿಸುತ್ತಾರೆ.

ಮಹರ್ಷಿ ವೃಂದ–ಶ್ರೇಯೋಸ್ತು ಸಾಮ್ರಾಟ್ !

ಬೃಹತ್ ಸಭೆ-ಭೋ ಪರಾಕ್ ಮಹಾರಾಜ !

ಜನಕ ಚಕ್ರವರ್ತಿಯು ವಿನೀತಭಾವದಿಂದ ಎಲ್ಲರಿಗೂ ಪ್ರತಿ ವಂದಿಸುವಂತೆ ಕೈಮುಗಿದುಕೊಂಡೇ ವೇದಿಕೆಯೆಡೆಗೆ ನಡೆದು ಪೀಠವನ್ನ ಲಂಕರಿಸಿ ಒಮ್ಮೆ ಬೃಹತ್ ಸಭೆಯನ್ನು ನಿಟ್ಟಿಸಿ ನೋಡಿದ. ಪ್ರಥಮ ದರ್ಶನದಿಂದಲೇ ನೋಟ ಆನಂದ ವಿಸ್ತೃತವಾಗಿ ಎಲ್ಲೆಡೆಯೂ ಮತ್ತೆ ಹರಿದಾಡಿತು. ಎದುರುಗಡೆಯ ಸಾಲಿನಲ್ಲಿ ಅಂಗ, ಕಳಿಂಗ, ಕಾಶ್ಮೀರ, ಪಾಂಚಾಲ ವಿದರ್ಭ ಮುಂತಾದ ದೇಶೀಯಮಹಾ ಮುನಿಪುಂಗವರೊಂದಿಗೆ ಯಾಜ, ವಲ್ಕ್ಯ ಮಹರ್ಷಿಯೂ, ವಿದ್ವನ್ಮಣಿಗಳಾದ ಬ್ರಹ್ಮವಾದಿನಿಯರೊಂದಿಗ್ಗೆ

ಮೈತ್ರೇಯೀ ಕಾತ್ಯಾಯಿನಿಯರೂ ಕಂಡುಬಂದರು. ಕೌಷೇಯ ಕಷಾಯ ವಸ್ತ್ರ ಮತ್ತು ರುದ್ರಾಕ್ಷಮಾಲೆಗಳನ್ನು ಧರಿಸಿ ಜಟಾಜೂಟ ಧಾರಿಗಳಾದ ಮುನಿಪುಂಗವರನ್ನು ಕಣ್ತುಂಬ ನೋಡಿ ಆನಂದಿತನಾದ. ಹೃದ್ಗಡಲು ಭಕ್ತಿಧಾರೆಯಿಂದ ತುಂಬಿ ಧುಮುಧುಮಿಸಹತ್ತಿತು. ಮುನಿಜನಗಳನ್ನು ಪರಮ ಭಕ್ತಿಗೌರವಗಳಿಂದ ಕುಶಲ ಪ್ರಶ್ನೆಗೈಯುತ್ತಾನೆ.

ಜನಕ ಚಕ್ರವರ್ತಿ–ನಮೋ ಮಹದ್ಭ್ಯಃ! ತಮ್ಮೆಲ್ಲರ ಸುಖಾಗಮನ ನಮಗೆ ಅತ್ಯಂತ ಸಂತೋಷವನ್ನುಂಟುಮಾಡಿದೆ. ಎಲ್ಲರೂ ಕುಶಲವಷ್ಟೆ ?

ಉದ್ದಾಲಕ ಮಹರ್ಷಿಯು ಪ್ರಸನ್ನಮುಖದಿಂದ–ಮಹಾರಾಜ! ತಮ್ಮ ಕೃಪಾಶ್ರಯದಲ್ಲಿ ಎಲ್ಲರೂ ಕುಶಲ.

ಹಿಂದೆಯೇ ಅನೇಕ ಮಹರ್ಷಿಗಳ ಕಂಠ ಕಹಳೆಯಂತೆ ಮೊಳಗುತ್ತದೆ–ಎಲ್ಲರೂ ಕುಶಲ ಸಾಮ್ರಾಟ್.

ಅನಂತರ ಜನಕ ಚಕ್ರವರ್ತಿಯು ಅತಿಥಿ ಅಭ್ಯಾಗತರ ಕಡೆ ತಿರುಗಿ ಕೈಜೋಡಿಸಿಕೊಂಡು–ನಮಸ್ತೇಸ್ತು ಬಂಧು ಬಾಂಧವರೇ ! ತಮ್ಮಗಳ ಆಗಮನ ನಮಗೆ ಅತೀವ ಆನಂದವನ್ನು ತಂದಿದೆ. ತಾವೆಲ್ಲರೂ ಕುಶಲವೇ ?

ಆಗ ರಾಜ ಶ್ರೇಷ್ಠನಾದ ಕೃತವರ್ಮ ಮಹಾರಾಜನು ಉತ್ತರಿಸುತ್ತಾನೆ–ತಮ್ಮ ಸ್ನೇಹಾಶ್ರಯದಲ್ಲಿ ಎಲ್ಲರೂ ಕುಶಲ, ಸಾಮ್ರಾಟ್! ಈ ಮೊಂದು ಮಹಾ ಸಮಾರಂಭದಲ್ಲಿ ಭಾಗವಹಿಸುವ ಭಾಗ್ಯ ನಮಗೊದಗಿದುದಕ್ಕಾಗಿ ನಾವು ತುಂಬ ಸಂಪ್ರೀತರೂ ಸಂತುಷ್ಟರೂ ಆಗಿದ್ದೇವೆ.

ಜನಕ ಚಕ್ರವರ್ತಿಯು ಮತ್ತೆಲ್ಲಾ ಸಭಾಸದರಿಗೆ ಕೈಜೋಡಿಸಿದನಂತರ ಮಹರ್ಷಿಗಳನ್ನು ಕುರಿತು ಗೌರವಪೂರ್ವಕವಾಗಿ ಈ ರೀತಿಯಲ್ಲಿ ಕೇಳಿಕೊಳ್ಳುತ್ತಾನೆ.

ಜನಕ ಚಕ್ರವರ್ತಿ–ಎಲ್ಲಾ ಮಹರ್ಷಿವರ್ಯರಲ್ಲಿ ನಮ್ಮದೊಂದು ವಿಜ್ಞಾಪನೆ. ತಮ್ಮಲ್ಲಿ ಸರ್ವಶ್ರೇಷ್ಠರಾರೆಂಬುದನ್ನು ನಾವು ಅರಿಯೆವು. ಇಂದಿನ ಈ ಸಭೆಯಲ್ಲಿ ಋಷಿಶ್ರೇಷ್ಠರು ಮುಂದೆ ಬಂದು ನಮ್ಮ ಕಾಣಿಕೆಯನ್ನು ಸ್ವೀಕ

ರಿಸಬೇಕು. ಚಿನ್ನದ ವರಹಗಳಿಂದಲಂಕೃತವಾದ ಸಾವಿರ ಗೋವುಗಳು ಇಂದು ಕಾಣಿಕೆಯಾಗಿ ಕೊಡಲ್ಪಡುವುವು. ದಯವಿಟ್ಟು ನಮ್ಮ ಕಾಣಿಕೆಯನ್ನು ಸ್ವೀಕರಿಸಿ ನನ್ನನ್ನು ಕೃತಾರ್ಥನನ್ನಾಗಿ ಮಾಡಬೇಕು.

ಆ ಮಾತನ್ನು ಕೇಳಿ ಮಹರ್ಷಿಗಳೆಲ್ಲರೂ ಪರಸ್ಪರ ಮುಖ ನೋಡಿಕೊಳ್ಳುತ್ತ ಸುಮ್ಮನಾಗುವರು. ಕೆಲವು ಘಳಿಗೆಗಳು ನಿಶ್ಶಬ್ದವಾಗಿ ಉರುಳಿ ಹೋದುವು. ಯಾರೂ ಎದ್ದು ಮುಂದೆ ಬರಲು ಧೈರ್ಯ ತಾಳಲಿಲ್ಲ. ಆಗ ಯಾಜ್ಞವಲ್ಕ್ಯ ಮಹರ್ಷಿಯು ಎಲ್ಲರ ಕಡೆಗೂ ಒಮ್ಮೆ ನಿಟ್ಟಿಸಿ ನೋಡಿ– ತಮ್ಮಲ್ಲಿ ಯಾರಾದರೂ ಈ ದಕ್ಷಿಣೆಯನ್ನು ಸ್ವೀಕರಿಸಲು ಮುಂದಾಗುವಿರಾ?

ಆಗಲೂ, ಎಲ್ಲರ ಮುಖಭಾವದಲ್ಲಿ ಅತೀ ಸಂಕೋಚದ ಮುದ್ರೆಯು ಮೂಡಿ ಮತ್ತೊಮ್ಮೆ ಪರಸ್ಪರ ಮುಖವನ್ನು ನೋಡಿಕೊಳ್ಳತೊಡಗಿದರೇ ವಿನಾ ಎದ್ದು ನಿಲ್ಲಲು ಯಾರೂ ಉತ್ಸುಕರಾಗಲಿಲ್ಲ. ಯಾಜ್ಞವಲ್ಕ್ಯ ಮಹರ್ಷಿಯು ಒಮ್ಮೆ ಸುತ್ತಲೂ ನಿಟ್ಟಿಸಿ ನೋಡಿದ. ಎಲ್ಲಿಯೂ ಯಾರೂ ಯಾವ ಪ್ರತಿಕ್ರಿಯೆಯನ್ನೂ ವ್ಯಕ್ತಪಡಿಸಲಿಲ್ಲ. ಎಲ್ಲರ ಮನಸ್ಸೂ ಸಿಡಿದೊಡೆಯುವಷ್ಟು ಗಂಭೀರ. ಬೃಹತ್ ಸಭೆಯೇ ಮೂಕ ಮೌನದಿಂದ ನಿಟ್ಟಿಸಿ ನೋಡುತ್ತ ಕಾಣಿಕೆಯ ಮೊತ್ತವನ್ನು ತಮ್ಮತಮ್ಮಲ್ಲೇ ಚರ್ವಿತಚರ್ವಣಗೊಳಿಸಿ ಚಿಂತಾಭಾರದಿಂದ ಉಸಿರಾಡಿತು. ಯಾಜ್ಞವಲ್ಕ್ಯ ಮಹರ್ಷಿಯ ಕುತೂಹಲಭರಿತ ನೋಟ ಮುನಿಋುಷಿಪುಂಗವರಿಂದ ಬ್ರಾಹ್ಮಣೋತ್ತಮರ ಕಡೆ ಹರಿಯಿತು. ಅಲ್ಲಿಯೂ ಸಹ ಆ ಮುಹೂರ್ತದಲ್ಲಿ ಯಾವ ಪ್ರತಿಕ್ರಿಯೆಯೂ ಹೊರಬೀಳಲಿಲ್ಲ. ಬಿಚ್ಚುಮನದ ಚುಚ್ಚುಗಣ್ಣುಗಳು ಕೂರ್ಗೋಲುಗಳಂತೆ ಸಹಸ್ರಗತಿಯಲ್ಲಿ ತಾಗುತ್ತಲೇ ಇದ್ದುವು. ಸ್ವಲ್ಪಸಮಯ ನೀರವ ನಿಶ್ಶಬ್ದಗಳ ಗಂಭೀರಸ್ಥಾಯಿಯಲ್ಲಿ ನಿಂತು ಉರುಳಿಹೋಯಿತು. ಯಾಜ್ಞವಲ್ಕ್ಯಮಹರ್ಷಿಯ ಉತ್ಸಾಹಿತ ಕಣ್ಮನಗಳು ಅಲ್ಲಲ್ಲೇ ಮತ್ತೆಮತ್ತೆ ಹರಿದಾಡಿದುವು. ಎಲ್ಲಿಂದ ಎಲ್ಲಿಯವರೆಗೂ ಘನಗಾಂಭೀರ್ಯತೆ ತಾಂಡವವಾಡುತ್ತಲೇ ಇದ್ದು, ಯಾರೊಬ್ಬರೂ ಎದ್ದು ನಿಲ್ಲುವ ಸೂಚನೆಯನ್ನೂ ಸಹ ತೋರಲಿಲ್ಲ. ಯಾರಾದರೂ ತಮ್ಮ ಹೆಸರನ್ನು ಸೂಚಿಸಿಯಾರೇ ಎಂಬ ಆತುರ–

ಕಾತರ ಅನೇಕರಿಗೆ. ಆದರೆ ಆ ಪ್ರಸಂಗ ಮೂಡಲಿಲ್ಲವಾಗಿ ಯಾರೊಬ್ಬರ ಆಸೆಯೂ ಫಲಿಸಲಿಲ್ಲ. ಯಾಜ್ಞವಲ್ಕ್ಯ ಮಹರ್ಷಿ ಪುನಃ ಸ್ವಲ್ಪಸಮಯ ಕಾದುನೋಡಿದ. ಅನಂತರ 'ಇನ್ನು ಹಿಂತೆಗೆಯುವುದು' ಸರಿಯಲ್ಲ, ಎಂಬ ತೀರ್ಮಾನಕ್ಕೆಡೆಕೊಟ್ಟಿತು ಮನಸ್ಸು. ಆದರೂ ಸಹ, ಕೊನೆಯದಾಗಿ ಮತ್ತೊಮ್ಮೆ ಬ್ರಾಹ್ಮಣರನ್ನೂ ಮುನಿಪುಂಗವರನ್ನೂ ಕುರಿತು ಕಂಠಃಪೂರ್ತಿ ವಿನಮ್ರತೆಯಿಂದ ಇಂತು ವಿನಂತಿಸಿಕೊಳ್ಳುತ್ತಾನೆ,

ಯಾಜ್ಞವಲ್ಕ್ಯ ಮಹರ್ಷಿ–ಸ್ವಾಮಿಗಳಾ, ಪಂಡಿತೋತ್ತಮರೇ ! ಇಂದೀಗ ನಿಮಗಾರಿಗೂ ಬೇಡವಾದ ಈ ಗೋವೃಂದವನ್ನು ನಾನು ದಾನವಾಗಿ ಸ್ವೀಕರಿಸುವೆ.

ಅನಂತರ, ತನ್ನ ಶಿಷ್ಯನೂ ಆಶ್ರಮವಾಸಿಯೂ ಆದ ಸೋಮಶ್ರವನ ಕಡೆ ತಿರುಗಿ ನೋಡಿ ಆಜ್ಞಾಪೂರ್ವಕವಾಗಿ ನುಡಿದ, ಯಾಜ್ಞವಲ್ಕ್ಯ ಮಹರ್ಷಿ–ಎಲೈ, ಸೋಮಶ್ರವ ! ಕಾಣಿಕೆಯಾಗಿಟ್ಟಿರುವ ಗೋವೃಂದವನ್ನು ನೀನು ಸ್ವೀಕರಿಸಿ ನಮ್ಮ ಆಶ್ರಮಕ್ಕೆ ಹೊಡೆದುಕೊಂಡು ಹೋಗು !

ಗುರುವಿನ ಅಪ್ಪಣೆಯ ಪ್ರಕಾರ ಸೋಮಶ್ರವನು ಸಾವಿರಗೋವುಗಳನ್ನು ಆ ಮುಹೂರ್ತದಲ್ಲಿ ಧಾರಾಪೂರ್ವಕವಾಗಿ ಸ್ವೀಕರಿಸಿ ಆಶ್ರಮದ ಕಡೆ ಹೊಡೆದುಕೊಂಡು ಹೋಗುತ್ತಾನೆ. ಆ ಪ್ರಸಂಗವಶಾತ್ ಮುಖಭಂಗಿತರಾದ ಮಹರ್ಷಿಗಳೂ ಮುನಿಪುಂಗವರೂ ಬ್ರಾಹ್ಮಣೋತ್ತಮರೂ ಅಸೂಯೆ–ಕೋಪ–ಸಂಕಟಗಳಿಂದ ತುಂಬಿ ಉರಿದುರಿದು ರಂಗುರಂಗಾಗಿ ತಮ್ಮತಮ್ಮಲ್ಲೇ ಕುದಿಯುತ್ತ ಹಲ್ಲು ಕಡಿದರು ; ಪ್ರಶ್ನೋಪಪ್ರಶ್ನೆಗಳೂ ಎದ್ದುವು; ಮುಂದೇನು ಎಂಬ ಕಿಚ್ಚು ಕೆರಳಿತು. ಜನಕ ವೈದೇಹನ ಹೋತೃವಾದ ಅಶ್ವಲನು ಮುನಿಪುಂಗವರ ಗುಂಪಿನಿಂದ ಹೊರಬಿದ್ದು ಕೆಂಗಣ್ಣಿನಿಂದ ದುರುದುರುಗುಟ್ಟಿ ನೋಡುತ್ತ ಯಾಜ್ಞವಲ್ಕ್ಯ ಮಹರ್ಷಿಯನ್ನು ಕುರಿತು ಅತ್ಯಂತ ಕರ್ಕಶವಾಣಿಯಲ್ಲಿ–ಎಲೆ, ಯಾಜ್ಞವಲ್ಕ್ಯ ! ನಮ್ಮಲ್ಲಿ ನೀನೇ ಬ್ರಹ್ಮಿಷ್ಠನೆಂದು ಈಗಲೇ ಹೇಗೆ ನಿರ್ಧಾರವಾಯಿತು ? ಇಷ್ಟು ಮಂದಿಯ ಎದುರಿನಲ್ಲಿ ನೀನು ಹೇಗೆ ತಾನೇ ಈ ಕಾಣಿಕೆಯನ್ನು ಸ್ವೀಕರಿಸಿದೆ ?

ಅರ್ಹತೆಯಿಲ್ಲದೆ ಕಾಣಿಕೆ ಸ್ವೀಕರಿಸಿದ್ದು ಉದ್ಧಟತನವಲ್ಲವೆ ? ಹಿರಿಯ ಮಹರ್ಷಿಗಳಿಗೆಲ್ಲಾ ಇದರಿಂದ ಅವಮಾನ ಮಾಡಿದಂತಾಗಲಿಲ್ಲವೇ ? ಇದಕ್ಕೆ ಸರಿಯಾದ ಶಾಸ್ತಿಯಾಗುತ್ತದೆ ಎಂಬುದರ ಅರಿವು ನಿನಗೆ ಲವಲೇಶವಾದರೂ ಇದೆಯೆ ?

ಯಾಜ್ಞವಲ್ಕ್ಯ ಮಹರ್ಷಿಯು ಅವನ ಮಾತಿನಿಂದ ಉದ್ರಿಕ್ತನಾಗದೆ ಸಮಾಧಾನದಿಂದ–ಅಯ್ಯಾ, ಅಶ್ವಲ ! ನಿಮಗಾರಿಗೂ ಬೇಡವಾದ ಗೋಧನವನ್ನು ನಾನು ದಾನವಾಗಿ ಸ್ವೀಕರಿಸಿದೆನೇ ಹೊರತು ಖಂಡಿತ ಉದ್ಧಟತನದಿಂದಲ್ಲ. ಅಂತಲೇ ಗೋಧನ ಸ್ವೀಕಾರಕ್ಕೆ ನಾನು ಅರ್ಹತೆ ಪಡೆದುಕೊಂಡಿರುವೆ ಎಂದರೆ ತಪ್ಪಾಗಲಾರದು.

ಅಶ್ವಲ–ಅಂದರೆ ನೀನು ಬ್ರಹ್ಮಿಷ್ಠ ಎಂದಂತಾಗಲಿಲ್ಲ; ಋಷಿಶ್ರೇಷ್ಠನಂತೂ ಅಲ್ಲವೇ ಅಲ್ಲ.

ಯಾಜ್ಞವಲ್ಕ್ಯ ಮಹರ್ಷಿ–ಮಿತ್ರ ! ಅದನ್ನು ನಾನರಿಯೆ. ಬ್ರಹ್ಮಿಷ್ಠನಾದ ವ್ಯಕ್ತಿಗೆ ನಾನು ಖಂಡಿತ ತಲೆಬಾಗಿ ನಮಿಸುವೆ. ಆದರೆ, ನಾನು ಗೋಕಾಮನೇನೋ ಹೌದು ಎಂಬುದನ್ನು ಮಾತ್ರ ಶ್ರುತಪಡಿಸಬಲ್ಲೆ.

ಅಶ್ವಲ–ಇದು ದುರಾಸೆಯ ಪರಾಕಾಷ್ಠೆ ! ನೀನು ಖಂಡಿತ ಕ್ಷಮಾರ್ಹನಲ್ಲ ತಿಳಿದಿರು !

ಯಾಜ್ಞವಲ್ಕ್ಯ ಮಹರ್ಷಿ–ಅಯ್ಯಾ, ಇಂಥ ವಿಚಾರದಲ್ಲಿ ದುಡುಕಬಾರದು. ಕ್ರಮವತ್ತಾಗಿ ಏನೇನು ನಡೆಯಬೇಕೊ ಅದರ ಮೂಲಕ ನಿರ್ಣಯವಾಗಲಿ.

ಆಗ ಸಭೆಯಲ್ಲಿ 'ಅದು ಸೂಕ್ತ' ಎಂದು ಅನೇಕ ಧ್ವನಿಗಳು ಮೊಳಗಿದುವು.

ಅಶ್ವಲನಿಗೆ ರಾಜಾಶ್ರಯದ ಅಹಂಕಾರವೂ ಅಲ್ಲದೆ ತಾನೇ ಬ್ರಹ್ಮಿಷ್ಠನೆಂಬ ದುರಭಿಮಾನವೂ ಇತ್ತು. ಆದರೆ, ಅದು ರಕ್ಕೆಮುರಿದ ಪಕ್ಷಿಯಾದಾಗ

ದುಃಖ-ದುರಭಿಮಾನಗಳು ಮನಸ್ಸನ್ನು ರೊಚ್ಚುಗೊಳಿಸಿದುವು. ತೇಜೋಭಂಗವನ್ನು ತಾಳಲಾರದೆ ಅತ್ಯಂತ ಉದ್ರೇಕದಿಂದ ಉತ್ತರಿಸಿದ-ಅಂದರೆ, ಈಗ ನೀನು ಗೋಕಾಣಿಕೆಯನ್ನು ಸ್ವೀಕರಿಸುವುದರಿಂದ ಈ ಸಭೆಯಲ್ಲಿ ಯಾರು ಏನು ಪ್ರಶ್ನಿಸಿದರೂ ಅದಕ್ಕೆ ಉತ್ತರಿಸುವ ಹೊಣೆಗಾರಿಕೆಯನ್ನು ಹೊತ್ತಂತಾಯಿತು.

ಯಾಜ್ಞವಲ್ಕ್ಯ ಮಹರ್ಷಿಯು ಅಶ್ವಲನ ಸವಾಲನ್ನು ಸಮಯೋಚಿತವಾಗಿ ಒಪ್ಪಿ ಸ್ವೀಕರಿಸಿ ಉತ್ತರಿಸಿದ-ಅಯ್ಯಾ, ಮಿತ್ರ! ಆಯಿತು; ಆ ಬಗ್ಗೆ ನಿನಗೆ ಸಂದೇಹ ಬೇಡವೇ ಬೇಡ. ಉತ್ತರಿಸುವ ಹೊಣೆಗಾರಿಕೆ ನನ್ನ ಮೇಲಿರಲಿ.

ಅಶ್ವಲ-ಭಲೆ! ಯಾಜ್ಞವಲ್ಕ್ಯ, ನಿನ್ನಲ್ಲಿ ಲಜ್ಜೆಯಿಲ್ಲದಿದ್ದರೂ ದಿಟ್ಟತನವಿರುವುದೊಂದು ವಿಶೇಷವೇ!

ಯಾಜ್ಞವಲ್ಕ್ಯ ಮಹರ್ಷಿ-ಇದರ ನಿರ್ಣಯ ಸಭೆಯ ಮುಂದಿರಲಿ.

ಅಶ್ವಲ-ಇಗೋ, ಇಲ್ಲಿ ಕೇಳು! ಈಗ ಈ ಬೃಹತ್ ಸಭೆಯಲ್ಲಿ ನಿನ್ನನ್ನು ಮೊದಲು ಪ್ರಶ್ನಿಸತಕ್ಕವನು ನಾನೇ.

ಯಾಜ್ಞವಲ್ಕ್ಯ ಮಹರ್ಷಿ-ಆಗಲಿ, ಪರಮ ಸಂತೋಷ.

ಅಶ್ವಲ-ಒಹೋ! ನನ್ನ ಮಾತನ್ನು ಎಷ್ಟೊಂದು ಲಘುವಾಗಿ ಭಾವಿಸುತ್ತಿರುವಿ? ಇದಲ್ಲವೇ ನಿನ್ನ ದುರಹಂಕಾರ.

ಯಾಜ್ಞವಲ್ಕ್ಯ ಮಹರ್ಷಿ-ಮಿತ್ರ! ನೀನು ವಿದ್ವಾಂಸನೆಂಬುದು ಎಲ್ಲರಿಗೂ ತಿಳಿದ ಅಂಶ. ಮತ್ತೇಕೆ ಅಡ್ಡಾದಿಡ್ಡಿ ಮಾತಿನ ವ್ಯವಹಾರ?

ಅಶ್ವಲ-ಇಗೋ ಈ ಬೃಹತ್ ಸಭೆಯ ಅಪ್ಪಣೆಯಿಂದ ನಿನ್ನನ್ನು ನಾನು ಪ್ರಶ್ನಿಸುವೆ, ಎಲ್ಲಕ್ಕೂ ಸರಿಯಾದ ಉತ್ತರವನ್ನು ನೀಡು.

ಯಾಜ್ಞವಲ್ಕ್ಯ ಮಹರ್ಷಿ-ನಿನ್ನ ಪ್ರಶ್ನೆಗಳನ್ನು ಕೇಳುವುದೇ ಒಂದು ವಿಶೇಷ, ನಾನು ಸಿದ್ಧನಿರುವೆ.

ಅಶ್ವಲ–ಇದೀಗ ಸಾಹಸ! ಬಹಳ ಧೈರ್ಯದಿಂದ ಹೇಳುತ್ತಿರುವೆ? ನನ್ನಲ್ಲಿ ತತ್ತ್ವಬದ್ಧವಾದ ಮಹತ್ ವಿದ್ಯೆಯುಂಟು ಎಂಬುದು ನಿನ್ನ ಗಮನ ದಲ್ಲಿದೆಯಷ್ಟೆ ?

ಯಾಜ್ಞವಲ್ಕ್ಯ ಮಹರ್ಷಿ–ಇಲ್ಲದೆ ಏನು ? ಆಗಲೇ ಹೇಳಿದೆನಲ್ಲಾ, ನಿನ್ನ ಪ್ರಶ್ನೆಗಳನ್ನು ಕೇಳುವುದೇ ಒಂದು ವಿಶೇಷ ಎಂದು. ಈಗ ಈ ಸಭೆ ಯಲ್ಲಿ ಅವನ್ನು ಕೇಳುವೆನಾದರೆ ಬಹಳ ಸಂತೋಷ !

ಅಶ್ವಲ–ನಿನ್ನ ರೀತಿಯನ್ನು ನೋಡಿದರೆ ನೀನೇ ಪರಮ ವಿದ್ವಾಂಸ ನೆಂಬ ಠೀವಿ ಕಂಡು ಬರುತ್ತದೆ ?

ಯಾಜ್ಞವಲ್ಕ್ಯ ಮಹರ್ಷಿ–ನಮ್ಮ ಸಂಭಾಷಣೆಯನ್ನು ಈ ಬೃಹದ್ ಸಭೆ ಕೇಳುತ್ತಲೇ ಇದೆ. ಠೀವಿಗೀವಿಗಳನ್ನೂ ಅರಿಯುತ್ತದೆ. ಆದ್ದರಿಂದ ಅದಕ್ಕೆ ಹೆಚ್ಚಿನ ಪ್ರಾಶಸ್ತ್ಯ ಕೊಡುವ ಅಗತ್ಯವಿಲ್ಲ. ನೀನು ನಿರ್ಯೋಜನೆ ಯಿಂದ ನಿನ್ನ ಪ್ರಶ್ನೆಗಳನ್ನು ಮುಂದಿಟ್ಟು ಸಭೆಯ ಆತುರ ಕಾತುರಗಳನ್ನು ಕಳೆಯುವವನಾಗು.

ಅಶ್ವಲ–ಓಂ ಯಾಜ್ಞವಲ್ಕ್ಯ ಕೇಳು ! ಜೀವಜಗತ್ ಮೃತ್ಯುವಿನಿಂದ ಪ್ರವ್ಯಾಪ್ತವಾಗಿರುವುದರಿಂದ ಮತ್ತು ಮೃತ್ಯುವಿನ ವಶೀಭೂತವಾಗಿರುವುದ ರಿಂದ ಯಾವುದರ ಮುಖೇನ ಯಜನು ಮೃತ್ಯುಪಾಶವನ್ನು ಕಿತ್ತುಹಾಕಿ ಮುಕ್ತನಾಗಲುಸಾಧ್ಯ ? ಹೇಳು, ಈ ಬಗ್ಗೆ ನಿನ್ನ ಉತ್ತರವನ್ನು ತಿಳಿಯೋಣ.

ಯಾಜ್ಞವಲ್ಕ್ಯ ಮಹರ್ಷಿ–ಮಿತ್ರನೇ ಕೇಳು! ಹೋತೃವಾದ ಋತ್ವಿ ಕ್ಕಿನ ಮುಖೇನ ಮತ್ತು ಅಗ್ನಿಯಾದ ವಾಕ್ಕಿನ ಮುಖೇನ. ಯಜನ ವಾಕ್ಕೇ ಹೋತೃ ಯಜನ ವಾಕ್ಕೇ ಅಗ್ನಿ, ಅಗ್ನಿಯೇ ಮುಕ್ತಿಗೆ ಸಾಧನ. ಅದೇ ಮುಕ್ತಿಮಾರ್ಗ ಎಂದು ತಿಳಿಯತಕ್ಕದ್ದು.

ಅಶ್ವಲ–ಆಯ್ತು, ಇದೋ ಈಗ ಇದಕ್ಕೆ ಉತ್ತರಿಸು. ಯಾಜ್ಞವಲ್ಕ್ಯ, ಎಲ್ಲವೂ ಹಗಲಿರುಳುಗಳಿಂದ ಪ್ರವ್ಯಾಪ್ತವಾಗಿರುವುದರಿಂದ ಯಾವುದರ

ಮುಖೇನ ಈ ಯಜನು ಮೃತ್ಯುಪಾಶವನ್ನು ದಾಟಿ ಮುಕ್ತನಾಗಲು ಸಾಧ್ಯ ?

ಯಾಜ್ಞವಲ್ಕ್ಯ ಮಹರ್ಷಿ–ಅಶ್ವಲ ಇದೋ, ಕೇಳು ! ಅಧ್ವರ್ಯು ಎಂಬ ಋತ್ವಿಕ್ಕಿನ ಮುಖೇನ, ಆದಿತ್ಯ ಎನಿಸುವ ಚಕ್ಷುಸ್ಸಿನ ಮುಖೇನ. ಯಜನ ಚಕ್ಷುಸ್ಸೇ ಅಧ್ವರ್ಯು ಆದಿತ್ಯ ಎಲ್ಲಾ. ಆದಿತ್ಯನು ಮುಕ್ತಿಗೆ ಸಾಧನ. ಅದೇ ಮುಕ್ತಿಮಾರ್ಗ.

ಜನಕ ಚಕ್ರವರ್ತಿಯು ತಲೆದೂಗಿ ಸಮ್ಮತಿ ಸೂಚಿಸುತ್ತಾನೆ.

ಅಶ್ವಲ–ಅಯ್ಯಾ, ಯಾಜ್ಞವಲ್ಕ್ಯ, ಈ ಪ್ರಶ್ನೆಗೆ ಉತ್ತರಿಸು. ಎಲ್ಲವೂ ಶುಕ್ಲಪಕ್ಷ–ಕೃಷ್ಣಪಕ್ಷಗಳ ವಶೀಭೂತವಾಗಿರುವುದರಿಂದ ಯಜನು ಯಾವುದರ ಮುಖೇನ ಮೃತ್ಯುಪಾಶವನ್ನು ದಾಟಿ ಮುಕ್ತನಾಗುವನು ? ಈ ವಿಚಾರದಲ್ಲಿ ನೀನೇನು ತಿಳಿದುಕೊಂಡಿರುವೆಯೋ ಅದನ್ನು ನಾವು ಕೇಳೋಣ.

ಯಾಜ್ಞವಲ್ಕ್ಯ ಮಹರ್ಷಿ–ಆಯಿತು, ಅಶ್ವಲ ಕೇಳು. ಉದ್ಗಾತೃ ಎಂಬ ಋತ್ವಿಕ್ಕಿನ ಮುಖೇನ; ವಾಯು ಎಂಬ ಪ್ರಾಣನ ಮುಖೇನ. ಯಜನ ಪ್ರಾಣವೇ ಉದ್ಗಾತೃ, ಪ್ರಾಣವೇ ವಾಯು. ಅದೇ ಮುಕ್ತಿಗೆ ಸಾಧನ.

ಅಶ್ವಲ-ಸರಿ, ಆಕಾಶವು ಆಲಂಬನವಿಲ್ಲವಾಗಿ ತೋರುತ್ತಿದೆ. ಯಾವ ಆಧಾರದಿಂದ ಯಜನು ಸ್ವರ್ಗಯಾನ ಮಾಡುತ್ತಾನೆ ?

ಯಾಜ್ಞವಲ್ಕ್ಯ ಮಹರ್ಷಿ–ಬ್ರಹ್ಮ ಎಂಬ ಋತ್ವಿಕ್ಕಿನ ಮುಖೇನ ; ಚಂದ್ರ ಎಂಬ ಮನಸ್ಸಿನ ಮುಖೇನ. ಯಜನಿಗೆ ಮನಸ್ಸೇ ಬ್ರಹ್ಮ, ಮನಸ್ಸೇ ಚಂದ್ರ. ಅದೇ ಮುಕ್ತಿಮಾರ್ಗ.

ಅಶ್ವಲ–ಓಂ! ಯಾಜ್ಞವಲ್ಕ್ಯ, ನಿನ್ನ ವಿಚಾರಧಾರೆಯನ್ನು ಕೇಳಿದರೆ ಇನ್ನೂ ಇನ್ನೂ ಪ್ರಶ್ನಿಸುವ ಆಸೆ ಉದ್ಭವಿಸುತ್ತದೆ. ಈಗ ಹೇಳು,

ಈ ದಿನ ಎಷ್ಟು ಋಕ್ಕುಗಳಿಂದ ಹೋತೃವು ಯಜನ ಕಾರ್ಯವನ್ನು ನಡೆಸುವನು ?

ಯಾಜ್ಞವಲ್ಕ್ಯ ಮಹರ್ಷಿ–ನಿನ್ನ ಉತ್ಸಾಹಕ್ಕೆ ಅಭಿನಂದಿಸಿ ಉತ್ತರಿಸುವೆ ಕೇಳು, ಮೂರು ಋಕ್ಕುಗಳಿಂದ.

ಅಶ್ವಲ–ಅವು ಯಾವುವು ?

ಯಾಜ್ಞವಲ್ಕ್ಯ ಮಹರ್ಷಿ–'ಪುರೋನುವಾಕ್ಯಾ, ಯಾಜ್ಯಾ ಮತ್ತು ಶಸ್ಯಾ'.

ಅಶ್ವಲ-ಅವುಗಳ ಮುಖೇನ ಏನನ್ನು ಜಯಿಸಿಕೊಳ್ಳುತ್ತಾನೆ ?

ಯಾಜ್ಞವಲ್ಕ್ಯ ಮಹರ್ಷಿ–ಮೂರು ಲೋಕಗಳನ್ನು.

ಅಶ್ವಲ-ಈ ದಿನ ಅಧ್ವರ್ಯುವು ಎಷ್ಟು ಆಹುತಿಗಳಿಂದ ಯಜ್ಞದಲ್ಲಿ ಹೋಮ ಮಾಡುತ್ತಾನೆ ?

ಯಾಜ್ಞವಲ್ಕ್ಯ ಮಹರ್ಷಿ–ಮೂರು ಆಹುತಿಗಳಿಂದ.

ಅಶ್ವಲ–ಓಂ ! ಯಾಜ್ಞವಲ್ಕ್ಯ, ಅದರ ವಿವರಣೆಯನ್ನು ತಿಳಿಸು. ಅವು ಯಾವುವು ?

ಯಾಜ್ಞವಲ್ಕ್ಯ ಮಹರ್ಷಿ-ಯಾವುದು ಹುತವಾದಾಗ ಪ್ರಜ್ವಲಿಸುವುದೋ, ಯಾವುದು ಹುತವಾದಾಗ ಹೆಚ್ಚು ಗದ್ದಲ ಮಾಡುವುದೋ, ಯಾವುದು ಹುತವಾದಾಗ ಕೆಳಗಿಳಿಯುವುದೋ ಅವುಗಳೇ.

ಅಶ್ವಲ–ಅವುಗಳ ಮುಖೇನ ಏನನ್ನು ಜಯಿಸಿಕೊಳ್ಳಬಹುದು ?

ಯಾಜ್ಞವಲ್ಕ್ಯ ಮಹರ್ಷಿ-ಕೇಳು, ಯಾವುದು ಹುತವಾದಾಗ ಪ್ರಜ್ವಲಿಸುವುದೋ ಅದರ ಮುಖೇನ ದೇವಲೋಕವನ್ನು, ಯಾವುದು ಹುತವಾದಾಗ ಹೆಚ್ಚು ಗದ್ದಲ ಮಾಡುವುದೋ ಅದರ ಮುಖೇನ ಪಿತೃ ಲೋಕವನ್ನು, ಯಾವುದು ಹುತವಾದಾಗ ಕೆಳಗಿಳಿಯುವುದೋ ಅದರ ಮುಖೇನ ಭೂಲೋಕವನ್ನು ಜಯಿಸುವನು.

ಅಶ್ವಲ–ಈದಿನ ಬ್ರಹ್ಮ ಎನಿಸುವ ಋತ್ವಿಕ್ಕು ಎಷ್ಟು ದೇವತೆಗಳ ಮುಖಾಂತರ ಯಜ್ಞವನ್ನು ಸಂರಕ್ಷಿಸುವನು.

ಯಾಜ್ಞವಲ್ಕ್ಯ ಮಹರ್ಷಿ–ಓರ್ವ ದೇವತೆಯ ಮುಖಾಂತರ.

ಅಶ್ವಲ–ಆ ದೇವತೆಯು ಯಾರು ?

ಯಾಜ್ಞವಲ್ಕ್ಯ ಮಹರ್ಷಿ–ಕೇಳು ಅಶ್ವಲ! ಮನಸ್ಸು ; ಮನಸ್ಸೆಂಬುದೇ ಅನಂತವು. ವಿಶ್ವೇದೇವತೆಗಳೂ ಅನಂತವು. ಅನಂತಭಾವದ ಉಪಾಸನೆಯಿಂದ ಉಪಾಸಕನು ಅನಂತಲೋಕವನ್ನು ಜಯಿಸಿ ಕೊಳ್ಳುತ್ತಾನೆ.

ಅಶ್ವಲ–ಈ ದಿನ ಉದ್ಗಾತೃ ಎಷ್ಟು ಸ್ತೋತ್ರೀಗಳನ್ನು ಸ್ತುತಿ ಮಾಡುವನು ?

ಯಾಜ್ಞವಲ್ಕ್ಯ ಮಹರ್ಷಿ–ಮೂರು ಸ್ತೋತ್ರೀಯುಗಳನ್ನು.

ಅಶ್ವಲ–ಅವುಗಳ ಮುಖಾಂತರ ಏನನ್ನು ಜಯಿಸಿಕೊಳ್ಳುತ್ತಾನೆ ?

ಯಾಜ್ಞವಲ್ಕ್ಯ ಮಹರ್ಷಿ–ಪುರೋನುವಾಕ್ಯಾದಿಂದ ಭೂಲೋಕವನ್ನೂ, ಯಾಜ್ಯದಿಂದ ಅಂತರಿಕ್ಷ ಲೋಕವನ್ನು, ಶಸ್ಯದಿಂದ ದ್ಯುಲೋಕವನ್ನೂ, ಜಯಿಸಿಕೊಳ್ಳುತ್ತಾನೆ.

ಆ ಉತ್ತರವನ್ನು ಕೇಳಿ ಹೋತೃವಾದ ಅಶ್ವಲನು ದಿಗ್ಭ್ರಮೆ ಹೊಂದಿದಂತೆ ಸುಮ್ಮನಾಗುವನು. ಇಡೀ ಸಭೆಯಲ್ಲಿ ಹರ್ಷೋದ್ಗಾರ ಮೂಡುವುದು. ಆಗ ಜಾರತ್ಕಾರವನಾದ ಆರ್ತಭಾಗನು ಎದ್ದು ನಿಲ್ಲುವನು.

ಆರ್ತಭಾಗ–ಓಂ ! ಯಾಜ್ಞವಲ್ಕ್ಯ, ಈಗ ನಿನ್ನನ್ನು ನಾನು ಪ್ರಶ್ನಿಸುವೆನು, ಕೇಳು.

ಯಾಜ್ಞವಲ್ಕ್ಯ ಮಹರ್ಷಿ–ಆಯಿತು, ತುಂಬ ಸಂತೋಷ. ನೀನೂ ಸಹ ಘನ ವಿದ್ವಾಂಸ. ನಿನ್ನ ಪ್ರಶ್ನೆಗಳು ಸುಪ್ತ ಭಾವನೆಗಳನ್ನು ಹೊಡೆದು ಎಬ್ಬಿಸುವುದರಿಂದ ನನಗೂ ಒಳ್ಳೆಯ ಪಾಠವೇ. ನೀನು ಏನಾದರೂ ಕೇಳಬಹುದು.

ಆರ್ತಭಾಗ–ಓಂ! ಯಾಜ್ಞವಲ್ಕ್ಯ, ಇದೋ ನನ್ನ ಪ್ರಶ್ನೆಗೆ ಉತ್ತರಿಸು, ಗ್ರಹಗಳೆಷ್ಟು ? ಅತಿಗ್ರಹಗಳೆಷ್ಟು ?

ಯಾಜ್ಞವಲ್ಕ್ಯ ಮಹರ್ಷಿ–ಗ್ರಹಗಳೂ ಎಂಟು ; ಅತಿಗ್ರಹಗಳೂ ಎಂಟು.

ಆರ್ತಭಾಗ–ಆ ಎಂಟೆಂಟು ಗ್ರಹ–ಅತಿಗ್ರಹಗಳ ವಿವರಣೆಯನ್ನು ನೀಡು.

ಯಾಜ್ಞವಲ್ಕ್ಯ ಮಹರ್ಷಿ–ಪ್ರಾಣವೇ ಗ್ರಹವು. ಅದು ಅಪಾನ ಎಂಬ ಅತಿಗ್ರಹದ ವಶೀಭೂತವಾಗಿದೆ. ಹೇಗೆಂದರೆ ಅಪಾನದ ಮುಖೇನ ಗಂಧವನ್ನು ಮೂಸಬಹುದು. ಹೀಗೆಯೇ, ವಾಕ್ಕು ಗ್ರಹವು. ಅದು ನಾಮ ಎಂಬ ಅತಿಗ್ರಹದ ವಶೀಭೂತವಾಗಿದೆ. ಹೇಗೆಂದರೆ ವಾಕ್ಕಿನ ನಾಮಗಳನ್ನು ಹೇಳಬಹುದು. ಹೀಗೆಯೇ, ಜಿಹ್ವೆಯು ಗ್ರಹವು. ಹೇಗೆಂದರೆ ಜಿಹ್ವೆಯ ಮೂಲಕ ರುಚಿಯನ್ನು ನೋಡಬಹುದು. ಹೀಗೆಯೇ, ಚಕ್ಷುಸ್ಸು ಗ್ರಹವು. ಅದು ರೂಪ ಎಂಬ ಅತಿಗ್ರಹದ ವಶೀಭೂತವಾಗಿದೆ. ಹೇಗೆಂದರೆ ಚಕ್ಷುಸ್ಸಿನ ಮುಖೇನ ರೂಪವನ್ನು ನೋಡಬಹುದು. ಹೀಗೆಯೇ, ಶ್ರೋತ್ರವು ಗ್ರಹವು. ಅದು ಶಬ್ದ ಎಂಬ ಅತಿಗ್ರಹದ ವಶೀಭೂತವಾಗಿರುತ್ತದೆ. ಹೇಗೆಂದರೆ ಕರ್ಣಗಳ ಮೂಲಕ ಕೇಳಬಹುದು. ಹೀಗೆಯೇ, ಮನಸ್ಸು ಗ್ರಹವು. ಅದು ಇಷ್ಟ ಎಂಬ ಅತಿಗ್ರಹದ ವಶೀಭೂತವಾಗಿದೆ. ಹೇಗೆಂದರೆ, ಮನಸ್ಸಿನ ಮೂಲಕ ಬಯಕೆಗಳು ಮೂಡುತ್ತವೆ. ಹೀಗೆಯೇ ಕೈಗಳು ಗ್ರಹವು. ಅವು ಕರ್ಮ ಎಂಬ ಅತಿಗ್ರಹದ ವಶೀಭೂತವಾಗಿವೆ. ಹೇಗೆಂದರೆ, ಕೈಗಳ ಮೂಲಕ ಕರ್ಮವನ್ನು ಆಚರಿಸಬಹುದು. ಹೀಗೆಯೇ ಚರ್ಮವು. ಅದು ಸ್ಪರ್ಶ ಎಂಬ ಅತಿಗ್ರಹದ ವಶೀಭೂತವಾಗಿದೆ. ಹೇಗೆಂದರೆ, ಚರ್ಮದ ಮುಖಾಂತರ ಸ್ಪರ್ಶವನ್ನು ಅರಿತುಕೊಳ್ಳಬಹುದು. ಇವೇ ಎಂಟು ಗ್ರಹಗಳು ಮತ್ತು ಎಂಟು ಅತಿಗ್ರಹಗಳು ಎಂದು ತಿಳಿಯತಕ್ಕದ್ದು.

ಆರ್ತಭಾಗ–ಓಂ! ಯಾಜ್ಞವಲ್ಕ್ಯ, ಈ ಎಲ್ಲವೂ ಮೃತ್ಯುವಿನ

ಅನ್ನ ವಾಗಿದ್ದರೆ ಯಾವ ದೈವಕ್ಕೆ ಮೃತ್ಯುವು ಅನ್ನವಾಗಿದೆಯೋ ಅದನ್ನು ತಿಳಿಸು.

ಯಾಜ್ಞವಲ್ಕ್ಯ ಮಹರ್ಷಿ–ಅಗ್ನಿಯೇ ಮೃತ್ಯುವು. ಅಗ್ನಿಯು ನೀರಿಗೆ ಅನ್ನವಾಗಿರುವುದು ಎಂದು ಯಾರು ಅರಿತುಕೊಳ್ಳುತ್ತಾರೋ ಅವರು ಪುನರ್ಮೃತ್ಯುವನ್ನು ಜಯಿಸಿಕೊಳ್ಳುವರು.

ಆರ್ತಭಾಗ–ಇನ್ನೊಂದು ಪ್ರಶ್ನೆ ಯಾಜ್ಞವಲ್ಕ್ಯ, ಮುಕ್ತ ಪುರುಷನು ಮೃತನಾದಾಗ ಅವನ ಇಂದ್ರಿಯ ವಿಶೇಷಗಳು ಅವನಲ್ಲಿ ಉಳಿಯುತ್ತವೆಯೋ ?

ಯಾಜ್ಞವಲ್ಕ್ಯ ಮಹರ್ಷಿ–ಅವು ಉಳಿಯುವುದಿಲ್ಲ. ಅವನೊಂದಿಗೆ ವಿಲೀನವಾಗುತ್ತವೆ. ಅಥವಾ ಮೃತವಾಗುತ್ತವೆ !

ಆರ್ತಭಾಗ–ಅಯ್ಯಾ ಯಾಜ್ಞವಲ್ಕ್ಯ! ಅವನು ಮೃತನಾದಾಗ ಅವನನ್ನು ಬಿಡದಿರುವುದು ಯಾವುದು ?

ಯಾಜ್ಞವಲ್ಕ್ಯ ಮಹರ್ಷಿ–ನಾಮವೇ. ನಾಮವು ಅನಂತವು.

ಆರ್ತಭಾಗ–ಮೃತ ಪುರುಷನ ವಾಕ್ಕು ಅಗ್ನಿಯಲ್ಲಿ, ಘ್ರಾಣವು ವಾಯುವಿನಲ್ಲಿ, ಚಕ್ಷುಸ್ಸು ಆದಿತ್ಯನಲ್ಲಿ, ಮನಸ್ಸು ಚಂದ್ರನಲ್ಲಿ, ಶ್ರೋತ್ರವು ದಿಕ್ಕುಗಳಲ್ಲಿ, ಶರೀರವು ಪೃಥ್ವಿಯಲ್ಲಿ, ಆತ್ಮ ಅಧಿಷ್ಠಾನವಶವಾದ ಹೃದಯಾಕಾಶವು ಆಕಾಶದಲ್ಲಿ, ರೋಮಗಳು ಮೂಲಿಕೆಯಲ್ಲಿ, ಕೂದಲು ವನಸ್ಪತಿಯಲ್ಲಿ ಲಯವಾಗಿ, ರಕ್ತವೂ ರೇತಸ್ಸೂ ನೀರಿನಲ್ಲಿ ಸೇರಿದಾಗ ಪುರುಷನು ಎಲ್ಲಿರುತ್ತಾನೆ ?

ಯಾಜ್ಞವಲ್ಕ್ಯ ಮಹರ್ಷಿ–ಸೋಮ್ಯನಾದ ಆರ್ತಭಾಗನೇ ಹೀಗೆ ಬಾ. ನಿನ್ನ ಕೈಯನ್ನು ಕೊಡು. ನಾವೇ ಮುಂದಿನ ವಿಷಯವನ್ನು ನಿರ್ಣಯಿಸೋಣ. ಈ ಜನಸಂದಣಿಯಲ್ಲಿ ಆಗದು.

ಅಲ್ಲಿಂದ ಇಬ್ಬರೂ ಹೊರಹೋಗಿ ವಿಚಾರವಿನಿಮಯ ನಡೆಸಿದರು. ಕರ್ಮಾಂತರವನ್ನೇ ಅವರು ವಿಮರ್ಶಿಸಿದ್ದು, ಅದರ ನಿರ್ಣಯ ಹೀಗೆ:–

ಪುಣ್ಯಕರ್ಮದಿಂದ ಪುರುಷ ಪುಣ್ಯವಶನಾಗುತ್ತಾನೆ. ಪಾಪಕರ್ಮದಿಂದ ಪಾಪವಶನಾಗುತ್ತಾನೆ.

ಆಗ ಜಾರತ್ಕಾರವ ಆರ್ತಭಾಗನು ಸುಮ್ಮತಿ ಸೂಚಿಸಿ ಸುಮ್ಮನಾಗುವನು.

ಆ ಕೂಡಲೇ ಸಭೆಯಲ್ಲಿ ಪುನಃ ಹರ್ಷೋದ್ಗಾರವಾಗುವುದು. ಪ್ರತಿಯೊಬ್ಬರ ಮುಖದಲ್ಲೂ ವಿಚಿತ್ರ ಕೋಲಾಹಲದ ಮುದ್ರೆಯನ್ನು ನೋಡಿ ತನ್ನನ್ನು ತಾನೇ ಸಂಬಾಳಿಸಿಕೊಳ್ಳುತ್ತ ಉಷಸ್ತ ಚಾಕ್ರಾಯಣನು ಎದ್ದು ನಿಂತು-ಓಂ! ಯಾಜ್ಞವಲ್ಕ್ಯ, ಈಗ ನನ್ನದೊಂದು ಪ್ರಶ್ನೆ, ಅದಕ್ಕೆ ಸರಿಯಾಗಿ ಉತ್ತರಿಸು.

ಯಾಜ್ಞವಲ್ಕ್ಯ ಮಹರ್ಷಿ-ಆಯಿತಯ್ಯಾ ಕೇಳು.

ಉಷಸ್ತ-ಸಾಕ್ಷಾತ್ತಾದ, ಅಪರೋಕ್ಷವಾದ ಬ್ರಹ್ಮನನ್ನು-ಸರ್ವಾಂತರ್ವರ್ತಿಯಾದ ಆತ್ಮನನ್ನು ನೀನು ಅರಿತಿದ್ದರೆ ಅದನ್ನು ಸರಿಯಾಗಿ ವಿವರಿಸು.

ಯಾಜ್ಞವಲ್ಕ್ಯ ಮಹರ್ಷಿ-ಸರ್ವಾಂತರ್ವರ್ತಿಯಾದವನೇ ನಿನ್ನ ಆತ್ಮನು.

ಉಷಸ್ತ-ಯಾವ ಆತ್ಮನು ಸರ್ವಾಂತರನು ?

ಯಾಜ್ಞವಲ್ಕ್ಯ ಮಹರ್ಷಿ-ಯಾರು ಪ್ರಾಣನ ಮುಖೇನ ಪ್ರಾಣನ ಕ್ರಿಯೆ ನಡೆಸುತ್ತಿರುವನೋ, ಯಾರು ಅಪಾನ ಮುಖೇನ ಅಪಾನಕ್ರಿಯೆ ನಡೆಸುತ್ತಿರುವನೋ, ಯಾರು ವ್ಯಾನದ ಮುಖೇನ ವ್ಯಾನಕ್ರಿಯೆಯನ್ನು ನಡೆಸುತ್ತಿರುವನೋ, ಯಾರು ಉದಾನದ ಮುಖೇನ ಉದಾನಕ್ರಿಯೆ ನಡೆಸುತ್ತಿರುವನೋ ಅವನೇ ನಿನ್ನ ಆತ್ಮನು. ಸರ್ವಾಂತರ್ವರ್ತಿಯಾದ ಆತ್ಮನು.

ಆ ಉತ್ತರವನ್ನು ಕೇಳಿದನಂತರ ಉಷಸ್ತ ಚಾಕ್ರಾಯಣನು ಸುಮ್ಮನಾದನು. ಅನಂತರ ಕಹೋಲ ಕೌಷೀತಕೇಯನು ಎದ್ದು ನಿಂತು ಯಾಜ್ಞ

ವಲ್ಕ್ಯನನ್ನು ಕುರಿತು ವಿನಮ್ರತೆಯಿಂದ–ಅಯ್ಯಾ, ನನ್ನದೊಂದು ಪ್ರಶ್ನೆಯುಂಟು.

ಯಾಜ್ಞವಲ್ಕ್ಯ ಮಹರ್ಷಿ–ಏನಿದ್ದರೂ ಕೇಳಬಹುದು, ಅದಕ್ಕೆ ಯಾವ ಸಂಕೋಚವೂ ಬೇಡ.

ಕಹೋಲ ಕೌಷೀತಕೇಯನು ಸಭೆಯನ್ನೊಮ್ಮೆ ದೃಷ್ಟಿಸಿ ನೋಡಿ ತನ್ನಲ್ಲೇ ವಿಚಾರ ವಿಮರ್ಶೆ ಮಾಡುತ್ತ ತನ್ನ ಪ್ರಶ್ನೆಯನ್ನು ಮುಂದಿಡುವನು–ಆಕಾಶದ ವಿಸ್ತಾರವೇನು ? ಅದರ ಗುಣ ವಿಶೇಷವೇನು ? ಅದರ ಕೊನೆಯೆಲ್ಲಿದೆ ?

ಯಾಜ್ಞವಲ್ಕ್ಯ ಮಹರ್ಷಿ–ಅಯ್ಯ ಕಹೋಲ, ಇದು ನಿನಗೆ ಅನುಗುಣವಾದ ಪ್ರಶ್ನೆ. ಈ ವಿಚಾರದಲ್ಲಿ ನನ್ನ ಅನುಭವವನ್ನು ಹೇಳುವೆ ಕೇಳು. ಆಕಾಶವು ಅದ್ಭುತ ಅವಕಾಶಿ. ಅದರ ಗುಣ ವಿಶೇಷವು ಎರಡು ಬಗೆಯದು. ಒಂದು ಅಂತರ್ಮುಖಿ. ಅದನ್ನು ಭೌತಿಕಾಕಾಶ ಎನ್ನುವರು. ಇನ್ನೊಂದು ಅಭೌತಿಕಾಕಾಶವು. ಅದು ಅಂಡಾಕಾರವಾಗಿರುವಂತೆ ತೋರುವುದು. ಪೃಥ್ವಿಯ ಮಹಾ ವಿಸ್ತಾರಕ್ಕೆ ಶತಕೋಟಿಗೂ ಮಿಗಿಲಾಗಿ ಹಬ್ಬಿ, ಸಕಲ ಚರಾಚರಗಳಿಗೂ ಆಧಾರಭೂತವಾಗಿರುವುದು. ಈ ಭೂತಾಕಾಶ–ಅಭೂತಾಕಾಶಗಳ ಆಚೆ ಹಬ್ಬಿದ ಬ್ರಹಾಂಡ ಪ್ರಾಕಾರದಲ್ಲಿರುವ ಪರಮಾಕಾಶದಲ್ಲಿ ಸಮಷ್ಟಿವಾಯು ಸಂಚರಿಸುತ್ತಿರುವುದು. ಅಲ್ಲಿ ಕ್ರಿಯೆ ಅಳಿಯುತ್ತದೆ. ಪರಮಾಕಾಶವನ್ನು ದಾಟಿದರೆ ವ್ಯಕ್ತಿತ್ವವೂ–ನಾಮವೂ ಒಟ್ಟಿಗೆ ಅಳಿಯುತ್ತವೆ. ಆಕಾಶ–ಪರಮಾಕಾಶಗಳ ವ್ಯಾಪ್ತಿ ಹೀಗೆಯೇ ಹಬ್ಬಿ ಯೋಚನಾತೀತವಾಗಿದೆ ಮತ್ತು ವರ್ಣನಾತೀತವಾಗಿದೆ.

ಕಹೋಲ–ಓಂ ! ಯಾಜ್ಞವಲ್ಕ್ಯ, ಸರ್ವಾಂತರ್ಯಾಮಿಯ ವಿಚಾರದಲ್ಲಿ ನೀನು ಏನೇನು ತಿಳಿದುಕೊಂಡಿರುವೆ ? ಹೇಗೆ ಅದರ ಪರ್ಯಾಯ ? ಎಂಬುದನ್ನು ನನಗೆ ವಿವರಿಸು.

ಯಾಜ್ಞವಲ್ಕ್ಯ ಮಹರ್ಷಿ–ಕೇಳು, ಸರ್ವಾಂತರ್ಯಾಮಿಯು ಸರ್ವತ ಏಕತ್ರನು. ಅವನು ವಿಶ್ವಂಭರ ಮತ್ತು ವಿಶ್ವಂಚರ. ಅವನು

ಗೋಚರಾತೀತನು. ಅವನು ಆಲೋಚನಾತೀತನು. ಆ ಅಚಿಂತ್ಯವಾದ ಬ್ರಹ್ಮಸ್ಥಾನವನ್ನು ಮನುಷ್ಯ ಬುದ್ಧಿಯು ಮುಟ್ಟಲಾರದು. ಅಖಂಡ ವಾದ ಮೂಲವಸ್ತುವನ್ನು ಇಂದ್ರಿಯಗಳಿಂದ ನೀನು ಸಾಕ್ಷಾತ್ಕರಿಸಿಕೊಳ್ಳ ಲಾರೆ. ದೃಶ್ಯ-ದೃಕ್ಕು ಎಂಬ ಖಂಡ ವಸ್ತುಗಳು ಸಮ್ಯಕ್ ದೃಷ್ಟಿಗೆ ದೃಗ್ದೃಶ್ಯವಾಗಿ ಒಂದಾಗುವುದು. ಉದಾಹರಣೆಗೆ ಸಮುದ್ರವನ್ನು ನೋಡು. ಅದು ವಾಯುವಿನಿಂದ ಪ್ರತಿಹತವಾದಾಗ ತರಂಗಗಳು ಏಳುವುವು. ಅದೇ ಜಲಗರ್ಭದಲ್ಲಿ ತರಂಗಗಳು ಇವೆ ಎನ್ನುವೆಯಾ? ಇದೆಲ್ಲಾ ಬಹಿರ್ದೃಷ್ಟಿಯ ಅನುಭವ. ಹಾಗೆಯೇ ಕಾಲ-ದೇಶ-ನಿಮಿತ್ತ ಗಳ ಒತ್ತಡದಿಂದ ಅನುಭವ ನಾನಾತ್ವ. ಜಲಘನವಾದುದನ್ನು ನೀನು ನೋಡಿರುವೆಯಷ್ಟೆ? ಆಗ ನಿನಗೆ ಏನೆನಿಸಿತು? ಸೊಂಪಾದ ನಿದ್ದೆ ಯಲ್ಲಿ ತದೇಕ ಘನವಾಗುವಂತೆ ಪ್ರಜ್ಞಾನ ಘನವಾದರೆ ನಾನಾತ್ವ ಕಣ್ಮರೆ ಯಾಗುವುದು. ಸಮುದ್ರ ಎಂದಾಗ ಅದು ವಸ್ತುತಃ ಒಂದೇ. ಆದರೆ, ಅದರಲ್ಲಿ ನಾನಾ ಅಂಶಗಳಿರುವುದು ಸಹಜ. ವಿಷಯ ಹೇಗೆ ಭಾವಿಸಿದರೆ ಹಾಗೆ. ಎಲ್ಲವೂ ಕಾಲೋಚಿತವಾದ ಮನೋಧರ್ಮ. ಈಗ ಅರ್ಥ ವಾಯಿತೇ? ನಾನಾತ್ವವನ್ನು ನೋಡುವವನು ಮೃತ್ಯುವಿನಿಂದ ಮೃತ್ಯು ವನ್ನು ಪಡೆಯುತ್ತಾನೆ. ಭಿನ್ನ ದೃಷ್ಟಿಯಿಂದ ಭಿನ್ನಭಾವ. ಅಖಂಡ ದೃಷ್ಟಿಯಿಂದ ಅಖಂಡ ಭಾವ.

ಬೃಹತ್ ಸಭೆಯಲ್ಲಿ ಎಳ್ಳು ಬೀಳಿಸಿದರೂ ಕೇಳಿಸುವಂತಹ ನಿಶ್ಶಬ್ದ. ಬಾರಿಬಾರಿಗೂ ತಲೆತೂಗುವುದೊಂದನ್ನು ಬಿಟ್ಟರೆ ಮತ್ತಾವ ಪ್ರತಿ ಕ್ರಿಯೆಯೂ ಹೊರಬೀಳಲಿಲ್ಲ.

ಕಹೋಲ-ತಿಳಿಯಿತು.

ಯಾಜ್ಞವಲ್ಕ್ಯ ಮಹರ್ಷಿ-ಇನ್ನಾವ ಪ್ರಶ್ನೆ?

ಆಗ ಅಶ್ವಲನು ಎದ್ದು ನಿಂತು ಕಹೋಲ ಕೌಷೀತಕೇಯನನ್ನು ಕುರಿತು ಗಂಭೀರವಾದ ಧ್ವನಿಯಲ್ಲಿ-ಕಹೋಲರೇ, ನಿಮಗೆ ಯಾಜ್ಞವಲ್ಕ್ಯ

ಮಹರ್ಷಿಯು ಸುಲಭಸಾಧ್ಯರಲ್ಲ. ಈ ಸಂದರ್ಭದಲ್ಲಿ ಬರಿಯ ಮಾತು ಪ್ರಯೋಜನವಿಲ್ಲ ಎಂಬುದು ನಿಮಗೂ ಗೊತ್ತು.

ಕಹೋಲ ಕೌಷೀತಕೇಯನು ಗೆಳೆಯನ ಮಾತಿಗೆ ಮನ್ನಣೆ ನೀಡಿದಂತೆ ಗಾರ್ಗಿ ವಾಚಕ್ನವಿಯನ್ನು ನೋಡುತ್ತ ಯಾಜ್ಞವಲ್ಕ್ಯ ಮಹರ್ಷಿಯನ್ನು ಕುರಿತು–ನನ್ನ ಮುಂದಿನ ಪ್ರಶ್ನೆಯನ್ನು ಗಾರ್ಗಿ ವಾಚಕ್ನವಿಗೆ ಬಿಟ್ಟುಕೊಡುವೆನು. ಮುಂದಿನ ಪ್ರಶ್ನೆಯನ್ನು ಅವಳೇ ಕೇಳಲಿ.

ಆಗ ಗಾರ್ಗಿ ವಾಚಕ್ನವಿಯು ಎದ್ದು ನಿಂತು ಸಭೆಯನ್ನು ಗೌರವಪೂರ್ವಕವಾಗಿ ವಂದಿಸಿದ ನಂತರ ತನ್ನ ಪ್ರಶ್ನೆಯನ್ನು ಕೇಳುವಳು–ಭಗವನ್ ! ಯಾಜ್ಞವಲ್ಕ್ಯ ಮಹರ್ಷಿಗಳೇ, ಇದೋ ನನ್ನ ಪ್ರಶ್ನೆ.

ಯಾಜ್ಞವಲ್ಕ್ಯ ಮಹರ್ಷಿ–ಆಗಬಹುದು ಯೋಗಿನಿ! ನಿನ್ನ ಪ್ರಶ್ನೆಯನ್ನು ಕೇಳುವುದೆಂದರೆ ನನ್ನ ಕಿವಿಗಳೇ ಪುನೀತವಾಗುವುವು ಎನ್ನಬಹುದು. ನೀನು ಏನು ಕೇಳಿದರೂ ಹಿತವೆ.

ಗಾರ್ಗಿ–ಯಾಜ್ಞವಲ್ಕ್ಯರೇ, ಈಗ ಹೇಳಿ. ಪಾರ್ಥಿವಧಾತುಸಮೂಹವು ನೀರಿನಿಂದ ವ್ಯಾಪ್ತವಾಗಿದ್ದರೆ ನೀರು ಯಾತರಿಂದ ವ್ಯಾಪ್ತವಾಗಿರುತ್ತದೆ ?

ಯಾಜ್ಞವಲ್ಕ್ಯ ಮಹರ್ಷಿ–ಗಾರ್ಗಿ, ವಾಯುವಿನಿಂದ.

ಗಾರ್ಗಿ–ಆ ವಾಯು ಯಾತರಿಂದ ವ್ಯಾಪ್ತವಾಗಿದೆ ?

ಯಾಜ್ಞವಲ್ಕ್ಯ ಮಹರ್ಷಿ–ಗಾರ್ಗಿ, ಅಂತರಿಕ್ಷ ಲೋಕದಿಂದ.

ಗಾರ್ಗಿ–ಆ ಅಂತರಿಕ್ಷ ಲೋಕವು ಯಾತರಿಂದ ವ್ಯಾಪ್ತವಾಗಿದೆ ?

ಯಾಜ್ಞವಲ್ಕ್ಯ ಮಹರ್ಷಿ–ಗಾರ್ಗಿ, ಗಂಧರ್ವ ಲೋಕದಿಂದ.

ಗಾರ್ಗಿ–ಆ ಗಂಧರ್ವ ಲೋಕವು ಯಾತರಿಂದ ವ್ಯಾಪ್ತವಾಗಿರುತ್ತದೆ ?

ಯಾಜ್ಞವಲ್ಕ್ಯ ಮಹರ್ಷಿ–ಗಾರ್ಗಿ, ಆದಿತ್ಯಲೋಕದಿಂದ.

ಗಾರ್ಗಿ–ಆದಿತ್ಯಲೋಕವು ಯಾತರಿಂದ ವ್ಯಾಪ್ತವಾಗಿದೆ ?

ಯಾಜ್ಞವಲ್ಕ್ಯ ಮಹರ್ಷಿ—ಗಾರ್ಗಿ, ಚಂದ್ರಲೋಕದಿಂದ.

ಗಾರ್ಗಿ—ಚಂದ್ರಲೋಕವು ಯಾತರಿಂದ ವ್ಯಾಪ್ತವಾಗಿದೆ ?

ಯಾಜ್ಞವಲ್ಕ್ಯ ಮಹರ್ಷಿ—ಗಾರ್ಗಿ ನಕ್ಷತ್ರಲೋಕದಿಂದ.

ಗಾರ್ಗಿ—ನಕ್ಷತ್ರಲೋಕವು ಯಾತರಿಂದ ವ್ಯಾಪ್ತವಾಗಿದೆ ?

ಯಾಜ್ಞವಲ್ಕ್ಯ ಮಹರ್ಷಿ—ಗಾರ್ಗಿ, ದೇವಲೋಕದಿಂದ.

ಗಾರ್ಗಿ—ದೇವಲೋಕವು ಯಾತರಿಂದ ವ್ಯಾಪ್ತವಾಗಿದೆ ?

ಯಾಜ್ಞವಲ್ಕ್ಯ ಮಹರ್ಷಿ—ಗಾರ್ಗಿ, ಇಂದ್ರಲೋಕದಿಂದ.

ಗಾರ್ಗಿ—ಇಂದ್ರಲೋಕವು ಯಾವುದರಿಂದ ವ್ಯಾಪ್ತವಾಗಿದೆ ?

ಯಾಜ್ಞವಲ್ಕ್ಯ ಮಹರ್ಷಿ—ಗಾರ್ಗಿ, ಪ್ರಜಾಪತಿಲೋಕದಿಂದ.

ಗಾರ್ಗಿ—ಪ್ರಜಾಪತಿಲೋಕವು ಯಾತರಿಂದ ವ್ಯಾಪ್ತವಾಗಿದೆ ?

ಯಾಜ್ಞವಲ್ಕ್ಯ ಮಹರ್ಷಿ—ಗಾರ್ಗಿ, ಬ್ರಹ್ಮಲೋಕದಿಂದ.

ಗಾರ್ಗಿ—ಬ್ರಹ್ಮಲೋಕವು ಯಾತರಿಂದ ವ್ಯಾಪ್ತವಾಗಿದೆ ?

ಯಾಜ್ಞವಲ್ಕ್ಯ ಮಹರ್ಷಿ—ಯೋಗಿನಿ, ಗಾರ್ಗಿ! ಅತಿಪ್ರಶ್ನಳಾಗ ಬೇಡ. ಅದರಿಂದ ನಿನ್ನ ತಲೆಯೇ ಬಿದ್ದುಹೋಗುವುದು.

ಗಾರ್ಗಿ—ನಮಸ್ತೇ ಬ್ರಹ್ಮನ್. ನಾನು ನಿಮ್ಮಿಂದ ಪರಮ ಸಂತುಷ್ಟಳಾದೆ.

ಅನಂತರ ಮಹರ್ಷಿ ಮಂಡಳಿಯ ಕಡೆ ತಿರಗಿ ಗಾರ್ಗಿಯು—ಭಗವಂತ ರಾದ ಪಂಡಿತೋತ್ತಮರೇ, ನೀವು ಈ ಯಾಜ್ಞವಲ್ಕ್ಯರಿಂದ ಬರಿಯ ನಮಸ್ಕಾರದ ಮೂಲಕ ಬಂಧಮುಕ್ತರಾದರೆ ಅದೇ ವಿಶೇಷವೆಂದು ತಿಳಿಯಿರಿ. ನಿಮ್ಮಲ್ಲಿ ಯಾರಾದರೂ ಇವರನ್ನು ಬ್ರಹ್ಮವಾದದಲ್ಲಿ ಜಯಿಸ ಬಲ್ಲಿರೆಂದು ನಾನು ಭಾವಿಸಲಾರೆ.

ಎಲ್ಲರೂ ಆ ಮಾತಿಗೆ ಗಂಭೀರಭಾವದಿಂದ ಸುಮ್ಮನೆ ತಲೆದೂಗು ವರು. ಆಶ್ಚರ್ಯ ವಿಶೇಷ ಕಣ್ಣುಗಳಲ್ಲಿ ವ್ಯಕ್ತವಾದರೂ 'ಭಲೆ!' ಎನ್ನು

ವಷ್ಟು ಉದಾರಭಾವ ಪಂಡಿತೋತ್ತಮರಲ್ಲಿ ಮೂಡಲಿಲ್ಲ. ಯಾಜ್ಞವಲ್ಕ್ಯ ಮಹರ್ಷಿಯು ಮುಂದಿನ ಪರಿಣಾಮದ ನಿರೀಕ್ಷೆಯಲ್ಲಿದ್ದು ಎಲ್ಲರ ಕಡೆಯೂ ದಿಟ್ಟಿಸಿ ನೋಡುವನು. ಸಭೆಯಲ್ಲಿ ನಿಶ್ಯಬ್ದತೆಯು ನೆಲೆಸಿದ್ದರೂ ಮಾನಸಿಕ ತುಮುಲ ಎಲ್ಲರ ತಲೆಯಲ್ಲೂ ಎದ್ದಿತು. ಮುಂದೇನು ಎಂಬ ಯೋಚನೆ ಅನೇಕರಿಗೆ.

ಆಗ ಪಾಂಚಾಲದೇಶದ ಬ್ರಾಹ್ಮಣರು ಅರುಣನ ಮಗನಾದ ಗೌತಮನನ್ನು ಹುರಿದುಂಬಿಸುವರು. ಒಡನೆ ಅವನು ಗುಂಪಿನಿಂದ ಹೊರಬಿದ್ದು ಯಾಜ್ಞವಲ್ಕ್ಯ ಮಹರ್ಷಿಯನ್ನು ಕುರಿತು–ನೀನು ಅಂತರ್ಯಾಮಿಯ ವಿಚಾರವನ್ನು ತಿಳಿದುಕೊಂಡಿರುವೆಯಾದರೆ ಅದನ್ನು ವಿವರಿಸು.

ಯಾಜ್ಞವಲ್ಕ್ಯ ಮಹರ್ಷಿ–ಗೌತಮನೇ ಕೇಳು, ಆ ಅಂತರ್ಯಾಮಿಯ ಸೂತ್ರಸಾರವನ್ನು ನಾನು ಅರಿತುಕೊಂಡಿರುವೆನು.

ಗೌತಮ–ಓಂ! ಯಾಜ್ಞವಲ್ಕ್ಯ, ಹಾಗೆಂದು ಯಾರಾದರೂ ಹೇಳಬಲ್ಲರು. ನೀನು ಏನು ಅರಿತುಕೊಂಡಿರುವೆಯೋ ಅದನ್ನು ವಿವರಿಸಿ ಹೇಳು.

ಯಾಜ್ಞವಲ್ಕ್ಯ ಮಹರ್ಷಿ ಯಾರು ಪೃಥ್ವಿಯಲ್ಲಿರುವವನಾಗಿ ಅವನನ್ನು ಪೃಥ್ವಿಯು ತಿಳಿಯದೋ, ಯಾರು ಪೃಥ್ವಿಯ ಒಳಗಿದ್ದುಕೊಂಡು ಪೃಥ್ವಿಯನ್ನು ನಿಯಂತ್ರಿಸುವನೋ, ಅವನೇ ಅಂತರ್ಯಾಮಿಯು; ಅವನೇ ನಿನಂತ ಜೀವಿಗಳ ಅಮೃತವಾದ ಆತ್ಮನು. ಹೀಗೆಯೇ, ಯಾರು ನೀರಿನಲ್ಲಿರುವವನಾಗಿ ಅವನನ್ನು ನೀರು ತಿಳಿಯದೋ, ನೀರಿನಲ್ಲಿದ್ದುಕೊಂಡು ನೀರನ್ನು ನಿಯಂತ್ರಿಸುವನೋ ಅವನೇ ಅಂತರ್ಯಾಮಿಯು, ಅವನೇ ನಿನ್ನಂಥ ಜೀವಿಗಳ ಅಮೃತನಾದ ಆತ್ಮನು. ಹೀಗೆಯೇ, ಯಾರು ಅಗ್ನಿಯ ಒಳಗಿರುವವನಾಗಿ ಅವನನ್ನು ಅಗ್ನಿಯು ಅಗ್ನಿಯು ತಿಳಿಯದೋ, ಯಾರು ಅಗ್ನಿಯಲ್ಲಿದ್ದುಕೊಂಡು ಅಗ್ನಿಯನ್ನು ನಿಯಂತ್ರಿಸುವನೋ ಅವನೇ ಅಂತರ್ಯಾಮಿಯು; ನಿನ್ನಂತ ಜೀವಿಗಳ ಅಮೃತನಾದ ಆತ್ಮನು. ಹೀಗೆಯೇ, ಯಾರು ಅಂತರಿಕ್ಷದಲ್ಲಿರುವವನಾಗಿ ಅವನನ್ನು ಅಂತರಿಕ್ಷವು ತಿಳಿಯದೋ, ಯಾರು ಅಂತರಿಕ್ಷದಲ್ಲಿದ್ದುಕೊಂಡು

ಅಂತರಿಕ್ಷವನ್ನು ನಿಯಂತ್ರಿಸುವನೋ, ಅವನೇ ಅಂತರ್ಯಾಮಿಯು; ನಿನ್ನಂತ ಜೀವಿಗಳ ಅಮೃತನಾದ ಆತ್ಮನು. ಹೀಗೆಯೇ, ಯಾರು ವಾಯುವಿನಲ್ಲಿರುವವನಾಗಿ ಅವನನ್ನು ವಾಯುವು ತಿಳಿಯದೋ, ಯಾರು ವಾಯುವಿನಲ್ಲಿದ್ದುಕೊಂಡು ವಾಯುವನ್ನು ನಿಯಂತ್ರಿಸುವನೋ ಅವನೇ ಅಂತರ್ಯಾಮಿಯು; ನಿನ್ನಂಥ ಜೀವಿಗಳ ಅಮೃತನಾದ ಆತ್ಮನು. ಹೀಗಿಯೇ, ಯಾರು ಆದಿತ್ಯನಲ್ಲಿರುವವನಾಗಿ ಅವನನ್ನು ಆದಿತ್ಯನು ತಿಳಿಯನೋ, ಯಾರು ಆದಿತ್ಯನಲ್ಲಿದ್ದುಕೊಂಡು ಆದಿತ್ಯನನ್ನು ನಿಯಂತ್ರಿಸುವನೋ ಅವನೇ ಅಂತರ್ಯಾಮಿಯು; ನಿನಂಥ ಜೀವಿಗಳ ಅಮೃತನಾದ ಆತ್ಮನು. ಹೀಗೆಯೇ, ಯಾರು ಚಂದ್ರ ನಕ್ಷತ್ರಗಳಲ್ಲಿರುವವನಾಗಿ ಅವನನ್ನು ಚಂದ್ರ-ನಕ್ಷತ್ರಗಳು ಅರಿಯವೋ, ಯಾರು ಚಂದ್ರ-ನಕ್ಷತ್ರಗಳಲ್ಲಿದ್ದುಕೊಂಡು ಚಂದ್ರ-ನಕ್ಷತ್ರಗಳನ್ನು ನಿಯಂತ್ರಿಸುವನೋ ಅವನೇ ಅಂತರ್ಯಾಮಿಯು; ನಿನ್ನಂಥ ಜೀವಿಗಳ ಅಮೃತನಾದ ಆತ್ಮನು. ಹೀಗೆಯೇ, ಯಾರು ಸಕಲ ಚರಾಚರಗಳಲ್ಲಿರುವವನಾಗಿ ಅವನನ್ನು ಚರಾಚರಗಳು ಅರಿಯವೋ, ಯಾರು ಚರಾಚರಗಳಲ್ಲಿದ್ದುಕೊಂಡು ಚರಾಚರಗಳನ್ನು ನಿಯಂತ್ರಿಸುವನೋ ಅವನೇ ಅಂತರ್ಯಾಮಿಯು; ನಿನ್ನಂಥ ಜೀವಿಗಳ ಅಮೃತನಾದ ಆತ್ಮನು. ಅವನು ಕೇಳಿಸಿಕೊಳ್ಳುವುದಿಲ್ಲ, ಆದರೂ ಶ್ರೋತೃವು. ಅವನು ಮನಸ್ಸಿಗೆ ವಿಷಯನಲ್ಲ, ಆದರೂ ಮಂತೃವು. ಅವನು ತಿಳಿದುಕೊಳ್ಳುವುದಿಲ್ಲ, ಆದರೂ ತಿಳಿಯುವವನು. ಅವನಿಗಿಂತ ಬೇರೆ ಯಾವ ಸಾಕ್ಷಿಯಿಲ್ಲ; ಅವನಿಗಿಂತ ಬೇರೆ ಯಾವ ಶ್ರೋತೃವಿಲ್ಲ, ಅವನಿಗಿಂತ ಬೇರೆ ಯಾವ ಮಂತೃವಿಲ್ಲ. ಅವನಿಗಿಂತ ಬೇರೆ ಅರಿಯುವವನಿಲ್ಲ. ಅವನೇ ಅಂತರ್ಯಾಮಿಯು; ನಿನ್ನಂಥ ಜೀವಿಗಳ ಅಮೃತನಾದ ಆತ್ಮನು. ಅವನಿಗಿಂತ ಭಿನ್ನವಾದುದೆಲ್ಲ ನಶ್ವರವು.

ಆಗ ಗೌತಮನು ಸಂತೃಪ್ತಿಯಿಂದ ಸುಮ್ಮನಾಗುವನು.

ಆದರೇನು ? ಯಾರ ಸಾಮ್ರಾಜ್ಯ ಪ್ರತಾಪದಿಂದ ಉತ್ತರದೇಶಗಳು ತಲ್ಲಣಿಸಿಹೋಗುತ್ತಿದ್ದುವೋ, ಯಾರ ಪ್ರತಾಪಾಗ್ನಿಯು ದೇಶದ್ಯಾಂತ ಪ್ರಜ್ವಲಿಸುತಿತ್ತೋ, ಯಾರ ಕೀರ್ತಿಯು ಬಹುಜನಮಂಡಿತ ಸಭೆಗಳಲ್ಲಿ

ಮುಕ್ತಕಂಠದಿಂದ ಪ್ರಶಂಸನಾರ್ಹವಾಗಿದ್ದಿತೋ ಅಂತಹ ಬಹುಮೂಲ್ಯವಾದ ಪ್ರಖ್ಯಾತಿಯು ತಮ್ಮ ಕಣ್ಮುಂದೆಯೇ ಕಸಕ್ಕಿಂತಲೂ ಕಡೆಯಾಗಿ ಕುಸಿದು ಬಿದ್ದು ಸನ್ಮಾನ್ಯ ಸಭೆಯಲ್ಲಿ ಮಾನಕ್ಕೆ ಕುಂದು ತಂದುದುದು ಮನವನ್ನು ದಿಕ್ಕೆಡಿಸಿ, ಮಹರ್ಷಿಗಳೂ ಮುನಿಪುಂಗವರೂ ಬ್ರಾಹ್ಮಣರೂ ಅತೀವ ಪರಿತಾಪ-ಕಿಚ್ಚು-ರೋಷಗಳಿಂದ ಕುದಿಯುತ್ತ ಯೋಚನೆಯಲೆಗಳ ವಿಘಟನೆಗೆ ಸಿಕ್ಕಿ ವಿಚಿತ್ರ ಕೋಲಾಹಲದ ವಿಪ್ಲವದಲ್ಲಿ ಕೊಚ್ಚಿ ಹೋದರು. ಯಾರ ಮುಖದಲ್ಲಿ ನೋಡಿದರೂ ತೇಜೋಭಂಗದಿಂದ ಕುಗ್ಗಿ ಕಂಗೆಟ್ಟು 'ಮುಂದೇನು ?' ಎಂಬ ಪ್ರಶ್ನೆಯ ಮುದ್ರೆ. ಹೇಗಾದರೂ ಈ ಸೇಡು ತೀರಿಸಿಕೊಳ್ಳಲೇಬೇಕೆಂಬ ಹಠದ ಗಂಭೀರ ಕಾರಸ್ಥಾನದಲ್ಲಿ ಗುಡುಗು ಸಿಡಿಲು ಮಿಂಚು ಗರ್ಭಿತವಾದ ಮೇಘಮಂಡಲವನ್ನೂ ಸಹ ಅಣಕಿಸಬಹುದಾದಂತಹ ವಿಪರೀತ ಪರಿಸ್ಥಿತಿ. ಅದೇ ನೇರಕ್ಕೆ ಯಾಜ್ಞವಲ್ಕ್ಯ ಮಹರ್ಷಿಯ ಅನುಯಾಯಿಗಳ ಮುಖಭಾವದಲ್ಲಿ ಆನಂದ ಸಮಾಧಾನಗಳ ಉದ್ದೀಪ್ತಿ ಬೆಳಗಿ ಪ್ರಖ್ಯಾತಿವಿಖ್ಯಾತಿಗಳ ಭಾವವಿಭಾವವನ್ನು ಪ್ರದರ್ಶಿಸಿದಂತಿತ್ತು ಬೃಹದ್ ಸಭೆಯಲ್ಲಿ.

ದಿನವೆಲ್ಲಾ ತಪ್ತಕಿರಣಗಳ ಅಗ್ನಿಸ್ಫುಲ್ಲಿಂಗಗಳನ್ನು ಕರೆಯುತ್ತಿದ್ದ ಭಗವಾನ್ ಭಾಸ್ಕರ ಸಾಂಧ್ಯ ಮೇಘಮಂಡಲದೊಳಗೆ ತಣ್ಣಗೆ ವಿಶ್ರಮಿಸಿದಾಗ ಯಜ್ಞಶಾಲೆಯ ಅಂಗಣ ಉಷ್ಣೋಷ್ಣಭರಿತ ವಾತಾವರಣದಿಂದ ಮುಕ್ತಿಹೊಂದಿ ತಣ್ಣಗೆ ನಿರಾಳವಾಗಿ ಉಸಿರಾಡಿತು ಜನವೃಂದ. ಪಶ್ಚಿಮ ಭಿತ್ತಿಯ ಸೀಮಾಕ್ಷೇತ್ರದಲ್ಲಿ ಮೇಘಮಾಲೆಗಳು ದಟ್ಟೈಸುತ್ತಲೇ ಇದ್ದುದರಿಂದ ಹಾಗೇ ಇಳಿದು ಅವುದೋ ಅನನ್ಯ ಜಗತ್ತಿಗೆ ಪಯಣಿಸಿ ಇರುಳಿನ ವಿಷಯಕ್ಕೆ ನಾಂದಿ ಹಾಡಿದ ಭಗವಾನ್ ಭಾಸ್ಕರ !

ಉಚ್ಛ್ವಾಸ ೧೩

○

ಪ್ರಾತಃಕಾಲೀನ ಕಮನೀಯವಾದ ಶಾಂತಪ್ರಶಾಂತ ವಾತಾವರಣ.

ದಿಸೆಯಿಂದ ದಿಸೆಗೆ ಒಯ್ಯೊಯ್ಯನೆ ಬೀಸಿಬರುವ ಶೀತಲ ಸಮೀರಣನ ಮೃದುಮಂದ ಸುಖಸ್ಪರ್ಶವು ಅತೀವ ಆಹ್ಲಾದಾಮೋದಕರ ಮೈಮನಗಳಿಗೆ.

ಅದೇತಾನೇ ಅರಳಿ ದಳಬಿರಿದ ಜಾಜಿ, ಮಲ್ಲಿಗೆ, ಸಂಪಿಗೆ, ಮಂದಾರ, ಮಾಲತೀ ಮುಂತಾದ ನರುಗಂಪು ಸೂಸುವ ಪುಷ್ಪಹಾರಗಳಿಂದ ಸಾಲಂಕೃತವಾದ ಬೃಹದ್ ಯಜ್ಞಶಾಲೆಯ ತುಂಬೆಲ್ಲಾ ಹಿಂದಿನ ದಿನವೇ ಆದ ವಿಚಿತ್ರ ವೈಶಿಷ್ಟ್ಯ. ಅಧ್ವರ್ಯೂರ್ದ್ಗಾರಹೋತಾರರ ವೈದಗ್ಧ್ಯವಿಶೇಷದಲ್ಲಿ ನಡೆಯುವ ಹವನ ಹೋಮಾದಿಗಳೂ ಯಥಾಕ್ರಮವೇ. ಯಾವುದರಲ್ಲೂ ಏರುಪೇರು ಎಂಬುದು ಇಲ್ಲವೇ ಇಲ್ಲ. ಅದೇ ಸಂಭ್ರಮ; ಅದೇ ಸಡಗರ. ಹೋಮಧೂಮ ಸುರಳಿಸುರಳಿಯಾಗಿ ರೇಖಾರೂಪದಲ್ಲಿ ಗಗನಪಥವನ್ನು ಆಡರುತ್ತಿತ್ತು, ಶ್ರೀಗಂಧದ ಕಂಪಿನ ಪೆಂಪನ್ನು ಪೈಗೂಡಿಕೊಂಡು. ಪ್ರಾರ್ಥನಾಭಂಗಿಯಲ್ಲಿ ಮೂಕಮೌನದಿಂದ ವೀಕ್ಷಿಸುವ ಮಹಾ ಜನರಾಶಿಯಲ್ಲಿ ಆತ್ಮಶಾಂತಿ–ಚಿತ್ತಶಾಂತಿಗಳ ಅಮೋಘವಾದ ಪರಿತೃಪ್ತಿ ರೋಮರೋಮ

ಗಳಲ್ಲೂ ಹೊಮ್ಮಿ ಸಮಾಧಾನ ಸ್ನಿಗ್ಧ ಮನೋಹರತೆ ಕಣ್ಗೊಳಿಸುತಿತ್ತು ವ್ಯಾಪಕವಾಗಿ.

ಸ್ವರ್ಗಕ್ಕೂ ಮರ್ತ್ಯಕ್ಕೂ ಸೋಪಾನ ಕಟ್ಟಲಿರುವರೋ ಎಂಬಂತೆ ಮೊಳಗುವ ಅಖಂಡ ಮಂತ್ರಘೋಷಧಾರೆಯು ಆವುದೋ ಅವ್ಯಕ್ತ ಶಕ್ತಿಯ ವಜ್ರಮುಷ್ಟಿಯಲ್ಲಿ ಸಿಲುಕಿ ಆಸೆ-ಜಿಜ್ಞಾಸೆಗಳನ್ನು ಮಸಗುವುದು ತಾನೇತಾನಾಗಿ.

ಕೆಲವೊಮ್ಮೆ ಶಂಖ, ಜಾಗಟೆ ಮತ್ತು ಘಂಟಾರವಗಳೂ ಸಹ ಸಂಘಟಿಸುತಿದ್ದುದುಂಟು, ಮಂತ್ರಘೋಷಧಾರೆಯ ಮಂಗಳರವದೊಂದಿಗೆ.

ಯುಕ್ತ ಸಮಯದಲ್ಲಿ ಯಜ್ಞ ಶಾಲೆಗೆ, ರಾಜಾಧಿರಾಜನಾದ ಜನಕ ಚಕ್ರವರ್ತಿಯು ದಯಮಾಡಿಸಿ ವೇದಿಕೆಯ ಬಳಿಯಲ್ಲಿ ಪೀಠದಲ್ಲಿ ಮಂಡಿಸಿದ ನಂತರ ಮುನಿಪುಂಗವರ ಗುಂಪಿನಿಂದ ಹೊರಬಿದ್ದ ಗೌತಮ ಮಹರ್ಷಿಯು ವೇದಿಕೆಯ ಸಮೀಪದಲ್ಲಿ ನಿಂತು ಸಭೆಯನ್ನು ಉದ್ದೇಶಿಸಿ ಹೀಗೆಂದು ಬಿನ್ನಯಿಸಿಕೊಳ್ಳುತ್ತಾನೆ-ಮಹಾ ಪಂಡಿತೋತ್ತಮರೇ ಹಾಗೂ ವಿದ್ವನ್ಮಣಿಗಳೇ ನಿನ್ನೆ ಅಪೂರ್ಣವಾದ ವಾದವನ್ನು ಇಂದು ಪುನರಾಂಭಿಸಲು ತಮ್ಮ ಅಪ್ಪಣೆಯನ್ನು ಬೇಡುವೆ.

ಆ ಕೂಡಲೇ ಇಡೀ ಸಭೆಯಲ್ಲಿ ಹರ್ಷೋದ್ಗಾರ ಕೇಳಿಬರುವುದು.

ಹಿರಿಯ ಮಹರ್ಷಿಗಳು-ಆಗಬಹುದು....ಆಗಬಹುದು.

ಗೌತಮ ಮಹರ್ಷಿಯು ಜನಕ ಮಹಾರಾಜನನ್ನು ಕುರಿತು--ಜನಕ ಚಕ್ರವರ್ತಿಗಳೇ, ತಮ್ಮ ಅಪ್ಪಣೆಯನ್ನು ಕೇಳಿಕೊಳ್ಳುವೆ.

ಜನಕ ಚಕ್ರವರ್ತಿ-ಆಗಬಹುದು, ತಾವು ಮುಂದುವರಿಸೋಣವಾಗಲಿ.

ಗೌತಮ ಮಹರ್ಷಿಯು ವಿಚಾರಪರವಶನಾಗಿ ಗಂಬೀರಭಾವದಿಂದ ಯಾಜ್ಞವಲ್ಕ್ಯ ಮಹರ್ಷಿಯನ್ನು ಕುರಿತು ಹೀಗೆ ಪ್ರಶ್ನಿಸುವನು—ಓಂ! ಯಾಜ್ಞವಲ್ಕ್ಯ, ನಿನ್ನೆ ಅಪೂರ್ಣವಾದ ವಾದವಿವಾದವನ್ನು ಇಂದು ಮುಂದುವರಿಸುವ ಯೋಚನೆಯು ನಮಗುಂಟು ; ನೀನು ಏನು ಹೇಳುತ್ತಿ?

ಯಾಜ್ಞವಲ್ಕ್ಯಮಹರ್ಷಿಯು ಸಂತಸದ ಎಳೆನಗುವನ್ನು ಸೂಸಿ— ಆಗಲಿ....ಆಗಲಿ, ಬಹಳ ಸಂತೋಷ !

ಗೌತಮ ಮಹರ್ಷಿ-ನಾನೀಗ ಉಷಸ್ತ ಚಾಕ್ರಾಯಣನನ್ನು ಪ್ರಶ್ನಿಸಲು ಕೇಳಿಕೊಳ್ಳುವೆ.

ಯಾಜ್ಞವಲ್ಕ್ಯ ಮಹರ್ಷಿಯು ಕರ್ತವ್ಯಶೀಲತೆಯಿಂದ ಪ್ರಸನ್ನಚಿತ್ತನಾಗಿ—ಆಗಬಹುದು.

ಅನಂತರ ಗೌತಮ ಮಹರ್ಷಿಯು ಉಷಸ್ತ ಚಾಕ್ರಾಯಣನನ್ನು ಕುರಿತು-ಎಲೆ, ಉಷಸ್ತ ! ನೀನು ಎದ್ದು ಪ್ರಶ್ನಿಸು. ಧೈರ್ಯದಿಂದ-ಪ್ರಶ್ನಿಸಿ ಕೀರ್ತಿಶಾಲಿಯಾಗು.

ಉಷಸ್ತ ಚಾಕ್ರಾಯಣನು ತಾನಾಗಲೇ ಒಮ್ಮೆ ಪ್ರಶ್ನಿಸಿ ಸೋಲೊಪ್ಪಿದುದನ್ನು ಮನದಲ್ಲೆ ಯೋಚಿಸುತ್ತ ಕಳವಳದಿಂದ ಸ್ವಲ್ಪ ಹಿಂಜರಿದರೂ ಅದನ್ನು ಲವಲೇಶವೂ ತೋರಗೊಡದೆ ಪಂಡಿತೋತ್ತಮರಿಗೂ ಜನಕ ಮಹಾರಾಜನಿಗೂ ವಿನಮ್ರತೆಯಿಂದ ಕೈಜೋಡಿಸಿ ಅಪ್ಪಣೆ ಮತ್ತು ಆಶೀರ್ವಾದವನ್ನು ಪಡೆದುಕೊಂಡ.

ಉಷಸ್ತ—ಓಂ ! ಯಾಜ್ಞವಲ್ಕ್ಯ, ನೀನು ಅಶ್ವವು ಹೀಗೆ, ಗೋವು ಹಾಗೆ ಎಂದಂತೆ ನಿರ್ದೇಶಿಸಿದರೆ ಸಾಲದು. ಅಪರೋಕ್ಷವಾದ ಬ್ರಹ್ಮವನ್ನು-ಸರ್ವಾಂತರ್ವರ್ತಿಯಾದ ಆತ್ಮನನ್ನು ನನಗೆ ಸರಿಯಾಗಿ ವಿವರಿಸಿ ಹೇಳು.

ಯಾಜ್ಞವಲ್ಕ್ಯ ಮಹರ್ಷಿ—ಯಾರು ಸರ್ವಾಂತರ್ವರ್ತಿಯೋ ಅವನೇ ನಿನ್ನ ಆತ್ಮನು.

ಉಷಸ್ತ—ಅಯ್ಯಾ, ಯಾಜ್ಞವಲ್ಕ್ಯ ! ಆದರ ಸರ್ವಾಂತರತೆಯನ್ನು ವಿವರಿಸಿ ಹೇಳು.

ಯಾಜ್ಞವಲ್ಕ್ಯಮಹರ್ಷಿ-ಹಾಗಾದರೆ ಕೇಳು, ನೀನು ಹೇಗೆ ದೃಷ್ಟಿಯ ದ್ರಷ್ಟೃವನ್ನು ನೋಡಲಾರೆಯೋ ಹಾಗೆಯೇ ನೀನು ಶ್ರವಣದ ಶ್ರೋತೃವನ್ನೂ ಕೇಳಲಾರೆ ; ಹಾಗೆಯೇ ನೀನು ಮನನದ ಮಂತೃವನ್ನೂ ಯೋಚಿಸಲಾರೆ ; ಮತ್ತು ಹಾಗೆಯೇ ನೀನು ವಿಜಾನದ ವಿಜ್ಞಾತೃವನ್ನೂ ಅರಿಯ

ಲಾರೆ. ಅಂದರೆ ದೃಷ್ಟಿಯಲ್ಲಿ ಲೌಕಿಕ ದೃಷ್ಟಿ ಮತ್ತು ಪಾರಮಾರ್ಥಿಕ ದೃಷ್ಟಿ ಎಂದು ಎರಡು ವಿಧ. ಕಣ್ಣಿನಲ್ಲಿರುವ ಅಂತಃಕರಣ ಪ್ರವೃತ್ತಿಯು ಲೌಕಿಕ ದೃಷ್ಟಿಯು. ವಿಷಯವಾಸನೆಯಿಂದ ಅನುರಂಜಿತವಾದ ಲೌಕಿಕ ದೃಷ್ಟಿಗೆ ಆದ್ಯಂತಗಳುಂಟು. ಆತ್ಮನ ಸ್ವಾಭಾವಿಕವಾದ ದೃಷ್ಟಿಯೇ ಪಾರಮಾರ್ಥಿಕ ದೃಷ್ಟಿಯು. ಇದು ದ್ರಷ್ಟೃವಾದ ಆತ್ಮನ ಸ್ವರೂಪವಾಗಿದ್ದು ಆದ್ಯಂತ ರಹಿತವಾಗಿದೆ. ಪಾರಮಾರ್ಥಿಕ ದೃಷ್ಟಿಯೇ ಉಪಾಧಿಯಾಗಿರುವ ಲೌಕಿಕ ದೃಷ್ಟಿಗೆ ಸಂಬಂಧಿಸಿದಂತೆ ತೋರಿದಾಗ ದ್ರಷ್ಟೃವೆಂದೂ ಮತ್ತು ದ್ರಷ್ಟೃ–ದೃಷ್ಟಿ ಎಂಬ ಪರಿಭೇದ ಉಳ್ಳುದೆಂದೂ ಹೇಳಬಹುದು. ಉಷಸ್ತ ! ನಿನಗೆ ಇಷ್ಟು ವಿವರಿಸಿದರೆ ಸಾಕೆ? ಈಗ ಅರ್ಥವಾಯಿತೇ ?

ಆ ಮಾತಿಗೆ ಉಷಸ್ತ ಚಾಕ್ರಾಯಣನು ಸಮ್ಮತಿ ಸೂಚಿಸಿದರೂ ಮತ್ತೆ ಪ್ರಶ್ನಿಸುವ ಎದೆಗಾರಿಕೆಯನ್ನೇ ಕಳೆದುಕೊಂಡಂತೆ ಸುಮ್ಮನಾಗುವನು. ಮನಸ್ಸು ಚಿಂತೆಯ ಚಕ್ರದಲ್ಲಿ ಸುಳಿಸುತ್ತುವುದು.

ಸ್ವಲ್ಪ ಸಮಯ ನಿಶ್ಶಬ್ದ ಗತಿಯಲ್ಲಿ ಉರುಳಿಹೋಯಿತು.

ಸಭಾಸ್ಥಾನದ ಪರಿಸ್ಥಿತಿ ಶುದ್ಧ ಗಂಭೀರಸ್ಥಾಯಿಯನ್ನು ಮುಟ್ಟನಿಂತರೂ ಋಷಿಪುಂಗವರ ಗುಂಪಿನಿಂದ ಯಾರೊಬ್ಬರೂ ಎದ್ದುನಿಲ್ಲದ ಪ್ರಯುಕ್ತ, ಸಮಯೋಚಿತ ವಿಚಾರಶೀಲತೆಯಿಂದ ಬ್ರಹ್ಮವಾದಿನಿಯರ ಗುಂಪಿನ ಸದಸ್ಯೆ ಗಾರ್ಗಿ ವಾಚಕ್ನವಿಯು ಎದ್ದುನಿಂತಳು ನವಚೇತನದ ಬುಗ್ಗೆಯಂತೆ. ಎದೆಯ ಕರಂಡಿಗೆಯಲ್ಲಿ ಧೈರ್ಯದ ಹೊನಲು ಉದ್ಭವಿಸಿ ನರನಾಡಿಗಳಿಗೆ ನುಗ್ಗಿ ಝುರ್ರನೆ ಹರಿದಾಡಿತು ನಿಜಸ್ಫೂರ್ತಿಯ ಝುರಿಯಾಗಿ. ಅವಳು ಮಹರ್ಷಿ ವೃಂದದ ಕಡೆ ತಲೆಬಾಗಿ ಕೈಮುಗಿದು ವಿನಮ್ರತೆಯಿಂದ ಇಂತು ಬಿನ್ನವಿಸಿಕೊಂಡಳು–ಭಗವಂತರಾದ ಪಂಡಿತೋತ್ತಮರೇ, ನಿಮ್ಮ ಅನುಮತಿಯನ್ನು ನಾನು ಪಡೆದುಕೊಂಡು ಇವರಿಗೆ ಎರಡು ಪ್ರಶ್ನೆಗಳನ್ನು ಹಾಕುವೆ. ಅವುಗಳಿಗೆ ಇವರು ಉತ್ತರವನ್ನು ನೀಡಬಲ್ಲರಾದರೆ ನಿಮ್ಮಲ್ಲಿ ಯಾರೂ ಇವರನ್ನು ಬ್ರಹ್ಮವಾದದಲ್ಲಿ ಎಂದಿಗೂ ಜಯಿಸಲಾರರು ಎಂದೇ ನನ್ನ ಭಾವನೆ.

ಆ ಮಾತಿನಿಂದ ಹಿರಿಯ ಮಹರ್ಷಿಗಳು ಹರ್ಷಿತರಾಗಿ ಉತ್ಸುಕವಾಣಿಯಿಂದ—ಆಗಬಹುದು ಯೋಗಿನಿ. ನಿನಗೆ ಜಯವಾಗಲಿ. ನಿನ್ನಿಂದ ನಮಗೆ ಕೀರ್ತಿಯು ಲಭಿಸಲಿ.

ಗಾರ್ಗಿ—ಭಗವಂತರಾದ ಮಹರ್ಷಿಗಳೇ! ನಿಮ್ಮ ಆಶೀರ್ವಚನಗಳು ನನಗೆ ಸ್ಫೂರ್ತಿಯನ್ನು ನೀಡಲಿ.

ಗಾರ್ಗಿ ಪುನಃ ತಲೆಬಾಗಿ ಕೈ ಮುಗಿಯುತ್ತಾಳೆ.

ಯಾಜ್ಞವಲ್ಕ್ಯಮಹರ್ಷಿಯು ಮೆಚ್ಚಿ ತಲೆದೂಗಿ ಮುಗುಳು ನಗೆಯೊಡನೆ—ಯೋಗಿನಿ, ಗಾರ್ಗಿ! ನಿನ್ನ ಧೀಶಕ್ತಿಯ ಮಹೋನ್ನತಿಗೆ ಅಭಿನಂದನೆಗಳು!

ಗಾರ್ಗಿಯು ಗಂಭೀರಭಾವದಿಂದ ಅಭಿನಂದನೆಯನ್ನು ಸ್ವೀಕರಿಸಿದಂತೆ ತಲೆಯನ್ನು ಕಂಡೂ ಕಾಣದಂತೆ ತೂಗಿ—ನಾನು ನಿಮಗೀಗ ಎರಡು ಪ್ರಶ್ನೆಗಳನ್ನು ಹಾಕಲಿದ್ದೇನೆ. ಹೇಗೆ ಒಬ್ಬ ಕಾಶೀ ಪ್ರಜೆಯು ಅಥವಾ ವೀರ ವಂಶೀಯನಾದ ವಿದೇಹ ರಾಜನು ಬಿಲ್ಲಿಗೆ ಹೆದೆಯೇರಿಸಿ ಶತ್ರುಗಳನ್ನು ಎದುರಿಸುವನೋ ಹಾಗೆ ನಾನು ನಿಮ್ಮನ್ನು ಪ್ರಶ್ನೆಗಳ ಬಾಣದ ಮೂಲಕ ಎದುರಿಸುತ್ತೇನೆ. ನನ್ನ ಪ್ರಶ್ನೆಗಳಿಗೆ ಉತ್ತರಿಸೋಣವಾಗಲಿ.

ಯಾಜ್ಞವಲ್ಕ್ಯ ಮಹರ್ಷಿ—ಆಯಿತು ಗಾರ್ಗಿ! ನನಗೆ ತಿಳಿದುದನ್ನು ತಿಳಿಸಿಕೊಡುವೆ.

ಗಾರ್ಗಿ—ಇದೋ ನನ್ನ ಪ್ರಶ್ನೆ. ಯಾವುದು ದ್ಯುಲೋಕದ ಮೇಲೆ ಮತ್ತು ಪೃಥ್ವಿಯ ಕೆಳಗೆ ಇದೆಯೋ, ಯಾವುದು ದ್ಯುಲೋಕ ಮತ್ತು ಪೃಥ್ವಿಗಳಾಗಿದೆಯೋ, ಯಾವುದು ಭೂತ-ಭವಿಷ್ಯತ್-ವರ್ತಮಾನಗಳೆಂದು ಕರೆಯಲ್ಪಡುವುದೋ ಆ ಸೂತ್ರವು ಯಾವುದರಿಂದ ವ್ಯಾಪ್ತವಾಗಿದೆ?

ಯಜ್ಞವಲ್ಕ್ಯ ಮಹರ್ಷಿ—ಗಾರ್ಗಿ, ಆ ಸೂತ್ರಸಾರವು ಅವ್ಯಕ್ತವಾದ ಆಕಾಶದಿಂದ ವ್ಯಾಪ್ತವಾಗಿದೆ.

ಗಾರ್ಗಿ—ಯಾಜ್ಞವಲ್ಕ್ಯ ಮಹರ್ಷಿಗಳೇ, ನನ್ನ ಪ್ರಶ್ನೆಗೆ ಉತ್ತರಿಸಿದ ನಿಮಗೆ ಪ್ರಣಾಮವು. ಈಗ ಇನ್ನೊಂದು ಪ್ರಶ್ನೆಗೆ ಸಿದ್ಧರಾಗಿ.

ಯಾಜ್ಞವಲ್ಕ್ಯ ಮಹರ್ಷಿ–ಆಯಿತು ಗಾರ್ಗಿ, ನಿನ್ನ ಪ್ರಶ್ನೆಗಳನ್ನು ಕೇಳುವುದರಲ್ಲಿ ಸಂತೋಷವಿದೆ.

ಗಾರ್ಗಿ–ಅವ್ಯಕ್ತವಾದ ಆಕಾಶವು ಯಾವುದರಿಂದ ಪ್ರವ್ಯಾಪ್ತವಾಗಿದೆ ?

ಯಾಜ್ಞವಲ್ಕ್ಯ ಮಹರ್ಷಿ–ಅದೇ ಅಕ್ಷರವು (ಅಕ್ಷರವು ಅತ್ಯಂತ ಸೂಕ್ಷ್ಮವಾಗಿರುವುದರಿಂದ ಕಾಲತ್ರಯುವನ್ನು ಮೀರಿರುವ ಆಕಾಶವನ್ನು ವ್ಯಾಪಿಸಿಕೊಂಡಿದೆ) ಎಂದು ಬ್ರಹ್ಮಜ್ಞಾನಿಗಳು ಹೇಳುವರು–ಅದು ಅಸ್ಥೂಲವು, ಅನಣು, ಅಹ್ರಸ್ವವು, ಅದೀರ್ಘವು, ಅಲೋಹಿತವು, ಅಸ್ನೇಹವು, ಅಚ್ಛಾಯವು, ಅತಮಸ್ಸು, ಅವಾಯು, ಅನಾಕಾಶವು, ಅಸಂಗವು, ಅರಸವು, ಅಗಂಧವು, ಅಚಕ್ಷುಸ್ಸು, ಅಶ್ರೋತ್ರವು, ಅವಾಕ್ಕು, ಅಮನಸ್ಸು, ಅತೇಜಸ್ಸು, ಅಪ್ರಾಣವು, ಅಮುಖವು, ಅಮಾತ್ರವು, ಅನಂತರವು, ಅಬಾಹ್ಯವು, ಇವು ಅಕ್ಷರ ಅಥವಾ ಬ್ರಹ್ಮವು. ಕೇಳು ಗಾರ್ಗಿ, ಈ ಅಕ್ಷರದ ಪ್ರಶಾಸನದಿಂದಲೇ ಸೂರ್ಯ–ಚಂದ್ರರು ತಮ್ಮತಮ್ಮ ಸ್ಥಾನಗಳಲ್ಲಿ ನಿಯುಕ್ತರಾಗಿದ್ದಾರೆ. ದ್ಯುಲೋಕ ಪೃಥ್ವಿಗಳು ತಮ್ಮತಮ್ಮ ಸ್ಥಾನಗಳಲ್ಲಿ ನಿಯುಕ್ತವಾಗಿವೆ; ಘಳಿಗೆ ಮುಹೂರ್ತಗಳು, ಅಹೋರಾತ್ರಿಗಳು, ಪಕ್ಷಮಾಸಗಳು, ಸಂವತ್ಸರಗಳು ತಮ್ಮತಮ್ಮ ಸ್ಥಾನಗಳಲ್ಲಿ ನಿಯುಕ್ತವಾಗಿವೆ. ಗಾರ್ಗಿ, ಈ ಅಕ್ಷರದ ಪ್ರಸ್ಥಾನದಿಂದಲೇ ಕೆಲವು ನದಿಗಳು ಪೂರ್ವವಾಹಿನಿಗಳಾಗಿಯೂ, ಇನ್ನು ಕೆಲವು ಪಶ್ಚಿಮವಾಹಿನಿಗಳಾಗಿಯೂ ಮತ್ತೆ ಕೆಲವು ಆಯಾಯಾ ದಿಕ್ಕುದಿಶೆಗಳಲ್ಲಿಯೂ ಕ್ರಮವತ್ತಾಗಿ ಹರಿಯುತ್ತಿವೆ. ಈ ಅಕ್ಷರದ ಪ್ರಶಾಸನದಿಂದಲೇ ಗಾರ್ಗಿ ಮನುಷ್ಯವರ್ಗ, ಮೃಗವರ್ಗಗಳ ಬಾಳ್ಮೆ. ಯಾರು ಅಕ್ಷರವನ್ನು ಅರಿತುಕೊಳ್ಳದೆ ವರ್ಷಾನುವರ್ಷಗಳ ಕಾಲ ಜಪ–ತಪ–ಹೋಮ–ಯಾಗ ಮಾಡುವರೋ ಅವರ ಕರ್ಮಫಲವು ನಶ್ವರವೇ ಆಗುವುದು. ಯಾರು ಈ ಅಕ್ಷರವನ್ನು ತಿಳಿದುಕೊಳ್ಳದೆ ಈ ಲೋಕವನ್ನು ಬಿಟ್ಟು ಹೋಗುವನೋ ಅವನ ಬದುಕು ವ್ಯರ್ಥ. ಆದರೆ ಗಾರ್ಗಿ, ಯಾರು ಈ ಅಕ್ಷರವನ್ನು ತಿಳಿದುಕೊಂಡು ಈ ಲೋಕವನ್ನು ಬಿಡುವನೋ ಅವನು ಬ್ರಹ್ಮವಿದನು. ಗಾರ್ಗಿ, ಈ ಅಕ್ಷರಕ್ಕಿಂತ ಬೇರೆಯಾದ ಮಂತ್ರ

ವಿಲ್ಲ, ಶ್ರೋತೃವಿಲ್ಲ; ವಿಜ್ಞಾತೃವಿಲ್ಲ, ಈ ಅಕ್ಷರದಿಂದಲೇ ಪ್ರಶಾಸನ; ಪ್ರಾಧಿಕಾರ.

ಗಾರ್ಗಿ–ಭಗವಂತರಾದ ಪಂಡಿತೋತ್ತಮರೇ, ನೀವು ಪ್ರಣಾಮದ ಮೂಲಕ ಯಾಜ್ಞವಲ್ಕ್ಯರಿಂದ ಬಿಡುಗಡೆ ಹೊಂದಿದರೆ ಅದನ್ನೇ ಹೆಚ್ಚೆಂದು ತಿಳಿದುಕೊಳ್ಳಿರಿ. ನಿಮ್ಮಲ್ಲಿ ಯಾರೂ ಯಾವಾಗಲೂ ಇವರನ್ನು ಬ್ರಹ್ಮ ವಾದದಲ್ಲಿ ಜಯಿಸುವುದು ಸಾಧ್ಯವೇ ಇಲ್ಲ.

ಆ ಮಾತುಗಳನ್ನು ಕೇಳಿದರೂ ಕುರುಪಾಂಚಾಲ ಪಂಡಿತರಿಗೆ ಸಮಾ ಧಾನ ಉಂಟಾಗಲಿಲ್ಲ. ಯಾರಾದರೂ ಎದ್ದಾರೆಯೆ ಎಂದು ಎಲ್ಲಾ ಮಹರ್ಷಿಗಳ ಕಡೆ ನೋಡಿ ನಿರಾಶರಾಗಿ, ತಮ್ಮ ಬಳಿಯಲ್ಲಿ ಕುಳಿತಿದ್ದ ವಿದಗ್ಧ ಶಾಕಲ್ಯನನ್ನು ಕುರಿತು–ಅಯ್ಯಾ, ಶಾಕಲ್ಯ. ನೀನು ಮಹಾ ಪಂಡಿತನೆಂದು ಬಲ್ಲೆವು. ಆದರೂ, ಸುಮ್ಮನೇ ಇದ್ದೀಯೆ. ಇಂದಿನ ಈ ಸಭೆಯಲ್ಲಿ ನಮ್ಮ ಮಾನ ಕಿಂಚಿತ್ತಾದರೂ ಉಳಿಯಬೇಕಾದರೆ ನಿನ್ನಿಂ ದಲೇ. ಈಗ ಸುಮ್ಮನಿದ್ದರೆ ಸೋಲು ಒಪ್ಪಿಕೊಂಡಂತಾಗುತ್ತದೆ. ನೀನು ಕಲಿತವನಾಗಿಯೂ ಪಂಡಿತನಾಗಿಯೂ ಮಹಾ ವಿದ್ವಾಂಸನಾಗಿಯೂ ಇದ್ದು ಇಂತಹ ಬೃಹತ್ ಸಭೆಯಲ್ಲಿ ಸೋಲೊಪ್ಪಿಕೊಂಡು ಸುಮ್ಮನಿರು ವುದು ಸರಿಯಲ್ಲ. ಏಳು ! ಎದ್ದು ನಿಂತು ಧೈರ್ಯವಾಗಿ ಪ್ರಶ್ನಿಸು.

ಕುರುಪಾಂಚಾಲ ಪಂಡಿತರ ಮಾತಿನಿಂದ ಉತ್ತೇಜಿತನಾದ ಶಾಕ ಲ್ಯನು ಎದ್ದು ನಿಂತೊಡನೆ ಸಭೆಯಲ್ಲಿ ಮತ್ತೆ ಗಜಿಬಿಜಿಯುಂಟಾಗುವುದು. ಕೆಲವರು 'ಭಲೆ' ಎಂದು ಹರಿದುಂಬಿಸಿದರು. ಇನ್ನು ಕೆಲವರು 'ಇವನು ಎದ್ದುದು ವ್ಯರ್ಥ. ಇವನಿಗೆ ಯಾಜ್ಞವಲ್ಕ್ಯರು ಸಾಧ್ಯರೇ' ಎಂದರು. ಸ್ವಲ್ಪಹೊತ್ತು ಮೆಲು ಮಾತಿನ ಮರ್ಮರ ಕೇಳಿಸಿತು.

ಶಾಕಲ್ಯ ಒಮ್ಮೆ ಬೃಹತ್ ಸಭೆಯ ಮೇಲೆ ದೃಷ್ಟಿಯನ್ನು ಹರಿ ಹಾಯಿಸಿದ. ತಾನಿದರಲ್ಲಿ ಗೆದ್ದೆನೆಂದರೆ ಎಂದೆಂದಿಗೂ ಬ್ರಹ್ಮರ್ಷಿತ್ವ ತನಗೆ ಕಟ್ಟಿಟ್ಟ ಬುತ್ತಿ ಎಂಬ ಸ್ವಾಭಿಮಾನ ತಲೆಯಲ್ಲಿ ಪುಂಗಿಯೂದಿದ ಫಣಿ ಯಂತೆ ಹೆಡೆಯೆತ್ತಿ ನಿಂತಿತು. ಶಾಕಲ್ಯ ನೂರ್ಮಡಿಯಲ್ಲಿ ಉತ್ಸುಕನಾದ.

ದುಡುಕು-ದುಮ್ಮಾನಗಳು ತನಗರಿಯದಂತೆಯೇ ತುಂಬಿದುವು. ಮೈಯಲ್ಲಿ ಕಿಚ್ಚಿನ ಝರಿ ಸ್ವಚ್ಛಂದವಾಗಿ ಹರಿದಾಡಿತು. ಸುಮ್ಮನೆ ಸಾಂಪ್ರದಾಯಿಕ ವಾಗಿ ಮುನಿಋಷಿಗಳ ಕಡೆ ಮತ್ತು ಬ್ರಾಹ್ಮಣ ಪಂಡಿತೋತ್ತಮರ ಕಡೆ ಕೈಮುಗಿದು ಅಪ್ಪಣೆ ಬೇಡಿಕೊಂಡ.

ಒಡನೆಯೇ ಸಭೆಯಲ್ಲಿ ಅತ್ಯುತ್ಸಾಹದ ಚಪ್ಪಾಳೆಯ ಧ್ವನಿ ಮೊಳಗಿ ಮಾರ್ದನಿಗೊಂಡಿತು ವನಾಂತರದಿಂದ. ಶಾಕಲ್ಯನು ಯಾಜ್ಞವಲ್ಕ್ಯ ನನ್ನು ಕುರಿತು ದಿಟ್ಟತನದಿಂದ-ಇಗೋ, ಯಾಜ್ಞವಲ್ಕ್ಯ! ನಾನು ನಿನ್ನನ್ನು ಪ್ರಶ್ನಿಸಲು ಸಿದ್ಧ. ನೀನು ಉತ್ತರಿಸಲು ಸಿದ್ಧನಾಗು.

ಯಾಜ್ಞವಲ್ಕ್ಯ ಮಹರ್ಷಿಯು ನಗುಮುಖದಿಂದ-ನಿನ್ನನ್ನು ನಿನ್ನ ವರೇ ಬಲಿವೇದಿಯನ್ನು ಏರಿಸಿದರೋ ?

ಗಾರ್ಗಿಯು ನಸು ಚಿಂತಾಭಾರದಿಂದ ನುಡಿದಳು-ಶಾಕಲ್ಯ, ನಿನಗೆಂದಿಗೂ ಸುಲಭಸಾಧ್ಯರಲ್ಲ ಯಾಜ್ಞವಲ್ಕ್ಯ ಮಹರ್ಷಿಗಳು. ನೀನೀಗ ಯೋಚಿಸಿ ಹೆಜ್ಜೆ ಮುಂದಿಡುವುದು ಲೇಸು.

ಶಾಕಲ್ಯ ಉದ್ಧಟಭಾವದಿಂದ-ಓಹೋ! ವಾಚಕ್ನವಿ ಗಾರ್ಗಿ ಇಷ್ಟೊಂದು ಶಂಕಿತಳಾಗುವ ಪ್ರಮೇಯವಿಲ್ಲ. ಈ ಶಾಕಲ್ಯನು ಸಾಮಾನ್ಯ ನಲ್ಲವೆಂಬುದನ್ನು ಇಂದು ಈ ಸಭೆಯಲ್ಲಿ ನಾನು ಸಿದ್ಧಪಡಿಸುವೆ. ಕುರು ಪಾಂಚಾಲರ ವಿದ್ಯಾ ಸರಸ್ವತಿಯೇ ಈ ರೂಪದಲ್ಲಿ ಇಲ್ಲಿ ನಿಂತಿದ್ದಾಳೆ ಎಂದೇ ತಿಳಿಯತಕ್ಕದ್ದು! ಇದು ಬರೀ ಬಡಿವಾರದ ಮಾತಲ್ಲ. ಕಾದು ನೋಡು!

ಗಾರ್ಗಿ-ಎಂತಹ ಮಾತು? ಇಂದಿನ ದುರಂತಕ್ಕೆ ನೀನಲ್ಲದೆ ಇನ್ನಾರು ವಸ್ತುವಾಗಬಲ್ಲರು ?

ಶಾಕಲ್ಯ-ಆ ಚಿಂತೆ ಬೇಡವೇ ಬೇಡ; ನಾನು ವಿದಗ್ಧ ಶಾಕಲ್ಯ!

ಗಾರ್ಗಿಯು ಆ ಮಾತನ್ನು ಮನದಲ್ಲೇ ತರ್ಕಿಸಿ ಸುಮ್ಮನಾಗುತ್ತಲೂ ಶಾಕಲ್ಯನು ಹೆಮ್ಮೆಯಿಂದ ಎದೆಯಾನಿಸಿಕೊಂಡು ಯಾಜ್ಞವಲ್ಕ್ಯ

ಮಹರ್ಷಿಯನ್ನು ನೋಡುತ್ತ–ಅಯ್ಯಾ, ನಾನೀಗ ಸಿದ್ಧನಿರುವೆನು. ಇನ್ನು ನಿನ್ನನ್ನು ಪ್ರಶ್ನಿಸುವವನು ನಾನೇ.

ಯಾಜ್ಞವಲ್ಕ್ಯ ಮಹರ್ಷಿ ಸಂತುಷ್ಟನಾಗಿ–ಆಗಬಹುದು. ನಾನು ಸಹ ಸಿದ್ಧ. ನೀನು ಯಾವ ಪ್ರಶ್ನೆಯನ್ನಾದರೂ ಕೇಳಬಹುದು. ಆದರೆ, ಒಂದು ಪಣಕ್ಕೆ ನೀನು ತಲೆಬಾಗಿ ನನ್ನಿಂದ ಉತ್ತರವನ್ನು ಪಡೆಯ ತಕ್ಕದ್ದು. ಇದರಲ್ಲಿ ನೀನೇ ಆಗಲೀ, ನಾನೇ ಆಗಲೀ ಸೋತುಹೋದರೆ ಆ ಕ್ಷಣವೇ ತಲೆಯು ಬಿದ್ದುಹೋಗುವುದು ! ಇದು ಶತಸಿದ್ಧ.

ಶಾಕಲ್ಯ–ಆಯ್ತು, ನಿನ್ನ ಪಣಕ್ಕೆ ನಾನು ಬದ್ಧ.

ಯಾಜ್ಞವಲ್ಕ್ಯ ಮಹರ್ಷಿ–ಹಾಗಾದರೆ ಸರಿ.

ಶಾಕಲ್ಯ–ನೀನು ನನ್ನನ್ನು ಹೇಡಿ ಎಂದು ಭಾವಿಸಿರುವಂತಿದೆ' ಆದರಿಂದಲೇ ಈ ಪಣ ?

ಯಾಜ್ಞವಲ್ಕ್ಯಮಹರ್ಷಿ–ಹಾಗೇನೂ ಅಲ್ಲ. ಪಣಕಟ್ಟುವುದು ಸರಿ ಸಮಾನಸ್ಕಂದರಲ್ಲಿ ಮಾತ್ರ ಎಂಬುದು ನಿನಗೆ ತಿಳಿದಿದೆಯಷ್ಟೆ ?

ಶಾಕಲ್ಯ–ಸರಿ, ಒಪ್ಪಿದೆ.

ಸಭೆಯಲ್ಲಿ ಭಾವವಿಭಾವಗಳ ಮರ್ಮರ ಧ್ವನಿ ಮೊಳಗುವುದು.

ಯಾಜ್ಞವಲ್ಕ್ಯ ಮಹರ್ಷಿ–ಆಯಿತು ; ನೀನು ಏನಾದರೂ ಪ್ರಶ್ನಿಸ ಬಹುದು. ಶಾಕಲ್ಯ ಸಂಕೋಚವಿಲ್ಲದೆ ಕೇಳು.

ಶಾಕಲ್ಯ-ಈಗ ಹೇಳು ದೇವತೆಗಳು ಎಷ್ಟು ?

ಯಾಜ್ಞವಲ್ಕ್ಯ ಮಹರ್ಷಿ–ಅದು ಹೀಗಿದೆ ಶಾಕಲ್ಯ. ವೈಶ್ವವೇದದ ನಿವಿತ್ತಿನಲ್ಲಿ ಎಷ್ಟು ದೇವತೆಗಳು ಉಕ್ತರಾಗಿರುವರೋ ಅಷ್ಟು.

ಶಾಕಲ್ಯ–ಓಂ, ಯಾಜ್ಞವಲ್ಕ್ಯ, ಆ ದೇವತೆಗಳು ಯಾರು ?

ಯಾಜ್ಞವಲ್ಕ್ಯ ಮಹರ್ಷಿ–ಅಷ್ಟವಸುಗಳು, ಏಕಾದಶರುದ್ರರು, ದ್ವಾದಶರು, ಆದಿತ್ಯರು, ಇಂದ್ರ ಮತ್ತು ಪ್ರಜಾಪತಿಯು.

ಶಾಕಲ್ಯ-ಓಂ, ಯಾಜ್ಞವಲ್ಕ್ಯ, ವಸುಗಳು ಯಾರು?

ಯಾಜ್ಞವಲ್ಕ್ಯ ಮಹರ್ಷಿ-ಅಗ್ನಿ, ಪೃಥ್ವಿ, ವಾಯು, ಅಂತರಿಕ್ಷ, ದ್ಯುಲೋಕ, ಚಂದ್ರ ಮತ್ತು ನಕ್ಷತ್ರಗಳು ಇವು ವಸುಗಳೆಂದು ಕರೆಯಲ್ಪಟ್ಟವೆ.

ಶಾಕಲ್ಯ-ಓಂ, ಯಾಜ್ಞವಲ್ಕ್ಯ, ರುದ್ರನು ಯಾರು ?

ಯಾಜ್ಞವಲ್ಕ್ಯ ಮಹರ್ಷಿ-ಕೇಳು, ಶಾಕಲ್ಯ. ಪುರುಷ ಶರೀರದಲ್ಲಿ ಪಂಚ ಕರ್ಮೇಂದ್ರಿಯಗಳೂ ಪಂಚ ಜ್ಞಾನೇಂದ್ರಿಯಗಳೂ ಮನಸ್ಸೂ ಇವೆ. ಇವು ಯಾವಾಗ ಮರ್ತ್ಯ ಶರೀರದಲ್ಲಿ ಕರ್ಮಫಲಭೋಗವು ಕ್ಷಯ ಹೊಂದಿ ಉತ್ಕ್ರಮಿಸುತ್ತವೆಯೋ ಆಗ ಬಂಧುವರ್ಗದವರನ್ನು ರೋದಿಸುವಂತೆ ಮಾಡುತ್ತವೆಯಾದ್ದರಿಂದ ಇವು ರುದ್ರರು ಎಂದು ಕರೆಯಲ್ಪಡುತ್ತವೆ.

ಶಾಕಲ್ಯ-ಯಾಜ್ಞವಲ್ಕ್ಯ, ಆದಿತ್ಯರು ಯಾರು ?

ಯಾಜ್ಞವಲ್ಕ್ಯ ಮಹರ್ಷಿ-ಸಂವತ್ಸರದ ಅಂಗಗಳಾದ ಹನ್ನೆರಡು ಮಾಸಗಳೇ ಆದಿತ್ಯರು ಎನಿಸುತ್ತವೆ. ಜೀವಕೋಟಿಯ ಆಯಸ್ಸನ್ನೂ ಕರ್ಮಫಲವನ್ನೂ ಇವು ಕೊಂಡೊಯ್ಯುವುದರಿಂದ ಹೀಗೆ ಕರೆಯಲ್ಪಡುತ್ತವೆ.

ಶಾಕಲ್ಯ-ಇಂದ್ರನು ಯಾರು ?

ಯಾಜ್ಞವಲ್ಕ್ಯ ಮಹರ್ಷಿ-ಸಿಡಿಲನ್ನುಂಟುಮಾಡುವ ಮೇಘರಾಜನೇ ಇಂದ್ರನು.

ಶಾಕಲ್ಯ-ಓಂ, ಯಾಜ್ಞವಲ್ಕ್ಯ, ಪ್ರಜಾಪತಿ ಯಾರು ?

ಯಾಜ್ಞವಲ್ಕ್ಯ ಮಹರ್ಷಿ-ಯಜ್ಞವೇ ಪ್ರಜಾಪತಿಯು.

ಶಾಕಲ್ಯ-ಓಂ ಯಾಜ್ಞವಲ್ಕ್ಯ, ಷಟ್ ದೇವತೆಗಳು ಯಾರು ?

ಯಾಜ್ಞವಲ್ಕ್ಯ ಮಹರ್ಷಿ-ಅಗ್ನಿ, ಪೃಥ್ವಿ, ವಾಯು, ಅಂತರಿಕ್ಷ, ಆದಿತ್ಯ ಮತ್ತು ದ್ಯುಲೋಕ ಇವುಗಳೇ ಆ ಷಟ್ ದೇವತೆಗಳು.

ಶಾಕಲ್ಯ-ಓಂ, ಯಾಜ್ಞವಲ್ಕ್ಯ? ಮೂರು ಮಂದಿ ದೇವತೆಗಳು ಯಾರು?

ಯಾಜ್ಞವಲ್ಕ್ಯ ಮಹರ್ಷಿ-ಈ ತ್ರಿಲೋಕಗಳೇ ಶಾಕಲ್ಯ. ಹೇಗೆಂದರೆ ಈ ಮೂರು ಲೋಕಗಳಲ್ಲಿ ಎಲ್ಲಾ ದೇವತೆಗಳೂ ಅಂತರ್ಗತರಾಗಿದ್ದಾರೆ.

ಶಾಕಲ್ಯ-ಸರಿ, ಇಬ್ಬರು ದೇವತೆಗಳು ಯಾರು?

ಯಾಜ್ಞವಲ್ಕ್ಯ ಮಹರ್ಷಿ-ಅನ್ನ ಮತ್ತು ಪ್ರಾಣ.

ಶಾಕಲ್ಯ-ಸರಿ, ಒಂದು ದೇವತೆ ಯಾರು?

ಯಾಜ್ಞವಲ್ಕ್ಯಮಹರ್ಷಿ-ಪ್ರಾಣ. ಅದೇ ಬ್ರಹ್ಮ. ಅದನ್ನೇ "ತ್ಯತ್" ಎಂದು ಕರೆಯುವರು.

ಶಾಕಲ್ಯ-ಸರಿ, ಸರಿ.

ಯಾಜ್ಞವಲ್ಕ್ಯ ಮಹರ್ಷಿ-ನಿನ್ನನ್ನು ಕುರುಪಾಂಚಾಲ ಪಂಡಿತರು ಬೆಂಕಿ ಕೆಂಡಗಳನ್ನು ಹೆಕ್ಕುವ ಇಕ್ಕಳವನ್ನಾಗಿ ಮಾಡಿಕೊಂಡಿದ್ದಾರೆಂಬುದು ನಿನಗೆ ತಿಳಿದಿದೆಯೋ?

ಶಾಕಲ್ಯ-ಯಾಜ್ಞವಲ್ಕ್ಯ, ಇದೇನು? ಕುರುಪಾಂಚಾಲ ದೇಶಗಳ ಬ್ರಾಹ್ಮಣ ಪಂಡಿತರನ್ನು ತಿರಸ್ಕರಿಸಿ, ಹೀಯಾಳಿಸಿ ಮಾತನಾಡುತಿದ್ದೀಯೆ? ಇದು ನಿನಗೆ ತಕ್ಕುದೆ?

ಯಾಜ್ಞವಲ್ಕ್ಯ ಮಹರ್ಷಿ-ಇದು ಬದ್ದ. ಹೀಯಾಳಿಕೆಯ ಪ್ರಶ್ನೆ ಇಲ್ಲಿ ಏಳತಕ್ಕದ್ದಲ್ಲ.

ಶಾಕಲ್ಯನು ಕೋಪಾವಿಷ್ಟನಾಗಿ ಉಚ್ಚಸ್ವರದಲ್ಲಿ ನುಡಿದ-ಎಲೈ ಯಾಜ್ಞವಲ್ಕ್ಯ! ನಿನ್ನ ಮಾತು ಹೀಯಾಳಿಕೆಯಲ್ಲವೇ? ಇದರ ಪರಿಣಾಮವನ್ನು ನೀನರಿಯೆ. ನಾನದನ್ನು ಈಗ ತೋರಿಕೊಡುವೆ.

ಯಾಜ್ಞವಲ್ಕ್ಯ ಮಹರ್ಷಿ-ಆಯ್ತಾಯ್ತು. ಅದೇನೆಂಬುದನ್ನು ನಾವೂ ಸಹ ನೋಡೋಣ.

ಶಾಕಲ್ಯ-ನಿನಗೆ ನಾನೇ ನಾನೆಂಬ ಅಹಂ ಬಹಳ ಉಂಟು, ಅದರ ಕೋಡನ್ನು ಇಂದೇ ಮುರಿದು ಬಿಡುವೆ.

ಶಾಕ್ಯಲನ ಬೆಂಬಲಿಗರು—ಭಲೆ! ಭಲೆ!

ಯಾಜ್ಞವಲ್ಕ್ಯ ಮಹರ್ಷಿಯು ಸಣ್ಣಗೆ ತಲೆಯಾಡಿಸುತ್ತ ಮುಗುಳ್ನ ಗುವನ್ನು ಸೂಸಿ—ಅಯ್ಯಾ, ಶಾಕಲ್ಯ! ಇಷ್ಟೊಂದು ಧೀರತನವನ್ನು ನೀನ ಲ್ಲದೆ ಇನ್ನಾರು ತೋರಬಲ್ಲರು?

ಶಾಕಲ್ಯ—ಇರಲಿ, ನಿನ್ನ ಪಣಕ್ಕೆ ನೀನೇ ಬಲಿಯಾಗುವುದು ಖಂಡಿತ, ತಿಳಿದಿರು! ಇದರ ನಿರ್ಣಯ ಪ್ರಶ್ನೋಪಪ್ರಶ್ನೆಗಳಿಂದಲೇ ಆಗತಕ್ಕದ್ದು!

ಶಾಕಲ್ಯನ ಬೆಂಬಲಿಗರು—ಭಲೆ ಶಾಕಲ್ಯ!

ಯಾಜ್ಞವಲ್ಕ್ಯ ಮಹರ್ಷಿ—ಇದಂತೂ ಮೊದಲೇ ನಿರ್ಣಯವಾದ ವಿಚಾರ.

ಆಗ ಶಾಕಲ್ಯನು ಸಭೆಯನ್ನೊಮ್ಮೆ ನಿಟ್ಟಿಸಿ ನೋಡಿ ಇದೋ ನನ್ನ ಪ್ರಶ್ನೆ. ನೀನು ಯಾವ ಬ್ರಹ್ಮವನ್ನು ಅರಿತವನು? ಯಾವ ದಿಕ್ಕುದಿಶೆ ಗಳನ್ನು ಅರಿತವನು?

ಯಾಜ್ಞವಲ್ಕ್ಯ ಮಹರ್ಷಿ—ಶಾಕಲ್ಯ ಕೇಳು, ದೇವತೆಗಳಿಂದಲೂ ಪ್ರತಿಷ್ಠೆ ಗಳಿಂದಲೂ ಕೂಡಿರುವ ದಿಕ್ಕುಗಳನ್ನು ಉಪಾಸನೆಯ ದ್ವಾರಾ ಅರಿತಿರು ವೆನು.

ಶಾಕಲ್ಯ—ಹಾಗಾದರೆ, ಪೂರ್ವದಿಕ್ಕಿನಲ್ಲಿ ಯಾವ ದೇವತೆಯೊಂದಿಗೆ ನೀನು ಏಕೀಭೂತನಾಗಿರುವೆ? ದಿಗಾತ್ಮನಾದ ನಿನಗೆ ಯಾವ ದೇವತೆಯು ಅದಿಷ್ಠಾತೃವು?

ಯಾಜ್ಞವಲ್ಕ್ಯ ಮಹರ್ಷಿ—ಆದಿತ್ಯ ದೇವತೆಯೊಂದಿಗೆ.

ಶಾಕಲ್ಯ—ಯಾಜ್ಞವಲ್ಕ್ಯ, ಈಗ ಹೇಳು. ಆದಿತ್ಯನು ಯಾವುದರಲ್ಲಿ ಪ್ರತಿಷ್ಠಿತನಾಗಿದ್ದಾನೆ?

ಯಾಜ್ಞವಲ್ಕ್ಯ ಮಹರ್ಷಿ—ಚಕ್ಷುಸ್ಸಿನಲ್ಲಿ.

ಶಾಕಲ್ಯ—ಯಾವುದರಲ್ಲಿ ಚಕ್ಷುಸ್ಸು ಪ್ರತಿಷ್ಠಿತವಾಗಿದೆ?

ಯಾಜ್ಞವಲ್ಕ್ಯ ಮಹರ್ಷಿ—ರೂಪಗಳಲ್ಲಿ ಪ್ರತಿಷ್ಠಿತವಾಗಿದೆ. ಹೇಗೆಂ ದರೆ, ರೂಪಗಳನ್ನು ಗ್ರಹಿಸಬಹುದು.

ಶಾಕಲ್ಯ–ಓಹೋ! ಯಾಜ್ಞವಲ್ಕ್ಯ, ನಿನಗೆ ಸೋಲೆಂಬುದಿಲ್ಲ! ಹುಂ....ನೋಡೋಣ.

ಯಾಜ್ಞವಲ್ಕ್ಯಮಹರ್ಷಿ–ಅಷ್ಟೇಕೆ ಆತುರ? ಕೇಳು, ಚಕ್ಷುಸ್ಸು ರೂಪಗಳನ್ನು ನೋಡಲೇಬೇಕು. ಎಲ್ಲಾ ದೃಶ್ಯವಸ್ತುಗಳಲ್ಲೂ ರೂಪವಿದೆ.

ಶಾಕಲ್ಯ–ಓಂ ಯಾಜ್ಞವಲ್ಕ್ಯ, ದಕ್ಷಿಣ ದಿಕ್ಕಿನಲ್ಲಿ ಯಾವ ದೇವತೆಯೊಂದಿಗೆ ಏಕೀಭೂತನಾಗಿರುವೆ?

ಯಾಜ್ಞವಲ್ಕ್ಯ ಮಹರ್ಷಿ–ಯಮದೇವತೆಯೊಂದಿಗೆ.

ಶಾಕಲ್ಯ–ಈಗ ಹೇಳು! ಯಮನು ಯಾವುದರಲ್ಲಿ ಪ್ರತಿಷ್ಠಿತನಾಗಿದ್ದಾನೆ?

ಯಾಜ್ಞವಲ್ಕ್ಯ ಮಹರ್ಷಿ–ಯಜ್ಞದಲ್ಲಿ.

ಶಾಕಲ್ಯ–ಯಜ್ಞವು ಯಾವುದರಲ್ಲಿ ಪ್ರತಿಷ್ಠಿತವಾಗಿದೆ?

ಯಾಜ್ಞವಲ್ಕ್ಯ ಮಹರ್ಷಿ–ದಕ್ಷಿಣೆಯಲ್ಲಿ.

ಶಾಕಲ್ಯ–ದಕ್ಷಿಣೆಯು ಯಾವುದರಲ್ಲಿ ಪ್ರತಿಷ್ಠಿತವಾಗಿದೆ ಹೇಳಯ್ಯಾ!

ಯಾಜ್ಞವಲ್ಕ್ಯ ಮಹರ್ಷಿ–ಶ್ರದ್ಧೆಯಲ್ಲಿ. ಅದು ಹೇಗೆಂದರೆ ಶ್ರದ್ಧಾವಂತನಾಗಿರುವುದರಿಂದಲೇ ದಕ್ಷಿಣೆಯು ದೊರೆಯಬೇಕಾದರೆ.

ಶಾಕಲ್ಯ–ಹಾಗಾದರೆ, ಶ್ರದ್ಧೆಯು ಯಾವುದರಲ್ಲಿ ಪ್ರತಿಷ್ಠವಾಗಿದೆ.

ಯಾಜ್ಞವಲ್ಕ್ಯ ಮಹರ್ಷಿ–ಹೃದಯದಲ್ಲಿ. ಅದು ಹೇಗೆಂದರೆ ಹೃದಯದ ಮೂಲಕವೇ ಶ್ರದ್ಧೆಯು ಮೂಡಬೇಕಾದರೆ.

ಶಾಕಲ್ಯ–ಓಂ! ಯಾಜ್ಞವಲ್ಕ್ಯ, ನಿನ್ನ ವಿಚಾರಧಾರೆ ಒಪ್ಪುವಂತಾದ್ದು! ಇದು ಹೀಗೆಯೇ ಸರಿ. ಪಶ್ಚಿಮ ದಿಕ್ಕಿನಲ್ಲಿ ಯಾವ ದೇವತೆಯೊಂದಿಗೆ ನೀನು ಏಕೀಭೂತನಾಗಿರುವೆ?

ಯಾಜ್ಞವಲ್ಕ್ಯ ಮಹರ್ಷಿ–ವರುಣದೇವತೆಯೊಂದಿಗೆ.

ಶಾಕಲ್ಯ–ಈಗ ಹೇಳು, ವರುಣನು ಯಾವುದರಲ್ಲಿ ಪ್ರತಿಷ್ಠಿತನಾಗಿದ್ದಾನೆ?

ಯಾಜ್ಞವಲ್ಕ್ಯ ಮಹರ್ಷಿ–ನೀರಿನಲ್ಲಿ.

ಶಾಕಲ್ಯ–ನೀರು ಯಾವುದರಲ್ಲಿ ಪ್ರತಿಷ್ಠಿತವಾಗಿದೆ ?

ಯಾಜ್ಞವಲ್ಕ್ಯ ಮಹರ್ಷಿ–ರೇತಸ್ಸಿನಲ್ಲಿ.

ಶಾಕಲ್ಯ–ರೇತಸ್ಸು ಯಾವುದರಲ್ಲಿ ಪ್ರತಿಷ್ಠಿತವಾಗಿದೆ ?

ಯಾಜ್ಞವಲ್ಕ್ಯ ಮಹರ್ಷಿ–ಹೃದಯದಲ್ಲಿ. ಕೇಳು ಶಾಕಲ್ಯ, ಇದರಿಂದಲೇ ಅನುರೂಪನಾದ ಪುತ್ರನಿಗೆ ಅಥವಾ ಸಂತಾನಕ್ಕೆ ತಂದೆಯನ್ನೇ ಹೋಲುವುದು, ತಂದೆಯ ಹೃದಯವನ್ನೇ ಹೊತ್ತಿರುವನು ಎಂದು ಮುಂತಾಗಿ ಹೇಳುವರು. ಆದ್ದರಿಂದ ರೇತಸ್ಸು ಪ್ರತಿಷ್ಠಿತವಾಗಿರುವುದು ಹೃದಯದಲ್ಲಿ.

ಶಾಕಲ್ಯ–ಓಹೋ ! ಸರಿ; ನಿನ್ನ ವಿಚಾರಧಾರೆ ಒಪ್ಪುವಂತಾದ್ದು. ಉತ್ತರ ದಿಕ್ಕಿನಲ್ಲಿ ನೀನು ಯಾವ ದೇವತೆಯೊಂದಿಗೆ ಏಕೀಭೂತನಾಗಿರುವೆ ?

ಯಾಜ್ಞವಲ್ಕ್ಯ ಮಹರ್ಷಿ–ಸೋಮದೇವತೆಯೊಂದಿಗೆ.

ಶಾಕಲ್ಯ–ಸೋಮನು ಯಾವುದರಲ್ಲಿ ಪ್ರತಿಷ್ಠಿತನಾಗಿದ್ದಾನೆ ?

ಯಾಜ್ಞವಲ್ಕ್ಯ ಮಹರ್ಷಿ–ದೀಕ್ಷೆಯಲ್ಲಿ.

ಶಾಕಲ್ಯ–ದೀಕ್ಷೆಯು ಯಾವುದರಲ್ಲಿ ಪ್ರತಿಷ್ಠಿತವಾಗಿದೆ ?

ಯಾಜ್ಞವಲ್ಕ್ಯ ಮಹರ್ಷಿ–ಸತ್ಯದಲ್ಲಿ. ಆದ್ದರಿಂದಲೇ 'ಸತ್ಯವನ್ನೇ ನುಡಿ' ಎಂದು ಸಾರಿ ಸಾರಿ ಹೇಳುವುದು. ಏಕೆಂದರೆ ಸತ್ಯದಲ್ಲಿ ದೀಕ್ಷೆಯು ಪ್ರತಿಷ್ಠಿತವಾಗಿದೆ,

ಶಾಕಲ್ಯ–ಸತ್ಯವು ಯಾವುದರಲ್ಲಿ ಪ್ರತಿಷ್ಠಿತವಾಗಿದೆ ?

ಯಾಜ್ಞವಲ್ಕ್ಯ ಮಹರ್ಷಿ–ಹೃದಯದಲ್ಲಿ. ಹೇಗೆಂದರೆ ಮನುಷ್ಯನು ಹೃದಯದಿಂದಲೇ ಸತ್ಯವನ್ನು ಅರಿಯಬೇಕಾದರೆ.

ಶಾಕಲ್ಯ–ಸರಿ; ಸರಿ ಧ್ರುವ ದಿಕ್ಕಿನಲ್ಲಿ ಯಾವ ದೇವತೆಯೊಂದಿಗೆ ನೀನು ಏಕೀಭೂತವಾಗಿರುವೆ ?

ಯಾಜ್ಞವಲ್ಕ್ಯ ಮಹರ್ಷಿ–ಅಗ್ನಿದೇವತೆಯೊಂದಿಗೆ.

ಶಾಕಲ್ಯ–ಯಾಜ್ಞವಲ್ಕ್ಯ, ಅಗ್ನಿಯು ಯಾವುದರಲ್ಲಿ ಪ್ರತಿಷ್ಠಿತ ವಾಗಿದೆ ?

ಯಾಜ್ಞವಲ್ಕ್ಯ ಮಹರ್ಷಿ–ವಾಕ್ಕಿನಲ್ಲಿ.

ಶಾಕಲ್ಯ–ವಾಕ್ಕು ಯಾವುದರಲ್ಲಿ ಪ್ರತಿಷ್ಠಿತವಾಗಿದೆ ?

ಯಾಜ್ಞವಲ್ಕ್ಯ ಮಹರ್ಷಿ–ಹೃದಯದಲ್ಲಿ.

ಶಾಕಲ್ಯ–ಹೃದಯವು ಯಾವುದರಲ್ಲಿ ಪ್ರತಿಷ್ಠಿತವಾಗಿದೆ ?

ಆ ಪ್ರಶ್ನೆಯಿಂದ ಯಾಜ್ಞವಲ್ಕ್ಯ ಮಹರ್ಷಿಯು ವಿಪರೀತವಾಗಿ ಕೋಪಗೊಂಡು–ಎಲೈ ಶಾಕಲ್ಯ, ಹೃದಯವು ನಮ್ಮ ದೇಹದಿಂದ ಬೇರೆ ಯಾಗಿ ಎಲ್ಲಾದರೂ ಇದ್ದಿದ್ದರೆ ಅದನ್ನು ನಾಯಿ ನರಿಗಳು ತಿಂದು ಹಾಕು ತಿದ್ದುವು !

ಆಗ ಶಾಕಲ್ಯನು ಕುಗ್ಗಿದರೂ ತನ್ನನ್ನು ತಾನು ಸಂಬಾಳಿಸಿ ಕೊಳ್ಳುತ್ತಾ–ಅಯ್ಯಾ, ಯಾಜ್ಞವಲ್ಕ್ಯ ! ನಿನ್ನ ದೇಹ ಮತ್ತು ಮನಸ್ಸು ಯಾವುದರಲ್ಲಿ ಪ್ರತಿಷ್ಠಿತವಾಗಿವೆ ?

ಯಾಜ್ಞವಲ್ಕ್ಯ ಮಹರ್ಷಿ–ಪ್ರಾಣದಲ್ಲಿ.

ಶಾಕಲ್ಯ–ಪ್ರಾಣವು ಯಾವುದರಲ್ಲಿ ಪ್ರತಿಷ್ಠಿತವಾಗಿದೆ.

ಯಾಜ್ಞವಲ್ಕ್ಯ ಮಹರ್ಷಿ–ಅಪಾನದಲ್ಲಿ.

ಶಾಕಲ್ಯ–ಅಪಾನವು ಯಾವುದರಲ್ಲಿ ಪ್ರತಿಷ್ಠಿತವಾಗಿದೆ ?

ಯಾಜ್ಞವಲ್ಕ್ಯ ಮಹರ್ಷಿ–ವ್ಯಾನದಲ್ಲಿ.

ಶಾಕಲ್ಯ–ವ್ಯಾನವು ಯಾವುದರಲ್ಲಿ ಪ್ರತಿಷ್ಠಿತವಾಗಿದೆ ?

ಯಾಜ್ಞವಲ್ಕ್ಯ ಮಹರ್ಷಿ–ಉದಾನದಲ್ಲಿ.

ಶಾಕಲ್ಯ–ಉದಾನವು ಯಾವುದರಲ್ಲಿ ಪ್ರತಿಷ್ಠಿತವಾಗಿದೆ.

ಯಾಜ್ಞವಲ್ಕ್ಯ ಮಹರ್ಷಿ–ಸಮಾನದಲ್ಲಿ.

ಶಾಕಲ್ಯ–ಸರಿ ಇದು ಹೀಗೆಯೆ ಸರಿ.

ಯಾಜ್ಞವಲ್ಕ್ಯ ಮಹರ್ಷಿ–ಕೇಳು, ಶಾಕಲ್ಯ. ನೇತಿ, ನೇತಿ ಎಂದು ಹೇಳಲ್ಪಟ್ಟಿರುವ ಅವನೇ ಔಪನಿಷದ ಪುರುಷನು. ಸೃಷ್ಟಿ ಸಮಸ್ತವೂ ಯಾರಿಂದ ನಿಯಮಿತವಾಗಿದೆಯೋ, ಯಾವುದರಲ್ಲಿ ಪ್ರತಿಷ್ಠಿತವಾಗಿದೆಯೋ ಯಾರಿಂದ ಭೂವ್ಯಾಕಾಶದಾದ್ಯಂತ ಓತಪ್ರೋತವಾಗಿ ಹಬ್ಬಿದೆಯೋ, ಯಾರು ಅಗೃಹ್ಯನೋ, ಯಾರು ಅಕ್ಷಯನೋ, ಯಾರು ಅಸಂಗನೋ, ಯಾರು ಬಂಧಹೀನನೋ ಯಾರು ಅಮೃತನೋ, ಯಾರು ನಿರಾಕಾರನೋ, ಯಾರು ನಿರ್ಗುಣನೋ ಅಂತಹ ನಿರುಪಾಧಿಕವಾದ ಸಾಕ್ಷಾದ–ಪರೋಕ್ಷಬ್ರಹ್ಮನನ್ನು ತಿಳಿಯುವುದೇ ವೇದಾಂತದ ಹುರುಳು.

ಶಾಕಲ್ಯ–ಸರಿ, ಸರಿ. ಯಾಜ್ಞವಲ್ಕ್ಯ!

ಯಾಜ್ಞವಲ್ಕ್ಯ ಮಹರ್ಷಿ–ಅವನು ಚಿಂತೆಗೊಳಗಾಗುವುದಿಲ್ಲ. ಅವನು ಹಿಂಸಿತನಾಗುವುದಿಲ್ಲ.

ಶಾಕಲ್ಯ–ನೀನು ಸರಿಯಾಗಿ ಹೇಳಿದೆ.

ಯಾಜ್ಞವಲ್ಕ್ಯ ಮಹರ್ಷಿ–ಈಗ ನಾನು ನಿನ್ನನ್ನು ಪ್ರಶ್ನೆ ಕೇಳುವೆ. ಅದನ್ನು ಸರಿಯಾಗಿ ನೀನು ಗ್ರಹಿಸಿ ಉತ್ತರಿಸದಿದ್ದರೆ ನಿನ್ನ ತಲೆಯು ಬಿದ್ದು ಹೋಗುವುದು ದಿಟ.

ಶಾಕಲ್ಯ–ನೀನು ಏನನ್ನಾದರೂ ಪ್ರಶ್ನಿಸು. ಅದರಲ್ಲಿ ಚಿಂತೆ ಬೇಡವೇ ಬೇಡ.

ಯಾಜ್ಞವಲ್ಕ್ಯ ಮಹರ್ಷಿ–ಕೇಳು! ಅಷ್ಟ ಶರೀರಗಳು, ಅಷ್ಟ ದರ್ಶನೇಂದ್ರಿಯಗಳು, ಅಷ್ಟ ದೇವತೆಗಳು ಮತ್ತು ಅಷ್ಟ ಪುರುಷರು ಇವರನ್ನು ಯಾರು ತನ್ನಿಂದಲೇ ಸೃಷ್ಟಿಸಿ ತನ್ನಲ್ಲಿಯೇ ಉಪಸಂಹರಿಸಿ ಅತಿಕ್ರಮಿಸಿರುವನೋ ಆ ಔಪನಿಷಧ ಪುರುಷನನ್ನು ಕುರಿತು ನಿನ್ನನ್ನು ಪ್ರಶ್ನಿಸುವೆ.

ನೀನು ಅವನ ಬಗ್ಗೆ ಏನಾದರೂ ತಿಳಿದುಕೊಂಡಿದ್ದರೆ ವಿವರಿಸಿ ಹೇಳು. ನಿನ್ನಿಂದ ಸ್ಪಷ್ಟವಾಗಿ ಹೇಳಲಾಗದಿದ್ದರೆ ನಿನ್ನ ತಲೆಯು ಬಿದ್ದು ಹೋಗುವುದು.

ಶಾಕಲ್ಯನು ಆ ವಿಚಾರವಾಗಿ ಏನು ತಿಳಿದುಕೊಂಡಿರಲಿಲ್ಲವಾದುದರಿಂದ ಅವನ ಬಾಯಿಯಿಂದ ಮಾತುಗಳೇ ಹೊರಡಲಿಲ್ಲ. ಆ ಕ್ಷಣವೇ ಅವನ ಶಿರಸ್ಸು ಕತ್ತರಿಸಿ ಕೆಳಗೆ ಬಿದ್ದು ಉರುಳಿಹೋಯಿತು ಚೆಂಡು ಉರುಳಿ ಹೋಗುವಂತೆ. ಆ ಸಮಯದಲ್ಲಿ ಅಲ್ಲಿಯೇ ಕಾದಿದ್ದ ಕಳ್ಳರೋ ದುಷ್ಟರೋ ಯಾರೋ ಕ್ಷಣಾರ್ಧದಲ್ಲಿಯೇ ಅದನ್ನು ಹೆಕ್ಕಿ ಅಪಹರಿಸಿಕೊಂಡು ಓಡಿ ಹೋದರು.

ಬೃಹದ್ ಸಭೆ ಹಾಹಾ ಎನ್ನುತ್ತ ಮೂಗಿನ ಮೇಲೆ ಬೆರಳಿಟ್ಟಿತು.

ಉಚ್ಛ್ವಾಸಗಳ

೦

ಶ್ರದ್ಧಾಭಕ್ತಿಗಳಿಂದ ಉದ್ಭಾಸಿತವಾದ ಯಜ್ಞಶಾಲೆಯಲ್ಲಿ ನೋವು-ನಲಿವುಗಳ ಅಸಹನೀಯವಾದ ಕೂಟ. ಉದ್ವಿಗ್ನತೆ–ಉದ್ರಿಕ್ತತೆಗಳ ಅದ್ಭುತ ಸಮಾವೇಶ....

ಬೃಹದ್ ಸಭೆಯಲ್ಲಿ ಎಲ್ಲರ ಕಣ್ಮುಂದೆಯೇ ನಡೆದುಹೋದ ದುರಂತ ಒಮ್ಮೆಗೇ ಮನಃಪ್ರಾಣಗಳಿಗೆ ಭಯ-ಆಶ್ಚರ್ಯ-ಕರುಣೆಯನ್ನು ಮೂಡಿಸಿತ್ತು ಕರುಳು ಮಿಡಿಯುವಂತೆ. ಯಥಾಪ್ರಕಾರವಾಗಿ ಕ್ಷಣಕ್ಷಣಗಳೂ ಘಳಿಗೆಘಳಿಗೆಗಳೂ ಉರುಳುತ್ತಲೇ ಇದ್ದರೂ ಆ ಪ್ರಸಂಗವಶಾತ್ ಬಾಯ್ದೆರೆಯುವ ಉತ್ಸಾಹ–ಸಹನೆ ಎರಡೂ ಇಲ್ಲವಾಗಿ ದಿಗ್ಭ್ರಮೆ ಹೊಂದಿದವರಂತೆ ಸುಮ್ಮನೆ ಇದ್ದುಬಿಟ್ಟದ್ದಾರೆ ಸಮಸ್ತ ಜನ. ಪ್ರಯತ್ನಿಸಿದರೂ ನಾಲಿಗೆ ಅಲುಗುತ್ತಲೇ ಇಲ್ಲ. ಬ್ರಾಹ್ಮಣರೂ ಮಹರ್ಷಿಗಳೂ ಪರಸ್ಪರ ಮುಖ ನೋಡಿಕೊಂಡರು. ಸಂತಾಪದ ಬಿಸುಸುಯ್ಲು ನರನಾಡಿಗಳನ್ನು ಸೀಳುವಂತೆ ಹರಿದಾಡಿತು. ಹೃತ್‌ಕಲಶಗಳು ಒಮ್ಮೆಗೇ ಕುಸಿಯುವಷ್ಟು ಅನುತಾಪದಿಂದ ಮಿಡಿಯುತಿದ್ದುವು. ಎದ್ದರೆ ಬಿದ್ದೇನೋ ಎಂಬಂತಹ ತಲೆಭಾರ ಅನೇಕರಿಗೆ. ಇಡೀ ಸಭೆಯಲ್ಲಿ ನಿಶ್ಶಬ್ದ; ನೀರವ.

ಆಗ ಯಾಜ್ಞವಲ್ಕ್ಯ ಮಹರ್ಷಿಯು ಮಹಾ ಪಂಡಿತೋತ್ತಮರಾದ ಮಹರ್ಷಿಗಳತ್ತ ನೋಡುತ್ತ—ಭಗವಂತರಾದ ಬ್ರಾಹ್ಮಣೋತ್ತಮರೇ! ಈಗ ನಿಮ್ಮಲ್ಲಿ ಯಾರಾದರೂ ಇಷ್ಟಪಟ್ಟರೆ ನನ್ನನ್ನು ಪ್ರಶ್ನಿಸಬಹುದು ಅಥವಾ ನೀವುಗಳೆಲ್ಲರೂ ಒಟ್ಟಾಗಿ ಪ್ರಶ್ನಿಸಬಹುದು. ಅಥವಾ ನಿಮ್ಮಲ್ಲಿ ಯಾರಾದರೂ ಇಷ್ಟಪಟ್ಟರೆ ಅವರನ್ನು ನಾನು ಪ್ರಶ್ನಿಸುವೆನು ಅಥವಾ ನಿಮ್ಮೆಲ್ಲರನ್ನೂ ಒಟ್ಟಾಗಿ ನಾನು ಪ್ರಶ್ನಿಸುವೆ. ನೀವೆಲ್ಲರು ಹೇಗೆ ಇಷ್ಟ ಪಟ್ಟರೆ ಹಾಗೆಯೇ ನಿರ್ಣಯ.

ಪಂಡಿತೋತ್ತಮರು ಪುನಃ ಪರಸ್ಪರ ಮುಖ ನೋಡಿಕೊಂಡರು. ಮನವನ್ನು ಮುಸುಗಿದ ಭಯಭೀತಿಯ ಛಾಯೆ ಯೋಚನೆಯಲೆಗಳನ್ನು ಬಡಿದು ಸ್ತಬ್ಧಗೊಳಿಸಿತ್ತು. ಉತ್ತರಿಸಲು ಯಾರಿಗೂ ಸಮಯಸ್ಫೂರ್ತಿ ಲವಲೇಶವಾದರೂ ಮೂಡಲಿಲ್ಲ. ಅವರ ಪ್ರತ್ಯುತ್ತರವನ್ನು ಪ್ರತೀಕ್ಷಿಸುತ್ತಿದ್ದ ಯಾಜ್ಞವಲ್ಕ್ಯ ಮಹರ್ಷಿಯು ಸ್ವಲ್ಪ ಸಮಯ ಕಾದು ನೋಡಿದ ನಂತರ ಹೀಗೆನ್ನುತ್ತಾನೆ—ಸಭಾಸದರಾದ ಪಂಡಿತೋತ್ತಮರೇ! ಅನ್ಯ ಪ್ರತಿಷೇದವು ನೇತಿ, ನೇತಿ ಎಂದು ನಿರ್ದೇಶಿಸಲ್ಪಟ್ಟಿರುವ ಬ್ರಹ್ಮವಸ್ತುವನ್ನು ವಿಧಿವತ್ತಾಗಿ ನಿರ್ದೇಶಿಸುವ ಆಖ್ಯಾಯಿಕೆಯಲ್ಲಿ ಜಗತ್ಕಾರಣವನ್ನು ತೊಡಗಿಸಿ ತಾನೇ ಗೆದ್ದು ಗೋಧನವನ್ನು ಕೊಂಡೊಯ್ದನೆಂದು ನನ್ನನ್ನು ಆಪಾದಿಸಬಾರದು.

ಕುರುಪಾಂಚಾಲ ಬ್ರಾಹ್ಮಣರು ಆ ಮಾತಿಗೆ ಮಣಿದರೂ ತಮಗಾದ ತೇಜೋಭಂಗದಿಂದ ಉರಿಯುತ್ತ—ಅಯ್ಯಾ, ಯಾಜ್ಞವಲ್ಕ್ಯ! ನಮ್ಮ ಕಡೆಯಿಂದ ಇದೊಂದು ವ್ಯರ್ಥ ಸಾಹಸವೇ ಆಯಿತು ಎನ್ನೋಣ. ಆದರೂ, ಈಗ ಒಂದು ಮಾತು ಹೇಳದೆ ವಿಧಿಯಿಲ್ಲ. ನೀನು ವಿಚಾರವನ್ನು ಪಣ ಕ್ಕೊಡ್ಡುವ ಮುನ್ನ ಸಭೆಯ ಅಪ್ಪಣೆಯನ್ನು ಪಡೆದುಕೊಳ್ಳುವುದು ನಿನ್ನ ಧರ್ಮವಾಗಿತ್ತು. ಇದು ಅಕ್ರಮ ಮತ್ತು ತೀರ ಉದ್ಧಟತನ!

ಯಾಜ್ಞವಲ್ಕ್ಯ ಮಹರ್ಷಿ—ಮಹಾತ್ಮರೇ, ನಾವು ಈ ಸಭೆಯ

ಮುಂದೆಯೇ ವಿಷಯವನ್ನು ಪಣಕ್ಕೊಡ್ಡಿದ್ದೇವೆ. ಇದರಲ್ಲಿ ಅಕ್ರಮವಾಗಲೀ ಮುಚ್ಚುಮರೆಯಾಗಲೀ ಲವಲೇಶವೂ ಇಲ್ಲ, ಇದು ಎಲ್ಲರಿಗೂ ತಿಳಿದ ಅಂಶ.

ಕುರುಪಾಂಚಾಲ ಬ್ರಾಹ್ಮಣರು–ಆದರೂ ಸಹ, ಸಭೆಯ ಅಪ್ಪಣೆಯನ್ನು ಪಡೆದುಕೊಳ್ಳುವುದು ನಿನ್ನ ಕರ್ತವ್ಯವಾಗಿತ್ತು. ಈ ಪ್ರಮಾದ ಬೃಹತ್ ಸಭೆಯ ಮುಂದೆಯೇ ಜರುಗಿರುವುದರಿಂದ ನೀನು ಮಾತ್ರ ಇದಕ್ಕೆ ಹೊಣೆಗಾರನಲ್ಲವಾಗಿ ಸುಮ್ಮನಿದ್ದೇವೆ. ಇಲ್ಲದಿದ್ದರೆ ಅದಕ್ಕೆ ತಕ್ಕ ಶಾಸ್ತಿಯಾಗುತಿತ್ತು.

ಯಾಜ್ಞವಲ್ಕ್ಯ ಮಹರ್ಷಿ–ಅಲ್ಪವಿದ್ಯೆ ಎಂಬ ಪಿಶಾಚಿಗೆ ಮನಸೋಲುವುದರಿಂದ ಆಗುವುದು ಇಷ್ಟೆ. ಅಲ್ಪತ್ವ ಅಥವಾ ಅಲ್ಪವಿದ್ಯೆ ಯಾರನ್ನಾದರೂ ಮೂರ್ಖರನ್ನಾಗಿ ಮಾಡುತ್ತದೆ. ಅದು ಹಿಂದೆ ಮುಂದೆ ಆಲೋಚಿಸಲು ಸ್ವಲ್ಪವೂ ಅವಕಾಶ ಕೊಡುವುದಿಲ್ಲ. ಅಲ್ಪಸ್ವಲ್ಪ ಶಾಸ್ತ್ರಜ್ಞಾನವಿದ್ದರೂ ಸಾಕು, ಮಹಾ ಪಾಂಡಿತ್ಯದ ಪರಮಾವಧಿಯಲ್ಲಿಯೇ ಮೆರೆಸುತ್ತದೆ. ಕೊನೆಗೆ ಅದರಿಂದಾಗಿ ತನಗೆ ತಾವೇ ತುತ್ತಾಗುವುದು ಸಹಜ. ಯಾವ ವಿದ್ಯೆಯಿಂದ ಒಬ್ಬನಿಗೆ ಆಳವಾದ ಅನುಭವ ನಯವಿನಯಗಳು ಭೂಷಣವಾಗಿ ಬರುವುವೋ ಅದು ಮಾತ್ರ ಪರಮ ವಿದ್ಯೆ. ಯಾವುದು ಸತ್ಯವೋ ಅದನ್ನು ಅಲಕ್ಷಿಸಿ ಯಾವುದು ಮಿಥ್ಯವೋ ಅದನ್ನು ಅವಲಂಬಿಸಿದರೆ ಜ್ಞಾನಕ್ಕೆ ತಳಹದಿಯೇ ಇಲ್ಲವಾಗುತ್ತದೆ, ಎಂಬುದನ್ನು ಇದರಿಂದ ಪಾಠ ಕಲಿತಂತಾಯಿತು.

ಆ ಮಾತಿಗೆ ಕುರುಪಾಂಚಾಲ ಬ್ರಾಹ್ಮಣರು ತಮ್ಮ ತಮ್ಮಲ್ಲೇ ಕುದಿಯುತ್ತ ಹೀಗೆಂದರು–ನಿನ್ನ ಆಖ್ಯಾಯಿಕೆಯು ನಿನ್ನನ್ನು ನೀನೇ ಬ್ರಹ್ಮರ್ಷಿ ಎಂದು ಹೇಳಿಕೊಳ್ಳುವಂತಿಡೆಯಲ್ಲದೆ ಮತ್ತೇನಿಲ್ಲ.

ಆಕ್ಷೇಪಣೆಯು ಸೊಲ್ಲು ತಾಪಾನುತಾಪಗಳಿಂದ ತುಂಬಿ ವಿಶಾದವಾಣಿಯಲ್ಲಿ ಹೊರಬಿತ್ತು, ಇಡೀ ಸಭೆಯ ಗಮನ ಅತ್ತ ಒಮ್ಮೆಗೇ ಹರಿಯಿತು ವಂತೆ.

ಯಾಜ್ಞವಲ್ಕ್ಯ ಮಹರ್ಷಿ—ಅಯ್ಯಾ, ಬ್ರಾಹ್ಮಣೋತ್ತಮರೇ! ನಿಮ್ಮ ಅತೃಪ್ತಿ ಕೇವಲ ಅಸೂಯೆ—ಅವಮಾನಗಳಿಂದ ಕೂಡಿದೆ. ಈ ಅಸೂಯೆ ಯೆಂಬುದು ಪೂರ್ಣಪ್ರಜ್ಞೆಯಿಂದ ಮೂಡಿದುದಲ್ಲ, ಅಲ್ಪಜ್ಞತೆಯ ಅಂತ ರಾಳದಿಂದ ಮೊಳೆತು ಮನೋವ್ಯಾಪ್ತಿಯಾಗಿ ಕಹಿ ವಾತಾವರಣವನ್ನು ಸೃಷ್ಟಿಸುತ್ತಿದೆ.

ಕುರುಪಾಂಚಾಲ ಬ್ರಾಹ್ಮಣರು—ಓಹೋ, ಹಾಗಾದರೆ ನೀನು ಮಾತ್ರ ಪೂರ್ಣಪ್ರಜ್ಞನೆಂದೋ? ಈ ಸಭೆಯಲ್ಲಿರುವ ಎಲ್ಲಾ ಪ್ರಜ್ಞಾ ವಂತರನ್ನೂ ಅಲಕ್ಷಿಸಿ ಈ ರೀತಿ ಮಾತಾಡುವುದು ಸರಿಯಲ್ಲ. ಇದು ಧೂರ್ತತನ!

ಯಾಜ್ಞವಲ್ಕ್ಯ ಮಹರ್ಷಿ—ಇಂಥ ಆರೋಪಣೆಯಿಂದ ಏನೂ ಪ್ರಯೋ ಜನವಿಲ್ಲ. ಎಲ್ಲಾ ಪ್ರಜ್ಞಾವಂತರನ್ನು ಹಿಯ್ಯಾಳಿಸಿ ನಾನು ಮಾತಾ ಡಿಯೂ ಇಲ್ಲ. ಯಾರು ನನ್ನನ್ನು ಆಕ್ಷೇಪಿಸಿ ಅನವಶ್ಯಕವಾದ ಆರೋಪ ಮಾಡಿರುವರೋ ಅವರಿಗೆ ಉತ್ತರಿಸಿ ತಿಳಿವಳಿಕೆ ನೀಡುವುದು ನನ್ನ ಕರ್ತವ್ಯ ಎಂಬುದನ್ನು ನಾನು ಸರಿಯಾಗಿ ಅರಿತುಕೊಂಡಿರುವೆ.

ಕುರುಪಾಂಚಾಲ ಬ್ರಾಹ್ಮಣರು—ನಿನ್ನಂತಹವನು ಏನೆಂದರೂ ಒಪ್ಪು ವಂತಹ ಸಮಯ ಬಂದಿದೆಯಾದ್ದರಿಂದ ನಾವಿನ್ನು ಮಾತಾಡುವುದು ಪ್ರಯೋಜನವಿಲ್ಲ.

ಯಾಜ್ಞವಲ್ಕ್ಯ ಮಹರ್ಷಿ—ನಿಮಗೆ ಸಮಯೋಚಿತವಾದ ಪ್ರಣಾಮ ಗಳು.

ಅನಂತರ ಯಾಜ್ಞವಲ್ಕ್ಯ ಮಹರ್ಷಿಯು ಯಜ್ಞವೇದಿಕೆಯಿಂದ ಇಳಿದು ತಮ್ಮವರು ಕುಳಿತಿದ್ದ ಸ್ಥಳಕ್ಕೆ ಬಂದೊಡನೆಯೇ ಎಲ್ಲರ ಆದರದ ಸ್ವಾಗತ ದೊರಕಿದರೂ ಅದರಲ್ಲಿ ಹೊಮ್ಮಿದ ಒಡಕು ಸ್ವರವನ್ನು ಅರಿಯ ದಿರಲಿಲ್ಲ. ಅವರಿಗೆ ತಾನೇ ಏನಾದರೂ ತಿಳಿಯ ಹೇಳುವುದರೊಳಗಾಗಿಯೇ ಕಾತ್ಯಾಯಿನಿಯು ನಿಮ್ಮ ಪ್ರಜ್ಞಪ್ತಿಪ್ರಜ್ಞೆಗೆ ತುಂಬ ಧನ್ಯವಾದಗಳು.

ಆದರೂ, ಶಾಕಲ್ಯರಿಗೆ ಆದ ಶಾಸ್ತಿ ತುಂಬ ಉಗ್ರವಾಯಿತು ಎನ್ನದಿರಲಾರೆ.

ಯಾಜ್ಞವಲ್ಕ್ಯ ಮಹರ್ಷಿ—ಅದಕ್ಕೆ ಯಾರು ಹೊಣೆ ?

ಕಾತ್ಯಾಯಿನಿ—ಹೊಣೆಗಾರಿಕೆಯನ್ನು ಎತ್ತಿದರೆ ಉತ್ತರ ಸಮಂಜಸ. ಆದರೂ, ಬ್ರಹ್ಮಿಷ್ಠರಾದ ನಿಮಗೆ ಅದರ ಭವಿಷ್ಯ ತಿಳಿದೇ ಇತ್ತು. ಅಂದ ಮೇಲೆ ನೀವೇ ಸ್ವಲ್ಪ ಎಚ್ಚರಿಕೆ ವಹಿಸಿದ್ದರೆ ಇಂಥ ಪ್ರಮಾದವನ್ನು ಖಂಡಿತ ತಪ್ಪಿಸಬಹುದಾಗಿತ್ತು ಎಂದೆನಿಸುತ್ತದೆ ನನಗೆ.

ಯಾಜ್ಞವಲ್ಕ್ಯ ಮಹರ್ಷಿಯು ಮುಗುಳುನಗುತ್ತ—ಇಷ್ಟಕ್ಕೂ ನಾನು ವಿಧಿಯಲ್ಲವಲ್ಲ ?

ಮೈತ್ರೇಯೀ—ಕುರುಪಾಂಚಾಲ ಬ್ರಾಹ್ಮಣರ ದುಡುಕು ಶಾಕಲ್ಯರನ್ನು ಬಲಿಕೊಟ್ಟಿತು.

ಯಾಜ್ಞವಲ್ಕ್ಯ ಮಹರ್ಷಿ—ವಿವೇಚನೆಯಿಲ್ಲದಿದ್ದರೆ ಆಗುವುದೇ ಹೀಗೆ.

ಮೈತ್ರೇಯೀ—ಒಂದು ವೇಳೆ....

ಆ ಮಾತನ್ನು ಮುಂದುವರಿಯಗೊಡದಂತೆ ಯಾಜ್ಞವಲ್ಕ್ಯ ಮಹರ್ಷಿಯು ನಡುವೆ ಬಾಯಿ ಹಾಕಿದ. ನೋಡು, ಮೈತ್ರೇಯೀ, ಶಾಕಲ್ಯನಲ್ಲಿ ವಿದ್ಯೆಯೂ ಇತ್ತು ; ಬುದ್ಧಿಯೂ ಇತ್ತು. ತಾಳ್ಮೆಯಿರಲಿಲ್ಲ. ಅದೇ ಅವನನ್ನು ಕೆಡಿಸಿತು. ಕುರುಪಾಂಚಾಲರು ಎಷ್ಟೇ ಜ್ಞಾನಿಗಳಾದರೂ ಅನುಭವಸ್ಥರಾದರೂ ಮುಂಪರಿಣಾಮವನ್ನು ಚಿಂತಿಸದುದರ ಫಲವಲ್ಲವೇ ಇದು ? ಹದವರಿತು ನಡೆಯುವುದನ್ನು ಎಲ್ಲರೂ ಕಲಿಯಬೇಕು.

ಕಾತ್ಯಾಯಿನಿ—ಹಣೆಬರಹವನ್ನು ಯಾರೂ ತಿದ್ದಲಾರರು ಎಂಬುದೇನೋ ಸತ್ಯ. ಆದರೂ, ಇಂದಿನ ಸಂದರ್ಭದಲ್ಲಿ ಹೀಗಾಗಬಾರದಿತ್ತು.

ಯಾಜ್ಞವಲ್ಕ್ಯ ಮಹರ್ಷಿ—ಅದನ್ನು ತಲೆಗೆ ಹಚ್ಚಿಕೊಂಡರೆ ಚಿಂತೆ. ಇಲ್ಲದಿದ್ದರೆ....?

ಕಾತ್ಯಾಯಿನಿ–ಅಂತೂ ಇದೊಂದು ಪ್ರಮಾದ. ಮಹಾ ದುರ್ಘಟನೆ.

ಅದೇ ವೇಳೆಗೆ ಆರುಣಿ, ಕಾತ್ಯಾಯನ, ದೇವರಾತರು ಅಲ್ಲಿಗೆ ಬಂದು ಕುಳಿತುಕೊಳ್ಳುವರು. ಮೂವರ ಮುಖಭಾವದಲ್ಲೂ ಸುಖದುಃಖಗಳ ಮುದ್ರೆಯೊತ್ತಿತ್ತು. ಅಭಿಸಂದಿಸುವ ಯೋಚನೆಯಿದ್ದರೂ ಹರುಪು ಮೂಡದೆ ಸುಮ್ಮನಾಗುವರು. ಯಾಜ್ಞವಲ್ಕ್ಯ ಮಹರ್ಷಿಯು ಪ್ರಾಸಂಗಿಕವಾಗಿ ಸ್ವಾಗತಿಸುತ್ತ–ಆರುಣಿ, ಇಲ್ಲಿ ಕೇಳು. ಯಾವುದು ಅವಿದ್ಯೆಯೋ ಅದರಲ್ಲಿ ಮುಳುಗಿ ದಿನಚರಿಯ ಕರ್ಮಕಾಂಡದಲ್ಲಿ ಗಳಿಸಿದ್ದನ್ನೇ ಅಮೂಲ್ಯವೆಂದು ಭಾವಿಸುತ್ತ, ಐಹಿಕ ಸುಖಭೋಗಕ್ಕಾಗಿಯೇ ಯಜ್ಞಯಾಗಾದಿಗಳನ್ನು ಮಾಡುತ್ತ ಇಂದ್ರಿಯಗಳಿಗೆ ಪ್ರಿಯವಾದ ಸುಖವನ್ನು ಪಡೆದುಕೊಂಡು ಹಿಗ್ಗಿ ತಮ್ಮ ಮರಣಾಂತರವೂ ಇಂತಹ ಲೋಕವನ್ನೇ ಬಯಸುವ ಅಲ್ಪಜ್ಞಾನಿಗಳು. ಇವರಲ್ಲಿರುವುದು ಆಡಂಬರವೇ ವಿನಾ ನಿಜವಾದ ಜ್ಞಾನವಲ್ಲ. ಅಂತಲೇ, ತಾವೇ ಧೀಮಂತರು ಎಂಬ ಮೂಢಭಾವನೆ ಬೆಳೆದದ್ದು. ಹೆಮ್ಮರವಾಗಿ ಯಾರೂ ಸಾಧಿಸದಿದ್ದುದನ್ನು ನಾನು ಸಾಧಿಸಿದ್ದೇನೆ ಎಂಬ ನಂಬುಗೆ ರಕ್ತಗತವಾಗುತ್ತದೆ. ಅಲ್ಲಿಗೆ ಅಲ್ಪಸ್ವಲ್ಪ ಕಲಿತದ್ದೂ ವ್ಯರ್ಥ. ಈ ಎಲ್ಲವನ್ನೂ ಬುದ್ಧಿಯಿದ್ದೂ ಯೋಚಿಸದಿದ್ದರೆ ಹೇಗೆ? ಯಾರೇ ಇರಲಿ, ತನ್ನ ಪಾಂಡಿತ್ಯಕ್ಕೆ ತಾನು ಮೈಮರೆತರೆ ತಾನಲ್ಲದೆ ಅದಕ್ಕೆ ಇನ್ನಾರು ಈಡಾಗಬೇಕು?

ಆರುಣಿ–ಅಹುದು, ಅಹುದು. ಬ್ರಹ್ಮಿಷ್ಠನೆಂದರೆ ಸೂರ್ಯದೇವನಿದ್ದಂತೆ. ಸೂರ್ಯನನ್ನು ಮುಟ್ಟಹೋಗುವುದರ ಪರಿಣಾಮವೇನು ಎಂಬುದನ್ನು ಸ್ವಲ್ಪವಾದರೂ ಯೋಚಿಸಿದ್ದರೆ ವಿಷಯ ಹೀಗಾಗುತ್ತಿರಲಿಲ್ಲ.

ಯಾಜ್ಞವಲ್ಕ್ಯ ಮಹರ್ಷಿ–ಅಲ್ಪಜ್ಞಾನದಿಂದ ತನಗೂ ಸುಖವಿಲ್ಲ; ಪರರಿಗೂ ಸುಖವಿಲ್ಲ. ತನಗೇ ದಾರಿ ಗೊತ್ತಿಲ್ಲದಾಗ ಪರರನ್ನೂ ಅದೇ ದಾರಿಯಲ್ಲಿ ನಡೆಸುವ ಹಂಬಲ. ಗುರು ಎನಿಸಿಕೊಳ್ಳುವ ಹುಚ್ಚು. ಆದರೆ ಈ ವಿಚಿತ್ರ ಪ್ರಪಂಚದಲ್ಲಿ ಅಂತಹ ಗುರುಗಳಿಗೆ ತಕ್ಕಂತಹ ಶಿಷ್ಯರೂ

ದೊರೆಯುತ್ತಾರೆ. ಮುಂದೆ ಅಂತಹ ಗುಂಪುಗಳು ಎಲ್ಲೆಡೆಯೂ ಬೆಳೆಯುತ್ತ ಹೋಗುತ್ತವೆ. ಅದರಿಂದ ಕಾಲ–ದೇಶ–ವ್ಯವಹಾರ ಎಲ್ಲವೂ ಹಾಳು; ಮುಂದಿನ ಜನ್ಮಜನ್ಮಾಂತರಗಳೂ ವ್ಯರ್ಥ; ಅಭಿಜ್ಞಾನಕ್ಕೆ ಕುಂದು. ಹೀಗಿರುವಲ್ಲಿ ಸಧ್ಯಃ ಕರ್ಮಫಲದ ಆಸಕ್ತಿಯಿಂದ, ಇಂದ್ರಿಯ ವಾಸನೆಯಿಂದ ಜೀವನ ಸಾರ್ಥಕ್ಯದ ಕಡೆ ಗಮನ ಹರಿಯುವುದು ಕಷ್ಟ. ಅಲ್ಪಜ್ಞಾನದ ಹುಮ್ಮು ಎಲ್ಲಿಯವರೆಗೆ ಮೈಗೂಡಿಕೊಂಡಿರುವುದೋ ಅಲ್ಲಿಯವರೆಗೆ ಸಾಂತದಿಂದ ಅನಂತ ಎಂದೂ ಸಿಕ್ಕಲಾರದು ಎಂಬ ಯೋಚನೆ ತಲೆಯ ಬಳಿಯೂ ಸುಳಿಯುವುದಿಲ್ಲ. ಕರ್ಮಫಲ ಪೂರೈಸಿದನಂತರ ಆಸರೆ ತಪ್ಪಿದಂತೆ ತಾನಾಗಿಯೇ ಕೆಳಕ್ಕೆ ಕುಸಿಯುವುದು ಸಹಜ. ಎಂದೆಂದಿಗೂ ಈ ಕರ್ಮಕಾಂಡದಲ್ಲಿ ಕ್ಷಣಿಕ ಸುಖದ ಸಿಹಿಯನ್ನು ಚೀಪಿಕೊಂಡಿರಬಹುದೆಂಬ ಕನಸು ತನ್ನೆದುರಿಗೇ ಭಗ್ನವಾದೀತೆಂದು ಅರಿಯುವುದು ಹೇಗೆ? ಫಲಾಪೇಕ್ಷೆಯ ಕರ್ಮ ಎಲ್ಲಿಗೆ ಎಳೆಯುತ್ತದೆಂಬುದು ಗುರಿಮುಟ್ಟಿದ ಮೇಲೇಯೇ ತಿಳಿಯಬೇಕಾದರೆ.

ದೇವರಾತ–ನೀನೆನ್ನುವುದು ಸರಿಯೆ. ಆದರೆ, ಶಾಕಲ್ಯನ ವಿಚಾರದಲ್ಲಿ ಈ ಆರೋಪವನ್ನು ಒಪ್ಪಿಕೊಳ್ಳುವುದು ಹೇಗೆ ?

ಯಾಜ್ಞವಲ್ಕ್ಯ ಮಹರ್ಷಿ–ದೇವರಾತ ! ಅವನು ಅಲ್ಪಜ್ಞಾನಿ ಎಂಬುದನ್ನು ನೀನರಿಯೆ. ಅವನಲ್ಲಿ ಮೈಗೂಡಿಕೊಂಡಿದ್ದ ಗರ್ವದ ಕಿಡಿಯೇ ಅವನನ್ನು ಸುಟ್ಟಿತು. ಇದುವರೆವಿಗೆ ನಾನು ವಿವರಿಸಿದುದು ಇದನ್ನೆ. ಇಂದಿನ ವಿದ್ಯಮಾನವನ್ನು ನೀನು ಇನ್ನೊಮ್ಮೆ ಕೂಲಂಕಶವಾಗಿ ಪರಿಶೀಲಿಸಿದರೆ ತಿಳಿಯುತ್ತದೆ.

ದೇವರಾತ–ಸರಿ, ಯಾಜ್ಞವಲ್ಕ್ಯ ! ಆದರೂ ಇನ್ನೂ ಒಂದು ಸಂಶಯವು ನನ್ನಲ್ಲಿ ಉಳಿದಿದೆ.

ಯಾಜ್ಞವಲ್ಕ್ಯ ಮಹರ್ಷಿ–ಏನಿದ್ದರೂ ಹೇಳು, ದೇವರಾತ ! ಸಂಕೋಚ ಬೇಡವೇ ಬೇಡ.

ದೇವರಾತ–ಶಾಕಲ್ಯನನ್ನು ಅಲ್ಪಜ್ಞಾನಿ ಎಂದೇನೋ ಒಪ್ಪಿಕೊಳ್ಳ

ಬಹದು; ಅವನು ಕುರುಪಾಂಚಾಲರ ಮಾತಿಗೆ ಕಿವಿಗೊಟ್ಟನೆಂಬುದೂ ಸರಿಯೇ. ಆದರೂ, ಅವನು ಸಾಧಕನೂ ಹೌದು; ಮುಮುಕ್ಷುವೂ ಹೌದು. ಅಂದಮೇಲೆ, ಅವನು ಇಂತಹ ಸಂದರ್ಭದಲ್ಲಿ ಹೀಗೆ ಅನ್ಯಥಾ ಬಲಿಯಾದಾನೆಂದು ಭಾವಿಸಿಯೇ ಇರಲಿಲ್ಲ. ಇದಂತೂ ಚೋದ್ಯ ಎನಿಸುತ್ತಿದೆ ನನಗೆ.

ಯಾಜ್ಞವಲ್ಕ್ಯ ಮಹರ್ಷಿ–ಈ ಮೂಢರ ವಿಚಾರ ಹೀಗೆ ಎಂದು ಹೇಳುವಂತಿಲ್ಲ. ಇವರ ಬುದ್ಧಿಶಕ್ತಿ ಸರಿಯಾಗಿ ಕೆಲಸ ಮಾಡುವುದಿಲ್ಲವಾದ್ದರಿಂದ ಯಾವ ಒಪ್ಪುತಪ್ಪುಗಳನ್ನೂ ಸಹ ತಾವೇ ತಾವಾಗಿ ನಿರ್ಣಯಿಸಲಾರರು. ಯಾವುದು ಮಿಥ್ಯವೋ ಅದರ ಬಾಲ ಹಿಡಿದು ಯಾವುದು ಸತ್ಯವೋ ಅದನ್ನು ಕೈಬಿಡುವರು. ಆದ್ದರಿಂದಲೇ ಶಾಕಲ್ಯನು ಕುರುಪಾಂಚಾಲ ಬ್ರಾಹ್ಮಣರ ಮಾತಿಗೆ ಕಿವಿಕೊಟ್ಟದ್ದು. ನಿರ್ಣಯ ತನ್ನದೇ ಆಗಿದ್ದರೆ ಅವನು ಕೆಡುತ್ತಿರಲಿಲ್ಲ.

ಕಾತ್ಯಾಯನ–ಅವಿವೇಕಿಯಾದ ವಿದ್ವಾಂಸ ಎಂಬುದು ಒಂದು ಹಾಸ್ಯಾಸ್ಪದ ವಿಚಾರ. ಅವಿವೇಕಿಯಾದವನು ವಿದ್ವಾಂಸನಾಗುವುದೂ ವಿದ್ವಾಂಸನಾದವನು ಅವಿವೇಕಿಯಾಗುವುದೂ ಅಸಂಭವ ಎಂದು ನನ್ನ ಭಾವ. ಶಾಕಲ್ಯನ ವಿಚಾರ ನನಗಂತೂ ಗಂಟಲಗಾಣವಾಗಿದೆ. ನೀನೆಂದಂತೆ ಅಲ್ಪಜ್ಞಾನಿಯಾಗಿದ್ದು ಮಹಾ ಗರ್ವಿಯಾಗಿದ್ದರೂ ಇದಿಷ್ಟನ್ನು ಅರ್ಥೈಸಲಾರದಷ್ಟು ಮೂರ್ಖನೇನಲ್ಲ ಎಂಬುದು ನನ್ನ ಅಭಿಮತ.

ಯಾಜ್ಞವಲ್ಕ್ಯ ಮಹರ್ಷಿ–ನಿನ್ನ ತರ್ಕವನ್ನು ಹುಸಿ ಎನ್ನಲಾರೆ ಕಾತ್ಯಾಯನ. ಆದರೆ, ಈ ಗುಂಪಿಗೆ ಸೇರಿದವರೇ ಹೆಚ್ಚು ಮಂದಿ. ಪರೀಕ್ಷಾ ಸಮಯ ಬರುವವರೆಗೆ ಎಲ್ಲರೂ ವಿವೇಕಿಗಳೇ! ಬಾಯಿಯಲ್ಲಿ ದೊಡ್ಡ ದೊಡ್ಡ ವೇದಾಂತದ ಮಾತುಗಳನ್ನಾಡಿ ಇತರರನ್ನು ಮರಳು ಮಾಡುವುದು ಸುಲಭ. ಜೀವನದಲ್ಲಿ ಎಂದೂ ಅದನ್ನು ಅನುಷ್ಠಾನಕ್ಕೆ ತಂದಿರುವುದಿಲ್ಲವಾದ್ದರಿಂದ ಪರೀಕ್ಷೆಗೆ ಕುಳಿತಾಗ ಬುಡ ಮೇಲಾಗುತ್ತದೆ ಪರಿಜ್ಞಾನ. ಈ ಮಿಥ್ಯ ಜೀವನದಲ್ಲಿ ಹಗಲಿರುಳೂ ಮಿಥ್ಯಾವಾಸನೆಯನ್ನೇ ಉಸಿರಾಡುವುದ

ರಿಂದ ಪರಮ ಸತ್ಯವನ್ನು ಗುರುತಿಸುವುದು ಕಷ್ಟವೇ. ಹುಳುಕು ತಳುಕುಗಳಿಂದ ಕೂಡಿದ ಮಿಥ್ಯೆ ಕಣ್ಮುಂದೆ ಸರ್ವತ್ರ ಸದಾ ನಲಿಯುತ್ತಿರುವಾಗ ಪ್ರಪ್ರಥಮವಾಗಿ ದೃಷ್ಟಿಗೆ ಬೀಳುವುದೇ ಅಬ್ರಹ್ಮವಸ್ತು. ಅಂತಲೇ, ದೃಷ್ಟಿಕೋನ ಮಿಥ್ಯೆಯಲ್ಲಿ ನೆಟ್ಟಾಗಲೇ—ಅಜ್ಞಾನದ ಪಿಶಾಚಿ ಹೆಗಲೇರುತ್ತದೆ. ಸಮಯಾನುಸಾರ ದೊರೆಯುವ ಕ್ಷಣಿಕ ಸುಖವನ್ನು ಮನಃಪೂರ್ತಿನೊಣೆದು ದುಃಖದಿಂದ ಪಾರಾಗಲು ಪ್ರೇರೇಪಿಸದೇ ಬಿಡುವುದೇ ಅದು ? ಹೀಗೆ—ಈ ಪ್ರಕಾರವಾಗಿ ಎದ್ದು ಬಿದ್ದು ಪಾಠ ಕಲಿಯುವ ವೇಳೆಗೆ ಈ ಜೀವಮಾನವೇ ಮುಗಿದು ಹೋಗಿರುತ್ತದೆ. ಇನ್ನೆಲ್ಲಿಯ ಬ್ರಹ್ಮಜ್ಞಾನ? ಅಷ್ಟಿಷ್ಟು ತಿಳಿದುಕೊಂಡು ವೇದಿಕೆಯನ್ನೇರಿದರೆ ಆಗುವುದೇ ಇಷ್ಟು. ಆದರೆ, ಯಾವಾಗ ಬ್ರಹ್ಮದೃಷ್ಟಿ ಬಲಿತು ಎಲ್ಲಾ ಕಡೆಯೂ ಬ್ರಹ್ಮನನ್ನೇ ಕಾಣುತ್ತಾನೋ ಆಗ ಪ್ರಿಯವಾದ ವಸ್ತುವಿನಿಂದ ಆಕರ್ಷಿತನೂ ಅಪ್ರಿಯವಾದ ವಸ್ತುವಿನಿಂದ ವಿಕರ್ಷಿತನೂ ಆಗುವುದೇ ಇಲ್ಲ. ನಾಮರೂಪಗಳ ಹಿಂದೆ ಇರುವ ಬ್ರಹ್ಮವಸ್ತುವನ್ನು ಮಾತ್ರ ಕಾಣುವನು. ಈ ಎಲ್ಲವನ್ನೂ ವಿಚಾರ ಮಾಡುತ್ತಾ ಹೋದರೆ ಶಾಕಲ್ಯನು ಈವೊಂದು ಉದಾಹರಣೆಗೆ ಹೊರತೇನೂ ಅಲ್ಲ.

ದೇವರಾತ—ಆದರೆ, ಒಂದು ಮಾತು, ಯಾಜ್ಞವಲ್ಕ್ಯ.

ಯಾಜ್ಞವಲ್ಕ್ಯ ಮಹರ್ಷಿ—ಏನು ಹೇಳು ? ಹಾಳು ಸಂಶಯ ಯಾವಾಗಲೂ ಮನದಲ್ಲಿ ಉಳಿಯಬಾರದು. ಅದನ್ನು ಅಂದಂದಿಗೇ ಪರಿಹರಿಸಿಕೊಳ್ಳಬೇಕು.

ದೇವರಾತ—ಬ್ರಹ್ಮಿಷ್ಠನಿಗೆ ಯಾವತ್ತೂ ಸುಖದುಃಖಗಳಿಲ್ಲ. ಅವನು ಕರ್ತೃವೂ ಆಗಲಾರ. ಭೋಕ್ತೃವೂ ಆಗಲಾರ. ಅವನ ಮೇಲೆ ಕರ್ತೃತ್ವವನ್ನು ಆರೋಪಿಸುವುದು ವ್ಯರ್ಥ. ಅವನು ಶುದ್ಧಭೂತಗಳ ಸಂಘಾತ—ಯೋಗಬ್ರಹ್ಮದ್ರಷ್ಟಾರ. ಅವನು ಎಂದೂ ಪ್ರಾಪಂಚಿಕ ವ್ಯಾಪಾರವನು ಹಚ್ಚಿಕೊಳ್ಳುವವನಲ್ಲ. ಅಂದಮೇಲೆ, ಬ್ರಹ್ಮಿಷ್ಠನಾದ ನಿನಗೆಲ್ಲಿಯ ಸುಖದುಃಖ? ಏನೇ ಇದ್ದರೂ ನೀನವನನ್ನು ಪಣಕ್ಕೊಡ್ಡದಾರದಿತ್ತು ಎಂದು ನನ್ನ ಅಭಿಮತ. ಇದಕ್ಕೆ ನೀನೇನು ಹೇಳುತ್ತಿ ?

ಯಾಜ್ಞವಲ್ಕ್ಯ ಮಹರ್ಷಿ–ಕೇಳು ದೇವರಾತ. ನಿನ್ನ ತರ್ಕವೇನಿದ್ದರೂ ನನ್ನ ಸ್ವಂತಿಕೆಯಲ್ಲಿ. ಆದರೆ.....ಲೋಕ ?

ದೇವರಾತ–ಆಗಲೇ ಹೇಳಿದೆನಲ್ಲಾ, ಬ್ರಹ್ಮಿಷ್ಠನಿಗೆ ಸುಖದುಃಖಗಳಿಲ್ಲ ಎಂದು.

ಯಾಜ್ಞವಲ್ಕ್ಯ ಮಹರ್ಷಿ–ಇಲ್ಲಿ ಕೇಳು. ನಿನ್ನ ತರ್ಕವನ್ನೇ ಈಗ ಲಕ್ಷ್ಯದಲ್ಲಿಟ್ಟುಕೊಳ್ಳೋಣ. ಗೋಧನವನ್ನು ಕೊಂಡೊಯ್ಯಲು ಅಪಾತ್ರನೆಂದು ನನ್ನ ಮೇಲೆ ಅನ್ಯಥಾ ಆರೋಪಿಸದಿದ್ದಲ್ಲಿ ಸೋಲು ಗೆಲುವುಗಳ ಪ್ರಮೇಯ ಏಳುತ್ತಲೇ ಇರಲಿಲ್ಲ. ವಿಷಯವನ್ನು ಪಣಕ್ಕೊಡ್ಡದೆ ನಮ್ಮ ವಿಜಯವನ್ನು ಸಾರುವುದೆಂತು ? ಈಗ ನಾನು ಆ ಮಿಥ್ಯಾರೋಪದಿಂದ ಮುಕ್ತನಾಗಿರುವೆ. ಇದನ್ನು ಸಭೆಗೆ ಪರಿಚಯ ಮಾಡಿಕೊಡಲು ಬೇರೆ ದಾರಿಯೇ ಇರಲಿಲ್ಲ.

ದೇವರಾತ ಮೆಲ್ಲಗೆ ತಲೆದೂಗುತ್ತ ಸಮ್ಮತಿಯನ್ನು ಸೂಚಿಸಿ-ಸರಿ, ಸರಿ, ಅದೊಂದು ಕೊಳೆಯನ್ನೇನೋ ತೊಳೆದುಕೊಂಡಂತಾಯಿತು.

ಯಾಜ್ಞವಲ್ಕ್ಯ ಮಹರ್ಷಿ–ಶಾಕಲ್ಯನು ಸರಿಯಾದ ಮಹರ್ಷಿಯಾಗಿದ್ದಿದ್ದರೆ ಪಣಕ್ಕೊಡ್ಡಿದುದರಿಂದ ಏನೂ ಆಗುತ್ತಿರಲಿಲ್ಲ. ಅವನು ಹಾಕಿಕೊಂಡದ್ದು ಮಹರ್ಷಿಯ ಸೋಗು. ಅವನ ವಿಕ್ಷಿಪ್ತ ಚಿತ್ತ ಕಾಮ ಕಾಮಗಳ ಕಾರಸ್ಥಾನವಾಗಿತ್ತು. ಒಂದುವೇಳೆ ಅವನು ಪ್ರಜ್ಞಾನಘನನಾಗಿದ್ದಿದ್ದರೆ ಇಂತಹ ಪ್ರಸಂಗ ಬರುತ್ತಲೇ ಇರಲಿಲ್ಲ.

ಆರುಣಿ–ಅವರವರ ಕರ್ಮಫಲಗಳು ಫಲಿಸುವಾಗ ಅವರವರೇ ಸಾಕ್ಷಿಯಾಗುತ್ತಾರೆ.

ಕಾತ್ಯಾಯನ–ಹಾಗೆಂದು ಒಪ್ಪಿಕೊಳ್ಳುವುದೇ ಸರಿ. ಅದಕ್ಕೆ ಇದೊಂದು ದೃಷ್ಟಾಂತ.

ಮೈತ್ರೇಯೀ–ಏನೇ ಇರಲಿ, ಅವರಿಗೆ ಉತ್ತಮ ಗತಿ ಬರಬೇಕಾ

ಗಿತ್ತು. ಈಗಣ ಪರಿಸ್ಥಿತಿಯಲ್ಲಿ ಅದು ಅಲಭ್ಯವೋ, ಏನೋ ಎಂದು ಅನುಮಾನವಾಗಿದೆ.

ಅರುಣಿ–ಅದನ್ನು ಯೋಚಿಸಬೇಕಾದವರು ಯೋಚಿಸಲಿಲ್ಲ ದೇವೀ.

ದೇವರಾತ–ಯೋಚಿಸುವುದಿರಲಿ, ಪ್ರಚೋದಿಸಿ ದುರಂತಕ್ಕೆ ದಾರಿ ಮಾಡಿದರು.

ಕಾತ್ಯಾಯಿನಿ – ಅಂತೂ, ಎಲ್ಲರಿಗೂ ಇದರಿಂದ ಮನೋವೇದನೆಯಾಗಿದೆ. ಈವೊಂದು ಸಂದರ್ಭದಲ್ಲಿ ಹೀಗಾಗಬಾರದಿತ್ತು.

ಯಾಜ್ಞವಲ್ಕ್ಯ ಮಹರ್ಷಿಯು ವಿಚಾರಪರವಶತೆಯಿಂದ–ಏನು ಆಗಬೇಕೋ ಅದು ಆಗಲೇ ಬೇಕು.

ಮೈತ್ರೇಯೀ–ಅದು ಯಥಾರ್ಥವಾದುಹಾದರೂ ನಿಮ್ಮಲ್ಲಿ ಆ ಬಗ್ಗೆಯೇ ಒಂದು ಯಾಚನೆಯಿದೆ, ದೇವ !

ಯಾಜ್ಞವಲ್ಕ್ಯ ಮಹರ್ಷಿ–ಏನು ? ಈಗಲೇ ಅದನ್ನು ವಿಷದೀಕರಿಸು.

ಮೈತ್ರೇಯೀ ಈಗಲೂ ನೀವು ದೃಢಮನಸ್ಸು ಮಾಡಿದರೆ ಶಾಕಲ್ಯರಿಗೆ ಉತ್ತಮ ಗತಿ ಬರುವುದು ಹೆಚ್ಚಲ್ಲ.

ಕಾತ್ಯಾಯಿನಿ–ಅಷ್ಟು ಕೃಪೆ ಮಾಡಿರಿ. ಅದರಿಂದ ಎಲ್ಲರಿಗೂ ಮನಸ್ತೃಪ್ತಿ ಲಭಿಸುತ್ತದೆ.

ಯಾಜ್ಞವಲ್ಕ್ಯ ಮಹರ್ಷಿ–ಆಯಿತು. ನಿಮ್ಮೆಲ್ಲರ ಆಶಯದಂತೆ ಅವನನ್ನು ಅನುಗ್ರಹಿಸುವೆ.

ಅನಂತರ ಯಾಜ್ಞವಲ್ಕ್ಯ ಮಹರ್ಷಿಯು ಶಾಂತಚಿತ್ತನಾಗಿ ಎದ್ದು ನಿಂತು ಕೈಯೆತ್ತಿ ಹರಸುತ್ತ–ಮಹರ್ಷಿಗಳಿಗೆ ತಕ್ಕುದಾದ ಬ್ರಹ್ಮಲೋಕವು ಶಾಕಲ್ಯನಿಗೆ ಲಭಿಸಲಿ.

ಅದುವರೆಗೆ ಅಲ್ಲಲ್ಲಿ ಅಂಡಲೆಯುತ್ತಿದ್ದ ಶಾಕಲ್ಯನ ಆತ್ಮವು ಉಜ್ವಲ ತೇಜದೊಡನೆ ಉಲ್ಕೆಯಂತೆ ಗಗನ ರಂಗವನ್ನು ಏರಿದುದು ಎಲ್ಲರ ಕಣ್ಣಿಗೂ

ಸ್ಪಷ್ಟವಾಗಿ ಕಂಡುಬರುತ್ತದೆ. ಎಲ್ಲರೂ ಅದನ್ನು ಕಣ್ತುಂಬ ನೋಡಿ ಸಂತೃಪ್ತರಾದರು.

ಕುರುಪಾಂಚಾಲ ಬ್ರಾಹ್ಮಣರು–ಯಾಜ್ಞವಲ್ಕ್ಯ ಮಹರ್ಷಿಗಳೇ, ನಿಮ್ಮ ಅನುಗ್ರಹ ಚಿರಸ್ಮರಣೀಯವಾದುದು.

ಆರ್ತಭಾಗ–ಇದೆಲ್ಲಾ ಲೋಕವಾಸನಾ ವಿಚಾರಗಳು. ಇಷ್ಟಕ್ಕಾಗಿ ಮರುಗುವುದು ಬ್ರಹ್ಮಿಷ್ಠನಿಗೆ ತಕ್ಕುದಲ್ಲ. ಆದರೂ, ನಮ್ಮೆಲ್ಲರ ಕೋರಿಕೆಯಂತೆ ಯಾಜ್ಞವಲ್ಕ್ಯ ಮಹರ್ಷಿಯು ಅನುಗ್ರಹಿಸಿದ್ದಾನೆ ಅಷ್ಟೆ. ಅವನು ಅಷ್ಟೊಂದು ತಲೆಬಾಗಿರುವುದು ವಿಶೇಷವೇ.

ಆರುಣಿ–ಅದು ಶಾಕಲ್ಯನ ಪುಣ್ಯವೇ ಇರಬೇಕು. ಇಲ್ಲದಿದ್ದರೆ ಯಾಜ್ಞವಲ್ಕ್ಯ ಮಹರ್ಷಿಯ ಅನುಗ್ರಹ ಅಷ್ಟು ಸುಲಭವಾಗಿ ಲಭಿಸುತ್ತಿರಲಿಲ್ಲ, ಎಂದೆನ್ನುವುದರಲ್ಲಿ ನನಗೆ ಆತ್ಮ ವಿಶ್ವಾಸವಿದೆ.

ಮೈತ್ರೇಯೀ–ಅಷ್ಟಾದರೂ ಆಯಿತಲ್ಲ, ಅದು ಮನಸ್ಸಿಗೆ ಎಷ್ಟೋ ಸಮಾಧಾನ, ದೇವ !

ಆರ್ತಭಾಗ ಸಣ್ಣಗೆ ತಲೆಯನ್ನು ತೂಗುತ್ತಾ–ಹೌದು, ಹೌದು.

ಯಾಜ್ಞವಲ್ಕ್ಯ ಮಹರ್ಷಿ–ಅದೇಕೆ ಅದರಲ್ಲಿ ಅಷ್ಟೊಂದು ಆಸ್ತೆ ? ಈ ಬೇಕು–ಬೇಡಗಳೆಲ್ಲ ಕಾಮವೇ. ಕಾಮಕ್ಕೆ ಶರಣಾದರೆ ಪೂರ್ಣತೆಯು ಅಳಿಯುತ್ತದೆ ಎಂಬುದನ್ನು ಸದಾ ಗಮನದಲ್ಲಿಟ್ಟಿರಬೇಕು.

ಆರ್ತಭಾಗ–ಹೌದು, ಅದನ್ನು ಒಪ್ಪಿಕೊಳ್ಳಲೇಬೇಕು. ಆದರೆ, ಎಲ್ಲವೂ ಒಬ್ಬ ಮಹರ್ಷಿಗಾಗಿ.

ಆರುಣಿ–ನಾನು ಇದರಲ್ಲಿ ಸಮಭಾಗಿ. ನನ್ನ ಅಭಿಪ್ರಾಯವೂ ಸಹ ಅದೇ.

ಆರ್ತಭಾಗ ಯಾಜ್ಞವಲ್ಕ್ಯ ಮಹರ್ಷಿಯನ್ನು ಕುರಿತು ಗೌರವ ಪೂರ್ವಕವಾಗಿ–ಬ್ರಹ್ಮನ್ ! ನಿನಗೆ ಸಾಷ್ಟಾಂಗ ಪ್ರಣಾಮವು. ನಿನ್ನನ್ನು ಆತ್ಮಪೂರ್ವಕವಾಗಿ ಬ್ರಹ್ಮಿಷ್ಠನೆಂದು ಒಪ್ಪಿಕೊಳ್ಳುತ್ತೇವೆ.

ಆರುಣಿಯು ಯಾಜ್ಞವಲ್ಕ್ಯನನ್ನು ಕುರಿತು–ಬ್ರಹ್ಮರ್ಷಿಯೇ, ನಿನಗೆ ಅನಂತ ಪ್ರಣಾಮಗಳು. ನಿನ್ನನ್ನು ಹೃತ್ಪೂರ್ವಕವಾಗಿ ಬ್ರಹ್ಮಿಷ್ಠನೆಂದು ಒಪ್ಪಿಕೊಳ್ಳುತ್ತೇವೆ.

ದೇವರಾತ–ಬ್ರಹ್ಮನ್, ನಿನಗೆ ಮತ್ತೆ ಮತ್ತೆ ನಮಸ್ಕಾರವು. ನಿನ್ನನ್ನು ಆದರಪೂರ್ವಕವಾಗಿ ಬ್ರಹ್ಮರ್ಷಿಯೆಂದು ಒಪ್ಪಿಕೊಳ್ಳುತ್ತೇವೆ.

ಯಾಜ್ಞವಲ್ಕ್ಯ ಮಹರ್ಷಿ–ನಿಮಗೆ ಮಂಗಳ ಉಂಟಾಗಲಿ.

ಅದೇ ಸಮಯಕ್ಕೆ ಕುರುಪಾಂಚಾಲ ಬ್ರಾಹ್ಮಣರೂ ಮಹರ್ಷಿ ವೃಂದದವರೂ ಒಕ್ಕೊರಲಿಂದ ಯಾಜ್ಞವಲ್ಕ್ಯ ಮಹರ್ಷಿಯನ್ನು ಬ್ರಹಿಷ್ಠ ನೆಂದು ತೀರ್ಮಾನಿಸಿ, ಎಲ್ಲರೂ ಕೈಯೆತ್ತಿ ಹರಸುತ್ತ–ಎಲೈ ಬ್ರಹ್ಮನ್, ನಿನ್ನನ್ನು ನಾವೆಲ್ಲರೂ ಬ್ರಹ್ಮಿಷ್ಠನೆಂದು ತೀರ್ಮಾನಿಸಿದ್ದೇವೆ. ಬ್ರಹ್ಮಿಷ್ಠನೇ ನಿನಗೆ ಮಂಗಳವಾಗಲಿ, ಬ್ರಹ್ಮಿಷ್ಠನೇ ನಿನಗೆ ಜಯವಾಗಲಿ ?

ಆಗ ಯಾಜ್ಞವಲ್ಕ್ಯ ಮಹರ್ಷಿಯು ಅತ್ಯಂತ ವಿನಮ್ರತೆಯಿಂದ ಸಭೆ ಯನ್ನು ವಂದಿಸುತ್ತಾನೆ.

ಜನಕ ಚಕ್ರವರ್ತಿಯು ಪರಮಾನಂದಭರಿತನಾಗಿ ಹೂಹಾರವನ್ನು ತಂದು ಮಹರ್ಷಿಯ ಕೊರಳಿಗೆ ಹಾಕಿ ಗೌರವಪೂರ್ವಕವಾಗಿ ಅಭಿನಂದಿಸಿದ– ಶ್ರೇಯೋಸ್ತು ಬ್ರಹ್ಮನ್ !

ಆ ಕೂಡಲೇ ತುಂಬಿದ ಸಭೆಯಲ್ಲಿ ಅಭೂತಪೂರ್ವಕವಾಗಿ ಹರ್ಷೋ ದ್ಗಾರ ಕೇಳಿಬರುವುದು.

ಅನಂತರ ಸಭೆಯ ನಾಲ್ದಿಸೆಗಳಿಂದಲೂ ಪುಷ್ಪವೃಷ್ಟಿಯಾಗಿ ಯಾಜ ವಲ್ಕ್ಯ ಮಹರ್ಷಿಯು ಪುಷ್ಪರಾಶಿಯಲ್ಲಿ ಮುಳುಗಿಹೋಗುತ್ತಾನೆ.

ಉಚ್ಛ್ವಾಸ ೧೫

೦

ಪ್ರಾಚೀ ಸೀಮಾಕ್ಷೇತ್ರದಲ್ಲಿ ದಧಿಕ್ಷೀರಗಳ ಸಲಿಲವೇ ಹರಿಯುತ್ತಿರುವಂತೆ ಅನುರಂಜಿತವಾದ ಅಮೋಘವೂ ಅವರ್ಣನೀಯವೂ ಆದ ಬೃಹದ್ಬೆಳ್ಮೋಡಗಳ ಮಹಾಪೂರ.

ಅದಕ್ಕೆ ಎದುರಾಗಿ ಕರಿಯ ಚುಕ್ಕಿಗಳಂತೆ ಹಾರಾಡುತ್ತಿರುವ ಕಾಮಳ್ಳಿಗಳ ಸಣ್ಣ ಜೋಡಿಯ ಸುಂದರ ಚಿತ್ರ. ಒಂದೊಂದಕ್ಕೂ ಅದೆಲ್ಲಿಯ ಸಾದೃಶ್ಯವೊ ?

ಕಾತ್ಯಾಯಿನಿಯು ಕೈಸಾಲೆಯನ್ನು ದಾಟಿ ಪ್ರಾಂಗಣಕ್ಕೆ ಪದಾರ್ಪಣೆ ಮಾಡಿದೊಡನೆಯೇ ಅವಳ ಕುತೂಹಲಭರಿತ ದೃಷ್ಟಿ ಮೊದಲು ಹರಿದುದು ವನವೀಥಿಯ ಕಡೆಗೆ. ಹಾಗೆ ಅವಳು ಹೊತ್ತು ಮೂಡಿದಾಗಿನಿಂದಲೂ ಅದೆಷ್ಟು ಬಾರಿ ಹೊರ ಬಂದು ಹಾದಿಯನ್ನು ನಿಟ್ಟಿಸಿ ನೋಡಿ ನಿರಾಶಳಾಗಿದ್ದಳೋ ಅದು ಅವಳಿಗೇ ಗೊತ್ತು. ಆಗಲೂ, ಮಹರ್ಷಿಯ ದರ್ಶನಲಾಭವಾಗದುದರಿಂದ ಅತ್ಯಂತ ನಿರಾಶೆಯಿಂದ ಹಿಮ್ಮರಳಿದ ದೃಷ್ಟಿ ಸುಮ್ಮನೆ ಸಹಜವಾಗಿ ಸೀಮಾಕ್ಷೇತ್ರದ ಕಾಮಳ್ಳಿಗಳ ಕಡೆ ಹರಿಯಿತು. ಅವು ಇನ್ನೇನು ಸ್ವರ್ಗವನ್ನು ಮುಟ್ಟುವುವೋ ಎಂಬಷ್ಟು ದೂರ ಸಾಗಿ ಹೋಗಿ

ದ್ದುವು ಸೂಕ್ಷ್ಮದೃಷ್ಟಿಗೂ ನಿಲುಕದಷ್ಟು ಸಣ್ಣ ಕರಿಯ ಚುಕ್ಕಿಚುಕ್ಕಿಯಾಗಿ.

ಕಾತ್ಯಾಯನಿ—ಅಹಃ ಎಷ್ಟು ಸರಾಗ !

ಹೃದಯಾಂತರಿತ ಉದ್ಗಾರ ತನಗರಿಯದಂತೆಯೇ ತುಟಿಗಳಲ್ಲಿ ಹೊಮ್ಮಿತು. ನೆಟ್ಟ ದೃಷ್ಟಿಯನ್ನು ಕೀಳದೆ ನೋಡುತಿದ್ದಂತೆಯೇ ಎದುರಾದ ವಟು ಪ್ರಸನ್ನ ಮುಖಮುದ್ರೆಯಿಂದ—ತಾಯೇ, ಈದಿನ ಮಹರ್ಷಿಗಳು ತಡವಾಗಿ ಹಿಮ್ಮರಳುತ್ತಾರೆಂಬುದು ನನಗೆ ಮೊದಲೇ ತಿಳಿದಿತ್ತು.

ಕಾತ್ಯಾಯನಿಯು ಆಶ್ಚರ್ಯವಿಸ್ತೃತ ನಯನಗಳಿಂದ ನಿಟ್ಟಿಸಿ—ನಿನಗೆ ಹೇಗೆ ಗೊತ್ತು ಆಯುಷ್ಮನ್ ?

ವಟು—ಈಗೀಗ ಅವರ ದಿನಚರಿ ಬಹಳ ಗಂಭೀರ. ಗಂಗಾತಟಿಯಲ್ಲಿ ನಿಶ್ಚಿಂತೆಯಿಂದ ತಪಶ್ಚರ್ಯೆಯಲ್ಲಿ ಕುಳಿತು ಹೊತ್ತುಗೊತ್ತುಗಳನ್ನು ಮರೆತುಬಿಟ್ಟಿದ್ದರೆ ಏನೇನೂ ಆಶ್ಚರ್ಯವಿಲ್ಲ.

ಕಾತ್ಯಾಯಿನಿಯು ಆ ಮಾತಿಗೆ ಪ್ರತಿಯಾಗಿ ಏನನ್ನೂ ಹೇಳದೇ ದೂರ ಸೀಮಾಕ್ಷೇತ್ರದಲ್ಲಿ ತೇಲುತಿದ್ದ ಕಾಮುಳ್ಳಿಗಳ ಕಡೆ ನೋಡಿದಳು. ಅವು ತೇಲುತ್ತ ಪೂರ್ವಾನಿಲನ ಬೆನ್ನೇರಿ ಸ್ವರ್ಗವನ್ನು ಆಗಲೇ ಅಡರಿದುವೋ ಎಂಬಂತೆ ಅಲ್ಲಿ ಕಾಣಿಸುತ್ತಲೇ ಇಲ್ಲ. ಆಗ ಅವಳಿಗೆ ಏನೋ ಹೇಳಬೇಕೆನಿಸಿದರೂ ಮನಸ್ಸು ಮುಂದಾಗಲಿಲ್ಲ. ಯೋಚನೆಯಾಳದಲ್ಲಿ ಮುಳುಗಿದಂತೆ ಸುಮ್ಮನಾದಳು. ಗಗನ ಸೀಮಾಕ್ಷೇತ್ರದಲ್ಲಿ ಚಲಿಸುವ ದೃಷ್ಟಿ ಸೀಮಂತ ರೇಖೆಯ ಮೇಲಿನ ಸಿಂಧೂರದ ಅರುಣಿಮೆಯ ಗರುತ್ವದಿಂದ ಪೀತವಾಗಿತ್ತು.

ವಟು—ಇದು ನಿಮಗೂ ತಿಳಿದಿರಬೇಕಷ್ಟೆ ?

ಕಾತ್ಯಾಯಿನಿಯ ಸುಕ್ಕುಗಟ್ಟಿದ ಕಪೋಲ ಪ್ರಾಂತಗಳು ಸ್ವಲ್ಪ ಮಾತ್ರ ವಿಕಸಿತವಾದುವು. ಯೋಚನಾಭಾರದಲ್ಲಿ ಪಿಚಕಿಳಿದಂತೆ ಕಂಡು ಬಂದರೂ ಏನೋ ಒಂದು ರೀತಿಯ ವಿಜಾತೀಯವಾದ ದನಿಯಲ್ಲಿ ನುಡಿ-

ದಳು–ಹೌದು, ವತ್ಸಾ! ಉಪನಿಷತ್ಕಾರರು ಎಂದರೆ ಸಾಮಾನ್ಯವೆ? ವಿಶ್ವಾತ್ಮಕ ವಿಚಾರವನ್ನು ಶಾಂತಿಯಿಂದ ಸಂಸ್ಕರಿಸಬೇಕು: ಪ್ರಜ್ಞಾನ ಘನದಿಂದ ವಿಶ್ಲೇಷಿಸಬೇಕು.

ವಟು–ಈಗ ಅವರು ಮಾಡುತ್ತಿರುವುದೇ ಅದು. ಅದಕ್ಕೆಂದೇ ಅವರು ಹೆಚ್ಚಾಗಿ ಏಕಾಂತವಾಸ ಬಯಸುತ್ತಾರೆ.

ಕಾತ್ಯಾಯಿನಿ–ಹೊತ್ತು ಮೇಲೇರುತ್ತಿರುವುದನ್ನು ನೋಡಿದರೆ ಅವರು ಇಲ್ಲಿಯೇ ತಪಸ್ಸಿಗೆ ಕುಳಿತುಬಿಟ್ಟರೊ ಎನಿಸುತ್ತೆ ನನಗೆ.

ವಟು–ಹಾಗಾದರೆ ಇನ್ನು ಒಳ್ಳೆಯದೇ ಆಯಿತಲ್ಲ; ಹಿಮಾಲಯಕ್ಕೆ ಹೋಗುವುದು ತಪ್ಪುತ್ತದೆ. ನಾವು ದಿನವೂ ಹಾಲು ಹಣ್ಣುಗಳನ್ನು ಒಯ್ದು ಕೊಡಬಹುದು!

ಕಾತ್ಯಾಯಿನಿಯು ಭಾವನಾಮಯಿಯಾಗಿ ನುಡಿದಳು–ವತ್ಸ! ನಿಜವಾಗಿಯು ಅದೊಂದು ರೀತಿಯಿಂದ ಒಳ್ಳೆಯದೇ. ನಮಗದರಿಂದ ಅನು ಕೂಲವೂ ಹೌದು. ಆದರೆ....

ವಟು–ಅಂದರೆ?

ಕಾತ್ಯಾಯಿನಿ–ಮಹರ್ಷಿಗಳ ಮನಸ್ಸು ಇರುವುದು ಹಿಮಾಲಯದಲ್ಲಿ. ಅವರು ಯಾರ ಮಾತಿಗೂ ಮಣಿಯುವವರಲ್ಲ. ಅವರ ಮನಸ್ಸು ವಜ್ರೋಪಮವಾದುದು.

ವಟು–ಅಂದರೆ ಹಿಮಾಲಯಕ್ಕೆ ಹೊರಟೇ ಹೊರಡುತ್ತಾರೆಂಬುದು ಖಚಿತವೇ?

ಕಾತ್ಯಾಯಿನಿ–ಅದಂತೂ ಖಚಿತ....

ಮಾತು ಮುಗಿಯುವದರೊಳಗಾಗಿ ಎದೆಯಾಳದಿಂದ ನಿಟ್ಟುಸಿರೊಂದು ಹೊರಬಿತ್ತು ಅವಳಿಗರಿಯದಂತೆಯೇ.

ವಟು ಹಾದಿಯತ್ತ ನೋಟವನ್ನು ಹರಿಸಿ–ಅದೋ, ಮಹರ್ಷಿಗಳು ಬರುತ್ತಿದ್ದಾರೆ.

ಆ ಕ್ಷಣ ಕುತೂಹಲಭರಿತ ದೃಷ್ಟಿಯನ್ನು ಅತ್ತ ಹೊರಳಿಸಿದಳು ಕಾತ್ಯಾಯಿನಿ. ವನಧಾತ್ರಿಯ ಪಚ್ಚಪ್ರದೇಶದಲ್ಲಿ ಹರಿದ ಚರಣರೇಖಾಪಥದ ದೂರ ತಿರುವಿನಲ್ಲಿ, ಪೀತಕೌಶೇಯ ವಸ್ತ್ರಭೂಷಿತನಾದ ಜಟಾಜೂಟಧಾರೀ ಮಹರ್ಷಿಯು ಚಿತ್ರ ಪರ್ಣದೇಗುಲದಲ್ಲಿ ಹೊಂಗಳಸವನ್ನು ಹೂಡಿದಂತೆ ಕಣ್‌ಗೊಳಿಸಿತು ಹೃದಯ ಪುಷ್ಪ ಒಮ್ಮೆಗೇ ದಳದಳವಾಗಿ ಅರಳುವಂತೆ. ಒಂದೆರಡು ಕ್ಷಣ ಹಾಗೇ ನಿಂತು ನೋಡಿ ನುಡಿದಳು ಕಾತ್ಯಾಯಿನಿ–ವತ್ಸಾ, ನಿನ್ನ ದೃಷ್ಟಿ ಬಲು ಸೂಕ್ಷ್ಮ. ಅಷ್ಟು ದೂರದಲ್ಲಿರುವಾಗಲೇ ಕಂಡುಕೊಂಡೆ.

ವಟು–ಅವರ ಆಗಮನ ಎಷ್ಟು ದೂರದಲ್ಲಿದ್ದರೂ ತಿಳಿದೇ ತಿಳಿಯುತ್ತೆ.

ಕಾತ್ಯಾಯಿನಿ ಆ ಮಾತಿಗೆ ಸಮ್ಮತಿ ಸೂಚಿಸಿದಂತೆ ಮುಗುಳುನಕ್ಕು ಒಳಹೋಗಿ ಗಂಗೋದಕದ ಬಿಂದಿಗೆಯನ್ನು ಕೈಕೊಂಡು ಹೊರಬಂದಳು ಪತಿಯ ಪಾದ ಪ್ರಕ್ಷಾಲನೆಯ ಸಲುವಾಗಿ. ಆ ಮುಹೂರ್ತದಲ್ಲಿ ಹೃದಯ ಹಗುರಾದರೂ ಮನಃಪ್ರಾಣಗಳಲ್ಲಿ ಏನೋ ಒಂದು ಬಗೆಯ ತುಡಿತ. ಬಹುಶಃ ಇನ್ನು ಕೇವಲ ಅತ್ಯಲ್ಪಕಾಲದಲ್ಲಿಯೇ ಒದಗಬಹುದಾದ ಅಗಲಿಕೆಯ ನೋವು–ಸಂಕಟಗಳು ಮನದ ಸಂಪುಟದಲ್ಲಿ ತುಂಬಿದುವೋ ಅಥವಾ ಅಕ್ಷಿಪಟಲದ ಮೇಲೆ ದಪ್ಪ ದಪ್ಪ ಅಕ್ಷರಗಳಲ್ಲಿ ಭವಿಷ್ಯತ್ತಿನ ದಾರುಣ ಚಿತ್ರವನ್ನು ಚಿತ್ರಿಸಿತೋ. ಅಂತೂ, ಆವ ಕಾರಣವೋ ಶಾಂತ ಮುಗ್ಧಳಂತೆ ಹಾಗೇ ನಿಂತುಬಿಟ್ಟಿದ್ದಾಳೆ. ಒಮ್ಮೊಮ್ಮೆ ಮಹರ್ಷಿಯ ಭವ್ಯ ಶರೀರ ಪಚ್ಚ ವರ್ಣಪ್ರದೇಶದ ರೆಂಬೆಕೊಂಬೆಗಳ ಅಡೆತಡೆಯಿಂದ ದೃಷ್ಟಿಗೆ ಮರೆಯಾದರೂ ಆ ವಿಶಿಷ್ಟಪೂರ್ಣವಾದ ಹೆಜ್ಜೆಗಳು ಮುಂದೈತರುವ ಸದ್ದು ಕರ್ಣಪಟಲವನ್ನು ಮುಟ್ಟುತ್ತಲೇ ಇರುತ್ತದೆ. ಆ ಹೆಜ್ಜೆಹೆಜ್ಜೆಗೂ ಹಾದಿಯನ್ನು ಕಳೆದು ಮಹರ್ಷಿ ಸಮೀಪಗತನಾಗುತ್ತಲೂ ತುಹಿನ ಬಿಂದುಗಳಿಂದ ಕೂಡಿದ

ಪದ್ಮಪಲಾಶದಂತೆ ತೊಯ್ದು ಮೈ ರವಿಕಿರಣಗಳ ಪ್ರತಿಫಲನದಿಂದ ಮಿನುಗಿತು ಸಣ್ಣ ಸಣ್ಣ ಕಿಡಿಗಳಿಂದಲಂಕೃತವಾದಂತೆ. ತಲೆ, ಮುಖ, ಗಡ್ಡಗಳಲ್ಲಿ ನೆಲೆನಿಂತ ಹನಿಗಳಂತೂ ಅಲ್ಲಲ್ಲಿ ಹೊಂದಿಸಿಟ್ಟಂತೆಯೇ ಕಾಣಿಸುತ್ತಿವೆ. ಇಬ್ಬನಿ ಮುತ್ತಿದ ಗಿಡದ ಸೊಬಗನ್ನೂ ಅಣಕಿಸುವಂತಹ ಆ ಮಹೋನ್ನತ ದೃಶ್ಯವನ್ನು ಕಣ್ತುಂಬ ನೋಡುವುದೇ ಮಹದಾನಂದ ಭಕ್ತಿ-ಪ್ರೇಮಗಳ ಸಮುಜ್ವಲ ದೃಷ್ಟಿಗೆ.

ಮಹರ್ಷಿ ಅಂಗಳದಂಚಿನ ಹಾಸುಗಲ್ಲಿನ ಮೇಲೆ ನಿಂತು ಬೊಗಸೆಯೊಡ್ಡಿದ. ಮಡದಿ ಕುಂಭೋದಕವನ್ನು ಅಮೃತ ಹಸ್ತಗಳಿಗೆ ಸ್ವಲ್ಪ ಸ್ವಲ್ಪವಾಗಿ ಸುರಿದಳು ಹೃತ್‌ಕಲಸವನ್ನೇ ಬರಿದು ಮಾಡುವಂತೆ. ಇನ್ನಷ್ಟು ಹೊತ್ತಿನೊಳಗಾಗಿ ಯಾಜ್ಞವಲ್ಕ್ಯ ಮಹರ್ಷಿಯು ಕೈ ಕಾಲು ಮುಖ ತೊಳೆದುಕೊಂಡು ಕೈಸಾಲೆಗೆ ಪದಾರ್ಪಣೆಮಾಡಿದ. ಭಾವೋಜ್ವಲತೆಯಿಂದ ಬೆಳಗುತಿದ್ದ ಕಣ್ಣುಗಳು ಚಿತ್ತವನ್ನು ಕರುಣರಸದಿಂದ ಪ್ಲಾವಿತಗೊಳಿಸಿ ಎದೆಯಲ್ಲಿ ಸಹಾನುಭೂತಿಯ ಸುಯ್ಲು ಹರಿದಾಡುತಿದ್ದರೂ ಬಾಯಿಬಿಟ್ಟು ಏನೂ ಹೇಳಲಿಲ್ಲ ಮಹರ್ಷಿ. ಬದಿಯಲ್ಲಿ ಹಾಸಿದ ತೃಣಾಸ್ತರದ ಮೇಲೆ ಕೃಷ್ಣಾಜಿನವಿತ್ತು. ಅಲ್ಲೊಂದು ಮಣೆ, ಅದರಮೇಲೆ ಕೆಲವು ಗ್ರಂಥಗಳು, ಜಪಸರ, ಕಮಂಡಲು, ಮುಂತಾದ ನಿತ್ಯೋಪಯೋಗಿ ಸಾಮಗ್ರಿಗಳು. ಮಹರ್ಷಿ ಕೃಷ್ಣಾಜಿನದ ಮೇಲೆ ಮಂಡಿಸುವಷ್ಟರಲ್ಲಿ ಕಾತ್ಯಾಯಿನಿಯು ಕುಂಭವನ್ನು ಒಳಗಿಟ್ಟು ಬಂದು ಎದುರಿಗೆ ಕುಳಿತುಕೊಂಡಳು. ಆಗಲೂ ಮಹರ್ಷಿ ಏನನ್ನೂ ಹೇಳದೇ ಘನಗಾಂಭೀರ್ಯದಿಂದ ಗ್ರಂಥಾವಲೋಕನದಲ್ಲಿ ತಲ್ಲೀನನಾದ. ಹೃದಯ ಕುಂಡದಲ್ಲಿ ತುಂಬಿ ಹರಿದ ರಸಾವಿಷ್ಟತೆ ಮುಖಬಿಂಬದಲ್ಲಿ ಪ್ರಶಾಂತ ಭಾವದಿಂದ ಹೊಮ್ಮಿತು ಅರ್ಥಾತ್ ಸಂಧ್ಯಾ ಶಾಂತಿಗೆ ಸಮನಿಸುವಂತೆ.

ಮಹರ್ಷಿಯ ಗ್ರಂಥಾವಲೋಕನ ಬಹಳ ಹೊತ್ತು ಸಾಗಿತ್ತು. ಅನಂತರ ಲೇಖನ ಕೃಷಿಯಲ್ಲಿ ಮನವಿಟ್ಟ. ಉಲ್ಲೇಖನ ಶ್ರದ್ಧೆ ಅದೆಷ್ಟು ಹೊತ್ತು ಸಾಗಿತೋ, ಅದು ಮುಗಿದಾಗ ಹೋಮ ಕುಂಡದ ಅಗ್ನಿ ಭಸ್ಮಾವೃತ

ವಾಗಿತ್ತು. ನಿತ್ಯೋಚಿತವಾದ ವ್ಯವಹಾರದಲ್ಲೂ ತೀವ್ರ ಅಸಡ್ಡೆ ಭವಿಷ್ಯತ್ತಿನ ದಿವ್ಯ ಸಂಕಲ್ಪಕ್ಕೆ ಅಡಿಗಲ್ಲನ್ನಿಟ್ಟ ಆ ಸಂದರ್ಭದಲ್ಲಿ. ಸಭ್ಯ ಬಳಿಯಲ್ಲಿ ಕುಳಿತು ತನ್ನ ನಿರೀಕ್ಷೆಯಲ್ಲಿದ್ದ ಸತಿಯ ನೆನಪೂ ಸಹ ಗಮನಕ್ಕೆ ಬರಲಿಲ್ಲ ಬಹುಶಃ. ಅವನ ಏಕನಿಷ್ಠೆಯನ್ನು ಗಮನಿಸಿದ ಸತಿಯೂ ಸಹ ಮಿಸುಕಾಡಲಿಲ್ಲ. ಮನಸೇಚ್ಛೆ ಅವಾಕ್ಕಾಗಿ ಅವರ್ಣನೀಯವಾದ ಭಾವನಾ ಪ್ರಪಂಚದಲ್ಲಿ ಮುಳುಗಿ ಹೋದಳು; ಅವಳ ಶೀರ್ಣಿತವದನದ ಮೇಲೆ ಭಾವನಾಲಹರಿಗಳು ಅಲೆಯಲೆಯಾಗಿ ತೇಲಿಬರುವಾಗ ಆಕೆಯಲ್ಲಿ ಕಂಡು ಬರುವ ಮಂತ್ರಮುಗ್ಧತೆಯ ಶೋಭೆಯೋ ಒಂದು ಸೋಪಾನ ಭಕ್ತಿ ಭಾವಕ್ಕೆ.

ಗ್ರಂಥರಚನೆಯ ಕಾರ್ಯವನ್ನು ಮುಗಿಸಿ ಗ್ರಂಥವನ್ನು ಮಣೆಯ ಮೇಲಿಟ್ಟ ನಂತರ ಆನಂದ ಪ್ರಸನ್ನ ದೃಷ್ಟಿ ಮಡದಿಯ ಕಡೆ ಹರಿಯಿತು.... ಬಾಳಿನ ಸಂಜೆಯು ಪಾವಟಿಕೆಯನ್ನು ಏರಿಯಾಗಿದೆ. ಬೆಳ್ಳಿಯಂತೆ ಮಿನ್ನುಗುವ ಅಲಕರಾಶಿ. ತಲೆಯ ಮೇಲೆ ಹೊದ್ದ ನಾರುಮುಡಿಯ ಉತ್ತರೀಯ. ಕೊರಳಲ್ಲಿ ರುದ್ರಾಕ್ಷ ಮಾಲೆ. ಹರಿದ್ರಾಕುಂಕುಮ ಶೋಭಿತ ಮುಖಶ್ರೀ. ಚರ್ಮ ಸುಕ್ಕುಗಟ್ಟಿದ್ದರೂ ದೃಢವಾದ ಶರೀರ ಸಂಪತ್ತು. ಯಾವುದೇ ವಿಚಾರ ತೆಗೆದುಕೊಂಡರೂ ಆಕೆಯಲ್ಲಿ ಕೊರತೆಯೆಂಬುದೇ ಕಂಡು ಬರುತ್ತಿಲ್ಲ. ಒಂದೆರಡು ಕ್ಷಣಗಳು ನಿರಾತಂಕವಾಗಿ ಉರುಳಿದುವು. ಅನಂತರ ಮಹರ್ಷಿ ಸುಪ್ರೀತಭಾವದಿಂದ ಮಡದಿಯನ್ನು ಕುರಿತು ಇಂತೆಂದ–ಶುಭೆ! ನನ್ನ ಗ್ರಂಥರಚನೆ ಮುಗಿಯಿತು.

ಆ ಮಾತಿನ ಪೀಠಿಕೆ ಅಂತಃಸ್ಥಲವನ್ನು ನೇರವಾಗಿ ಮುಟ್ಟಿತು. ಮಡದಿ ತನ್ನನ್ನು ತಾನೇ ಸಂಬಾಳಿಸಿಕೊಳ್ಳುತ್ತ ಎಲ್ಲಾ ಮಡದಿಯರೂ ಸಾಮಾನ್ಯವಾಗಿ ಕೇಳುವಂತಹ ಪ್ರಶ್ನೆಯನ್ನೇ ಕೇಳಿದಳು–ಭಗವನ್! ನದೀ ತೀರದಲ್ಲಿ ಇಂದೇಕೆ ಬಹಳ ಹೊತ್ತು ತೆಗೆದುಕೊಂಡಿರಿ ?

ಯಾಜ್ಞವಲ್ಕ್ಯ ಮಹರ್ಷಿಯು ಮನಸನ್ನು ಪ್ರಾತಃಸಮಯದೆಡೆಗೆ

ನೆಟ್ಟು ವಿಷಯವನ್ನು ಅವಲೋಕಿಸಿದ, ಬಹಳ ಹಿಂದಿನ ಕಾಲದ ವಿಚಾರವನ್ನು ಯೋಚಿಸಿ ನೆನಪಿಸಿಕೊಳ್ಳುವಂತೆ.

ಮಡದಿಯ ಧ್ವನಿ ಮತ್ತೆ ಮೊಳಗಿತು-ಆಗಿನಿಂದಲೂ ನಿಮಗಾಗಿ ಕಾದಿದ್ದಾಯ್ತು. ಒಮ್ಮೆ ವಟುವನ್ನು ನದೀತೀರಕ್ಕೆ ಕಳುಹಿಸುವ ಯೋಚನೆಯನ್ನೂ ಸಹ ಮಾಡಿದ್ದೆ.

ಮಹರ್ಷಿ ಮುಗುಳುನಕ್ಕು ನುಡಿದ-ಇದೇನು ಹೊಸದೇ ?

ಕಾತ್ಯಾಯಿನಿ-ಹೊಸದಲ್ಲ. ಆದರೂ....

ಯಾಜ್ಞವಲ್ಕ್ಯ ಮಹರ್ಷಿ-ಯಾವುದೇ ವಿಚಾರದಲ್ಲೂ ನಿರುದ್ವಿಗ್ನತೆಯಿರಲಿ.

ಕಾತ್ಯಾಯಿನಿ-ಅದು ಸರಿಯೆ, ಎಂದರೂ ಹೆಂಗರುಳು ಎಂದೆಂದೂ ಹೆಂಗರಳೇ, ದೇವರೂ !

ಯಾಜ್ಞವಲ್ಕ್ಯ ಮಹರ್ಷಿ-ಹಾಗೆನ್ನುವುದು ಸುಲಭ. ಅಂತಲೇ ಈ ಬಾಣ ಪ್ರಯೋಗ ?

ಕಾತ್ಯಾಯಿನಿಯು ನಕ್ಕು ಬಿಟ್ಟಳು.

ಆ ರಸನಿಮಿಷ ಕಳೆದ ಮೇಲೆ ಯಾಜ್ಞವಲ್ಕ್ಯ ಮಹರ್ಷಿ ನುಡಿದ-ಸುಖ ದುಃಖಗಳನ್ನು ಸಮದೃಷ್ಟಿಯಿಂದ ಕಾಣುವುದರಲ್ಲೇ ಆತ್ಮಶಕ್ತಿ ಬೆಳೆಯಬೇಕಾದರೆ.

ಕಾತ್ಯಾಯಿನಿ-ಕಷ್ಟಸುಖಗಳಿಗೂ ಆತ್ಮೀಯತೆಗೂ ವ್ಯತ್ಯಾಸವಿಲ್ಲವೇ?

ಯಾಜ್ಞವಲ್ಕ್ಯ ಮಹರ್ಷಿಯು ಆ ಪ್ರಶ್ನೆಗೆ ಉತ್ತರಿಸಲು ಅಷ್ಟೇನೂ ಉತ್ಸುಕನಾಗಲಿಲ್ಲ. ಒಂದೆರಡು ಘಳಿಗೆ ತೀವ್ರ ಯೋಚನಾಕ್ರಾಂತನಾಗಿದ್ದು ಅನಂತರ-ಇಂದು ಗಂಗಾನದಿಯ ಮಧ್ಯೆ ಮಾಡಿದ ತಪಶ್ಚರ್ಯೆ ಬಹಳ ಅಮೋಘವಾಗಿತ್ತು. ಹೊತ್ತಿನ ಪರಿವೆಯೇ ತಿಳಿಯಲಿಲ್ಲ.

ಕಾತ್ಯಾಯಿನಿಯು ಸ್ವಲ್ಪಹೊತ್ತು ವಿಚಾರಶ್ರದ್ಧೆಯಲ್ಲಿ ಮನವಿಟ್ಟು

ಅನಂತರ ನಿಧಾನವಾಗಿ ನುಡಿದಳು–ನಾನೂ ಹಾಗೇ ಊಹಿಸಿದ್ದೆ; ಅದು ಆದುದೂ ಹಾಗೆಯೇ ಹಾಗಾದರೆ.

ಯಾಜ್ಞವಲ್ಕ್ಯ ಮಹರ್ಷಿಯು ನಸುನಗುತ್ತ–ಯಾವುದನ್ನು ನಾವು ಭಾವಿಸುತ್ತೇವೋ ಅದು ಅಂತಃಪ್ರಜ್ಞೆಯ ಮೇಲೆ ಪ್ರತಿಬಿಂಬಿಸುವುದು ಸಹಜ.

ಆ ಮುಹೂರ್ತದಲ್ಲಿ ಮನಸ್ಸನ್ನು ಮತ್ತೆಲ್ಲಿ ನೆಟ್ಟಿದ್ದಳೊ ಕಾತ್ಯಾಯಿನಿ, ಅನ್ಯಮನಸ್ಕತೆಯಿಂದ ವಿಷಯಗ್ರಹಣ ಮಾಡಲಿಲ್ಲ. ಒಂದೆರಡು ಘಳಿಗೆಯಲ್ಲಿ ತಾನು ನಿಜಸ್ಥಿತಿಯನ್ನರಿತುಕೊಂಡು–ಆಗ ನೀವು ಏನೆಂದಿರಿ ?

ಎಂದು ಮತ್ತೆ ಕೇಳಿದಳು ವಿಷಯವನ್ನು ಮನದಲ್ಲಿಯೇ ಯೋಚಿಸುತ್ತ.

ಯಾಜ್ಞವಲ್ಕ್ಯ ಮಹರ್ಷಿಯು ಅಶೋಕವೃಕ್ಷಗಳ ಆಚೆ ಪೀತವರ್ಣದ ಪುಷ್ಪಗಳಿಂದ ತುಂಬಿ ಎಲೆಗಳುದುರಿ ಹಸುರಿನ ಹೆಸರೇ ಇಲ್ಲದೆ ಕೆಂಗಲಿಸಿ ಮೆರೆಯುತಿದ್ದ ಶಾಲ್ಮಲೀ ವೃಕ್ಷದ ಕಡೆಗೆ ಕಣ್ಣಿಟ್ಟು ನೋಡುತ್ತ ಅಂದ–ನೀನಾಗ ತೀವ್ರ ಅನ್ಯಮನಸ್ಕಳಾಗಿದ್ದೆಯಲ್ಲವೇ ? ಇರಲಿ, ಆ ಶಾಲ್ಮಲೀ ವೃಕ್ಷವನ್ನು ನೋಡು ? ಅದರಿಂದ ನಿನಗೇನೆನಿಸುತ್ತೆ ?

ಕಾತ್ಯಾಯಿನಿ–ಅದರಲ್ಲಿ ಹಸುರುಗುವ ಎಲೆಗಳೊಂದೂ ಇಲ್ಲದೆ ಬರೀ ಹೂಗಳಿಂದ ತುಂಬಿ ಪರಿಶುಭ್ರವಾಗಿ ಪೀತರಾಗದಿಂದ ತುಂಬಿ ಮನಃಪ್ರಾಣಗಳನ್ನು ಆಕರ್ಷಿಸುವಂತಿದೆ. ಒಟ್ಟಿನಲ್ಲಿ ಬಲು ಮನಮೋಹಕ.

ಯಾಜ್ಞ ಮಹರ್ಷಿ–ಇಲ್ಲಿ ಕೇಳು ! ಇದು ಹೀಗೆಯೇ. ಇದಕ್ಕೊಂದು ಉದಾಹರಣೆಯನ್ನು ಹೇಳಬಹುದು. ಈಗ ಶ್ವೇತಾಶ್ವತರ ಐದನೆಯ ಮಂತ್ರವನ್ನು ನೀನು ಬಲ್ಲೆಯಷ್ಟೆ.

ಯಾ ತೇ ರುದ್ರ ಶಿವಾ ತನೂರಘೋಽರಾಽಪಾಪಕಾಶಿನೀ |
ತಯಾ ನಸ್ತನುವಾ ಶಂತಮಯಾ ಗಿರಿಶಂತಾಭಿಚಾಕಶೀಹಿ ||

ಯಾಜ್ಞವಲ್ಕ್ಯ ಮಹರ್ಷಿ–ಅದರ ಭಾವಾರ್ಥ ಹೀಗೆ. ಅವನೇ ರುದ್ರ,

ಅವನೇ ಗಿರಿಶಂತ, ಅವನೇ ಗಿರೀಶ. ಅಂದರೆ ಅವನು ಎಲ್ಲೋ ಕೈಲಾಸ ಪರ್ವತದಲ್ಲಿ ವಿಹರಿಸುತ್ತಾನೆ ಎಂದು ಭಾವಿಸಬಾರದು. ಅವನ ನಿತ್ಯ ವಿಹಾರ ನಮ್ಮ ಮನೋಕೈಲಾಸದ ಮೇಲೆಯೇ. ಈ ವಿಷಯ ಜಗತ್ತಿನ ಜಂಜಡ ದಿಂದ ಬಹು ಎತ್ತರದಲ್ಲಿ ಆತನ ನಿಲುಗಡೆ. ಆ ಶಾಲ್ಮಲೀ ಪುಷ್ಪಗಳು ಹೇಗೋ ಹಾಗೆ, ಯಾವ ಪಾಪದ ಸೋಂಕೂ ಇಲ್ಲವಾದ ಅವನು ಭಸ್ಮಧಾರಿಯಾಗಿ, ವ್ಯಾಘ್ರಾಜಿನಧಾರಿಯಾಗಿ, ಅತೀ ಭಯಂಕರನಾಗಿ, ಕಾಣಿಸುತ್ತಾನೆಂದು ತಿಳಿಯಬಾರದು. ಅವನು ಪವಿತ್ರವಾದ ಭವ್ಯಗುಣಗಳ ಸಂಘಾತ. ಅವನು ಶಾಂತ, ನಿತ್ಯ, ಸತ್ಯ, ಧರ್ಮಗಳ ವಿಧಾತ; ಪ್ರಶಾಂತಸ್ವರೂಪಿ. ಅವನು ಲೇಪಿಸಿಕೊಂಡ ಗಂಧ ಲೋಕ ಕಲ್ಯಾಣ ಗುಣಗಳ ಶ್ರೀಗಂಧವೇ. ಒಂದು ವೇಳೆ ಈ ಪ್ರಪಂಚವೇ ಅಲ್ಲೋಲಕಲ್ಲೋಲವಾದರೂ ಅವನಲ್ಲಿ ಯಾವ ಉದ್ವೇಗದ ಅಲೆಯೂ ಏಳುವುದಿಲ್ಲ. ಅವನಿಗೆ ಸುಖದುಃಖಗಳಿಲ್ಲ. ಭವ ಬಂಧನಗಳಿಲ್ಲ. ಅವನು ಮುಕ್ತ. ಅವನು ಶಕ್ತ. ಅವನು ಪವಿತ್ರ. ಅದೋ, ನೋಡು ! ಆ ಶಾಲ್ಮಲೀ ವೃಕ್ಷದಂತೆಯೇ ಭವ್ಯಸುಂದರ; ಪವಿತ್ರ ಸುಂದರ; ಸತ್ಯಸುಂದರ.

ಕಾತ್ಯಾಯಿನಿ–ತಿಳಿಯಿತು ಭಗವನ್ !

ಮಹರ್ಷಿಯ ಆರ್ದ್ರಾರ್ದ್ರ ಮುಖಮಂಡಲ ಸರಳ ಸ್ಮಿತದಿಂದ ಅರಳಿ ಹೂವಾಯಿತು.

ಕಾಗೆಯೊಂದು ಹಾರಿ ಬಂದು ಹೆಮ್ಮರದ ಮೇಲೆ ಕುಳಿತುಕೊಂಡು ಅದರ ಬುಡದಲ್ಲಿದ್ದ ಕಪ್ಪೆಯ ಮೇಲೆ ಆಶಾದೃಷ್ಟಿಯನ್ನು ಹರಿಸಿ ನೋಡ ತೊಡಗಿತು. ಆದರೆ, ಅಲ್ಲಿಯೇ ಬಿಲ್ಲಿನಂತೆ ಬಾಗಿದ ಬಿದಿರ ದೆಬ್ಬೆಯೊಂದು ಬಿದ್ದಿದ್ದುದನ್ನು ನೋಡಿದರೆ ಯಾರೋ ಬಿಲ್ಲನ್ನು ಇಟ್ಟಿದ್ದಾರೆಂಬ ದೃಢ ವಾದ ಸಂಶಯ ಆದಕ್ಕೆ ಕೆಳಗೆ ಹಾರಲಾರದೆ ಅಲ್ಲಿಂದಲೇ ಕೂಗಿ ಕೂಗಿ ತನ್ನ ಬಂಧು ಬಳಗವನ್ನೆಲ್ಲಾ ಕರೆದು ಕೆಳಗೆ ಕಪ್ಪೆಯಿರುವುದನ್ನು ಸೂಚಿ ಸಿತು. ಆದರೆ, ಆ ಬಿದಿರಿನ ದೆಬ್ಬೆಯ ಸಂಶಯದಿಂದಾಗಿ ಒಂದೂ ಇಳಿಯ ಲಿಲ್ಲ. ಅಲ್ಲಲ್ಲೆ ಹಾರಾಡುತ್ತ ಅಸಹಾಯಕತೆಯಿಂದ ಕೂಗುತ್ತಲೇ ಇದ್ದುವು

ಯಥಾಪ್ರಕಾರವಾಗಿ. ಮಹರ್ಷಿಯು ಅದನ್ನು ಗಮನಿಸಿ ಮಡದಿಗೆಂದ–ಶುಭೆ, ಮಂಗಳಾಂಗಿ! ನೋಡು, ಕಾಗೆಗಳಿಗೆ ಇದೊಂದು ವಿಚಿತ್ರ ಪರಿಸ್ಥಿತಿ. ಆಸೆ–ನಿರಾಸೆ–ಭಯಗಳಿಂದ ಕೂಡಿದ ಹಿಂಜರಿತ. ಆದರೆ, ಆ ಆಸೆಯನ್ನಾಗಲೀ ಪ್ರಯತ್ನವನ್ನಾಗಲೀ ಕೈಬಿಡಲು ಮನಸೊಪ್ಪದಂತಹ ಪ್ರಸಂಗ. ಹಾಗೆಯೇ ಈ ಜೀವನಬಂಧ. ಆಸೆ–ನಿರಾಸೆಗಳ ಮಧ್ಯೆ ತೊಳಲಾಡುತ್ತದೆ ಮಾನಸ ಪ್ರವೃತ್ತಿ. ಈವೊಂದು ಅಂಕವನ್ನು ದೃಢ ಮನಸ್ಸಿನಿಂದ ದಾಟದಿದ್ದರೆ ಜನನ–ಮರಣಗಳಾಚೆ ಇರುವ ಪರಬ್ರಹ್ಮನನ್ನು ಕಾಣಲಾರೆವು ಎಂಬುದು ನಿನಗೆ ಆತ್ಮಗತ. ಆದರೂ, ಸಹ ಆಸೆ–ಆಕಾಂಕ್ಷೆಗಳ ಜಾಲದಿಂದ ಬಿಡುಗಡೆ ಹೊಂದದಿದ್ದರೆ ಆಧ್ಯಾತ್ಮಿಕ ಶ್ರೇಯಸ್ಸು ಉಂಟಾಗಲಾರದು.

ಕಾತ್ಯಾಯಿನಿಯು ಆ ಮಾತನ್ನು ಕೇಳಿದನಂತರ ತನ್ನೊಳಗೇ ಸಂಕೋಚ ಪಟ್ಟುಕೊಳ್ಳುತ್ತ–ಭಗವನ್, ನಿಮ್ಮ ಪ್ರವಚನವನ್ನು ಅನುದಿನವೂ ಕೇಳುತ್ತಿದ್ದರೂ ಸಲಸಲವೂ ನಿಷ್ಫಲವೇ ಆಗುತ್ತಿದೆ. ಆದರೆ, ಅದು ಕಾಮಪೂರ್ಣವಾದ ಮೋಹದಿಂದಲ್ಲ, ದೌರ್ಬಲ್ಯಪೂರ್ಣವಾದ ಮೋಹದಿಂದ ಎಂಬುದನ್ನು ನೀವೂ ಬಲ್ಲಿರಿ.

ಯಾಜ್ಞವಲ್ಕ್ಯ ಮಹರ್ಷಿ–ದೇವೀ, ಶುಭೆ! ಎರಡೂ ಒಂದೇ ವಸ್ತುವಿನ ಎರಡು ಮುಖಗಳು. ಅವು ಒಂದನ್ನುಳಿದು ಒಂದು ಇರುವಂತೆಯೇ ಇಲ್ಲ. ಆದ್ದರಿಂದ ಎರಡನ್ನೂ ವರ್ಜಿಸುವುದರಲ್ಲಿಯೇ ನಿಜವಾದ ಔನ್ನತ್ಯವಿದೆ.

ಕಾತ್ಯಾಯಿನಿ–ತಿಳಿಯಿತು, ಭಗವನ್!

ಯಾಜ್ಞವಲ್ಕ್ಯ ಮಹರ್ಷಿ–ಇಲ್ಲಿ ಕೇಳು, ಬ್ರಹ್ಮವಿದ್ಯಯಾ ಸರ್ವಂ ಭವಿಷ್ಯಂತಃ. ಈ ಎಲ್ಲಾ ವ್ಯಾಮೋಹಗಳಿಂದ ಬಿಡುಗಡೆ ಹೊಂದಬೇಕಾದರೆ ಬ್ರಹ್ಮವಿದ್ಯೆಯೊಂದೇ ನಿಜವಾದ ಮಾರ್ಗ.

ಕಾತ್ಯಾಯಿನಿಯು ಮರುಮಾತಾಡದೆ ವಿಚಾರಪರವಶಳಾಗಿ ತನ್ನಲ್ಲೇ

ವಿಮರ್ಶೆಮಾಡಿದಳು. ಮನಃತರಂಗಗಳು ಅಲೆಅಲೆಯಾಗಿ ಮೇಲೇಳತೊಡಗಿದುವು.

ಯಾಜ್ಞವಲ್ಕ್ಯ ಮಹರ್ಷಿ ಭಾವಾವಿಷ್ಟನಾಗಿ–ಕಾತ್ಯಾಯಿನೀ ಕೇಳು! ಇನ್ನು ಮುಂದೆ ನಾನಿಲ್ಲಿ ಮಾಡಬೇಕಾದ ಕಾರ್ಯವೇನೂ ಉಳಿಯಲಿಲ್ಲ. ನಾನು ತಪಶ್ಚರ್ಯಾರ್ಥವಾಗಿ ಹಿಮಾಲಯಕ್ಕೆ ತೆರಳಲು ಉದ್ದೇಶಿಸಿರುವೆ.

ಕಾತ್ಯಾಯಿನಿ–ತಮ್ಮ ಇಚ್ಛೆಯೇ ನಮಗೆ ಪರಮಾರ್ಥ. ಆದರೆ....

ಯಾಜ್ಞವಲ್ಕ್ಯ ಮಹರ್ಷಿ–ನಿನ್ನಲ್ಲಿ ಇನ್ನೇನೋ ಸಂಶಯ ಉಳಿಯಿತಲ್ಲಾ. ಏನದು ?

ಕಾತ್ಯಾಯಿನಿ–ಹೌದು, ಸಣ್ಣ ಸಂಶಯವಿದೆ. ಅದರ ನಿವಾರಣೆಗಾಗಿ ಒಂದು ಪ್ರಶ್ನೆ.

ಯಾಜ್ಞವಲ್ಕ್ಯ ಮಹರ್ಷಿ–ಏನಿದ್ದರೂ ಈಗಲೇ ನಿವಾರಿಸಿಕೊಳ್ಳಬಹುದು.

ಕಾತ್ಯಾಯಿನಿ–ತಮ್ಮ ಮನಸ್ಸಿಗೆ ಯಾವ ಅಪಚಾರದಿಂದಲಾದರೂ ನೋವಾಯಿತೇ ಭಗವನ್ ?

ಯಾಜ್ಞವಲ್ಕ್ಯ ಮಹರ್ಷಿ–ದೇವಿ, ಈ ಪ್ರಶ್ನೆ ಏಕೆ ಉದ್ಭವಿಸಿತು ? ನಾನು ಹೊರಡುತ್ತಿರುವುದು ತಪೋವನಕ್ಕೆ. ತಪಶ್ಚರ್ಯವು ಆತ್ಮಜ್ಞಾನಕ್ಕಾಗಿ ಮತ್ತು ಪರಿಪೂರ್ಣತೆಗಾಗಿ.

ಅದೇ ವೇಳೆಗೆ ಮೈತ್ರೇಯೀ ಅಲ್ಲಿಗೆ ಆಗಮಿಸುವಳು.

ಯಾಜ್ಞವಲ್ಕ್ಯ ಮಹರ್ಷಿ–ಬಾ, ಮೈತ್ರೇಯೀ! ಕುಳಿತುಕೋ, ನೀನು ಸರಿಯಾದ ಸಮಯಕ್ಕೆ ಬಂದಿದ್ದಿ. ತುಂಬಾ ಒಳ್ಳೆಯದಾಯಿತು, ನಾನು ಹಿಮಾಲಯಕ್ಕೆ ಹೊರಡಲಿದ್ದೇನೆ.

ಮೈತ್ರೇಯಿಯು ನಮಸ್ಕರಿಸಿ ಬಳಿಯಲ್ಲಿ ಕುಳಿತುಕೊಂಡು–ಸ್ವಾಮೀ, ತಾವು ಹೊರಡುವುದೆಂದು ?

ಯಾಜ್ಞವಲ್ಕ್ಯ ಮಹರ್ಷಿ—ಇಂದೇ, ಇನ್ನು ಸ್ವಲ್ಪ ಸಮಯದೊಳಗಾಗಿಯೇ.

ಮೈತ್ರೇಯೀ—ಈಗ ನನಗೂ ಅದರ ಅವಶ್ಯಕತೆ ತೋರುತ್ತಿದೆ, ಭಗವನ್ !

ಯಾಜ್ಞವಲ್ಕ್ಯ ಮಹರ್ಷಿಯು ಮುಗುಳುನಗುತ್ತ ಸ್ನೇಹ ಪ್ರಸನ್ನ ನೇತ್ರಗಳಿಂದ ನಿಟ್ಟಿಸಿ—ಓಹೋ, ಇದು ವಿಶೇಷವೆ!

ಕಾತ್ಯಾಯಿನಿ—ಯೋಗಿನಿಗೆ ಅನುಗುಣವಾದ ವಿಚಾರ ಶ್ರದ್ಧೆ.

ಮೈತ್ರೇಯೀ—ಈಶ್ವರೇಚ್ಛೆ !

ಯಾಜ್ಞವಲ್ಕ್ಯ ಮಹರ್ಷಿ—ಸಾಧುವಾದ ವಿಚಾರ.

ಕಾತ್ಯಾಯಿನಿ ಹಾಗೂ ಮೈತ್ರೇಯಿಯರ ಮುಖಭಾವ 'ಹೌದು' ಎಂಬಂತೆ ಮುದ್ರಿತವಾಯಿತು. ಇಬ್ಬರೂ ಏನೂ ಹೇಳಲಿಲ್ಲ.

ಯಾಜ್ಞವಲ್ಕ್ಯ ಮಹರ್ಷಿ—ಮೈತ್ರೇಯೀ, ನಿನ್ನ ಅಭೀಪ್ಸೆ ಮೆಚ್ಚುವಂತಾದ್ದು. ಆದರೆ, ನೀನು ಇನ್ನೂ ಕೆಲವು ಕಾಲ ಸಾಧನೆಮಾಡಿ ನಿರ್ಧರಿಸುವುದು ಒಳ್ಳೆಯದು. ಈ ವಿಚಾರದಲ್ಲಿ ಆತುರ ಸಲ್ಲ.

ಮೈತ್ರೇಯೀ— ತಮ್ಮ ಅಪ್ಪಣೆಯಂತೇ ಆಗಲೀ.

ಯಾಜ್ಞವಲ್ಕ್ಯ ಮಹರ್ಷಿ—ಒಳ್ಳಿತು, ಮೈತ್ರೇಯೀ! ಈಗ ನಿನಗೆ ಏನಾದರೂ ಅಭ್ಯಾಸದ ಅವಶ್ಯಕತೆ ಇದೆಯೋ ?

ಮೈತ್ರೇಯೀ—ಹೌದು ಭಗವನ್ !

ಯಾಜ್ಞವಲ್ಕ್ಯ ಮಹರ್ಷಿ—ಸರಿ; ಹೀಗೆ ಬಾ. ಇಲ್ಲಿ ಕುಳಿತು ಪದ್ಮಾಸನ ಹಾಕು.

ಅವಳು ತಾನು ಕುಳಿತಿದ್ದ ಸ್ಥಳವನ್ನು ಬಿಟ್ಟು ಬಂದು ಮಹರ್ಷಿಯ ಎದುರಾಗಿ ಕುಳಿತುಕೊಂಡಳು. ಮುಖಭಾವದಲ್ಲಿ ಯೋಗಿನಿಗೆ ಅನುಗುಣವಾದ ದಿವ್ಯಪ್ರಭೆ ಮತ್ತು ಪ್ರಶಾಂತಭಾವ ಒಂದಕ್ಕೊಂದು ಹೊಯ್ಕ

ಯ್ಯಾದಷ್ಟು ಸಮೃದ್ಧವಾಗಿವೆ. ತಲೆಯಮೇಲೆ ಹೊದ್ದ ನಾರುಮಡಿಯು ಉತ್ತರೀಯದಡಿಯಲ್ಲಿ ಇಣುಕುವ ಮುಂಗುರುಳರಾಶಿಯು ಸೀಮಂತ ರೇಖೆ ಯಲ್ಲಿ ಸಿಂಧೂರದ ಅರುಣಿಮೆ, ಭಾವೋದ್ವೇಗದಿಂದ ಉಜ್ವಲಿಸುವ ನಯನದ್ವಯಗಳ ಉಜ್ವಲಕಾಂತಿ ನಿಜವಾಗಿಯೂ ದರ್ಶನೀಯವಾಗಿತ್ತು.

ಯಾಜ್ಞವಲ್ಕ್ಯ ಮಹರ್ಷಿ-ಯೋಗಿನಿ, ಮೈತ್ರೇಯೀ ! ಐತರೇಯ ಉಪನಿಷತ್ತಿನ ಮೊದಲ ಮಂತ್ರವನ್ನು ಹೇಳು.

ಮೈತ್ರೇಯೀ,

ಹರಿಃ ಓಮ್ | ಆತ್ಮಾ ವಾ ಇದಮೇಕ ಏವಾಗ್ರ ಆಶೀತ್ | ನಾನ್ಯತ್
ಕಿಂಚನ ಮಿಷತ್ | ಸ ಈಕ್ಷತ ಲೋಕಾನ್ನು ಸೃಜಾ ಇತಿ ||

ಯಾಜ್ಞವಲ್ಕ್ಯ ಮಹರ್ಷಿ-ಯೋಗಿನಿ, ಕೇಳು ! ಮೊದಲು-ಇದು ಆತ್ಮವೇ ಆಗಿತ್ತು ಎಂಬುದರ ಭಾವ ಸೃಷ್ಟಿಪೂರ್ವ ಎಂದು, ಸೃಷ್ಟಿಯ ವಿಚಾರವನ್ನು ಅವಲೋಕಿಸಿದರೆ ನಿಜವಾಗಿಯೂ ಸೃಷ್ಟಿಗೆ ಆದ್ಯಂತಗಳಿಲ್ಲ ಎಂಬುದು ಸುವ್ಯಕ್ತ. ಮೊದಲು ಎಂಬುದು ನಮ್ಮ ದೃಷ್ಟಿಯ ಪ್ರಕಾರ ಮಾತ್ರ. ಸೃಷ್ಟಿ ಎಂಬುದು ಸಾಗರದ ಮೇಲೆ ಏಳುವ ಅಲೆಗಳಂತೆ. ಎಷ್ಟೋ ಸಲಿ ಮೇಲೆದ್ದಿವೆ. ಇನ್ನೆಷ್ಟೋ ಸಲಿ ಇಳಿದು ಹೋಗಿವೆ. ಈ ಏರಿಳಿತಗಳು ಹಿಂದೆಯೂ ಆಗಿವೆ. ಮುಂದೆಯೂ ಆಗಲಿವೆ. ಒಂದೊಂದೆಡೆ ಒಂದೊಂದು ರೀತಿಯಲ್ಲಿ. ಸಾಗರದಲ್ಲಿ ಅಲೆಗಳು ಸದಾ ಸುಪ್ತವಾಗಿರು ತ್ತವೆ. ಅವು ಮೇಲೆದ್ದಾಗ ವ್ಯಕ್ತಗೊಳ್ಳುವುದು ಸಹಜ. ಉಬ್ಬರವಿಳಿ ದಾಗ ಅವು ಅವ್ಯಕ್ತ. ಸೂಕ್ಷ್ಮಾತಿಸೂಕ್ಷ್ಮದಿಂದ ಸ್ಥೂಲಾವಸ್ಥೆಗೆ ಏರು ವುದೇ ಸೃಷ್ಟಿ. ಇಲ್ಲಿ ಸೃಷ್ಟಿಪೂರ್ವ ಎಂದರೆ ಮೊದಲು ಶೂನ್ಯಮಾತ್ರ ವಿತ್ತು ಎಂಬ ಭಾವನೆ ಬರಬಾರದು. ಶೂನ್ಯದಿಂದ ಆಗಲಿಲ್ಲ ಸೃಷ್ಟಿ. ಆದಿ ಯಲ್ಲಿ (ದೃಗ್ವಸ್ತುವಾದ ಬ್ರಹ್ಮಾಂಡ ಇರಲಿಲ್ಲ) ಎಲ್ಲವೂ ಆತ್ಮನೇ ಆಗಿತ್ತು. ಅಂದರೆ ಈಗ ಆತ್ಮನಿಲ್ಲವೇ ಎಂಬ ಪ್ರಶ್ನೆ ಏಳುತ್ತದೆ. ಆತ್ಮವು ಆಗಲೂ ಇತ್ತು. ಈಗಲೂ ಇದೆ. ಅದರ ಮೇಲೆ ನಾಮರೂಪಗಳನ್ನು ಆರೋಪಿಸಿ ಅದು ಮುಚ್ಚಿಹೋಗಿರುವ ಕಾರಣ (ನಾಮರೂಪಗಳು ಮಾತ್ರ ಕಾಣಿ

ಸುತಲಿದ್ದು) ಆತ್ಮ ಅವ್ಯಕ್ತವಾಗಿದೆ. ಆತ್ಮ ಸತ್ಯ; ಜ್ಞಾನ ಅನಂತ. ಅನಂತ ಎಂಬುದು ಹಲವು ಇರುವಂತಿಲ್ಲ. ಅದು ಎಂದೆಂದಿಗೂ ಒಂದೇ ಆಗಿರತಕ್ಕದ್ದು. ಆತ್ಮನೇ ಜಗತ್ಕಾರಣಕ್ಕೆ ಉಪಾದಾನ, ಕಾರಣ ಮತ್ತು ನಿಮಿತ್ತಕಾರಣ. ಆದುದರಿಂದ ಸೃಷ್ಟಿ ಬ್ರಹ್ಮನ ಅಂಶ ಎಂದು ಭಾವಿಸತಕ್ಕದ್ದು. ನಾನು ನಿದ್ದೆಯಲ್ಲಿ ಒಂದು ಕನಸನ್ನು ಕಂಡರೆ ಅದು ನನ್ನದೇ ಪ್ರಕ್ಷೇಪಣೆ. ಅದರ ಸುತ್ತಮುತ್ತೆಲ್ಲಾ ಇರುವುದು ನಾನೇ. ನಾನಿಲ್ಲದೆ ಕನಸು ಇಲ್ಲ. ನನ್ನ ಚೈತನ್ಯಾಂಶದಿಂದಲೇ ಕನಸು–ನನಸು ಎಲ್ಲಾ. ಅಂತೆಯೇ ಈ ಬ್ರಹ್ಮಾಂಡ ಬ್ರಹ್ಮನ ಪ್ರಕ್ಷೇಪಣೆ ಎಂದು ತಿಳಿಯ ಬೇಕು.

ಯಾಜ್ಞವಲ್ಕ್ಯ ಮಹರ್ಷಿ–ಕೇಳು, ಕಠೋಪನಿಷತ್ ಹೀಗೆ ಹೇಳು ತ್ತದೆ,

ಭಯಾದಸ್ಯಾಗ್ನಿಸ್ತಪತಿ ಭಯಾತ್ತಪತಿ ಸೂರ್ಯಃ |
ಭಯಾದಿಂದ್ರಶ್ಚ ವಾಯುಶ್ಚ ಮೃತ್ಯುರ್ಧಾವತಿ ಪಂಚಮಃ ||

ಅಂದರೆ ಈ ವಿಶ್ವಜಗತ್ ಸೃಷ್ಟಿಬ್ರಹ್ಮನ ಒಂದು ಅಗಾಧವಾದ ಲೀಲೆ. ಬ್ರಹ್ಮನ ಸೃಷ್ಟಿಯಲ್ಲಿ ಸಂಜನಿಸಿದ ಸಮಸ್ತ ವಸ್ತುಗಳಿಗೂ ಆಯಾಯಾ ಧರ್ಮ ಕರ್ಮದ ಕಟ್ಟುಕಟ್ಟಳೆಗಳು. ಅವು ಎಂದೂ ತಮ್ಮ ಗತಿವೃತ್ತ ವನ್ನು ಮೀರುವಂತಿಲ್ಲ. ಸುಡುವುದು ಬೆಂಕಿಯ ಧರ್ಮ. ಹರಿಯುವುದು ನೀರಿನ ಧರ್ಮ. ಬೀಸುವುದು ಗಾಳಿಯ ಧರ್ಮ. ಹೀಗೆಯೇ ಪ್ರತಿ ಯೊಂದೂ. ಇಂತಿಂಥ ಧರ್ಮ ಕರ್ಮಗಳನ್ನು ಆಯಾಯಾ ವಸ್ತುಗಳು ತಂತಾನೇ ಪಡೆದುಕೊಳ್ಳಲಿಲ್ಲ. ಎಲ್ಲವೂ ಪರಬ್ರಹ್ಮತತ್ವವೇ; ಆತನೇ ಅವುಗಳ ನಿಯಾಮಕ. ಅದರಲ್ಲಿ ಅರ್ಥಾರ್ಥ್ ಗುರಿಯೂ ಇದೆ ಉದ್ದೇ ಶವೂ ಇದೆ. ಸಾಧನೆಯೂ ಇದೆ. ಈ ಜಗತ್ತಿನಲ್ಲಿ ಯಾವುದೂ ತಂತಾನೆ ಮೂಡುವುದಾಗಲೀ ಇರುವುದಾಗಲೀ ಸಾಧ್ಯವೇ ಇಲ್ಲ. ಎಲ್ಲವೂ ವಿಶ್ವಜಗತ್ತಿನ ಒಂದು ಅಂಗ ಅಥವಾ ಭೂಮದ ಒಂದು ಭಾಗ. ಭೂಮಕ್ಕಾಗಿ ಎಲ್ಲವೂ ಕೆಲಸ ಮಾಡಬೇಕು. ನಮ್ಮ ದೇಹಪ್ರಕೃತಿ ಚಲಿಸಬೇಕಾದರೆ ಹೇಗೆ ಇದರಲ್ಲಿರುವ ಎಲ್ಲಾ ಅಂಗಾಂಗಗಳೂ ಕೆಲಸಮಾಡಬೇಕೊ ಹಾಗೆ. ದೇಹದಲ್ಲಿರುವ

ಸಣ್ಣ ಸಣ್ಣ ಅವಯವಗಳಿಗೂ ಒಂದೊಂದು ಸ್ಥಾನವಿದೆ ಮತ್ತು ಅವುಗಳಿಗೆ ತುಲನಾತ್ಮಕವಾದ ಕಾರಸ್ಥಾನವೂ ಇದೆ. ಅವೆಲ್ಲವೂ ತಮ್ಮತಮ್ಮ ಕೆಲಸವನ್ನು ಕ್ರಮವತ್ತಾಗಿ ನಿರ್ವಹಿಸಿದರೆ ದೇಹಪ್ರಕೃತಿಯ ಚಾಲನೆ ಸಮರ್ಪಕವಾಗಿರುತ್ತದೆ. ಅಂತೆಯೇ ಈ ಜಗತ್ತು. ಅದರ ಸರ್ವಾಂಗಗಳೂ ನಿಯಮಿತ ಕಾರಸ್ಥಾನದಲ್ಲಿ ನಡೆದರೇನೇ ಜಗತ್ ಚಾಲನೆ ಸಮರ್ಪಕ. ಅಂತೆಯೇ ಸೃಷ್ಟಿ–ಸ್ಥಿತಿ–ಲಯ. ಈ ಪ್ರಕಾರವಾದ ನಿಯಮಿತಿಯಲ್ಲಿ ಯಮನೂ ಹೊರತಲ್ಲ. ತನ್ನ ಮಿತಿ ಎಷ್ಟೋ ಅಷ್ಟರಲ್ಲೇ ಅವನ ಕಾರಸ್ಥಾನ ಎಂಬುದನ್ನು ತಿಳಿ.

ದೇವಿ, ಇನ್ನೂ ಕೇಳು. ಜಗತ್ತಿನ ಜೀವಕೋಟಿಗಳಲ್ಲೆಲ್ಲಾ ಮಾನವ ಜನ್ಮ ಉತ್ತಮೋತ್ತಮವಾದುದು. ಮಾನವ ಬುದ್ಧಿಶಕ್ತಿಯ ಪರಾಕಾಷ್ಠೆ. ಬಾಹುಬಲದಲ್ಲಿ ಇತರ ಪ್ರಾಣಿಗಳು ಮನುಷ್ಯನನ್ನು ಮೀರಿಸಿದರೂ ಬುದ್ಧಿಶಕ್ತಿಯ ಎತ್ತರಕ್ಕೆ ಅವು ಎಂದಿಗೂ ಏರಲಾರವು. ಮಾನವ ಬುದ್ಧಿಶಕ್ತಿಯ ಸಹಾಯದಿಂದ ಏನೆಲ್ಲಾ ಮಾಡಬಲ್ಲ? ತಪ್ಪುಒಪ್ಪುಗಳನ್ನು ನಿರ್ಣಯಿಸಬಲ್ಲ. ತನಗಿಂತ ಶಕ್ತಿಯಲ್ಲಿ ಹತ್ತು ಪಟ್ಟು ಮೀರಿದ ಪ್ರಾಣಿಗಳನ್ನು ಪಳಗಿಸಬಲ್ಲ, ಜಯಿಸಬಲ್ಲ, ಆಳಬಲ್ಲ. ಕಾಲಾನುಕಾಲದ ವಿಚಾರಗಳನ್ನು ನೆನಪಿಸಿಕೊಳ್ಳಬಲ್ಲ, ಊಹಿಸಬಲ್ಲ, ಭವಿಷ್ಯದ ವಿಚಾರವನ್ನು ಅರಿಯಬಲ್ಲ, ಅಳೆಯಬಲ್ಲ, ಸೃಷ್ಟಿ–ಸ್ಥಿತಿ–ಲಯಗಳನ್ನೂ ಅರ್ಥ ಮಾಡಿಕೊಳ್ಳಬಲ್ಲ, ದೂರದೂರದ ತಾರೆ ನೀಹಾರಿಕೆಗಳ ವೈವಿಧ್ಯತೆಯ ವಿಚಾರಗಳನ್ನೂ ತಿಳಿದುಕೊಳ್ಳಬಲ್ಲ. ಹೀಗಿರುವಲ್ಲಿ ಮಾನವಜನ್ಮ ಎತ್ತಿಯೂ ಅದನ್ನು ವ್ಯರ್ಥಗೊಳಿಸಿದರೆ ತಪ್ಪು ನಮ್ಮದೇ ಆಗುತ್ತದೆ. ಅದೃಷ್ಟವಶಾತ್ ನಾವು ಪಡೆದುಕೊಂಡ ಮಾನವ ಜನ್ಮದ ಸಾರ್ಥಕತೆಗಾಗಿ ಏನು ಮಾಡಬೇಕು ಎಂಬುದು ಮುಖ್ಯ.

ಮೈತ್ರೇಯೀ ಕೇಳು ! ನಾನಿದನ್ನೆಲ್ಲಾ ಬುದ್ಧಿಯಿಂದ ತಿಳಿದುಕೊಂಡಿದ್ದರೂ ವಿವರಿಸುವುದು ವಾಕ್ಕಿನ ಮೂಲಕ. ಸಮಷ್ಠಿಯ ಬುದ್ಧಿಶಕ್ತಿಗೆ ಹೇಗೆ ಬ್ರಹ್ಮನು ಗುರುವೋ ಹಾಗೆಯೇ ವಾಕ್ಕಿಗೂ ಅವನೇ ಅಧಿದೇವತೆ.

ಮಾನವ ಜೀವನದ ಸಂಸ್ಕೃತಿ ವ್ಯಕ್ತವಾಗುವುದು ವಾಕ್ಕಿನ ಮೂಲಕ. ಬುದ್ಧಿಶಕ್ತಿ ಮತ್ತು ವಾಕ್ ಶಕ್ತಿಗಳೆರಡೂ ಒಂದೇ ಕತ್ತಿಯ ಅಲಗುಗಳು. ಇವನ್ನು ಎಷ್ಟು ನಯವಾಗಿ ಉಪಯೋಗಿಸಿದರೆ ಅಷ್ಟು ಪರಿಶುದ್ಧವಾದ ಸಂಸ್ಕೃತಿಯು ಬೆಳಗುತ್ತದೆ ನಮ್ಮಲ್ಲಿ. ಇವನ್ನು ಕಡಿಗತ್ತಿಯಾಗಿ, ವಿಷವಾಗಿ, ಔಷಧವಾಗಿ, ಅಮೃತವಾಗಿ ಹೀಗೆ ನಾನಾ ರೂಪದಲ್ಲಿ ಉಪಯೋಗಿಸ ಬಹುದು. ಯಾವ ರೀತಿಯಲ್ಲಿ ಉಪಯೋಗಿಸಿದರೆ ಆ ರೀತಿಯಲ್ಲಿ ಹೊಮ್ಮು ತ್ತದೆ ಮಾನವ ಸಂಸ್ಕೃತಿ.

ಜ್ಞಾನಾರ್ಜನೆ ಎಂಬುದು ಗುರು ಶಿಷ್ಯರು ಕೂಡಿ ಮಾಡುವ ತಪಸ್ಸು. ಇಬ್ಬರಲ್ಲೂ ಸರಿಯಾದ ಹೊಂದಾಣಿಕೆ ಇದ್ದರೆ ಮಾತ್ರ ಜ್ಞಾನಾ ರ್ಜನೆ. ಇಲ್ಲಿ ಹೊಂದಾಣಿಕೆ ಎಂಬುದು ಏನು ? ಆತ್ಮ, ಮನಸ್ಸು, ಬುದ್ಧಿ ಗಳು ಒಮ್ಮತದಿಂದ ಸಮ್ಮಿಲನಗೊಳ್ಳುವುದೇ ನಿಜವಾದ ಹೊಂದಾಣಿಕೆ. ದಿವ್ಯ ಜ್ಞಾನಾರ್ಜನೆಗೆ ಅದುವೇ ದಾರಿ. ಇಲ್ಲಿ ದಿಟ್ಟತನವೇ ಮುಖ್ಯ. ದುರ್ಬಲತೆ ಎಂಬುದು ನಮ್ಮ ಬಳಿಯೂ ಸುಳಿಯಬಾರದು. ಆದಕಾರ ಣವೇ ಎಲ್ಲರಿಗೂ ಆಶಿಷ್ಠ, ದೃಢಿಷ್ಠ, ಬಲಿಷ್ಠ ಆಗಿರಬೇಕು ಎಂದು ಆದೇಶ ನೀಡುತ್ತದೆ ವೇದಾಂತ. ಬಲಹೀನನಿಗೆ ಆತ್ಮ ಎಂದಿಗೂ ಲಭಿಸುವುದಿಲ್ಲ. ಮೊದಲನೆಯದಾಗಿ ಬಲವಾದ ದೇಹ, ಅದರಲ್ಲಿ ಬಲವಾದ ಮನಸ್ಸು, ಅದರ ಹಿಂದೆ ಬಲವಾದ ಬುದ್ಧಿಶಕ್ತಿ ಇದ್ದರೇನೇ ಅದ್ಭುತವಾಗುತ್ತದೆ ಶೀಲ ಶಕ್ತಿ. ಈ ಎಲ್ಲವೂ ಕ್ರಮವತ್ತಾಗಿದ್ದಲ್ಲಿ ಒಬ್ಬರಿಂದ ಇನ್ನೊಬ್ಬರಿಗೆ ಘನ ವಾದ ವಿದ್ಯೆ ಮತ್ತು ಘನವಾದ ಸಂಸ್ಕೃತಿ. ತದನಂತರ ಜೀವನೋತ್ಕೃಷ್ಟ ವಾದ ತಪಸ್ಸು ಕರಗತವಾದರೆ ಬ್ರಹ್ಮಶಕ್ತಿ. ಬ್ರಹ್ಮಶಕ್ತಿಯಿಂದ ಪರ ಮಾತ್ಮಶಕ್ತಿ.

ಅವನೇ ವಿಶ್ವವ್ಯಾಪಿಯಾದ ಋತ. ಋತ ಎಂದರೆ ನಿಯಮಗಳ ಪಥ. ಪ್ರತಿಯೊಂದಕ್ಕೂ ಆಯಾಯಾ ದಿಸೆಯಲ್ಲಿ ನಿಯಮಿತ ಪಥ. ಅವು ಎಂದಿಗೂ ಮೀರುವಂತಿಲ್ಲ. ಅವು ಭೌತಿಕ ನಿಯಮ ಮಾತ್ರವಲ್ಲ, ನೈತಿಕ ನಿಯಮವೂ ಹೌದು. ಧಾರ್ಮಿಕ ನಿಯಮವೂ ಕೂಡ. ಆದು ಅಧ್ಯಾ

ತ್ರಿಕ ನಿಯಮವೂ ಆಗಿರತಕ್ಕದ್ದು. ಇದನ್ನೆಲ್ಲಾ ನಾವು ಬುದ್ಧಿಶಕ್ತಿಯ ಮೂಲಕ ಗ್ರಹಿಸುತ್ತೇವೆ. ಇಂಥಿಂಥ ಅಗಾಧವಾದ ಶಕ್ತಿಯುಕ್ತಿಗಳೆಲ್ಲಾ ವಿಶ್ವಪ್ರಪಂಚದಲ್ಲಿ ರಾಶಿರಾಶಿಯಾಗಿ ಬಿದ್ದಿರುತ್ತವೆ. ಆದರೆ, ಆದರಲ್ಲಿ ನಾವು ಎಷ್ಟುಮಾತ್ರ ಜೀರ್ಣಿಸಿಕೊಳ್ಳಬಲ್ಲೆವು? ಎಷ್ಟೆಂದರೂ ನಾವು ನಾವೇ, ಅವನು ಅವನೇ.

ಮೈತ್ರೇಯೀ–ತಿಳಿಯಿತು ಭಗವನ್ !

ಉಚ್ಛ್ವಾಸ ೧೬

೧

ಯಾಜ್ಞವಲ್ಕ್ಯ ಮಹರ್ಷಿಯು ಮೈತ್ರೇಯೀ ಕುಳಿತ ಭಂಗಿಯನ್ನೊಮ್ಮೆ ನಿಟ್ಟಿಸಿ ನೋಡಿ ಸ್ವಲ್ಪ ಮುಂದುವರಿದು ಅವಳ ದೇಹಭಂಗಿಯನ್ನು ನೇರಗೊಳಿಸಿ ನುಡಿದ–ಇನ್ನೂ ಸ್ವಲ್ಪ ನೇರವಾಗಿ ಕೂಡು.

ಮೈತ್ರೇಯಿಯು ನೇರವಾಗಿ ಕುಳಿತು–ಈಗ ಸರಿಯೆ ಭಗವನ್ ?

ಯಾಜ್ಞವಲ್ಕ್ಯಮಹರ್ಷಿ–ಕೈಗಳು ಹೀಗಿರಲಿ. ಸ್ವಲ್ಪ ಕೊರಳೆತ್ತು.

ಮೈತ್ರೆಯಿಯು ಮಹರ್ಷಿಯ ಆದೇಶಕ್ಕನುಗುಣವಾಗಿ ಕುಳಿತುಕೊಳ್ಳುತ್ತ ಕೇಳಿದಳು–ಈಗ ?

ಯಾಜ್ಞವಲ್ಕ್ಯ ಮಹರ್ಷಿ–ಪದ್ಮಾಸನ ಸಡಿಲಗೊಂಡಿತು. ಇನ್ನೂ ಸ್ವಲ್ಪ ಸರಿಯಾಗಿ ಕೂಡು.

ಮೈತ್ರೇಯೀ ಅದೇ ಪ್ರಕಾರ ಕುಳಿತುಕೊಂಡು – ಆಯಿತು, ಭಗವನ್.

ಯಾಜ್ಞವಲ್ಕ್ಯ ಮಹರ್ಷಿ–ದೇವಿ. ಈಗ ಕಣ್ಣುಗಳನ್ನು ಮುಚ್ಚಿ ಮನಸ್ಸನ್ನು ನಾಸಿಕಾಗ್ರದಲ್ಲಿ ನೆಡು.

ಮೈತ್ರೇಯಿಯು ಅದರಂತೆಯೇ ಕಣ್ಣುಗಳನ್ನು ಮುಚ್ಚಿ ಮನಸ್ಸನ್ನು ನಾಸಿಕಾಗ್ರದಲ್ಲಿ ಕೇಂದ್ರೀಕರಿಸಿ ನೇರವಾಗಿ ತಪೋಭಂಗಿಯಲ್ಲಿ ಕುಳಿತು ಕೊಂಡಳು.

ಯಾಜ್ಞವಲ್ಕ್ಯ ಮಹರ್ಷಿಯು ಆಗ ಅವಳ ತಲೆಯ ಮೇಲೆ ಮುಕ್ತ ಹಸ್ತವನ್ನಿಟ್ಟು—ಈಗ ಹೇಳು, ನಿನಗೆ ಯಾವ ಅನುಭವವಾಗುತ್ತಿದೆ?

ಮೈತ್ರೇಯಿಯು ಮಿಸುಕಾಡದೆ ಸ್ವಲ್ಪ ಹೊತ್ತು ತನ್ನ ಮನೋ ಭಾವವನ್ನು ಅವಲೋಕಿಸಿದನಂತರ—ಭಗವನ್! ಏನೋ ಒಂದು ಬಗೆಯ ಬಹಳ ಅಪೂರ್ವವಾದ—ವರ್ಣನಾತೀತವಾದ ಅನುಭವ.

ಯಾಜ್ಞವಲ್ಕ್ಯ ಮಹರ್ಷಿ—ಇನ್ನೂ ಕೂಲಂಕಶವಾಗಿ ಅವಲೋ ಕಿಸು. ಆತುರ—ಕಾತರಗಳು ಬೇಡವೇ ಬೇಡ. ನಿಧಾನವಾಗಿ ಶಾಂತಿಯಿಂದ ಅವಲೋಕಿಸು.

ಮೈತ್ರೇಯೀ—ಭಗವನ್! ಈಗ..ಈಗ ಮನೋಮಂಡಲ ದೃಗ್ಮಂಡಲ ಗಳು ಒಂದಾಗುತ್ತಿವೆ. ಯೋಚನೆಯಲೆಗಳು ಹೊಯ್ದು ಮಲಗಿಸಿದಂತೆ ಸುಪ್ತವಾಗಿವೆ. ನಾ....ನೀಗ ಏನನ್ನೂ ಯೋಚಿಸಲಾರೆ. ಏನನ್ನೂ ಭಾವಿಸ ಲಾರೆ.

ಯಾಜ್ಞವಲ್ಕ್ಯ ಮಹರ್ಷಿ—ಈಗ....ಈಗ?

ಮೈತ್ರೇಯೀ—ಅದೇ ಅನುಭವ. ಅಪೂರ್ವ ಅನುಭವ. ಹರಿ ಓಂ!

ಯಾಜ್ಞವಲ್ಕ್ಯ ಮಹರ್ಷಿ—ಈಗ ಏನೆನಿಸುತ್ತೆ?

ಮೈತ್ರೇಯೀ—ಈಗ ದೃಗ್ದೃಶ್ಯಗಳ ಪದರ ಕಳಚುತ್ತಿದೆ. ಒಂದೊಂ ದಾಗಿ ಕಳಚುತ್ತಲೇ ಇದೆ. ದೃಷ್ಟಿಗೆ ನಿಲುಕುವ ವಸ್ತುಗಳೇ ಇಲ್ಲ. ಪದರ ಗಳು ಕಳಚಿದಂತೆಲ್ಲಾ ಮನೋಮಂಡಲ ಬರಿದಾಗುತ್ತಿದೆ....ಜ್ಞಾನಮಂಡಲ ವೊಂದೇ ಅಸ್ತಿತ್ವದಲ್ಲಿ ಅದೊಂದೇ ಪರಿಪೂರ್ಣ.

ಯಾಜ್ಞವಲ್ಕ್ಯ ಮಹರ್ಷಿ—ಮಂಗಳೇ, ಇನ್ನೂ ಅವಲೋಕಿಸು.

ಮೈತ್ರೇಯೀ—ಹರಿಃ ಓಂ!

ಯಾಜ್ಞವಲ್ಕ್ಯ ಮಹರ್ಷಿ–ಎಲ್ಲಿ, ಸ್ವರ ಇನ್ನೂ ಸ್ಫುಟವಾಗಿ ಬರಲಿ.

ಮೈತ್ರೇಯೀ ಉಚ್ಚಸ್ವರದಲ್ಲಿ–ಹರಿಃ ಓಂ !

ಯಾಜ್ಞವಲ್ಕ್ಯ ಮಹರ್ಷಿ–ಈಗಣ ನಿನ್ನ ಅನುಭವ ?

ಮೈತ್ರೇಯೀ–ಸುತ್ತಲ್ಲೆಲ್ಲೆಡೆಯೂ ಬೆಳಕೇ ಬೆಳಕು. ಅದು ಎಲ್ಲಿಂದ....ಯಾವೆಡೆಯಿಂದ ಬರುತ್ತಿದೆ ಎಂಬುದು ತಿಳಿಯುತ್ತಿಲ್ಲ....ಕಣ್ಣು ಕುಕ್ಕುವಂತಹ ಬೆಳಕು. ಈಗ....ಈಗ ಸುತ್ತಲೆಲ್ಲಾ ಅಗ್ನಿಜ್ವಾಲೆ. ಅದು ಬರೀ ಬೆಳಕಲ್ಲ, ಅಗ್ನಿಜ್ವಾಲೆ! ಅದು ಮುಂದೊತ್ತಿ ಬರುತ್ತಲೇ ಇದೆ.... ಸುಡುವಂತೆ, ಸುಟ್ಟು ಭಸ್ಮೀಭೂತಗೊಳಿಸುವಂತೆ ಧಗಧಗಿಸುತ್ತಿದೆ....ಹಾ, ತಾಳಲಾರೆ. ಉರಿ....ಉರಿ....ರಕ್ಷಿಸಿ !

ಯಾಜ್ಞವಲ್ಕ್ಯ ಮಹರ್ಷಿ–ಇಲ್ಲಿ ಭಯ ಭ್ರಾಂತಿಗೆ ಅವಕಾಶವಿರ ಕೂಡದು. ನೀನು ನಿಶ್ಚಿಂತೆಯಿಂದ ಅವಲೋಕಿಸು.

ಅಲ್ಲೇ ಬಳಿಯಲ್ಲಿ ಕುಳಿತಿದ್ದ ಕಾತ್ಯಾಯಿನಿಯು ಮೈಯೆಲ್ಲಾ ಮನಸ್ಸಾಗಿ ಆ ಅಪೂರ್ವ ಸಮಾಧಿಸ್ಥಿತಿಯನ್ನು ಗಮನಿಸುತ್ತಲೇ ಇದ್ದಾಳೆ ಕುತೂಹಲಭಾವದಿಂದ.

ಮೈತ್ರೇಯೀ–ಭಗವನ್! ಈಗ....ಬಹಳ ಅಪೂರ್ವ ಅನುಭವ. ಈ ಹಿಂದೆ ಎಂದೆಂದೂ ಇಂತಹ ಅನುಭವ ಉಂಟಾಗಿರಲಿಲ್ಲ. ಓ, ಮೈಯೆಲ್ಲಾ ಉರಿಯುತ್ತಿದೆ. ಅಗ್ನಿಸ್ಪರ್ಶವಾದಂತೆ ಉರಿಯುತ್ತಿದೆ....ಉರಿ....ಉರಿ.... ಉರಿ....ತಾಳಲಾಗದ ಉರಿ. ಮನಸ್ಸು–ಕಣ್ಣುಗಳಿಗೆ ಕತ್ತಲೆ ಕವಿಯುತ್ತಿದೆ.... ಏನೆಂಬುದು ತಿಳಿಯುತ್ತಲೇ ಇಲ್ಲ. ಏನೋ ಒಂದು ರೀತಿಯ ಭಯ–ಕಳವಳ ಅ....ಲ್ಲ ಅಲ್ಲವೇ ಅಲ್ಲ. ಇನ್ನೇನೋ ಒಂದು ಬಗೆಯ ಭಾವವಿಭಾವ.... ಜ್ಞಾನಮಂಡಲ ಕಿಕ್ಕಿರಿ ತುಂಬುತ್ತಿದೆ....ಅಯ್ಯೋ, ತುಂಬಿ ಸಿಡಿದು ಹೋಗುತ್ತಿದೆ....ತಾಳಲಾರೆ, ಸಂಕಟ-ಪರಿತಾಪ, ಓ, ಸಿಡಿಯಿತು. ಸಿಡಿದೇಬಿಟ್ಟಿತು.... ಭಾವವಿಭಾವಗಳೆಲ್ಲಾ ಪದರಪದರವಾಗಿ ಕಳಚಿ, ಒಂದೊಂದಾಗಿ ಕೆಳಗೆ ಬೀಳುತ್ತಿವೆ, ಓ, ಬಿದ್ದೇ ಬಿದ್ದುವು....ಎಲ್ಲಾ ಬಿದ್ದುವು. ಆದರೆ, ಎಂತಹ

ಆಶ್ಚರ್ಯ? ಇನ್ನೂ ಇನ್ನೂ ಮೊಳೆಯುತ್ತಲೇ ಇವೆ. ಓ, ಅವೂ ಸಹ ಪದರಪದರವಾಗಿ ಕಳಚಿ ಬಿದ್ದುವು....ಇನ್ನೂ ಬೀಳುತ್ತಲೇ ಇವೆ. ಅದಕ್ಕೆ ಆದಿ ಅಂತ್ಯಗಳೇ ಇಲ್ಲ, ಬಿದ್ದುವು....ಬಿದ್ದುವು; ರಾಶಿರಾಶಿಯಾಗಿ ಕಳಚಿ ಬಿದ್ದುವು. ಈಗ ತಲೆಯೆಲ್ಲಾ ಬರಿದು. ಬಣ್ಣಿಸಲಾಗದಷ್ಟು ಬರಿದು. ಈಗ....ಈಗ ಅಹಂಭಾವದ ಪದರ ಕಳಚುತ್ತಿದೆ. ಕ-ಳ-ಚಿ-ತು. ಭಗವನ್! ಓ. ಪೂರ್ತಿಯೇ ಕಳಚಿತು....ಇನ್ನೇನು, ಕೆಳಗೆ ಬೀಳುವುದರಲ್ಲಿದೆ. ಬಿತ್ತು.... ಬಿತ್ತು, ಕೆಳಗೇ ಬಿದ್ದೇಬಿಟ್ಟಿತು! ಈಗ....ಈಗ ಮನೋಮಂಡಲ ಬರಿದಾಗಿ-ಸೂರೆಯಾಗಿ ಬಿಟ್ಟಿದೆ. ಮನಸ್ಸಿನ ಅಲೆಗಳೂ ಇಲ್ಲ. ತರಂಗಗಳೂ ಇಲ್ಲ. ನಿರ್ಮಲ, ನಿರ್ವಿಕಲ್ಪ; ನಿರ್ವಿಕಾರ.

ಹರಿಃ ಓಂ! ಹರಿಃ ಓಂ! ಹರಿಃ ಓಂ!

ಅದೋ! ಅತ್ಯಂತ ಪ್ರಕಾಶಮಯಿಯಾದ ಪರಮ ವಸ್ತುವೊಂದು ಇತ್ತ ಬರುತ್ತಿದೆ...ಬರುತ್ತಿದೆ. ಓ ಬಂದೇ ಬಿಟ್ಟಿತು, ಹರಿಃ ಓಂ! ಹರಿಃ ಓಂ! ಹರಿಃ ಓಂ! ಹರಿಃ ಓಂ! ಹರಿಃ ಓಂ!

ಪರಮ ವಸ್ತು....ಅಪೂರ್ವವಾದ ಪರಮ ವಸ್ತು ಮನಸ್ಸನ್ನು ಆಕ್ರಮಿಸುತ್ತಿದೆ. ಓ! ಆ ಜ್ವಲಂತಶಕ್ತಿ ಆಕ್ರಮಿಸುವುದು ಮಾತ್ರವಲ್ಲ ಸುಡುತ್ತಿದೆ...ಸುಡುತ್ತಿದೆ. ಭಗವನ್! ಅಯ್ಯೋ, ಉರಿ....ಉರಿ....ಉರಿ! ಹಾ. ಬಿಡಲೂ ಆರೆ, ಭರಿಸಲೂ ಆರೆ, ಉರಿ....ಉರಿ! ಮೈಯೆಲ್ಲಾ ಉರಿ. ಧಗಧಗ ಧಹಿಸುತ್ತಿದೆ ಭಗವನ್! ತಾಳಲಾರೆ, ಸಹಿಸಲಾರೆ, ಹಾ, ಹರಿಃ ಂ! ಹರಿಃ ಓಂ! ಹರಿಃ ಓಂ!

ಜ್ಞಾನಮಂದಿರದಿಂದ ಹೃತ್ ಕುಂಡಲಿನಿಗೆ ಜ್ವಲಂತ ಶಕ್ತಿ ಇಳಿಯುತ್ತಿದೆ....ಇಳಿದೇ ಬಿಟ್ಟಿತು. ಸಣ್ಣ ತಾವಿನಲ್ಲಿ ಹಿಡಿಸಲಾರದೆ ಹಿಡಿಸಿ ಅಮುಕುತ್ತಿದೆ....ಜಡಿದು ಕುಟ್ಟಿ ನುಗ್ಗುತ್ತಿದೆ. ಅಯ್ಯೋ, ಸಾಯುವಂತೆ ತುಳಿಯುತ್ತಿದೆ! ಹಾ! ತಾಳಲಾರೆ....ಭರಿಸಲಾರೆ. ಹೃನ್ಮಂದಿರವೇ ಒಡೆದು ಚೂರು ಚೂರಾಗಿ ಹೋಗಬಹುದು. ಹೃದಯ ಉಳಿಯುವ ಸಂಭವವೇ ಇಲ್ಲ. ಹಾ, ತಾಳಲಾರೆ ಭಗವನ್! ಇದು ನನ್ನ ಶಕ್ತಿಗೆ ಮೀರಿದ್ದು....ಖಂಡಿತ ಮೀರಿದ್ದು,

ಹಾ! ಎಂತಹ ಕಠಿಣ ಪ್ರಸಂಗ. ಹೃದಯ ಬಿರಿಯುತ್ತಿದೆ....ಬಿರಿಯುತ್ತಿದೆ ಭಗವನ್! ಅಯ್ಯೋ, ಬಿರಿದೇ ಬಿಟ್ಟಿತು! ಅದರಲ್ಲಿ ಆ ಪರಮ ವಸ್ತು.... ಪರಮ ವಸ್ತು....ಪ್ರಕಾಶಮಾನವಾದ ಪರಮವಸ್ತು ಹಿಡಿಸಲಾಗದಿದ್ದರೂ ಹಿಡಿಸಿ-ಹಿಗ್ಗಿಸಿ ಮಂಡಿಸಿತು. ಹೃದಯ ಬಿರಿಯುತ್ತಿದ್ದರೂ ಅದಕ್ಕೆ ಲಕ್ಷ್ಯವೇ ಇಲ್ಲ. ಭಾರ ಭಾರಾತಿಭಾರ! ತಾಳಲಾರೆ; ಆದರೆ, ಆದರೆ ಈಗ ಎಂತಹ ಅನುಭವ....? ಆ ಪ್ರಾಣಾಂತಕವಾದ ನೋವು ಈಗ ಸುಖಾಂತ ವಾಯಿತು. ಹಾ, ಅಪೂರ್ವ ಅನುಭವ ಭಗವನ್! ಆ ಪರಮವಸ್ತುವಿನಿಂದ ಹೃನ್ಮಂದಿರದಲ್ಲಿ ಈಗ ಬೆಳಕೇ ಬೆಳಕು. ಸ್ಥಳವೂ ವಿಸ್ತಾರ, ಭಾವನೆಯೂ ವಿಸ್ತಾರ. ಶಾಂತಿ ಶಾಂತಿ ಶಾಂತಿಃ! ಬಹು ಮೂಲ್ಯವಾದ-ಅಪಾರವಾದ ಮಹಾಶಾಂತಿಯ ಬೀಡು. ಓಂ ಶಾಂತಿ!

ಆ ಪರಮ ವಸ್ತು ಯಾವುದು? ಎಲ್ಲಿಂದ ಬಂತು? ಘನೀಭೂತವಾದ ಈ ಶಾಂತಿಗೆ ಕಾರಣೀಭೂತವಾದುದೇ ಆ ಪರಮ ವಸ್ತು? ಅದು ಎಲ್ಲಿಂದಾದರೂ ಬರಲಿ, ಹೇಗಾದರೂ ಇರಲಿ; ಹೃನ್ಮಂದಿರದಲ್ಲಿ ನೆಲೆ ನಿಂತುದಷ್ಟೇ ಸಾಕು. ಇನ್ನದನ್ನು ತಳ್ಳಿದರೂ ಹೋಗದೇನೋ ಎಂಬಷ್ಟು ರುದ್ರಗಂಭೀರ. ಸವಿತೃಶ್ರೀ ತೇಜ! ಭಗವನ್! ನಾನು ಧನ್ಯೆ!

ಓಂ ಶಾಂತಿ ಶಾಂತಿ ಶ್ಯಾಂತಿಃ!

ಈಗ....ಈಗ ಹೃದಯ ಭಾರ ಮಾತ್ರವಲ್ಲ, ಶರೀರವೂ ಭಾರ! ಅಲುಗಲೂ ಆಗುತ್ತಿಲ್ಲ. ಕಲ್ಲಿಗಿಂತಲೂ ಘನ, ಅಗ್ನಿಗಿಂತಲೂ ಪ್ರಕಾಶ. ಎಲ್ಲೆಡೆಯೂ ಬೆಳಕೇ ಬೆಳಕು. ಒಳಗೂ ಬೆಳಕು; ಹೊರಗೂ ಬೆಳಕು. ಕಿರಣಗಳು ಬಲು ಸೂಕ್ಷ್ಮ....ಸೂಕ್ಷ್ಮಾತಿಸೂಕ್ಷ್ಮ....ಸೂಜಿಯಂತೆ ಚುಚ್ಚುತ್ತಿವೆ; ಇಡೀ ವ್ಯೆಯ್ಯನ್ನೇ ಚುಚ್ಚಿ ಚುಚ್ಚಿ ಸಂಸ್ಕರಿಸುತ್ತಿವೆ. ಈಗ....ಈಗ ದೇಹ ಘನ ಜೆಳಕಿನ ಮೂಸೆಯಲ್ಲಿ ಕರಗಿ ಕರಗಿ ನೀರಾಗಿ ಹರಿಯತೊಡಗಿದೆ. ಸಹಸ್ರ ಸಹಸ್ರ ಧಾರೆಗಳಾಗಿ ಹರಿಯುತ್ತಿದೆ...ಹರಿದು ಹೋಗುತ್ತಿದೆ. ಇನ್ನು ಉಳಿದಿರುವುದು ಒಂದೇ ಒಂದು. ಅದೇ ಆತ್ಮಘನ. ಆ ತಾದಾತ್ಮ್ಯ ಭಾವವನ್ನು ಬಿಟ್ಟರೆ ಬೇರೆ ಏನೂ ಇಲ್ಲವೇ ಇಲ್ಲ. ನಾನೇ ನಾನು. ನಾನೇ ಆತ್ಮ. ನಾನೇ ಪರಮಾತ್ಮ. ನಾನೇ ವಿಶ್ವಂಭರ. ನಾನೇ ವಿಶ್ವಂಚರ.

ಭೂತ-ವರ್ತಮಾನ-ಭವಿಷ್ಯತ್‌ಗಳ ಪರಿಭೇದವೇ ಇಲ್ಲ. ಯುಗಧರ್ಮದ ಗೋಜೂ ಇಲ್ಲ. ನಾಕ–ನರಕಗಳ ಭಯವೂ ಇಲ್ಲ. ಸುಖ–ದುಃಖಗಳ ಐಭೋಗವೂ ಇಲ್ಲ. ರೋಗ-ರುಜಿನಗಳ ಭಯವೂ ಇಲ್ಲ. ಈವರೆಗೆ ಪರಮ ಹಿಂಸೆಯಾಗಿದ್ದ ಜೀವ ಯಾತನೆ ಈಗ ಇಲ್ಲವೇ ಇಲ್ಲ. ಮಾನಸಿಕ ಹಿಂಸೆ ಯಾಗಲೀ, ಆತ್ಮಹಿಂಸೆಯಾಗಲೀ ಲವಲೇಶವೂ ಇಲ್ಲ. ನಾನು...ನಾನು ಪರಮ ವಸ್ತುವಿನ ಸಂಗಾತಿಯಾಗಿ ಪರಮಸುಖಿ! ಸತ್ಯ ಸುಖಿ! ಭಗವನ್!

ಹರಿಃ ಓಂ! ಹರಿಃ ಓಂ! ಹರಿಃ ಓಂ!

ಯಾಜ್ಞವಲ್ಕ್ಯ ಮಹರ್ಷಿ–ದೇವಿ, ಯೋಗಿನಿ! ಅದೇ ಪರಬ್ರಹ್ಮ ವಸ್ತು!

ಮೈತ್ರೇಯೀ–ಹರಿಃ ಓಂ!

ಯಾಜ್ಞವಲ್ಕ್ಯ ಮಹರ್ಷಿ–ಅದೇ ಸ್ವಯಂಭು!

ಮೈತ್ರೇಯೀ–ಹರಿಃ ಓಂ!

ಯಾಜ್ಞವಲ್ಕ್ಯ ಮಹರ್ಷಿ–ಅದೇ ಪರಮಾತ್ಮ!

ಮೈತ್ರೇಯೀ–ಹರಿಃ ಓಂ!

ಯಾಜ್ಞವಲ್ಕ್ಯ ಮಹರ್ಷಿ–ಅದೇ ಅಂತರಾತ್ಮ!

ಮೈತ್ರೇಯೀ–ಹರಿಃ ಓಂ!

ಯಾಜ್ಞವಲ್ಕ್ಯ ಮಹರ್ಷಿ–ಅದೇ ಸರ್ವಾತ್ಮ!

ಮೈತ್ರೇಯೀ–ಹರಿ ಓಂ!

ಯಾಜ್ಞವಲ್ಕ್ಯ ಮಹರ್ಷಿ–ಅದೇ ಚಿದ್ಘನ!

ಮೈತ್ರೇಯೀ–ಹರಿಃ ಓಂ!

ಯಾಜ್ಞವಲ್ಕ್ಯ ಮಹರ್ಷಿ–ಅದೇ ವಿಭು!

ಮೈತ್ರೇಯೀ–ಹರಿಃ ಓಂ!

ಯಾಜ್ಞವಲ್ಕ್ಯ ಮಹರ್ಷಿ–ಅದೇ ಬ್ರಹ್ಮಾನಂದ!

ಮೈತ್ರೇಯಿ–ಹರಿಃ ಓಂ !

ಯಾಜ್ಞವಲ್ಕ್ಯ ಮಹರ್ಷಿಯು ಅವಳ ತಲೆಯ ಮೇಲಿರಿಸಿದ್ದ ವರದ ಹಸ್ತವನ್ನು ಹಿಂತೆಗೆದುಕೊಂಡು–ಕೇಳು ದೇವಿ.....

ಮೈತ್ರೇಯಿಯು ಸುಷುಪ್ತಿಯಿಂದ ಎಚ್ಚೆತ್ತು ಆಶ್ಚರ್ಯವಿಸ್ತೃತ ಲೋಚನಗಳಿಂದ ನೋಡುತ್ತ ಅತ್ಯಂತ ಆನಂದಪುಳಕಿತಳಾಗಿ–ಹಾ ! ಎಂಥ ಬ್ರಹ್ಮಾನಂದಮಯ ಲೋಕ ?

ಯಾಜ್ಞವಲ್ಕ್ಯ ಮಹರ್ಷಿ–ಕೇಳು, ದೇವಿ ! ಬ್ರಹ್ಮಾನಂದ ಎಂಬುದು ಬ್ರಹ್ಮಸಾಕ್ಷಾತ್ಕಾರದಿಂದ ಉಂಟಾದುದು. ಯಾವುದು ಬ್ರಹ್ಮಾನಂದವೋ ಅದನ್ನು ಕಣ್ಣಿನಿಂದ ನೋಡಿಯಾಗಲೀ ಕೈಯಿಂದ ಮುಟ್ಟಿಯಾಗಲೀ ವಿಷಯೀಕರಿಸುವುದು ಅಸಾಧ್ಯ. ಅದನ್ನು ಸ್ವತಃ ಅನುಭವಿಸಿಯೇ ತಿಳಿಯ ಬೇಕು. ಆನಂದ ಎಂಬುದು ಭೂಮವಾದರೆ ಬ್ರಹ್ಮಾನಂದ. ಆನಂದವನ್ನು ಕೈಗೂಡಿಸಿಕೊಳ್ಳುವ ಬಗೆಯನ್ನು ತಿಳಿಯದೆ ಯಾವುಯಾವುದೋ ವಸ್ತುಗಳ ಮುಖೇನ ಪಡೆದುಕೊಳ್ಳಬಹುದೆಂಬ ಇಚ್ಛೆಗೆ ಮರುಳಾಗಿ ಕಾಮಕಾಮಿಗಳ ದಾಸನಾಗುತ್ತಾನೆ ಮನುಷ್ಯ. ಅದು ಇರುವುದು ನಮ್ಮನಮ್ಮಲ್ಲೇ ಅದನ್ನು ಪ್ರಯತ್ನಪೂರ್ವಕವಾಗಿ ಪಡೆದುಕೊಳ್ಳುವುದರಲ್ಲಿರುವ ಆನಂದವು ಬ್ರಹ್ಮಾನಂದಕ್ಕೆ ನಾಂದಿ. ಬ್ರಹ್ಮಾನಂದವು ಹೃದ್ಗತವಾದರೆ ಮೋಕ್ಷ.

ಮೈತ್ರೇಯಿ–ಸ್ವಾಮಿ, ಭಗವನ್ ! ನಾನು ತುಂಬ ಉಪಕೃತಳಾದೆ.

ಯಾಜ್ಞವಲ್ಕ್ಯ ಮಹರ್ಷಿ–ಯೋಗಿನಿ, ಇನ್ನೂ ಕೇಳು ! ಯಾವುದಕ್ಕೆ ಆಕಾರವನ್ನು ಆರೋಪಮಾಡಿ ವಿಷಯೀಕರಿಸುವುದಕ್ಕೆ ಆಗುವುದಿಲ್ಲವೋ ಅಂತಹ ಪರಮವಸ್ತುವನ್ನು ಗ್ರಹಿಸುವುದಕ್ಕೆ ಸಹಾಯಕವಾದ ಸಾಕಾರವನ್ನು ಅವಲಂಬಿಸಬಹುದು. ಆದರೆ, ಎಲ್ಲಾ ಸಾಕಾರಗಳನ್ನೂ ಅಬ್ರಹ್ಮವೆಂದು ಪರಿಗಣಿಸಲಾಗುವುದಿಲ್ಲ. ಸಾಕಾರದ ಹಿಂದೆ ಇರುವ ನಿರಾಕಾರವನ್ನು ಗುರುತಿಸುವುದೇ ಬ್ರಹ್ಮಜ್ಞಾನ.

ಮೈತ್ರೇಯಿ, ಕೇಳು ! ಯಾವುದರ ಮೂಲಕ ಮನಸ್ಸು ಮನನ ಮಾಡುವುದೋ ಅದು ಬ್ರಹ್ಮಶಕ್ತಿಯಿಂದ ಎಂದು ತಿಳಿ. ಬ್ರಹ್ಮ

ಶಕ್ತಿಯಿಂದಲ್ಲದೆ ಮನಸ್ಸು ಮನನ ಮಾಡಲಾರದು. ಮನಸ್ಸಿಗೆ ತನ್ನ ಹಿಂದಿರುವ ಬ್ರಹ್ಮವನ್ನು ಗುರುತಿಸಲಾಗದಿದ್ದರೂ, ಅದರ ಕ್ರಿಯೆಗಳು ನಡೆಯುವುದು ಬ್ರಹ್ಮನಿಂದಲೇ. ಬ್ರಹ್ಮನ ವಿಷಯದಲ್ಲಿ ಮನಸ್ಸಿನ ಕಲ್ಪನೆಯನ್ನು ಬದಿಗಿಟ್ಟು ಪರಮಾರ್ಥ ದೃಷ್ಟಿಯಿಂದ ನೋಡಿದಾಗ ಇದೆಲ್ಲಾ ಮನಸ್ಸಿನ ಆರೋಪ ಎಂಬುದು ಸುಲಭವಾಗಿ ವ್ಯಕ್ತವಾಗುತ್ತದೆ. ಆರೋಪದ ಹಿಂದೆ ಇರುವ ಅವನೇ ಪರಬ್ರಹ್ಮವಸ್ತು. ಅವನು ಅಣುವಿಗಿಂತ ಅಣುವೆಂದೂ, ಮಹತ್ತಿಗಿಂತ ಮಹತ್ತೆಂದೂ ತಿಳಿ. ಅದೇ ವೇದಾಂತ ಸಾರ; ಅದೇ ಅಧ್ಯಾತ್ಮಿಕ ಸತ್ಯ.

ಮೈತ್ರೇಯೀ–ಭಗವನ್, ಈಗ ಅರಿವಾಯಿತು.

ಯಾಜ್ಞವಲ್ಕ್ಯ ಮಹರ್ಷಿ–ನಿನ್ನ ಅನುಭವ....?

ಮೈತ್ರೇಯೀ–ಅಹಃ! ಅದನ್ನು ಬಣ್ಣಿಸಿ ಪೂರೈಸಲಾರೆ. ಅಂತಹ ಅಮೋಘವಾದ ಅನುಭವ. ಅದೆಷ್ಟು ಪ್ರಕಾಶಮಾನವಾದ ಪರಮವಸ್ತು?.. ಅಹಹ, ಅದರ ತೀವ್ರ ಸಂಚರಣದಿಂದ ಹೃತ್‌ರಂಗವೇ ನುಚ್ಚುನೂರಾಗುವಂತಹ ಭಯ–ಭೀತಿ. ಒಮ್ಮೆ ತಲ್ಲಣಿಸಿ ಹೋದೆ. ಅನಂತರ·····ಪರಮವಸ್ತುವಿನ ಅನುಭವದಿಂದ ಸ್ವಾಂತನ ಮೂಡಿತು. ಸುಖಿಯಾದೆ; ಪರಮ ಸುಖಿಯಾದೆ. ಆ ಸಮಾಧಿ ಸ್ಥಿತಿಯಲ್ಲೇ ಇರಬಲ್ಲೆನಾಗಿದ್ದರೆ ಈ ಪ್ರಾಪಂಚಿಕ ವ್ಯಾಪಾರ ಬೇಡವೇ ಬೇಡವಾಗಿತ್ತು.

ಯಾಜ್ಞವಲ್ಕ್ಯ ಮಹರ್ಷಿ–ಈಗ ಅದನ್ನೇ ಸಂಪೂರ್ಣವಾಗಿ ಅರಿತುಕೊಳ್ಳಬೇಕಾದ್ದು.

ಮೈತ್ರೇಯಿಯು ಅತ್ಯಂತ ಹಸನ್ಮುಖಿಯಾಗಿ–ನಿಮ್ಮಿಂದ ಇದುವರೆಗೆ ನಾನು ಪಡೆದುಕೊಂಡ ಉಪದೇಶ ಈಗೀಗ ಫಲಿಸುತ್ತಿದೆ.

ಯಾಜ್ಞವಲ್ಕ್ಯ ಮಹರ್ಷಿ-ಆದರೂ ಸಹ,ನಿನಗೆ ನೂರರ ಒಂದಂಶವೂ ಕರಗತವಾಗಲಿಲ್ಲ. ಇನ್ನು ಮುಂದಿನ ಸಾಧನೆ ಅಗಾಧ. ಅದರಲ್ಲೇ ಮನವಿಟ್ಟು, ಅದರಲ್ಲೇ ಮುಳುಗಿ, ಅದರಲ್ಲೆ ಮೈಮರೆಯಬೇಕು; ಅಷ್ಟಲ್ಲದೆ ಕೈಗೂಡದು. ಅಲ್ಪಸ್ವಲ್ಪ ಸಾಧನೆಯಿಂದ ಏನೂ ಪ್ರಯೋಜನವಿಲ್ಲ.

ಮೈತ್ರೇಯೀ–ನಿಮ್ಮ ಅನುಗ್ರಹದಿಂದ ಎಲ್ಲವೂ ಕೈಗೂಡಿ ಬರಲಿ ಭಗವನ್! ಜನ್ಮಜನ್ಮಾಂತರಗಳ ಪುಣ್ಯಫಲ ಈಗೀಗ ಪ್ರಾಪ್ತಿಯಾಗುತ್ತಿದೆ.

ಯಾಜ್ಞವಲ್ಕ್ಯ ಮಹರ್ಷಿ–ದೇವೀ, ಆಶ್ವಸ್ಥಳಾಗು, ನಿನ್ನ ಮುಂದಿನ ಪಥ ಸುಲಲಿತವಾಗಲಿ.

ಮೈತ್ರೇಯೀ–ಹರಿಃ ಓಂ!

ಯಾಜ್ಞವಲ್ಕ್ಯ ಮಹರ್ಷಿ–ಸ್ವಲ್ಪ ಕೊರಳೆತ್ತು, ಸ್ವರ ಇನ್ನೂ ಸ್ಫುಟವಾಗಿ ಬರಲಿ.

ಮೈತ್ರೇಯಿಯು ಕೊರಳನ್ನು ಇನ್ನಷ್ಟು ಮೇಲೆತ್ತಿ ಉಚ್ಚ ಮಧುರ ಸ್ವರದಲ್ಲಿ–ಹರಿಃ ಓಂ!

ಆ ಓಂಕಾರ ನಾದವು ಪರಿಸರದ ರುದ್ರಮೌನವನ್ನು ತಾಗಿ ಮರುದನಿಗೊಂಡು ಊರ್ಧ್ವಮುಖವಾಗಿ ಏರಿ ಅನಂತಾನಂತದಲ್ಲಿ ವಿಲೀನವಾಗುವುದು. ಅವಳು ಮತ್ತೆ ಭಾವ ಸಮಾಧಿಯಲ್ಲಿ ಸಂಪೂರ್ಣ ಮುಳುಗಿ ಮೈ ಮರೆಯುವಳು. ಅವಳ ನಿಶ್ಚಲವಾದ ಅಂಗಭಂಗಿಯಲ್ಲಿ ಭಕ್ತಿಭಾವದ ಲಹರಿಗಳು ಅಗ್ನಿಸ್ಫುಲಿಂಗಗಳಂತೆ ಹೊಮ್ಮಿ ಸುತ್ತಲೂ ದಿವ್ಯ ಪ್ರಭಾಳೆಯನ್ನು ಸೃಷ್ಟಿಸಿದುವು.

ಯಾಜ್ಞವಲ್ಕ್ಯಮಹರ್ಷಿಯು ಭಾವಾವಿಷ್ಟನಾಗಿ ಹಸ್ತವನ್ನು ತಲೆಯ ಮೇಲಿಟ್ಟು ಮೃದುಮಂದವಾಣಿಯಲ್ಲಿ–ಕೇಳು ಮೈತ್ರೇಯೀ, ಸತ್ಯಮೇವ ಜಯತೇ ಎಂದೆಂದಿಗೂ ಸತ್ಯಕ್ಕೆ ಜಯ ಲಭಿಸುತ್ತೆಂಬುದು ಶತಸ್ಸಿದ್ಧ. ಆದರೂ, ನಾವು ಈ ಜಗತ್ತಿನಲ್ಲಿ ಸತ್ಯ ಮತ್ತು ಮಿಥ್ಯಗಳ ಮಿಶ್ರಣವನ್ನೇ ಎಲ್ಲೆಲ್ಲಿಯೂ ಕಾಣುತ್ತೇವೆ. ಯಾವೊಬ್ಬ ಸಾಧಕನೂ ಮೊದಲು ಮಾಡಬೇಕಾದುದು ಇವುಗಳ ವಿಭಜನೆಯನ್ನು. ಯಾವುದು ಸತ್ಯವೋ ಅದಕ್ಕೆ ಸಾವಿಲ್ಲ. ಸತ್ಯವು ಇಂದು ನಾಳೆಗೆ ಮಾತ್ರವಲ್ಲ; ಅದು ಎಂದೆಂದಿಗೂ ಇರತಕ್ಕದ್ದು. ಅದು ಒಳ್ಳೆ ಕಾಳಿನಂತೆ ಗಟ್ಟಿ, ಉಳಿದದ್ದೆಲ್ಲಾ ಜೊಳ್ಳು. ಆ ಗಟ್ಟಿ ಕಾಳೇ ಪರಬ್ರಹ್ಮ. ಅವನನ್ನು ಹೊರತು ಉಳಿದುದೆಲ್ಲವೂ ಜೊಳ್ಳು ಅಥವಾ ವ್ಯರ್ಥ. ಪರಬ್ರಹ್ಮನನ್ನು ಉಪಾಸನೆ ಮಾಡುವುದು ಆ ಗಟ್ಟಿ ಕಾಳಿನ

ಮೂಲಕವೇ. ಅಂದರೆ ನಿತ್ಯೋಪಾಸನೆಯಲ್ಲಿ ಸತ್ಯವನ್ನು ಮೊದಲು ಪ್ರತಿಷ್ಠಿಸಬೇಕು, ನಮ್ಮ ಹೃತ್ ಪೀಠದಲ್ಲಿ. ಅನಂತರ ಮನವನ್ನು ಏಕಾಗ್ರಗೊಳಿಸಿ ತನ್ಮಯೇನ ಪರಬ್ರಹ್ಮನನ್ನು ಧ್ಯಾನಿಸತಕ್ಕದ್ದು. ಸತ್ಯದಿಂದಲೇ ಬ್ರಹ್ಮಸಾಕ್ಷಾತ್ಕಾರ ಮತ್ತು ಮುಕ್ತಿ. ಸಮ್ಯಕ್ ಜ್ಞಾನ ಬಲಿಯಬೇಕಾದರೆ ಚಿತ್ತಶುದ್ಧಿಯಿರಬೇಕು. ಚಿತ್ತಶುದ್ಧಿಯಿಲ್ಲದಿದ್ದರೆ ವಿಷಯವಾಸನೆಗಳಿಂದ ಬಿಡುಗಡೆಯಿಲ್ಲ. ಎಲ್ಲಾ ವಿಷಯವಾಸನೆಗಳಿಂದ, ಉಪಾಧಿಗಳಿಂದ ಪಾರಾದ ಚಿತ್ತಕಲ್ಪಕ್ಕೆ ಹೊಳೆಯುವ ಪ್ರತಿಬಿಂಬವೇ ಪರಬ್ರಹ್ಮ. ಮಂಗಳಾಂಗೀ, ಇದನ್ನು ಸ್ಪಷ್ಟವಾಗಿ ತಿಳಿ.

ಮೈತ್ರೇಯೀ–ಹರಿಃ ಓಂ!

ಯಾಜ್ಞವಲ್ಕ್ಯಮಹರ್ಷಿಯು ಗಂಭೀರಭಾವದಿಂದ ನಿಮೀಲಿತ ನೇತ್ರನಾಗಿ ಪ್ರವಚನವನ್ನು ಸರ್ವಥಾ ಮೊದಲಿನಂತೆಯೇ ವಿವರಿಸುತ್ತಾನೆ. ಪರ್ಣಶಾಲೆಯ ಆವರಣದಲ್ಲಿ ಹೆಪ್ಪುಗಟ್ಟಿದ ಘನಶಾಂತಿಯಲ್ಲಿ ಧ್ವನಿ ಧೃಢವಾಗಿ ಮೊಳಗಿತು.

ಯಾಜ್ಞವಲ್ಕ್ಯಮಹರ್ಷಿ–ಯೋಗಿನೀ, ಮೈತ್ರೇಯೀ? ಈಗ ಕೇಳು. 'ನಾನು' ಎಂಬ ವ್ಯಕ್ತಿತ್ವಕ್ಕೆ ಇದೇ ಮಹಾಶ್ರಯ, ಇದೇ ತಳಪಾಯ. ಹಾಗೆಯೇ ನೋಡತಕ್ಕ ದೃಶ್ಯವಸ್ತುಗಳಿಗೂ ಕೂಡ. ಮೊದಲು ಬ್ರಹ್ಮ ಅದರ ಮೇಲೆ ನಾನು ಮತ್ತು ದೃಶ್ಯವಸ್ತು. ಅಂದರೆ, ಮೊದಲು ಸಾಗರ ಅನಂತರ ಅದರ ಮೇಲೆ ನೆಲೆ ನಿಂತಿರುವ ಅಲೆ, ನೊರೆ, ಗುಳ್ಳೆ ಇವುಗಳೆಲ್ಲ ಅಲ್ಲವೆ? ಹಾಗೆಯೇ ಈ ವಿಶ್ವಪ್ರಪಂಚಕ್ಕೆ ತಳಪಾಯವಾಗಿದೆ ಆ ಬ್ರಹ್ಮವಸ್ತು.

ಮೈತ್ರೇಯೀ, ಪ್ರಾಣ ಎಂದು ಯಾವುದನ್ನು ಕರೆಯುತ್ತೇವೊ ಅದು ಪರಬ್ರಹ್ಮನ ಅಂಶ. ಪ್ರಾಣಕ್ಕೆ ಇರುವುದು ಎರಡು ಬಗೆಯ ಸ್ವರೂಪ. ಅದರಲ್ಲಿ ಪ್ರಥಮ ಅಂಶ ಸರ್ವಾತ್ಮ; ಎರಡನೆಯ ಅಂಶ ಜೀವಾತ್ಮ. ಬರೀ ದೇಹ ಎಂದರೆ ಜಡ. ಜೀವಾತ್ಮ ಎಂದರೆ ಪ್ರಾಣ. ಜಡಕ್ಕೂ ಪ್ರಾಣಕ್ಕೂ ಎಲ್ಲಿಯ ಸಂಬಂಧ ಎಂಬ ಯೋಚನೆ ಬರುತ್ತದೆ ವಿಚಾರಪರರಾದರೆ. ಮೈತ್ರೇಯೀ ಈ ಜಡವಾದ ದೇಹಕ್ಕೆ ಪ್ರಾಣ ಹೇಗೆ, ಯಾವ ರೂಪಿನಿಂದ

ಪ್ರವೇಶಿಸಿ ಕೆಲಸ ಮಾಡುತ್ತದೆ? ಎಂಬ ಪ್ರಶ್ನೆಗೆ ಉತ್ತರವನ್ನು ಕೇಳು. ಈ ದೇಹದಲ್ಲಿ ಪಂಚಪ್ರಾಣನಾಡಿಗಳೂ, ಪಂಚೇಂದ್ರಿಯಗಳೂ ಇರುತ್ತವೆ, ಇವೆಲ್ಲ ಕೆಲಸಮಾಡಬೇಕಾದರೆ ಅವುಗಳ ಹಿಂದೆ ಪ್ರಾಣನು ಇರಲೇ ಬೇಕು. ಪರಮ ಚೈತನ್ಯ ವಸ್ತುವಾದ ಪ್ರಾಣಾತ್ಮನು ಜಡದಲ್ಲಿ ಹೇಗೆ ಇದ್ದಾನೆ ಎಂಬುದು ಯೋಚಿಸಿದರೆ ಸೋಜಿಗವೇ. ಪ್ರಾಣನು ದೇಹಕ್ಕೆ ಬರುವುದು ಎಷ್ಟು ಸೋಜಿಗವೋ ದೇಹವನ್ನು ಬಿಟ್ಟು ಹೋಗುವುದೂ ಅಷ್ಟೇ ಸೋಜಿಗ. ಸಾಯುವವನ ಬಳಿ ಕಾದು ಕುಳಿತಿದ್ದರೂ ಹೋಗುವ ಪ್ರಾಣವನ್ನು ನಾವು ನೋಡಲಾರೆವು. ದೇಹವೂ ದೇಹೇಂದ್ರಿಯಗಳೂ ಇದ್ದಲ್ಲಿಯೇ ಇರುತ್ತವೆ. ಪ್ರಾಣನು ಮಾತ್ರ ಇರುವುದಿಲ್ಲ. ಪರಬ್ರಹ್ಮನು ಈ ವಿಶ್ವಪ್ರಪಂಚವನ್ನು ಹೇಗೆ ಧರಿಸಿರುವನು ಮತ್ತು ನಿಯಂತ್ರಿಸುವನು ಎಂಬುದನ್ನು ಗಮನಿಸಿದರೆ ಸಮಷ್ಟಿರೂಪದ ಬ್ರಹ್ಮನಿಗೂ ವ್ಯಷ್ಟಿರೂಪದ ಪ್ರಾಣನಿಗೂ ಏನೇನೂ ವ್ಯತ್ಯಾಸ ಬರುವುದಿಲ್ಲ. ಅಲ್ಲಿ ಅವನು ವಿಶ್ವಂಚರ. ಇಲ್ಲಿ ಇವನು ದೇಹಂಚರ.

ಮೈತ್ರೇಯೀ, ಪ್ರಾಣಾತ್ಮನಿಗೂ ಪರಮಾತ್ಮನಿಗೂ ಇರುವ ಸಂಬಂಧ ಬೆಳಕು ನೆರಳುಗಳಂತೆ. ವಸ್ತುವನ್ನು ನೆರಳು ಹೇಗೆ ಅನುಕರಿಸುವುದೋ ಹಾಗೆಯೇ ಪ್ರಾಣಾತ್ಮನು ಪರಮಾತ್ಮನನ್ನು ಅನುಕರಿಸಬೇಕು. ಬರೀ ನೆರಳಿಗೆ ಎಂದೂ ಸ್ವಾತಂತ್ರ್ಯವಿಲ್ಲ. ಅದು ಮತ್ತೊಂದು ವಸ್ತುವನ್ನು ಅನುಕರಿಸಿಕೊಂಡೇ ಇರುತ್ತದೆ. ಪ್ರಾಣನು ಸತ್ಯವಸ್ತುವಿನಲ್ಲಿ ಸಂಪೂರ್ಣ ಸಮರ್ಪಿತವಾಗಿರುವನು. ಸತ್ಯ ವಸ್ತು ಅಥವಾ ಸತ್ಯಪುರುಷ ಎಂದರೆ ಪರಮಾತ್ಮನೇ, ಅವನ ನೆರಳಿನ ಎಳೆಗಳು ಈ ಜೀವಾತ್ಮರುಗಳು. ಅವನಿಲ್ಲದಿದ್ದರೆ ನೆರಳುಗಳೇ ಇಲ್ಲ. ಯಾವುದೊಂದು ವಸ್ತು ಇದ್ದರೆ ತಾನೆ ನೆರಳು? ಪರಮಾತ್ಮನ ದಿವ್ಯಾಂಶದಿಂದ ಸಂಭವಿಸಿದ ಜೀವಾತ್ಮಕ್ಕೆ ಜನ್ಮಾಂತರದ ವಿಷಯವಾಸನಾದಿಗಳು, ಮನಸ್ಸಿನ ಆಶೋತ್ತರಗಳು, ಬುದ್ಧಿಯ ಸಂಕಲ್ಪಾದಿಗಳು ಒಟ್ಟುಗೂಡಿ ಮರುಹುಟ್ಟು ಪಡೆಯಲು ನಿಯೋಜಿಸುತ್ತವೆ. ಆಸೆ, ಆಕಾಂಕ್ಷೆಗಳು ಈಡೇರಬೇಕಾದರೆ ಜೀವಾತ್ಮ ದೇಹಧಾರಣೆ ಮಾಡಲೇಬೇಕು. ದೈಹಿಕ ಸಾಧನೆಯಿಂದಲ್ಲದೆ ಆಸೆಗಳು ಈಡೇರಲಾರವು. ಇಂದ್ರಿಯಗಳ

ಮೂಲಕ ತಾದಾತ್ಮ್ಯಭಾವವನ್ನು ಹೊಂದಿರುವುದರಿಂದ ವಿಷಯವಸ್ತುಗಳು ಲಭ್ಯ. ಆದ್ದರಿಂದಲೇ ಆಶೆಯಭಾರ ದೇಹಕ್ಕೆ ಪ್ರಾಣವನ್ನು ಇಳಿಸುತ್ತದೆ. ಭಾರವಾದ ವಸ್ತು ನೀರಿನಲ್ಲಿ ಸರಾಗವಾಗಿ ಇಳಿಯುವಂತೆ. ಪೂರ್ವಜನ್ಮದ ಕರ್ಮಾನುಸಾರ ಯಾವ ಬಗೆಯ ದೇಹವನ್ನು ಧರಿಸಬೇಕೋ ಅದನ್ನು ಮಾತ್ರ ಪ್ರಾಣನು ಧರಿಸಲು ಸಾಧ್ಯ. ತಾನೇ ತಾನಾಗಿ, ತನ್ನ ಇಚ್ಛೆಯ ಪ್ರಕಾರವೇ ಯಾವ ದೇಹವನ್ನು ಆರಿಸಿಕೊಳ್ಳುವಂತಿಲ್ಲ. ಕರ್ಮವಶಾತ್ತಾಗಿ ಮತ್ತು ದೈವಾಯತ್ತಾಗಿ ಪೂರ್ವನಿಶ್ಚಿತ ದೇಹವೇ ದಕ್ಕುತ್ತದೆ.

ಮೈತ್ರೇಯೀ, ಜೀವಾತ್ಮನ ನಿವಾಸ ಹೃದಯದಲ್ಲಿ. ಅವನು ಹೃದಯದಲ್ಲಿದ್ದುಕೊಂಡು ಎಲ್ಲಾ ಭಾವನೆಗಳಿಗೂ ಕೇಂದ್ರವಾಗಿರುವನು. ಅವನಿಂದಲೇ ದೇಹಚಾಲನೆ. ಅವನಿಂದಲೇ ಮಾನಸಿಕ ಚಾಲನೆ. ಅವನಿಲ್ಲದಾಗ ಯಾವುದೂ ಇಲ್ಲ. ಜಡವಾದ ದೇಹ ಸ್ವಲ್ಪ ಸಮಯದೊಳಗಾಗಿಯೇ ಕೊಳೆತು ನಾರಲು ತೊಡಗುವುದು. ದೇಹ–ಆತ್ಮ–ಮನಸ್ಸು–ಇಂದ್ರಿಯ ಇವುಗಳೆಲ್ಲಾ ಕೂಡಿಯೇ 'ನಾನು' ಎನ್ನುವ ವ್ಯಕ್ತಿತ್ವ ಉಂಟಾಗಿದೆ. ಅದು ಜಾಗ್ರತಾವಸ್ಥೆಯಲ್ಲಿ ವ್ಯವಹಾರ ನಡೆಸುತ್ತದೆ. ಆದರೆ, ಕನಸು ಕಾಣುತ್ತಿರುವಾಗ ಮತ್ತೇನೋ ಆಚರಣೆ, ಮತ್ತೇನೋ ಅನುಭವ. ಕನಸಿನಲ್ಲಿರುವತನಕ ಜಾಗ್ರತಾವಸ್ಥೆಯಿಂದ ಸ್ವಪ್ನವು ಬೇರೆ ಎಂಬ ಅಂಶ ಹೊಳೆಯುವುದೇ ಇಲ್ಲ. ಎಚ್ಚೆತ್ತಾಗ ಇದು ಬರೀ ಕನಸು ಎಂಬುದರ ಅರಿವು. ಹಾಗೆಯೇ ಸುಷುಪ್ತಾವಸ್ಥೆಯೂ ಕೂಡ. ಸ್ವಪ್ನವಲ್ಲದ ಕನಸು ಸುಷುಪ್ತಿ. ಅದರ ರೀತಿಯೇ ಬೇರೆ. ಎದುರಿನ ದೃಶ್ಯ ಪ್ರಪಂಚವಾಗಲೀ ಕಾಲ–ದೇಶಗಳ ಪರಿವೆಯಾಗಲೀ ಆಗ ಇರುವುದೇ ಇಲ್ಲ. ಜಾಗ್ರತ್–ಸ್ವಪ್ನ ಸ್ಥಿತಿಯಲ್ಲಿ ಯಾವುವು ನಮ್ಮನ್ನು ಕೊರೆದು ಹಿಂಸಿಸುವುವೋ, ಅವು ಸುಷುಪ್ತಿಯಲ್ಲಿ ಬಿಟ್ಟುಹೋಗುವುವು. ಈ ಅವಸ್ಥಾತ್ರಯಗಳನ್ನು ಜೀವಾತ್ಮನು ಅನುಭವಿಸಬೇಕಾದರೆ ದೇಹೇಂದ್ರಿಯಗಳ ಮೂಲಕವೇ. ಸುಷುಪ್ತಿಯಲ್ಲಿ ಬ್ರಹ್ಮಸ್ಥಿತಿ ಕಂಡರೂ ಬ್ರಹ್ಮತ್ವ ಘನಿಸುವುದಿಲ್ಲ. ಸುಷುಪ್ತಿಯ ಸ್ಥಿತಿ ಕಳೆದ ಮೇಲೆ ಆತ್ಮ ಯಥೋಚಿತವೇ. ಅಂದರೆ ಹಿಂದಿನ ಪೆದ್ದ ಮಾನವನೇ. ಮೊದಲಿನಂತೆಯೇ ಜಗತ್ತಿನ ಸಮಸ್ಯೆಗಳೆಲ್ಲಾ ಮುತ್ತಿ ಮತ್ತೆ ಕಿತ್ತು ತಿನ್ನತೊಡಗುತ್ತವೆ. ಅವನು ದುಃಖ–

ಸಂಕಟಗಳಿಗೀಡಾಗುತ್ತಾನೆ. ಎಲ್ಲಾ ದುಃಖಕ್ಕೂ ಕಾರಣ ಉಪಾಧಿಗಳ ಸಂಗ. ಯಾವಾಗ ಉಪಾಧಿಗಳು ಅಂಟಿಕೊಳ್ಳುತ್ತವೆಯೋ ಅದಕ್ಕೆ ಸಂಬಂಧಿಸಿದ ವೇದನೆ ಮನವನ್ನು ಕಾಡುತ್ತದೆ. ಇವನ್ನು ಕಳೆದುಕೊಳ್ಳಬೇಕೆಂದರೆ ಮನಸ್ಸಿನ ಕೊಂಡಿಯನ್ನೇ ಕಳಚುವುದು ಬುದ್ಧಿವಂತಿಕೆ. ಮನಸ್ಸಿದ್ದರಷ್ಟೆ ವೇದನೆ? ಮನಸ್ಸೇ ಇಲ್ಲದಿದ್ದರೆ....? ಅಂದರೆ ನಿರ್ಲಿಪ್ತತೆ. ಮನಸ್ಸಿಗೆ ಯಾವುದನ್ನೂ ಹಚ್ಚಿಕೊಳ್ಳದಿರುವುದು. ಮಮಕಾರ ವರ್ಜನೆಯಿಂದ ಸುಖ-ದುಃಖ-ಸಂಕಟಗಳೂ ವರ್ಜ್ಯ.

ಮೈತ್ರೇಯೀ, ಯಾವಾಗ ನಿಜವಾದ ಬ್ರಹ್ಮಜ್ಞಾನ ಪ್ರಾಪ್ತವಾಗುವುದೋ ಆವಾಗಿನ ಸ್ಥಿತಿಯೇ ಬೇರೆ. ಅದು ಈ ಅವಸ್ಥಾತ್ರಯಗಳನ್ನು ಮೀರಿದ ಅವಸ್ಥೆ. ಒಮ್ಮೆ ಬ್ರಹ್ಮಜ್ಞಾನವನ್ನು ಪಡೆದನೆಂದರೆ ಅವನು ಎಂದೆಂದಿಗೂ ಬ್ರಹ್ಮಜ್ಞಾನಿಯೇ. ಅವನನ್ನು ಯಾವ ಸುಖದುಃಖಗಳೂ ಮುಟ್ಟುವುದಿಲ್ಲ. ಅವನ ಭಾವನೆ ಏಕತ್ರ. ಚಿಂತನೆ ಏಕತ್ರ. ಸರ್ವತ್ರ ಸದಾ ವಿಶ್ವಭಾವದಲ್ಲಿ ವಿಹರಿಸುವ ಚೇತನ ಭೂಮವಾಗುತ್ತದೆ. ಮನಃಬುದ್ಧಿಗಳಲ್ಲಿ ಹುದುಗಿರುವ ಸೂಕ್ಷ್ಮಾವಸ್ಥೆಯ ಜೀವನಾವಾಸನೆಗಳು ತರಗೆಲೆಗಳಂತೆ ಉದುರಿಹೋಗುತ್ತವೆ. ಅನಂತರವೇ ದೃಗ್‌ದೃಶ್ಯಗಳು ಒಂದಾಗಿ ಮನೋವಿಕಲ್ಪವು ಕಳೆದು ಕರ್ತೃ-ಭೋಕ್ತೃ ಭಾವನೆಯು ಅಳಿಯಬೇಕಾದರೆ. ಹೀಗೆ ಯಾರು ಅಕ್ಷಯನೂ ಅಮೃತನೂ ಅವಿನಾಶಿಯೂ ಆದ ಬ್ರಹ್ಮನನ್ನು ತಿಳಿದುಕೊಳ್ಳುವರೋ ಅವರು ಬ್ರಹ್ಮನನ್ನೇ ಹೊಂದಿ ಬ್ರಹ್ಮತ್ವ ಪಡೆಯುವರು. ಅದರ ಮೊದಲು ಮನಸ್ಸು-ಬುದ್ಧಿ-ಇಂದ್ರಿಯಗಳಿಂದ ಕೂಡಿದ ಈ ದೇಹವೇ ಚೈತನ್ಯ ಎಂದು ಪರಿಭಾವಿಸಿದ್ದು, ಬ್ರಹ್ಮನ ಅರಿವಾದ ಮೇಲೆ ನಮ್ಮ ಅಸ್ತಿತ್ವ ನಮಗೆ ತಿಳಿದುಬರುತ್ತದೆ. ಈ ದೇಹದ ಒಳಾಂತರದಲ್ಲಿ ಎಂತಹ ಅಮೋಘವಾದ ವಸ್ತುವಿದೆಯೋ ಅದನ್ನು ತಿಳಿದುಕೊಳ್ಳುವುದೇ ಸ್ವಂತಿಕೆಯ ಮೇಲಿನ ಸಾರ್ವಭೌಮಿಕೆ. ಅದೇ ಮನೋವಿಕಾಸಕ್ಕೆ ದಾರಿ. ಅದೇ ಆತ್ಮವಿಕಾಸಕ್ಕೆ ದಾರಿ. ಅದರ ಹಿಂದೆಯೇ ಸರ್ವವ್ಯಾಪಿತ್ವ. ಅಂದರೆ ಆತ್ಮವು ಅನಂತದಲ್ಲಿ ವಿಲೀನವಾಗಿ ಅನಂತಾತ್ಮನೇ ಆಗುವನು, ಹನಿಯೊಂದು ಸಾಗರದಲ್ಲಿ ಬಿದ್ದಾಗ ಹೇಗೆ ಸಾಗರವಾಗುವುದೋ ಹಾಗೆಯೇ.

ಮೈತ್ರೇಯೀ, ಈ ವಿಶ್ವಜಗತ್ ಒಂದೇ ಆದ ಭೂಮ. ಅದರಲ್ಲಿ ಅಲ್ಪ ಎಂಬುದೇ ಇಲ್ಲ. ನಾವು ಎಲ್ಲಿ ಅಲ್ಪವನ್ನು ಕಾಣುತ್ತೇವೋ ಅದರ ಹಿಂದೆ ಭೂಮ ಇದ್ದೇ ಇರುತ್ತದೆ. ಅದನ್ನು ಗುರುತಿಸಲು ನಾವು ಅಶಕ್ತರಾದರೆ ನಮಗೆ ಕಂಡುಬರುವುದು ಅಲ್ಪ ಮಾತ್ರ. ಸಾಂತ ಅಲೆಗಳ ಹಿಂದೆ ಇರುವುದು ಅನಂತಸಾಗರ. ಮನುಷ್ಯಬುದ್ಧಿ ಅಲೆಯ ಹೆಚ್ಚಳಕ್ಕೆ ನೊರೆ ಗುಳ್ಳೆಗಳ ಸೊಬಗಿಗೆ ಮರುಳಾಗುವುದು ಸ್ವಾಭಾವಿಕ. ಆಗ ಅನಂತ ಸಾಗರದ ಆಳವಾಗಲೀ ರೂಪುರೇಷೆಯಾಗಲೀ ಮಹತ್ತಾಗಿ ತೋರುವುದೇ ಇಲ್ಲ. ಕಣ್ಮನಗಳು ಅಲೆ–ನೊರೆ–ಗುಳ್ಳೆಗಳ ಬಳಿಯಲ್ಲಿ ಚಕ್ಕಂದವಾಡು ತ್ತಿರುತ್ತವೆ. ಯಾವಾಗ ಸಾಗರದ ಅರಿವು ಸಂಪೂರ್ಣ ಮೂಡುತ್ತದೆಯೋ ಆವಾಗ ಅಲೆ–ನೊರೆ–ಗುಳ್ಳೆಗಳ ವ್ಯಾಮೋಹ ಹರಿದು ವ್ಯಕ್ತಿ ಸರ್ವಸ್ವವೂ ತಾನೇ ಆಗುತ್ತಾನೆ. ನಾಮರೂಪದ ದೃಷ್ಟಿಯಿಂದ ನೋಡಿದಾಗ ಒಂದು ಮತ್ತೊಂದಕ್ಕಿಂತ ಬೇರೆ ಬೇರೆ. ನೊರೆಯೇ ಬೇರೆ. ಗುಳ್ಳೆಯೇ ಬೇರೆ. ಅಲೆಯೇ ಬೇರೆ. ಆದರೆ, ಸಾಗರದ ದೃಷ್ಟಿಯಿಂದ ನೋಡಿದಾಗ ಅದು ಒಂದೇ ಒಂದು ಎಂಬುದು ಮನೋವೇದ್ಯ.

ಮೈತ್ರೇಯೀ, ಆತ್ಮನು ಹೇಗೆ ಜ್ಞಾನೇಂದ್ರಿಯ ಕರ್ಮೇಂದ್ರಿಯಗಳ ಮೂಲಕ ವ್ಯವಹಾರ ನಡೆಸುವನೋ ಹಾಗೆಯೇ ಸೂಕ್ಷ್ಮವಾದ ಮನಸ್ಸಿನ ಮೂಲಕ ವಿಜ್ಞಾನಾತ್ಮನು ಸೂಕ್ಷ್ಮಾತಿಸೂಕ್ಷ್ಮವಾದ ಕೆಲಸ ಮಾಡುವನು. ಇಂದ್ರಿಯಗಳು ಆತ್ಮನ ಕೈಯಲ್ಲಿ ಹೇಗೆ ಒಂದು ನಿಮಿತ್ತವೋ ಹಾಗೆಯೇ ಮನಸ್ಸು–ಬುದ್ಧಿ–ಚಿತ್ತ ವಿಜ್ಞಾನಾತ್ಮನ ಕೈಯಲ್ಲಿ ಒಂದು ನಿಮಿತ್ತ. ವಿಜ್ಞಾನಾತ್ಮನು ಬುದ್ಧಿ–ಚಿತ್ತ ಇವುಗಳ ಮುಖೇನ ಸೂಕ್ಷ್ಮತರವಾದ ಒಪ್ಪು–ತಪ್ಪುಗಳನ್ನು ಮನನ ಮಾಡಿ ಪರಿಶೀಲಿಸಿ ನಿರ್ಣಯಿಸುವನು. ಅಂದರೆ ಮನಸ್ಸಿನ ಚಾಲನೆ ಮಾಡುವವನೇ ಅವನು. ಇನ್ನು, ದೇಹ ಚಾಲನೆ ಮಾಡುವವನು ಆತ್ಮ ಎಂದರೂ ಅವನ ಅಧೀನದಲ್ಲಿ ಪಂಚಪ್ರಾಣ ಗಳಿವೆ. ಅವು ದೇಹದಲ್ಲಿದ್ದುಕೊಂಡು ಎಲ್ಲಾ ಕಾಲದಲ್ಲಿಯೂ ಕೆಲಸ ಮಾಡುತ್ತವೆ. ವ್ಯಕ್ತಿ ಮಲಗಿರಲಿ, ಜಾಗ್ರತಾವಸ್ಥೆಯಲ್ಲಿರಲಿ, ಸುಷುಪ್ತಿ ಯಲ್ಲಿರಲಿ ಅವು ಹಗಲಿರುಳೆನ್ನದೆ ಕೆಲಸ ಮಾಡುತ್ತಿರಲೇಬೇಕು. ಇಲ್ಲ

ದಿದ್ದರೆ ದೇಹಕ್ಕೆ ಗತಿಯಿಲ್ಲ ; ಅದು ಸಾಯುತ್ತದೆ. ಪ್ರಾಣನು ದೇಹವನ್ನು ಸೇರಿದಾಗಲೇ ಪಂಚಪ್ರಾಣಗಳಾಗಿ ಕವಲೊಡೆದು ಪ್ರಾಣ-ಅಪಾನ-ವ್ಯಾನ-ಉದಾನ-ಸಮಾನ ಎಂಬವುಗಳಾಗಿ ದೇಹದ ಪ್ರತಿಯೊಂದು ವಿಭಾಗದ ಕ್ರಿಯೆಯನ್ನೂ ನಿರ್ವಹಿಸುತ್ತಾನೆ. ಬದುಕಿರುವ ಮನುಷ್ಯನನ್ನು ಅವಸ್ಥೆಯಿಂದ ಅವಸ್ಥೆಗೂ, ಮರಣಿಸಿದ ಮೇಲೆ ಲೋಕದಿಂದ ಲೋಕಕ್ಕೂ ಅನಂತರ ಪುನರ್ಜನ್ಮಕ್ಕೂ ಕರ್ಮಾನುಸಾರವಾಗಿ ಒಯ್ಯುವುದೇ ಉದಾನ.

ಮೈತ್ರೇಯೀ, ದೃಗ್‌ದೃಶ್ಯಗಳಾಗಿರುವ ನಾಮರೂಪಗಳಿಂದ ಕೂಡಿರುವುದೆಲ್ಲ ಪಂಚಭೂತಗಳಿಂದ ಉಂಟಾಗಿದೆ. ಹಾಗೆಯೇ ನಮ್ಮ ದೇಹ ರಚನೆಯೂ ಕೂಡ ಪಂಚಭೂತಗಳಿಂದಾದುದು. ಈ ವಿಶ್ವಜಗತ್ತಿನಲ್ಲಿ ಪಂಚಭೂತಗಳು ಇಲ್ಲದೇ ಇದ್ದರೆ ಯಾವ ಸ್ಥೂಲ-ಸೂಕ್ಷ್ಮವಸ್ತುಗಳೂ ಇರುತ್ತಿರಲಿಲ್ಲ. ಇವುಗಳೆಲ್ಲ ಅಕ್ಷರದಲ್ಲಿ ಅಂದರೆ ಪರಬ್ರಹ್ಮನಲ್ಲಿ ನೆಲೆಸಿರುವುವು. ಈ ಜೀವಾತ್ಮ-ಬುದ್ಧಿ-ಮನಸ್ಸು-ಇಂದ್ರಿಯ-ಪಂಚಪ್ರಾಣ-ಪಂಚಭೂತಗಳು ಇವುಗಳೆಲ್ಲ ಸಮುದ್ರದ ಮೇಲೆ ಅಲೆ-ನೊರೆ-ಗುಳ್ಳೆಗಳು ಹೇಗೋ ಹಾಗೆ ಪರಬ್ರಹ್ಮನಲ್ಲಿ ನೆಲೆಸಿರುವ ವಸ್ತುಗಳು. ಈ ರಹಸ್ಯವನ್ನು ಕ್ರಮವತ್ತಾಗಿ ಯಾರು ಅರಿಯುವನೋ ಅವನು ಸರ್ವಜ್ಞ. ಅಂದರೆ ಎಲ್ಲಾ ನಾಮರೂಪಗಳ ಹಿಂದೆ ಇರುವವನೇ ಪರಬ್ರಹ್ಮ. ಅವನಿಂದ ಲೋಕಾಲೋಕ. ಅವನಿಂದ ಈ ಬದುಕು. ಅವನಿಂದ ನೀನು ನಾನು ಎಲ್ಲಾ.

ಮೈತ್ರೇಯಿಯು ಸಮಾಧಿಸ್ಥಿತಿಯಿಂದ ಸ್ವಲ್ಪವಾದರೂ ಹಿಂಜರಿಯದೆ-ಹರಿಃ ಓಂ !

ಯಾಜ್ಞವಲ್ಕ್ಯ ಮಹರ್ಷಿ-ಮೈತ್ರೇಯೀ, ಬ್ರಹ್ಮ ಎಂದರೆ ಇಡೀ ಬ್ರಹ್ಮಾಂಡವೇ ಅವನಾದ ಬ್ರಹ್ಮವಸ್ತು. ಅವನೇ ಅಮೂರ್ತ. ಅವನೇ ನಾಮರೂಪಗಳಿಗೆ ಅತೀತನಾದ ಸಗುಣಬ್ರಹ್ಮ. ಅವನು ಕಾಲ-ದೇಶಗಳಿಗೆ ನಿಮಿತ್ತನು. ಅವನು ಅವ್ಯಕ್ತನು, ಅಗೋಚರನು, ಅಮೃತನು, ಅಕ್ಷರನು, ಅಕಳಂಕನು, ಅಜರಾಮರಣನು, ಅಣೋರಣೀಯನು, ಮಹತೋಮಹೀಯನು, ಅವನನ್ನೇ ಕುರಿತು ಧ್ಯಾನಮಾಡು.

ಮೈತ್ರೇಯೀ–ಹರಿಃ....ಓಂ !

ಅವಳು ಇನ್ನೂ ಬ್ರಹ್ಮಧ್ಯಾನದಲ್ಲಿ ಸಂಪೂರ್ಣ ತನ್ಮಯಳಾಗಿಯೇ ಇದ್ದಾಳೆ. ಮೈಮೇಲಿನ ಅರಿವು ಲವಲೇಶವೂ ಇರಲಿಲ್ಲ. ಮುಚ್ಚಿದ ಕಣ್ಣಾಲಿಗಳ ಗತಿ ಏಕತ್ರವಾಗಿಯೇ ಇತ್ತು. ಯಾಜ್ಞವಲ್ಕ್ಯ ಮಹರ್ಷಿ ಅವಳ ಸಮಾಧಿಸ್ಥಿತಿಯನ್ನು ಸಂಪೂರ್ಣ ಗಮನಿಸುತ್ತಲೇ ಇದ್ದು, ಪ್ರವಚನವನ್ನು ನಿಲ್ಲಿಸಿದನಂತರ ತನ್ನ ಹಸ್ತವನ್ನು ಅವಳ ತಲೆಯಿಂದ ಹಿಂತೆಗೆದುಕೊಳ್ಳುವನು. ಅವಳು ಸ್ವಲ್ಪ ಹೊತ್ತಿನನಂತರ ಭಾವಸಮಾಧಿಯಿಂದ ಎಚ್ಚೆತ್ತಾಗ ಯಾಜ್ಞವಲ್ಕ್ಯ ಮಹರ್ಷಿಯು ಹಿಮಾಲಯ ಪ್ರದೇಶಕ್ಕೆ ಹೊರಡಲು ಅಣಿಯಾಗಿರುತ್ತಾನೆ.

ಕಾತ್ಯಾಯಿನಿ–ಭಗವನ್, ನಮಗೆ ನಿಮ್ಮ ಕೊನೆಯ ಸಂದೇಶವೇನು?

ಮೈತ್ರೇಯೀ–ಬ್ರಹನ್, ನಮ್ಮನ್ನು ಅನುಗ್ರಹಿಸಿ ಸಂದೇಶವನ್ನು ನೀಡಿರಿ.

ಯಾಜ್ಞವಲ್ಕ್ಯ ಮಹರ್ಷಿ–ಕೃತಂ ಸ್ಮರ. ಕ್ರತುಂ ಸ್ಮರ.

ಇಬ್ಬರೂ ಶ್ರದ್ಧಾಭಕ್ತಿಗಳಿಂದ ನಮಸ್ಕರಿಸುವರು.

ಮಂಗಳಂ

ಮಲ್ಲಿಕಾ ಕೃತಿಗಳು

೧) ಜೀವನಗಂಗಾ
೨) ಡಾ|| ಅಘೋರ
೩) ಡಾ|| ಕಮಲೇಶ್
೪) ವಂದೇ ಮಾತರಂ
೫) ಅನಂತಾನಂತದೆಡೆಗೆ

(ಕಥಾ ಸಂಕಲನ)

೬) ಶ್ರೀಮುಖಿ
೭) ಬಹುರತ್ನಾವಸುಂಧರಾ
೮) ರತ್ನಗರ್ಭಾವಸುಂಧರಾ

(ಕವಿತಾ ಸಂಕಲನ)

೯) ಪೂಜಾವಸಾನ ಸಮಯೇ....!
೧೦) ಧ್ಯಾನಾವಸಾನ ಸಮಯೇ....!

(ಪೌರಾಣಿಕ ನಾಟಕ)

೧೧) ಪುಣ್ಯಪಯೋನಿಧಿ
೧೨) ಪುಣ್ಯಾಭಿಸಾರ

(ಇವುಗಳ ಪ್ರತಿಗಳು ಮುಗಿದಿವೆ)

ಎರಡನೆಯ ಮುದ್ರಣಗಳು

(ಸಾನೆಟ್ಸ್‌ಗಳು)

೧೩) ತರಂಗಿಣಿ

(ಕಥಾ ಸಂಕಲನ)

೧೪) ಸುಧಾಮಣಿ
೧೫) ರಮಣೀಮಣಿ
೧೬) ಲಿಯೋನಾ
೧೭) ಶ್ರೀಹರ್ಷಲಾ
೧೮) ವೈಶಾಖೀ ಪರ್ವ
೧೯) ಫಾಲ್ಗುಣೀ ಪರ್ವ

(ಕಾದಂಬರಿಗಳು)

೨೦) ಮನೋನ್ಮಣಿ
೨೧) ಸಂತ್ರಾಸಿನಿ
೨೨) ಆಸೆಯ ಸುಳಿಯಲ್ಲಿ

ಮಲ್ಲಿಕಾ ಕೃತಿಗಳು

(ಕವಿತಾ ಸಂಕಲನ)

೨೩) ಗಗನ ಕುಸುಮ
೨೪) ಜೀವನ ಕುಸುಮ
೨೫) ಕಸ್ತೂರಿ ಮಾಲಿಕಾ
೨೬) ಮಂದಾರ ಮಾಲಿಕಾ
೨೭) ಚಂಪಕ ರಾಜಿ
೨೮) ಬಕುಳ ರಾಜಿ
೨೯) ವಿಜಯ ಗಾಥಾ
೩೦) ಗಾನ ತೀರ್ಥ
೩೧) ನಾದ ಬಿಂದು
೩೨) ಕಲ್ಯಾಣ ಭಾರತಿ (ಅಚ್ಚಿನಲ್ಲಿ)
೩೩) ಕಾವ್ಯಾನಂದ ನಂದಿನಿ
೩೪) ಭಾವಾನಂದ ನಂದಿನಿ

(ಸಂಜೀವನ ಕಾವ್ಯ)

೩೫) ರಾಗಾನುರಾಗಿಣಿ
೩೬) ಉತ್ತರೋತ್ತರಣಿ
೩೭) ಮಂಗಳ ಭಾರತಿ

(ಗದ್ಯ ಕಾವ್ಯ)

೩೮) ಐಂದ್ರ ಕೀರ್ತಿ ಕೇತನಂ

(ಉಪನಿಷತ್ಕಥಾ)

೩೯) ಕೃತಂ ಸ್ಮರ ಕ್ರತುಂ ಸ್ಮರ

(ಶಿಶು ಸಾಹಿತ್ಯ)

೪೦) ದೂರ ದೇಶದಲ್ಲಿ
೪೧) ಬೆಳದಿಂಗಳ ರಾತ್ರಿ
೪೨) ವಿಶೇಷ ಸುದ್ದಿ
೪೩) ರಂಗನ ಸಾಹಸ
೪೪) ಓಹಿಯೋಜ ಸರೋವರ
೪೫) ಕೌಶಿಕನ ಗೊಂಬೆ

ಲಕ್ಷ್ಮೀ ಪ್ರಕಾಶನ
170, ಲ್ಯಾಂಗ್ ಫೋರ್ಡ್ ರೋಡ್, ಬೆಂಗಳೂರು-560 025